# ನಿರಂಜನ

# ಏಕಾಂಗಿನಿ



# ಏಕಾಂಗಿನಿ

ನಿರಂಜನ

ಐಬಿಎಚ್ ಪ್ರಕಾಶನ
ಐದನೆಯ ಮುಖ್ಯರಸ್ತೆ, ಗಾಂಧಿನಗರ,
ಬೆಂಗಳೂರು-560 009

EKAANGINI—A novel in Kannada by Niranjana. Published by G. K. Ananthram for IBH Prakashana 5th Main Road Gandhinagar, Bangalore-560 009

Demy Octavo Pages 182+ii Pr

© Seemanthini Niranjana

Publishing Rights in Kannada, IBH Prakashana

ಮೊದಲನೆಯ ಮುದ್ರಣ 1955
ಎರಡನೆಯ ಮುದ್ರಣ 1987
ಮೂರನೆಯ ಮುದ್ರಣ 1987

ಬೆಲೆ :

ಪ್ರಕಾಶಕರು : ಐಬಿಎಚ್ ಪ್ರಕಾಶನ ಇವರ ಪರವಾಗಿ ಜಿ. ಕೆ. ಅನಂತರಾಮ್ ಐದನೆಯ ಮುಖ್ಯ ರಸ್ತೆ ಗಾಂಧಿನಗರ ಬೆಂಗಳೂರು 560 009. ಮುದ್ರಕರು : ಫ. ಶಿ. ಭಾಂಡಗೆ ತ್ವರಿತ ಮುದ್ರಣ ಗಂಗಾಪೂರಪೇಟ ಗದಗ–582 101.

ಏಕಾಂಗಿನಿ

"ಪಾವಿತ್ರ್ಯ ಎಂದರೇನು? ಅದರ ಅರ್ಥವೇನು?
ಅದಕ್ಕೊಂದು ಧಾರ್ಮಿಕ ಮಹತ್ವ ಇದೆಯೆಂದು
ಯಾರೋ ಹೇಳಿದರು. ಹಿಂದೂ ವಿವಾಹವು
ಧಾರ್ಮಿಕ ಸಮಾರಂಭ. ಅದನ್ನು ಯಾರೂ
ಅಲ್ಲಗಳೆಯುವುದಿಲ್ಲ. ಅಂದ ಮಾತ್ರಕ್ಕೆ,
ಇಬ್ಬರನ್ನು ಬಿಗಿಯಾಗಿ ಕಟ್ಟುವುದು,
ಒಬ್ಬರನ್ನೊಬ್ಬರು ಕಚ್ಚುವುದು, ದ್ವೇಷಿಸುವುದು,
ಒಬ್ಬರ ಬದುಕನ್ನು ಇನ್ನೊಬ್ಬರು ನರಕಸಮಾನವಾಗಿ
ಮಾಡುವುದು–ಎಂದರ್ಥವಲ್ಲ."

—ಹಿಂದೂ ವಿವಾಹ ಶಾಸನಕ್ಕೆ ಬೆಂಬಲವಾಗಿ
ಲೋಕ ಸಭೆಯಲ್ಲಿ ಜವಾಹರಲಾಲ್ ನೆಹರೂರವರು
ಮಾಡಿದ ಭಾಷಣದಿಂದ.

[ಮೇ 5, 1955]

# ೧

“ವಿಜಯಾ...ಲೇ ವಿಜಯಾ...ಏಳೇ.”

ತೋಳಿನ ಕೆಳಗೆ ಮುಖ ಮರೆಸಿಕೊಂಡಿದ್ದ ವಿಜಯಾಗೆ ಆಗಲೇ ಎಚ್ಚರವಾಗಿತ್ತು. ಆದರೂ ಪದ್ಧತಿಯಂತೆ, ಎಬ್ಬಿಸಲೆಂದು ಬರುವ ಅಕ್ಕನನ್ನೋ ಅಮ್ಮನನ್ನೋ ಇದಿರು ನೋಡುತ್ತ ಆಕೆ ಮಲಗಿಯೇ ಇದ್ದಳು. ಈಗ ಅಕ್ಕನ ಸ್ವರ ಕೇಳಿಸಿತೆಂದು ಸಮಾಧಾನ ವಾಯಿತು ಆಕೆಗೆ.

“ಇದೇನೇ ಇದು–ಇವತ್ತೂ ಮಲಗಿಕೊಂಡೇ ಇದೀಯಾ!”

ಇವತ್ತು? ಲೋಕದ ದೃಷ್ಟಿಯಲ್ಲಿ ತನ್ನ ಪಾಲಿಗಿದೊಂದು ಶುಭ ದಿನ–ಕೈಹಿಡಿದ ಗಂಡನು ತನ್ನನ್ನು ಕರೆದೊಯ್ಯಲು ಬರುವ ದಿನ, ಆದರೆ ತನ್ನ ದೃಷ್ಟಿಯಲ್ಲಿ?

“ಏಳೋಲ್ವೇನೇ? ಲೇ ವಿಜೀ...”

ಪ್ರೀತಿಯ ಅಕ್ಕನ ಸ್ವರ. ಇವತ್ತು ಮತ್ತು ನಾಳೆ, ಹೆಚ್ಚೆಂದರೆ ಮತ್ತೊಂದು ದಿವಸ. ಬಳಿಕ, ಅಕ್ಕನ ಈ ಕರೆ ಕೇಳಿಸದಂತಹ ದೂರದೂರಿಗೆ ತಾನು ಹೋಗಬೇಕು.

“ಏಳೇ ವಿಜಯಾ. ಏನಮ್ಮ ಇದು–ಥೂ!”

ಇದು ನಾಲ್ಕನೆಯ ಸಾರೆ. ಇನ್ನು ಪಾದಗಳು ನಡೆದು ತನ್ನೆಡೆಗೆ ಬರುವುವು. ಅಕ್ಕ ಮಂಡಿಯೂರುವಳು. ಆಕೆಯ ಕೈ ತನ್ನದನ್ನೆತ್ತುವುದು. ಆ ಕಣ್ಣುಗಳು ನಗುವುವು. ಹಾಗೆ ಮುಕ್ತಾಯವಾಗುವುದು ನಿದ್ದೆಯ ನಟನೆ....

“ಥೂ ಕಳ್ಳೀ!”

ವಿಜಯಾ ನಕ್ಕಳು. ನಕ್ಕು, ಅಕ್ಕನ ಮುಖವನ್ನೇ ನೋಡಿದಳು. ನೋಡುತ್ತಲಿದ್ದಂತೆ ನಗೆ ಮಾಯವಾಯಿತು.

ತಂಗಿಯ ಮುಖಭಾವ ಬದಲಾದುದನ್ನು ಗಮನಿಸಿದ ಸುನಂದಾ ಅಂದಳು:

“ನಗು ನಗ್ತಾ ಏಳು ವಿಜೀ. ರೈಲು ಬರೋ ಹೊತ್ತಾಯ್ತು. ಅಪ್ಪ ಆಗಲೇ ಸ್ಟೇಷನ್ನಿಗೆ ಹೋದ. ಏಳಮ್ಮ.”

ವಿಜಯಾ ಅಕ್ಕನ ಅಂಗೈಗಳನ್ನು ಮುಟ್ಟಿ ನೋಡಿದಳು. ಹೃದಯದೊಳಗಿನ ಸಂಕಟವನ್ನೆಲ್ಲ ಅದುಮಿ ಹಿಡಿದು ನಗೆಯ ಮುಖವಾಡ ಧರಿಸಿದ್ದಳು ತನ್ನ ಅಕ್ಕ. ಆ ನೋವಿನ ಆಳ ಎಷ್ಟೆಂಬುದು ತನಗೆ ತಿಳಿಯದೆ?—ಒಡಹುಟ್ಟಿದವಳಾದ ತನಗೆ ತಿಳಿಯದೆ?

“ಅಕ್ಕಾ!”

“ಏನು ವಿಜಯಾ?”

ಏನೆಂದು ಹೇಳಬೇಕು ತಾನು?

"ಏನೂ ಇಲ್ಲ, ಅಕ್ಕಾ"

"ಹುಚ್ಚಿ! ಏಳು."

ಸುನಂದಾ ತನ್ನ ತಂಗಿಯ ಮನೋಸ್ಥಿತಿಯನ್ನು ಚೆನ್ನಾಗಿ ತಿಳಿದಿದ್ದಳು. ಅಗಲ ಬೇಕಾದ ದಿನ ಸಮೀಪಿಸಿದಂತೆ ಅಕ್ಕನ ಇರುವಿಕೆಗಾಗಿ ಕೊರಗುತ್ತ ಹೆಚ್ಚು ಹೆಚ್ಚು ದುಃಖಿನಿಯಾಗಿದ್ದಳು ವಿಜಯಾ. ಆದರೆ ಆ ದುಃಖಕ್ಕೊಂದು ಅರ್ಥವಿತ್ತೆ? ಅದು ಅಗತ್ಯವಾಗಿತ್ತೆ? ಅಕ್ಕನ ಬಾಳನ್ನು ಮೋಡ ಕವಿಯಿತೆಂದು ತಂಗಿಯ ಮುಖವೂ ಯಾಕೆ ಬಾಡಬೇಕು? ತಂಗಿ ಹಸನ್ಮುಖಿಯಾಗಿಯೇ ಹಗುರವಾದ ಹೃದಯದಿಂದಲೇ ಗಂಡನ ಮನೆಗೆ ಹೋಗಬೇಕಾದುದು ನ್ಯಾಯ...

"ಅಕ್ಕಾ...."

ಕರೆದ ಕಂಠ ಗದ್ಗದಿತವಾಗಿತ್ತೆಂದು ಸುನಂದೆಯ ಕತ್ತು ಬಾಗಿತು. ತಂಗಿಯ ನೀಳವಾದ ಎಳೆಯ ತೋಳು ಆ ಕತ್ತನ್ನು ಆವರಿಸಿತು.

"ಅಕ್ಕಾ...ನನಗೆ ಸಂಕಟವಾಗುತ್ತೆ."

ಒತ್ತಾಯಪೂರ್ವಕವಾಗಿ ತುಟಿಗಳ ಮೇಲೆ ನಗೆ ಕುಣಿಸುತ್ತ ಸುನಂದಾ ಅಂದಳು:

"ಇನ್ನು ಸ್ವಲ್ಪ ಹೊತ್ತು ಕಣೇ. ನಿನ್ನ ಸಂಕಟ ಪರಿಹಾರಕ್ಕೆ ವೆಂಕಟರಮಣ ಬಂದ್ಬಿಡ್ತಾನೆ."

ಆದರೆ ತಂಗಿಯ ಕಣ್ಣಂಚಿನಲ್ಲಿ ಕಂಬನಿ ತುಳುಕಿತು. ತೋಳು ಅಸಹನೆಯಿಂದ ಅಕ್ಕನ ಕೊರಳು ಬಿಗಿಯಿತು.

"ಎಂಥ ಮಾತಾಡ್ತಿ ಅಕ್ಕ?"

ಎಷ್ಟೊಂದು ಪ್ರಯಾಸದಿಂದ ಮನಸ್ಸಿನ ಸುತ್ತಲೂ ಪ್ರಾಕಾರಗಳನ್ನು ಕಟ್ಟಿದ್ದಳು ಸುನಂದಾ! ಅಷ್ಟು ಮಾಡಿಯೂ ಆ ಯತ್ನ ವ್ಯರ್ಥವಾಯಿತು.

ಸೋದರಿಯ ಒಲವಿಗೆ ಒಲವೇ ಉತ್ತರ. ಕಂಬನಿಗೆ ಪ್ರತ್ಯುತ್ತರ ಕಂಬನಿ. ಎರಡು ಜೀವಗಳ ಎರಡು ಭಾವಗಳ ಜೋಡಣೆಯನ್ನು ಸಾಧಿಸಿತು ಕ್ಷಣಕಾಲದ ಮೌನ.

ಆ ಕ್ಷಣವೂ ಯುಗವೆಂದು ತೋರಿದ ಬಳಿಕ ಮಾತು.

"ಹ್ಯಾಗಕ್ಕ ನಿನ್ನನ್ನು ಬಿಟ್ಟು ಹೋಗ್ಲಿ?"

"ನನಗೇನಾಗಿದೇಂತ ಹೀಗಾಡ್ತೀಯ ವಿಜಯಾ?"

ಹಿಡಿತದಿಂದ ಅಕ್ಕನನ್ನು ಬಿಟ್ಟುಕೊಟ್ಟು, ನಿಟ್ಟುಸಿರು ಬಿಟ್ಟು, ವಿಜಯಾ ಎದ್ದು ಕುಳಿತಳು. ಚೆದರಿದ್ದ ತಲೆಗೂದಲನ್ನು ಎರಡೂ ಅಂಗೈಗಳಿಂದ ಹಿಂದಕ್ಕೆ ತಳ್ಳಿದಳು. ಮನಸ್ಸು ರೋಸಿ ನುಡಿಯಿತು,...ತಾನು ಅಕ್ಕನನ್ನು ಬಿಟ್ಟು ಹೋಗಲೇಬೇಕು ಹಾಗಾದರೆ—ಹೋಗದೆ ಬೇರೆ ವಿಧಿಯೇ ಇಲ್ಲ.

"ವಾರಕ್ಕೊಂದ್ಸಲ ಕಾಗದಾ ಬರೀತಾ ಇರ್ತೀಯಾ ಅಕ್ಕ?—ತಪ್ಪದೆ?"

"ಹೂಂ. ಬರೀತೀನಿ."

"ಏನೇನಾಯ್ತೂಂತ ನಂಗೆ ತಿಳಿಸ್ಬೇಕು."

"ಹೂಂ..."

ಪಕ್ಕದ ಹಾಸಿಗೆಯೆಡೆಗೆ ವಿಜಯಾ ದೃಷ್ಟಿ ಬೀರಿದಳು.

"ಎಲ್ಲಕ್ಕ ಮಗು?"

ಅಕ್ಕನನ್ನು ಬಿಡುವುದು ಹೇಗೆ ಕಷ್ಟವೋ ಹಾಗೆಯೇ ಅಕ್ಕನ ಮಗುವನ್ನು ಬಿಟ್ಟಿರುವುದು ಕೂಡ.

"ಒಳಗೆ ಅಮ್ಮನ ಜತೇಲಿರ್ಬೇಕು."

ಐವತ್ತರ ಗಡಿ ಸಮೀಪಿಸುತ್ತಿದ್ದ ತಾಯಿ, ವಯಸ್ಸಾದ ತಂದೆ......ವಿಜಯಳ ಮದುವೆಯೇ ಈ ಭೂಮಿಯ ಮೇಲೆ ಅವರು ಮಾಡಲು ಉಳಿದಿದ್ದ ಕೊನೆಯ ಕರ್ತವ್ಯ. ಈಗ ಅದೂ ಮುಗಿಯಿತೆಂದು ಅವರು ನಿಶ್ಚಿಂತೆಯಾಗಿ ಇರಬಹುದು...

ಹಾಗಿರುವುದು ಸಾಧ್ಯವಿತ್ತು. ಆದರೆ—

"ನೀನು ಏನ್ಮಾಡ್ಬೇಕೊಂತಿದೀಯಾ ಅಕ್ಕ?"

ಮಾಡಬೇಕಾದುದೇನೆಂಬುದನ್ನು ಕುರಿತು ಅದೆಷ್ಟು ಸಾರೆ ಯೋಚಿಸಿದ್ದಳೋ ಸುನಂದಾ! ಆದರೆ ಒಮ್ಮೆಯೂ ಏನೂ ಸ್ಪಷ್ಟವಾಗಿ ಹೊಳೆದಿರಲಿಲ್ಲ.

"ಈಗಾಗಲೇ ಏನವಸರ? ನಿಧಾನವಾಗಿ ಏನಾದರೂ ಮಾಡಿದರಾಯ್ತು."

"ಅಂತೂ ಹೆಣ್ಣಾಗಿ ಹುಟ್ಟಿ ಹೆತ್ತವರಿಗೆ ಕೊಡಬಾರದ ಕಷ್ಟ ಕೊಟ್ಟೆವು."

"ಇಂಥ ಒಳ್ಳೆಯ ದಿನ ಹಾಗೆಲ್ಲ ಆಡಬಾರದಮ್ಮ."

"ಏನು ಒಳ್ಳೆಯ ದಿನವೊ!"

ಸುನಂದಾ ತನ್ನ ತಂಗಿಯ ಬಾಯನ್ನು ತನ್ನ ಅಂಗೈಯಿಂದ ಮುಚ್ಚಿದಳು. ವಿಜಯಾ ಹಿಂದಕ್ಕೆ ಸರಿದು ತಲೆ ಕೊಸರಿಕೊಂಡಳು.

"ನೀನು ಕೂಡ ನಾಲ್ಕು ವರ್ಷಗಳ ಹಿಂದೆ ಒಂದು ಒಳ್ಳೆಯ ದಿನವೇ ನಮ್ಮನ್ನೆಲ್ಲ ಬಿಟ್ಟು ಗಂಡನ ಮನೆಗೆ ಹೋದೆ, ಅಲ್ವೆ ಅಕ್ಕ?"

ಬೇಡ ಬೇಡವೆಂದರೂ ಬಾರಿ ಬಾರಿಗೂ ಸೂಜಿಮೊನೆಯಿಂದ ಚುಚ್ಚುತ್ತಿದ್ದ ಕಹಿ ನೆನಪು...

"ಈಗ ಯಾಕಮ್ಮಾ ಅದೆಲ್ಲ?"

"ಕರಕೊಂಡು ಹೋಗೋಕೆ ಬರ್‍ತಾರೇಂತ ನಿನಗೂ ಆಗ ಸಂತೋಷವಾಗಿತ್ತು."

ಆಗಿತ್ತು. ಅದು ನಿಜ.

"ನನ್ನ ಮಾತು ಕೇಳು ವಿಜಯ. ಬಂಗಾರದಂತಹ ಮನುಷ್ಯ ನಿನ್ನ ಗಂಡ. ಸುಮ್ಮನೆ ಕೆಟ್ಟ ಯೋಚನೆ ಮಾಡಬೇಡ."

ಅಕ್ಕನ ಮಾತಿನಲ್ಲಿ ಸತ್ಯಾಂಶವೂ ಇದೆ–ಎಂದಿತು, ತಂಗಿಯ ಹೃದಯದೊಳಗಿನ ಕಿರುದನಿ. ಜತೆಯಲ್ಲಿದ್ದ ಸ್ವಲ್ಪ ಕಾಲ ಸ್ನೇಹಮಯಿಯಾಗಿ ಆತ ವರ್ತಿಸಿದ್ದ. ಅನಂತರ

ಊರಿನಿಂದ ಬರೆದ ಕಾಗದಗಳಲ್ಲೂ ಒಲವಿನ ಟಿಂಟಿಣಿನಾದವೇ ತುಂಬಿರುತ್ತಿತ್ತು, ಆದರೂ...

"ನನಗೆ ಭಯವಾಗುತ್ತೆ ಅಕ್ಕ."

ನಾಲ್ಕು ವರ್ಷಗಳ ಹಿಂದೆ ತನಗೆ ಭಯವಾಗಿರಲಿಲ್ಲ, ಸಂತೋಷವಾಗಿತ್ತು. ಆದರೆ ಅನಂತರ ತಾನು ಅನುಭವಿಸಿದ ಸುಖದ ಕಥೆಯನ್ನು ತಂಗಿ ಈಗಾಗಲೇ ತಿಳಿದಿದ್ದಳು. ಅದರ ಫಲವಾಗಿ, ಈಗ ಸಂತೋಷವಾಗಿರಬೇಕಾದ ದಿನ ಭಯದ ಮಾತನ್ನು ಆಡುತ್ತಿದ್ದಳು ಆಕೆ.

"ಇಲ್ಲದ ಯೋಚನೆ ಮಾಡ್ಬೇಡ ವಿಜೀ. ನನಗೊಬ್ಬಳಿಗೆ ಹೀಗಾಯ್ತೂಂತ ನಿನಗೂ ಹೀಗೆಯೇ ಆಗಿ ತೀರ್ಬೇಕು ಅನ್ನೋದೆಲ್ಲಿದೆ? ಅಲ್ದೆ, ಗಂಡನ ಮನೆ ಸೇರಿ ಸುಖವಾಗಿ ಸಂಸಾರ ಮಾಡೋ ಹೆಂಗಸರನ್ನ ನಾವು ಕಂಡೇ ಇಲ್ಲವೆ?"

ಆ ಮಾತೇನೋ ಸರಿಯೆ. ಅಂತಹ ಧೋರಣೆಯನ್ನು ಅನುಸರಿಸಿ ಸಮಾಧಾನ ತಳೆಯುವುದೂ ಜಾಣತನವೇ....ಹಾಗೆಂದು ಯೋಚಿಸುತ್ತ ವಿಜಯ ಮೌನವಾಗಿ ಅಕ್ಕನ ಮುಖವನ್ನೇ ದಿಟ್ಟಿಸಿದಳು.

ತನ್ನ ಮಾತಿಗೆ ತಂಗಿ ಉತ್ತರ ಕೊಡಲಿಲ್ಲವೆಂದು, ಕೊರಗಿನ ಆವರಣದಿಂದ ಆಕೆಯನ್ನು ಹೊರಕ್ಕೆಳೆಯಲು ತಾನು ಸಮರ್ಥಳಾದೆನೆಂದು, ಸುನಂದಾ ತೃಪ್ತಳಾದಳು. ಮತ್ತೆ ಮುಖದಲ್ಲಿ ನಗೆ ಮೂಡಿತು. ನಗುತ್ತ, ಆಜ್ಞಾಪಿಸುವವಳಂತೆ ಅಧಿಕಾರವಾಣಿಯಿಂದ ಸುನಂದಾ ಹೇಳಿದಳು:

"ಇನ್ನು ಗಂಡನ ಮನೆಗೆ ಹೊರಡೋವರೆಗೂ ನಾನು ಹಿರಿಯಕ್ಕ ಅನ್ನೋದನ್ನ ಮರೀಬೇಡ. ಏನು ನಾನು ಹೇಳ್ತೀನೋ ಹಾಗೆ ನಡ್ಕೋಬೇಕು ನೀನು. ಕೇಳಿಸ್ತೇನೇ?"

ವಿಜಯಾ ನಕ್ಕಳು.

"ಹೂಂ!"

ಅಷ್ಟರಲ್ಲಿ ಅವರ ತಾಯಿ ಅಳುತ್ತಲಿದ್ದ ಮೊಮ್ಮಗಳನ್ನು ಎತ್ತಿಕೊಂಡು ಬಂದರು. ಅವರು ಬಂದುದು, ಮಗುವನ್ನು ಹಿರಿಯ ಮಗಳ ಕೈಗೆ ಕೊಡಬೇಕೆಂದು.

"ಎಲ್ಲಿದೀಯೆ ಸುನಂದಾ? ಈ ಸರಸ್ವತೀನ ಒಂದಿಷ್ಟು ಕರಕೋಬಾರದೇನೇ?"

ಸುನಂದಾ-ವಿಜಯಾ ಗಡಬಡಿಸಿ ಎದ್ದು ನಿಂತರು. ಹಾಸಿಗೆಗಳಿನ್ನೂ ಹಾಗೆಯೇ ಅಸ್ತವ್ಯಸ್ತವಾಗಿದ್ದುದನ್ನು ಕಂಡು ಅವರ ತಾಯಿಗೆ ರೇಗಿತು.

"ಇದೇನ್ರೇ ಇದು? ಯಾವತ್ತಮ್ಮಾ ವಿಜಯಾ ನಿನಗೆ ಬುದ್ಧಿ ಬರೋದು? ಗಂಡನ ಮನೇಲೂ ಎಂಟು ಗಂಟೆಗೆ ಎದ್ದು ಹೆತ್ತೋರಿಗೆ ಒಳ್ಳೇ ಹೆಸರು ಬರೋ ಹಾಗೆ ಮಾಡು. ಥೂ....!"

ವಿಜಯಳ ಮುಖ ವಿವರ್ಣವಾಯಿತು. ಹೆತ್ತವರಿಗೆ ಒಳ್ಳೆಯ ಹೆಸರು ತರುವ ಮಕ್ಕಳ ಪ್ರಸ್ತಾಪ ಬಂತೆಂದು, ಚೇಳು ಕುಟುಕಿದ ಅನುಭವವಾಯಿತು ಸುನಂದೆಗೆ. ಏನೇ ಬಂದರೂ ತಂಗಿಯನ್ನು ಹರ್ಷಚಿತ್ತಳಾಗಿಯೆ ಇಡಬೇಕೆಂದು ನಿರ್ಧಾರ ಮಾಡಿದ್ದ

ಆಕೆ, ಸಂಕಟದ ಯೋಚನೆಗಳನ್ನೆಲ್ಲ ಆಳ ಆಳಕ್ಕೆ ತಳ್ಳಿ, ದೃಢ ನಡಿಗೆಯಿಂದ ತಾಯಿಯ ಎಡೆಗೆ ಬಂದು, ಸರಸ್ವತಿಯನ್ನೆತ್ತಿಕೊಳ್ಳುತ್ತ ಅಂದಳು:

"ಇರಲಿ ಬಿಡಮ್ಮ. ಸ್ಟೇಷನಿಂದ ಮನೆಗೆ ಬರೋದಕ್ಕೆ ಇನ್ನೂ ಹೊತ್ತಿದೆ. ಇನ್ನೇನು ಎರಡು ದಿವಸ. ಆಮೇಲೆ ನೀನು ಬಂದು ಎಬ್ಬಿಸೋಕೆ ವಿಜಯಾ ಎಲ್ಲಿರ್ತಾಳೆ?"

ಪರಿಣಾಮಕಾರಿಯಾಗಿತ್ತು ಆ ಮಾತು. ಕರುಳಿನೊಂದು ತುಣುಕನ್ನು ಬೀಳ್ಕೊಡುವ ಯೋಚನೆ ಯಾವ ಕಾಲದಲ್ಲಿ ಯಾರಿಗೆ ಪ್ರಿಯವಾಗುವುದು ಸಾಧ್ಯ? ತನ್ನ ಕಿರಿಯ ಮಗಳನ್ನು ನೋಡುತ್ತ, ತಾನಾಗಿಯೇ ತಾಯಿಯ ಸ್ವರ ಮೃದುವಾಯಿತು.

"ಬಾರೇ ವಿಜಯಾ. ಸ್ನಾನದ ಮನೇಲಿ ಉರಿಹಾಕಿದ್ದೆ. ನೀರು ಕಾದಿದೆಯೋ ನೋಡು. ರಾತ್ರೆಯೆಲ್ಲಾ ಪ್ರಯಾಣ ಮಾಡಿ ನಿದ್ದೆ ಕೆಟ್ಟಿರ್ತಾರೆ. ಒಂದಿಷ್ಟು ಎರಕೊಂಡು ವಿಶ್ರಾಂತಿ ತಗೊಳ್ಲಿ."

"ಹೂನಮ್ಮಾ."

ವಿಜಯಾ ತಾಯಿಯನ್ನು ಹಿಂಬಾಲಿಸಿದಳು. ಆಳು ನಿಲ್ಲಿಸಿದ ಸರಸ್ವತಿಯ ಕೈಗೆ ಆಕೆಯ ಬೊಂಬೆಪಾಪವನ್ನಿತ್ತು, ಕೆಳಗೆ ಕುಳ್ಳಿರಿಸಿ, ಸುನಂದಾ ಹಾಸಿಗೆಗಳನ್ನು ಸುರುಳಿ ಸುತ್ತಿದಳು. ಪೊರಕೆ ತಂದು, ಹೊರ ಜಗಲಿಯನ್ನೂ ನಡುಮನೆಯನ್ನೂ ಪಕ್ಕದ ಕೊಠಡಿಗಳನ್ನೂ ಗುಡಿಸಿ ಸ್ವಚ್ಛಗೊಳಿಸಿದಳು. ಹಿಂದಿನ ದಿನವೇ ಅಣಿಗೊಳಿಸಿದ್ದ ಮಾವಿನೆಲೆಯ ಒಂದೆಳೆ ಸಾಲು ಹೆಬ್ಬಾಗಿಲನ್ನು ಅಲಂಕರಿಸಿತು. ಅದರಲ್ಲೊಂದೆಡೆ ಎಲೆಗಳು ಒಂದರ ಮೇಲೊಂದು ಬಿದ್ದು ಸಿಕ್ಕುಗಟ್ಟಿದ್ದುವು. ಸುನಂದಾ ಅದನ್ನು ಸರಿ ಪಡಿಸಿದಳು. ಮನೆಯ ಒಂದೇ ಒಂದು ಪೀಠೋಪಕರಣವಾದ ಆರಾಮಕುರ್ಚಿಯನ್ನು ತಂದು ನಡುಮನೆಯಲ್ಲಿ ಬಿಡಿಸಿದಳು. ನಾಲ್ಕು ವರ್ಷಗಳ ಹಿಂದೆಯೂ ಆ ದಿನ ಇದೇ ಆರಾಮ ಕುರ್ಚಿ ಇತ್ತು. ಆದರೆ ಆಗ ಅದು ಹೊಸದು. ಅಲ್ಲದೆ ಜತೆಯಲ್ಲಿ ನೆರೆ ಹೊರೆಯವರಿಂದ ಎರವಲು ತಂದಿದ್ದ ಬೇರೆ ಎರಡು ಕುರ್ಚಿಗಳಿದ್ದುವು. ಅಷ್ಟೇ ಅಲ್ಲ, ಆಗ ಅಡುಗೆಗೆಂದು ಹೆಂಗಸರಿಬ್ಬರನ್ನು ಗೊತ್ತುಮಾಡಿದ್ದರು. ತನ್ನ ಗಂಡ ಅತ್ತೆಯೊಡನೆ ಆ ದಿನ ಬಂದಿಳಿದುದೂ ಬೆಳಗು ಮುಂಜಾನೆಯೇ. ಆ ಸಾರೆ ನಡುರಾತ್ರೆಯೇ ಮನೆಯೆಲ್ಲ ಎಚ್ಚರಗೊಂಡು, ಕೆಲಸ ಕಾರ್ಯಗಳು ಆರಂಭವಾಗಿದ್ದುವು. ಆ ಮನೆಯಳಿಯನನ್ನು ತೃಪ್ತಿಪಡಿಸಲು ಆಗ ತೋರಿದ ಸಂಭ್ರಮವೆಷ್ಟು!... ಈಗ ಅಂತಹ ಯತ್ನವಿಲ್ಲ. ಈ ದಿನ ಸರಳತನ ಮೈವೆತ್ತು ನಿಂತಿದೆ. ಎಂದಿಗಿಂತ ಎಲ್ಲಿಯೋ ಸ್ವಲ್ಪ ಹೆಚ್ಚು ಸಂಭ್ರಮ ಅಷ್ಟೆ—ಸ್ವಲ್ಪ ಮಾತ್ರ ಹೆಚ್ಚು.

ಯಾಕೆ ಹೀಗೆ? ಕಾಲ ಬದಲಾಯಿತೆಂದೆ? ನಿಷೇಕ ಪ್ರಸ್ತದಂತಹ ಸಮಾರಂಭದ ಘನತೆ ಗಾಂಭೀರ್ಯ ಹಿರಿಮೆಗಳು ಕಡಮೆಯಾದುವೆಂದೆ? ಹಾಗೆ ಹೇಳುವುದು ಕಷ್ಟವೆಂದು ಸುನಂದಾ ಬಲ್ಲಳು. ವಿಜಯಳ ಗಂಡ ತಾನೊಬ್ಬನೇ ಬರುವೆನೆಂದು ಬರೆದಿದ್ದ. ಯಾವ ಕಾರಣದಿಂದಲೂ ಏನೊಂದು ವೆಚ್ಚವನ್ನೂ ಮಾಡಬಾರದು ಎಂದು ತಿಳಿಸಿದ್ದ.

ಎರಡನೆಯ ಸೂಚನೆ ಆಶ್ಚರ್ಯಕ್ಕೆ ಕಾರಣವಾಗಿತ್ತು. ಹಾಗೆಯೇ ಯಾವುದೋ ಆಸೆಯ ಕಿರಣ ಉದಿಸುವುದಕ್ಕೂ ಎಡೆಗೊಟ್ಟಿತ್ತು. ಸ್ವತಃ ಬಡವನಾಗಿದ್ದರೂ ಆತ ವರದಕ್ಷಿಣೆ ಕೇಳಿರಲಿಲ್ಲ. ಅಂತಹ ದೊಡ್ಡ ವೆಚ್ಚವಿರದೆ ಇದ್ದರೂ ಸಣ್ಣಪುಟ್ಟ ಸಾಲ ವಾಗಿತ್ತು. ಆ ವಿಷಯ ಅಳಿಯನಿಗೆ ತಿಳಿಯುವ ಸಂಭವವಿರಲಿಲ್ಲ. ಆದರೂ ಆತ ಊಹಿಸಿಕೊಂಡಿದ್ದನೋ ಏನೋ....ಅಂತೂ ವಿಜಯಳ ದಾಂಪತ್ಯ ಜೀವನ ಸುಖಕರ ವಾಗುವ ಚಿಹ್ನೆಗಳು ತೋರಿದ್ದುವು. ಮದುವೆಗೆ ಮುಂಚೆಯೊಮ್ಮೆ, ಗೊತ್ತಾಗಿದ್ದ ಆ ಗಂಡನ್ನು ಕುರಿತು 'ಪಾಲಿಗೆ ಬಂದ ಪಂಚಾಮೃತ' ಎಂದು ವಿಜಯ ಆಡಿದ್ದಳು ನಿಜ. ಹಾಗೆ ಆಕೆಯ ಪಾಲಿಗೆ ಬಂದುದು ನಿಜವಾಗಿಯೂ ಅಮೃತವೇ ಎಂಬ ಆಸೆಯ ಭಾವನೆ ಈಗ ಮೂಡಿತ್ತು.

'ಓ ದೇವರೆ, ಇದೇ ಸತ್ಯವಾಗಲಿ; ನಾನು ಅನುಭವಿಸಿದ ಸಂಕಟ ನನ್ನ ವಿಜೀಗೆ ಪ್ರಾಪ್ತವಾಗದಿರಲಿ' ಎಂದು ಸುನಂದಾ ಮನಸ್ಸಿನಲ್ಲೇ ದೇವರನ್ನು ಪ್ರಾರ್ಥಿಸಿದಳು.

ಆಕೆ ಬೇರೆ ಸೀರೆಯುಟ್ಟು ಬಂದು ಕನ್ನಡಿಯಲ್ಲಿ ಮುಖ ನೋಡಿಕೊಂಡಳು. ಮನೆಯ ಹಿರಿಯಕ್ಕನಾದ ತಾನು ಸಂತೋಷದಿಂದ ಓಡಾಡಬೇಕಲ್ಲವೆ?...ತಂಗಿಯನ್ನು ಆಕೆ ಕೈಹಿಡಿದು ಎಳೆದು ತಂದು ಹೆರಳು ಹಾಕಿದಳು. ಸೀರೆ ಕುಪ್ಪಸಗಳನ್ನು ಎತ್ತಿ ಕೊಟ್ಟಳು. ಆಯ್ಕೆ ಏನೇನೂ ಕಷ್ಟದ್ದಾಗಿರಲಿಲ್ಲ. ವಿಶೇಷ ಸಮಾರಂಭಗಳಲ್ಲಿ ಉಡು ವುದಕ್ಕೆಂದು ಅಲ್ಲಿದ್ದುದು ಒಂದೇ ಜತೆ...

ಸಿಂಗರಿಸಿ ಸಿದ್ಧವಾದ ತಂಗಿಯನ್ನು ನೋಡಿ ಸುನಂದೆಗೆ ಹೆಮ್ಮೆ ಎನಿಸಿತು. ಸುರ ಸುಂದರಿಯಲ್ಲದೆ ಹೋದರೂ ಸ್ಫುರದ್ರೂಪಿಣಿ. ಯೌವನದ ಗಾಂಭೀರ್ಯ ಘಾಸಿ ಗೊಳಿಸದೇ ಇದ್ದ ಮುಗ್ಧ ಸೌಂದರ್ಯ.

ಸುನಂದಾ ವಿಜಯಾಗೆ ದೃಷ್ಟಿತೆಗೆದಳು.

ಹಾಗೆಮಾಡಿದ ಬಳಿಕ, "ಓದಿರೋ ಆಧುನಿಕರು ಅನಿಸಿಕೊಂಡಿದ್ದೀವಿ. ಆದರೆ ಕಂದಾಚಾರ ಒಂದನ್ನೂ ಬಿಟ್ಟಿಲ್ಲ," ಎಂದು ನಕ್ಕಳು. ವಿಜಯಳಿಗೂ ನಗು ಬಂತು.

"ಪಾಪ ಮಲಕ್ಕೊಂತು", ಎಂದು ತೊದಲುತ್ತ ಬರಿಗೈಯಲ್ಲಿ ಸರಸ್ವತಿ ಬಂದಳು.

"ಬಾ ಚಿನ್ನ", ಎಂದು ವಿಜಯ ಕೈಚಾಚಿ ಕರೆದಳು.

"ಎತ್ಕೊ ಬೇಡ್ವೇ... ಸೀರೆಯಲ್ಲಾ ಕೊಳೆಯಾಗುತ್ತೆ. ಅವಳ ಲಂಗನಾದರೂ ಬದಲಾಯಿಸ್ತೀನಿ, ತಾಳು...." ಎಂದಳು ಸುನಂದಾ.

ಆ ಮಾತು ಅರ್ಥವಾದವಳಂತೆ ಸರಸ್ವತಿ ರೇಗಿ ಪ್ರತಿಭಟಿಸಿ ರಾಗ ತೆಗೆದಳು.

ಸುನಂದಾ, ಸರಸ್ವತಿಯ ಉಡುಗೆಗಳಿದ್ದ ಪೆಟ್ಟಿಗೆಯ ಕಡೆಗೆ ಸಾಗಿದಂತೆ ವಿಜಯಾ ಮಗುವನ್ನೆತ್ತಿಕೊಂಡಳು.

"ಎಲ್ಲಿ ಉಮ್ಮಕೊಡು," ಎಂದಳು.

ಮಗು ಪ್ರೀತಿಯಿಂದ ಚಿಕ್ಕಮ್ಮನಿಗೆ ಉಮ್ಮ ಕೊಟ್ಟಿತು.

"ಉಮ್ಮ ಕೊಡುವವರು ಬರೋತನಕ ಇನ್ನೆರಡು ನಿಮಿಷ ಕಾಯೋಕೆ

ಆಗಲ್ವೇನೋ," ಎಂದು ಸುನಂದಾ ನಕ್ಕಳು.

ಅಷ್ಟರಲ್ಲೆ ಜಟಕಾ ಮನೆಯ ಎದುರು ಬಂದು ನಿಂತ ಸದ್ದಾಯಿತು.

"ಗಾಡಿ ಬಂತು ಕಣ್ರೇ," ಸುನಂದೆಯ ತಾಯಿ ಕರೆದು ಹೇಳಿದರು.

"ವಿಜಯಾ, ಬಿಂದಿಗೆ ಬಿಸಿನೀರು ತಗೋ," ಎಂದು ಅವರೇ ನಿರ್ದೇಶ ವಿತ್ತರು.

೨

ಆರಾಮ ಕುರ್ಚಿ ಬೇಡವೆಂದು ಜಮಖಾನದ ಮೇಲೆಯೇ ದಿಂಬಿಗೊರಗಿ ಕುಳಿತ ಅಳಿಯ ದೇವರನ್ನೊಮ್ಮೆ ಬಾಗಿಲ ಬಳಿ ನಿಂತು ನೋಡಿ ಸುನಂದಾ, ಅಡುಗೆಮನೆಯಲ್ಲಿ ಅವಿತಿದ್ದ ವಿಜಯಳೆಡೆಗೆ ಬಂದಳು.

ಬರುತ್ತ, "ರಾಯರು ಬಂದರು ಮಾವನ ಮನೆಗೆ ರಾತ್ರಿಯಾಗಿತ್ತು." ಎಂದು ಗುಣಗುಣಿಸಿ ನಕ್ಕಳು.

ಆಕೆಯ ತಾಯಿಗೆ ಹಾಡಿನ ಆ ಸಾಲು ಮೋಜೆನಿಸಿತು.

"ರಾತ್ರಿ ಎಲ್ಲಿಂದ್ಬಂತೆ? ಬೆಳಗಾಗಿತ್ತೂಂತ ಹೇಳು," ಎಂದು ತಮ್ಮ ಹಾಸ್ಯೋಕ್ತಿಗೆ ತಾವೇ ತಲೆದೂಗುತ್ತ ಅವರು ಹಿರಿಯ ಮಗಳನ್ನು ನೋಡಿದರು.

"ಕೊನೇಲಿ ರಾಯರಿಗೇನಾಗುತ್ತೆ ಗೊತ್ತೆ ಅಮ್ಮ?" ಎಂದಳು ಸುನಂದಾ. ತುಂಟ ನಗೆ ಧ್ವಜ ನೆಟ್ಟಿತ್ತು ಆಕೆಯ ಮುಖದ ಮೇಲೆ.

"ನನಗೇನಮ್ಮ ಗೊತ್ತು? ಮರೆತ್ಬಿಟ್ಟಿದೀನಿ. ಅದೇನು ದೇವರ ನಾಮವೆ ನೆನಪಿಟ್ಕೊಳ್ಳೋಕೆ?"

"ಅಳಿಯದೇವರ ನಾಮ!"

"ಉದ್ಧಾರವಾಯ್ತು."

"ಕೊನೇಲಿ ರಾಯರು ಸಿಡಿಮಿಡಿಯಾಗ್ತಾರೆ."

"ಯಾಕೊ?"

"ಪದುಮ ಕಾಣಿಸ್ಕೊಳ್ಳಿಲ್ಲಾಂತ."

"ಎಲ್ಲಿಗೆ ಹೋಗಿದ್ಲೊ?"

"ಒಳಗಿರ್ಲಿಲ್ಲಾಮ್ಮ."

"ಮತ್ತೆ?"

"ಅಯ್ಯೋ ಅಮ್ಮ! ಒಳಗಿಲ್ಲದ ಮೇಲೆ ಇನ್ನೆಲ್ಲಿರ್ತಾಳೆ ಹೇಳು."

ಹೊರಗೆ—ಎಂಬ ಪದ ಮನಸ್ಸಿನಲ್ಲೆ ರೂಪುಗೊಂಡು ಸುನಂದೆಯ ತಾಯಿ

ನಕ್ಕರು.

"ಥೂ! ಥೂ! ಅದೆಂಥ ಹಾಡೇ!" ಎಂದರು.

"ನಮ್ಮ ವಿಜೀ ಒಳಗಿದಾಳೆ. ಆದರೂ ರಾಯರಿಗೆ ದೇವೀ ದರ್ಶನವಾಗೇ ಇಲ್ಲ!"

ಸುನಂದೆಯ ತಂದೆ ಒಳಗೆ ಬಂದರು. ನಗೆಯ ವಾತಾವರಣವನ್ನು ಕಂಡು ಅವರಿಗೆ ಹಾಯೆನಿಸಿತು. ತಮ್ಮಾಕೆಯನ್ನುದ್ದೇಶಿಸಿ ಅವರೆಂದರು:

"ಜೋಯಿಸರನ್ನ ನೋಡ್ಕೊಂಡು ಬರ್‍ತೀನಿ ಕಣೇ."

ಹಿರಿಯ ಮಗಳತ್ತ ನೋಡುತ್ತ ಹೇಳಿದರು:

"ಮೊದಲು ಕಾಫಿಯೋ ಸ್ನಾನವೋ...ವಿಚಾರಿಸ್ಕೊಂಡು ಎಲ್ಲಾ ನೋಡ್ಕೊ ಸುನಂದಾ."

ಹೊರಬಂದು ಅಳಿಯನೆದುರು ನಿಂತು ಅಂದರು:

"ಸ್ವಲ್ಪ ಅಂಗಡಿಬೀದಿ ಕಡೆ ಹೋಗ್ಬರ್‍ತೀನಿ ವೆಂಕಟರಾಮಯ್ಯನವರೆ. ಯಾವುದಕ್ಕೂ ಸಂಕೋಚಪಟ್ಕೋಬೇಡಿ. ನಿಮ್ಮದೇ ಮನೆ..."

ಹಿಂದೆ ಸುನಂದೆಯ ಗಂಡ ಬಂದಿದ್ದಾಗ ಭಾವನನ್ನು ಹಂಗಿಸುವ ತುಂಟಿಯಾಗಿದ್ದಳು ವಿಜಯಾ. ಈಗ ವಿಜಯಾಳ ಗಂಡ ಬಂದಾಗ, ಆ ಪಾತ್ರ ವಹಿಸುವ ಎಳೆಯರು ಯಾರೂ ಮನೆಯಲ್ಲಿಲ್ಲ. ಆ ಕೆಲಸವನ್ನೂ ತಾನೇ ಮಾಡಬೇಕು ಎಂದುಕೊಂಡಳು ಸುನಂದಾ.

ತಂದೆ ಬೀದಿಗಿಳಿದೊಡನೆಯೆ ಸುನಂದಾ ನಡುಮನೆಗೆ ಬಂದಳು.

"ನಮಸ್ಕಾರ."

ಅನಿರೀಕ್ಷಿತವಾಗಿದ್ದ ವಂದನೆ–ಸಂಬೋಧನೆ; ಹೆಣ್ಣು ಸ್ವರ. ಛಾವಣಿಯನ್ನೆ ದಿಟ್ಟಿಸಿ ನೋಡುತ್ತ ಕುಳಿತಿದ್ದ ವೆಂಕಟರಾಮಯ್ಯ ಚಕಿತನಾಗಿ ಪಕ್ಕಕ್ಕೆ ತಿರುಗಿದ.

"ನಮಸ್ಕಾರ. ಓ, ನೀವಾ!"

ತನ್ನವಳ ಅಕ್ಕ ಎಂಬ ಅರಿವಿನ ಸಮಾಧಾನದಿಂದ ಹುಟ್ಟಿತ್ತು ಆ ಉದ್ಗಾರ.

"ಇನ್ಯಾರೂಂತ ತಿಳಕೊಂಡ್ರಿ?"

ಸಂಕೋಚವನ್ನು ದೂರ ಸರಿಸುತ್ತ ಉತ್ತರ ರೂಪವಾಗಿ ವೆಂಕಟರಾಮಯ್ಯ ನಕ್ಕ.

"ಎಲ್ಲಿ, ಪದುಮ ಕಾಣಿಸ್ಲಿಲ್ವೇನು?" ಎಂದಳು ಸುನಂದಾ.

"ಪದುಮ?"

ಪಾಪ–ಕಕ್ಕಾಬಿಕ್ಕಿಯಾಗಿದ್ದ ವೆಂಕಟರಾಮಯ್ಯ!

"ಹೂಂ. ಅವಳೇ ವಿಜಯಾ."

ಆ ಕರಿಯ ಮುಖದಲ್ಲೂ ರಕ್ತ ಸಂಚಾರವಾಗಿ ಅದು ತೇಜಃಪುಂಜವಾಯಿತು.

"ಓ!"

"ಅಕ್ಕಾ" ಎಂಬ ಕರೆ ಬಂತೆಂದು ಸುನಂದಾ ಒಳಹೋಗಿ, ಕ್ಷಣ ತಡೆದು, ಮತ್ತೆ

ಬಂದಳು.

"ಮಡಿಯುಟ್ಟುಕೊಂಡ ಮೇಲೆಯೇ ಕಾಫಿ ತಗೋತೀರಾ? ಅಥವಾ ಒಂದು ಗುಟುಕು ಮೊದಲೇ ಕುಡಿಯೋಕೆ ಆಕ್ಷೇಪವೇನಾದರೂ ಉಂಟೆ?—ಅಂತ ಕೇಳ್ತಾರೆ."

"ಯಾರು?"

"ಅತ್ತೆ!"

ಭೂಪತಿಗೆ ಕಸಿವಿಸಿಯಾಯಿತು. ಸ್ನಾನ ಆಮೇಲೆ ಎಂದರೆ. ಮಡಿ ಮೈಲಿಗೆಯ ವ್ಯತ್ಯಾಸವೇ ಇಲ್ಲದವನೆಂದು ಅತ್ತೆ ಮಾವ ತನ್ನನ್ನು ಟೀಕಿಸಬಹುದೆಂಬ ಭಯ. ಬದಲು, ಕಾಫಿ ಮೊದಲಾಗಲಿ—ಎಂದರೆ, ಕೈ ಹಿಡಿದವಳ ಮುಖವನ್ನಾದರೂ ಈಗಲೇ ಕಾಣಬಹುದೆಂಬ ಆಸೆ. ನಿಂತೇ ಇದ್ದಳು ಆಕೆ. ತಾನು ಏನಾದರೂ ಉತ್ತರ ಕೊಡ ಬೇಕು....

ಆತನ ತೊಳಲಾಟವನ್ನು ಗಮನಿಸಿದ ಸುನಂದಾ ಅಂದಳು:

"ತಿಂಡಿ ಸ್ನಾನವಾದ ಮೇಲೆ ತಗೊಳ್ಳುವಿರಂತೆ; ಕಾಫಿ ಮೊದಲೇ ಆಗಲಿ-ಆಗದೆ?"

"ನಿಮ್ಮಿಷ್ಟ," ಎಂದ ವೆಂಕಟರಾಮಯ್ಯ, ಸಮಸ್ಯೆಯನ್ನು ಬಗೆ ಹರಿಸಿ ಕೊಟ್ಟು ದಕ್ಕೆ ಮನಸಿನಲ್ಲೆ ಸುನಂದೆಗೆ ಧನ್ಯವಾದವನ್ನರ್ಪಿಸುತ್ತ.

"ನೀವು ಆ ಕೊಠಡಿಗೆ ಹೋಗಿ. ಕಾಫಿ ತರ್ತೀನಿ."

ಕೊಠಡಿಗೆ ಹೋಗಬೇಕೆಂಬ ಸೂಚನೆ ಯೋಗ್ಯವಾಗಿತ್ತು. ಬಯಲಿನಂತಹ ನಡುಮನೆಗಿಂತ ಕೊಠಡಿಯು ಏಕಾಂತವೇ ಪ್ರಿಯಕರ. ಆದರೆ, 'ಕಾಫಿ ತರ್ತೀನಿ' ಎನ್ನುವ ಮಾತಿಗೆ ಏನರ್ಥ? 'ಕಾಫಿ ಕಳಿಸ್ತೀನಿ' ಎನ್ನಬಾರದಾಗಿತ್ತೆ?

ವೆಂಕಟರಾಮಯ್ಯನಿಗೆ ಈಗ ರೇಗಿತು. ಮೆಲ್ಲನೆದ್ದು ಆತ ಕೊಠಡಿಯ ಕಡೆಗೆ ನಡೆದ. ಅಲ್ಲೊಂದು ಕಿಟಿಕಿಯಿತ್ತು. ತನಗೆ ಪರಿಚಿತವಾದ ಪ್ರಿಯವಾದ ಕೊಠಡಿ-ಕಿಟಿಕಿ. ಇಂದಿನ ಸಿಡುಕನ್ನು ಕರಗಿಸುತ್ತಿದ್ದ ಹಿಂದಿನ ನೆನಪನ್ನು ಸವಿಯುತ್ತ, ಬೀದಿಯನ್ನು ದಿಟ್ಟಿಸುತ್ತ, ಆತ ನಿಂತ.

ಅದು, ಬಲು ದೀರ್ಘವೆಂದು ಕಂಡ ಒಂದೆರಡು ನಿಮಿಷ...

ಬಳೆಗಳ ಸದ್ದಾಯಿತು. ತನ್ನಾಕೆಯೇ ಇರಬಹುದೆಂಬ ಆಸೆ, ಇರಲಾರಳೆಂಬ ಭೀತಿಯೊಡನೆ ಸೆಣಸಾಡಿತು.

ಮತ್ತೆ ಬಳೆಗಳ ಸದ್ದು. ವೆಂಕಟರಾಮಯ್ಯ ತಿರುಗಿ ನೋಡಲೇ ಇಲ್ಲ.

"ಕಾಫಿ ಆರ್‍ಹೋಗುತ್ತೆ."

ಸರಕ್ಕನೆ ತಿರುಗಿದ ಮನೆಯಳಿಯ, ಕಾಫಿಲೋಟದೊಡನೆ ಬಂದಿದ್ದ ತನ್ನಾಕೆಯನ್ನು ದಿಟ್ಟಿಸಿದ. ಅಂತೂ ಬಂದಳು ಪುಣ್ಯವಂತೆ!

"ವಿಜಯಾ!"

ಅರೆಬಿರಿದ ಮುಗುಳುನಗೆ, ಚಂಚಲವಾದ ನೋಟ....ಮರುಕ್ಷಣ ದೃಷ್ಟಿಯನ್ನು ನೆಲದೆಡೆಗೆ ಎಳೆಯುತ್ತಿದ್ದ ಲಜ್ಜೆ...

"ನಿಮ್ಮಕ್ಕ ತುಂಬಾ ಕೆಟ್ಟೋರು ಕಣೇ."

"ಯಾಕೆ?"

"ಎಷ್ಟೊಂದು ಪೀಡಿಸ್ತಾರೆ!"

ವಿಜಯಾ ನೆಲವನ್ನು ನೋಡುತ್ತ ಕಿಸಕ್ಕನೆ ನಕ್ಕಳು.

"ಕಾಫಿ,"

ಇನ್ನೂ ಆಕೆಯ ಕೈಯಲ್ಲೇ ಇತ್ತು ಲೋಟ. ಅದನ್ನೆತ್ತಿ ವೆಂಕಟರಾಮಯ್ಯ ಕಿಟಕಿಯ ದಂಡೆಯ ಮೇಲಿರಿಸಿ ಬಾಗಿಲನ್ನು ಮರೆಮಾಡಿದ.

"ಎಷ್ಟೊಂದು ನಾಚಿಕೆಯೇ ನಿನಗೆ?"

ಕಾಫಿ ಹೀರಲು ವೆಂಕಟರಾಮಯ್ಯನಿಗೆ ಆಗ ಪುರಸೊತ್ತಿರಲಿಲ್ಲ...

ಮತ್ತೆ ಉಸಿರಾಡುವುದು ಸಾಧ್ಯವಾದಾಗ ವಿಜಯಾ ಮೆಲುದನಿಯಲ್ಲಿ ಕೇಳಿದಳು.

"ಆ ಕಾಫಿ ಮೇಲೂ ಇಷ್ಟು ಕನಿಕರ ತೋರಿಸ್ಬಾರ್ದೆ?"

ಆತ ನಕ್ಕು ಲೋಟವನ್ನೆತ್ತಿಕೊಂಡ. ಕಾಫಿ ರುಚಿಯಾಗಿತ್ತು.

"ಒಂದು ಗುಟುಕು ನಿನಗೂ ಕೊಡಲಾ?"

"ಬೇಡಿ, ಒಳಗಿದೆ."

ಬರೇ ಉಪಚಾರದ ಮಾತು, ಅಷ್ಟೆ. ಆ ತುಟಿಗಳ ಸ್ಪರ್ಶಸುಖವನ್ನು ಅನುಭವಿಸಿದ್ದ ಲೋಟ ಈ ತುಟಿಗಳ ಬಳಿಗೆ ಬಂದಾಗ ವಿಜಯಾ ಬೇಡವೆನ್ನಲಿಲ್ಲ.

ಆತ ತುಂಟನೋಟ ಬೀರುತ್ತ ಕೇಳಿದ:

"ಕಾಫಿ ಚೆನ್ನಾಗಿದೆ. ನಿಮ್ಮಕ್ಕನಾ ಮಾಡಿದ್ದು?"

"ಅಲ್ಲ. ನಾನೇ ಮಾಡ್ದೆ."

"ಅದಕ್ಕೇ ಹೀಗಿದೆ. ಏನು ರುಚಿಯೋ! ದೇವರಿಗೇ ಪ್ರೀತಿ!"

ಅದು ನಗೆಮಾತೇ ಆಗಿದ್ದರೂ ಮುಖ ಕಪ್ಪಿಡುವ ಹಾಗಾಯಿತು. ಆಕೆ ಕತ್ತು ಕೊಂಕಿಸಿ ರಾಗವೆಳೆದಳು:

"ಹೋಗ್ರೀ!..."

"ಹೋಗ್ಲೇನು?"

"ಊ..."

ಲೋಟ ಬರಿದಾಯಿತು. ಆದರೆ ಹೃದಯ ತುಂಬಿರಲೇ ಇಲ್ಲ. ಬಾಗಿಲಿನತ್ತ ನೋಡುತ್ತ ಆತ ಮಲೆನಾಡಿನ ಬಾಹು ಬಳ್ಳಿಯಿಂದ ಆಕೆಯನ್ನು ಬಂಧಿಸಿದ.

"ಒಬ್ಬನೇ ಇರೋಕೆ ನನ್ನಿಂದಾಗಲ್ಲ ಕಣೇ. ಎಷ್ಟೋ ಸಲ, ಇನ್ನೇನು ಹುಚ್ಚೇ ಹಿಡಿಯುತ್ತೆ ಅನಿಸುತ್ತೆ."

ವಿಜಯಾ ಆತನ ಗುಂಗುರು ಕೂದಲಿನೊಡನೆ ಆಟವಾಡಿದಳು.

"ನನಗೂ ಹಾಗೇ ಆಗಿಲ್ವೇನೋ?"

ವೆಂಕಟರಾಮಯ್ಯ, ಆ ತುಟಿ ಮೂಗು ಕಣ್ಣುಗಳನ್ನು ದಿಟ್ಟಿಸಿ ನೋಡಿದ. ಪ್ರಾಮಾಣಿಕವಾಗಿದ್ದ ನುಡಿ. ಎಷ್ಟೊಂದು ಅಪ್ಯಾಯಮಾನ ಅದು! ತನ್ನ ಆತ್ಮೀಯ ಜೀವದ ಅನುಭವವೂ ತನ್ನದಕ್ಕಿಂತ ಭಿನ್ನವಲ್ಲವೆಂದು ತಿಳಿಯುವುದು ಎಷ್ಟೊಂದು ಸಮಾಧಾನದ ವಿಷಯ!

"ಯಾವತ್ತು ಹೊರಡೋಣ ವಿಜಯ?"

"ನಿಮ್ಮ ಮಾವನನ್ನ ಕೇಳಿ."

"ಪುನಃ ಪೂಜೆ ಪುನಸ್ಕಾರ ತಂತ್ರ ಮಂತ್ರ ಆಗ್ಬೇಕೇನೋ?"

"ಬೇಡವಾದರೆ ಬೇಡ."

"ಕೇಳ್ತಾರೆಯೆ ಅವರು? ನಮ್ಮ ಮಾತೆಲ್ಲಿ ನಡೆಯುತ್ತೆ?"

ಬಾಗಿಲು ಮೆಲ್ಲಮೆಲ್ಲನೆ ಕಿರ್ರೆಂದಿತು. ಕಳ್ಳ ಹೆಜ್ಜೆಯಿಂದ ಬಂದು ಯಾರೋ ನಿಂತು ಅದನ್ನು ಸ್ವಲ್ಪ ಸ್ವಲ್ಪವೆ ತಳ್ಳಿದ ಹಾಗೆ. ವೆಂಕಟರಾಮಯ್ಯ ಹುಬ್ಬು ಗಂಟಿಕ್ಕಿದ ವಿಜಯ ಹೌಹಾರಿ ದೂರ ಕುಳಿತಳು, ಎದೆಯ ಮೇಲಿನ ಸೆರಗು ಸರಿಪಡಿಸಿಕೊಳ್ಳುತ್ತಾ.

ಬಾಗಿಲು ತೆರೆದು ಒಳಗಿಣುಕಿ ನೋಡಿದವಳು ಸರಸ್ವತಿ. ಹೊಸ ಗಂಡು ಮುಖ ಕಂಡು ಮಗುವಿಗೆ ದಿಗಿಲಾಯಿತು. ದಂಪತಿ ನಕ್ಕರು. ವಿಜಯಾ ಸರಸ್ವತಿಯನ್ನು ಕರೆದಳು.

"ಬಾರೇ, ಬಾ..."

ಸರಸ್ವತಿ ಬರಲಿಲ್ಲ. ಅವಸರ ಅವಸರವಾಗಿ ಪುಟ್ಟ ಹೆಜ್ಜೆಗಳನ್ನಿಡುತ್ತ, ಚಿಕ್ಕಮ್ಮನ ಜತೆಯಲ್ಲಿ ಯಾರೋ ಅಪರಿಚಿತನಿರುವನೆಂದು ದೂರು ಕೊಡಲು ಅಮ್ಮನೆಡೆಗೆ ನಡೆದಳು.

ವೆಂಕಟರಾಮಯ್ಯ ನಕ್ಕು ನುಡಿದ:

"ಜಾಣೆ ಹುಡುಗಿ."

"ಹೂಂ!"

"ಯಾವತ್ತು ಬಂದ್ರು ನಿಮ್ಮಕ್ಕ? ಅವರ ಯಜಮಾನರನ್ನ ನಾನು ನೋಡೇ ಇಲ್ಲ."

ಬಲು ಸಹಜವಾಗಿ, ಆದರೂ ವಿಜಯಳ ಪಾಲಿಗೆ ಅನಿರೀಕ್ಷಿತವಾಗಿ, ಆ ಮಾತು ಬಂದಿತ್ತು. ಏನು ಉತ್ತರ ಕೊಡಬೇಕೆಂದು ತಿಳಿಯದೆ ಆಕೆ ಚಡಪಡಿಸಿದಳು.

"ಅಕ್ಕ ಈಗ ಇಲ್ಲೇ ಇದಾಳೆ."

"ಹಾಗಾ? ಮದುವೆಗೆ ಬಂದೋರು ಹೋಗೇ ಇಲ್ವೇನು?"

ವಿಜಯ ಗಂಡನ ಮುಖವನ್ನೇ ದಿಟ್ಟಿಸಿದಳು. ಚಿಂತೆ ಸಂದೇಹಗಳು ಆ ಹುಬ್ಬುಗಳ ಹಿಂದೆ ಒಂದುಗೂಡುತ್ತಿದ್ದುವೇ ಏನೆಂದು ಪರೀಕ್ಷಿಸಿದಳು. ತನ್ನ ದೇವರೆದುರು ತಾನೆಂದೂ ಸುಳ್ಳಾಡಬಾರದು ಎನ್ನುತ್ತಿತ್ತು ಮನಸ್ಸು. ಆದರೂ ತನ್ನ ಆತ್ಮನಿಗೆ ಆಗ

ಅಪ್ರಿಯವಾದುದೇನನ್ನು ತಿಳಿಸುವುದಕ್ಕೂ ಆ ಮನಸ್ಸು ಒಡಂಬಡಲಿಲ್ಲ. ಆಕೆ ಯೆಂದಳು:

"ಇಲ್ಲ. ಇರುವಷ್ಟು ದಿನವಾದರೂ ನಾವು ಜತೇಲೇ ಇರಬೇಕೂಂತ ಅಕ್ಕನನ್ನ ಇಲ್ಲೇ ಉಳಿಸ್ಕೊಂಡೆ."

"ಹಾಗೇನು? ನೀವಿಬ್ಬರೂ ತುಂಬಾ ಅನ್ಯೋನ್ಯ ಅಂತ ಕಾಣುತ್ತೆ!"

"ನೀವೂ ನಿಮ್ಮ ತಮ್ಮನೂ ಅನ್ಯೋನ್ಯವಾಗಿಲ್ವ?"

"ಇದೀಪಿ! ನಾನೇನು ಹಾಗಿರೋದು ತಪ್ಪು ಅಂದ್ನೆ!"

ವಿಜಯಾ ಮೌನವಾಗಿ ನಕ್ಕಳು. ಅಷ್ಟರಲ್ಲೆ ಸುನಂದೆಯ ಸ್ವರ ಕೇಳಿಸಿತು:

"ಪದ್ಮಾ."

ಮರೆತುದು ಯಾವುದೋ ನೆನಪಾದವನಂತೆ ವೆಂಕಟರಾಮಯ್ಯ ಹೆಂಡತಿಯ ಮುಖ ನೋಡಿದ.

"ಯಾರನ್ನೆ ನಿಮ್ಮಕ್ಕ ಕೂಗ್ತಿರೋದು?"

ಅದು ಬಲು ಹಿತಕರವಾದ ಕಣ್ಣು ಮುಚ್ಚಾಲೆಯಾಟ.

"ನನಗೇನ್ಗೊತ್ತು?"

ವೆಂಕಟರಾಮಯ್ಯ ಸಿಟ್ಟಾದ.

"ಸುಳ್ಳು ಹೇಳ್ತಿದಿಯಾ. ಆಗ್ಲೆ ಅಂದ್ರು ನಿಮ್ಮಕ್ಕ—ಪದುಮ ಕಾಣಿಸ್ಲಿಲ್ವೇನು? ಅಂತ."

ಕತ್ತು ಕೊಂಕಿಸಿ ನುಡಿದ 'ಪದುಮ ಕಾಣಿಸ್ಲಿಲ್ವೇನು?' ಎಂಬ ಪದೋಚ್ಚಾರಣೆ ಸುನಂದೆಯ ಸ್ವರದ ಅನುಕರಣವಾಗಿತ್ತು.

ವಿಜಯಾ ಬಿದ್ದುಬಿದ್ದು ನಕ್ಕಳು. ಆ ದೃಶ್ಯ ಮನಮೋಹಕವಾಗಿತ್ತೆಂದು ವೆಂಕಟರಾಮಯ್ಯ ಒಂದು ಕ್ಷಣ ಸುಮ್ಮನೆ ಕುಳಿತ. ಬಳಿಕ, ಅವಮಾನಿತನಾದವನಂತೆ ನಟಿಸುತ್ತ ಆತನೆಂದ:

"ಯಾಕೆ ನಗ್ತಿದೀಯಾ ಹಾಗೆ?"

"ನೀವು ಮೈಸೂರು ಮಲ್ಲಿಗೆ ಹೆಸರು ಕೇಳಿದೀರಾ?"

ಸುನಂದಾ ಮುಡಿದಿದ್ದ ಮಲ್ಲಿಗೆ ಹೂವಿನತ್ತ ನೋಡುತ್ತ ಆತನೆಂದ:

"ಮೈಸೂರು ಮಲ್ಲಿಗೆಯೇ?"

"ಹಾಡಿನ ಪುಸ್ತಕದ ಹೆಸರು ಕಣ್ರೀ"

"ಓ!"

"ಅದರಲ್ಲೊಂದು ಹಾಡಿದೆ 'ರಾಯರು ಬಂದರು ಮಾವನ ಮನೆಗೆ ರಾತ್ರಿಯಾಗಿತ್ತೂ'ಂತ."

"ಓಹೋ! ಆಮೇಲೆ? ಅದೇನು ಹಾಡು? ರಾಗವಾಗಿ ಹೇಳು ದಮ್ಮಯ್ಯ!"

"ಥೂ ಥೂ! ಇದೊಳ್ಳೇ ಉಪಾಯ ನಿಮ್ಮದು. ನಾನು ಹಾಡೊಲ್ಲ..."

"ಇರಲಿ, ಹಾಡೇ."

"ಖಂಡಿತ ಇಲ್ಲ...ಆ ಮೇಲೆ, ಪದುಮ ಕಾಣೋಕೆ ಸಿಗಲಿಲ್ಲಾಂತ ರಾಯರು ಸಿಟ್ಟಾಗ್ತಾರೆ."

ಈಗ ಪ್ರತಿಯೊಂದೂ ಅರ್ಥವಾಗಿ ವೆಂಕಟರಾಮಯ್ಯ ಪರಮ ಸಂತುಷ್ಟನಾದ.

"ನಿಮ್ಮನೇಲಿ ಆ ಹಾಡಿನ ಪುಸ್ತಕ ಇದೆಯೆ?" ಎಂದು, ಏನನ್ನೊ ಯೋಚಿಸುತ್ತಿದ್ದವನಂತೆ, ಆತ ಹೆಂಡತಿಯನ್ನು ಕೇಳಿದ.

"ಪುಸ್ತಕ ಇಲ್ಲ. ಬರಕೊಂಡಿರೋದಿದೆ," ಎಂದಳು ವಿಜಯ.

"ಶಿವಮೊಗ್ಗೆಗೆ ಹೋದ್ಮೇಲೆ ನಮ್ಮನೆಗೆ ಆ ಪುಸ್ತಕ ಕೊಂಡುತರಬೇಕು."

"ನಾನು ಹಾಡಿದರೆ ಅತ್ತೆ ಸುಮ್ನಿರ್ತಾರ?"

ಅಸ್ಪಷ್ಟವಾದ ಕಾತರವನ್ನು ಸೂಚಿಸುತ್ತಿದ್ದ ಧ್ವನಿ. ಆತ ತನ್ನವಳನ್ನು ಬರಸೆಳೆದ. ಉತ್ತರ ಮೃದುವಾಗಿತ್ತು:

"ಹುಚ್ಚಿ! ನಿನ್ನತ್ತೆ ನರರಾಕ್ಷಸೀಂತ ತಿಳಕೊಂಡ್ಯಾ? ಸಾಕಷ್ಟು ಸಂಕಷ್ಟ ಅನುಭವಿಸಿದ ಜೀವ ಅದು. ನೀನು ಮನೆಗೆ ಬಂದೆ ಅಂದರೆ ಆಕೆಗೆ ಎಷ್ಟೊಂದು ಸಂತೋಷವಾಗುತ್ತೆ ಗೊತ್ತಾ?"

ಮತ್ತೊಮ್ಮೆ ಸುನಂದೆಯ ಸ್ವರ ಕೇಳಿಸಿತು. ತುಂಟತನದ ಛಾಯೆ ಇಲ್ಲದ ನಿರ್ವಿಕಾರವಾದ ಮೆಲುದನಿ.

"ವಿಜಯಾ. ಸ್ನಾನಕ್ಕೆ ಕರಕೊಂಡ್ಬರಬೇಕಂತೆ ಕಣೇ."

"ಬಂದೆ ಅಕ್ಕ," ಎನ್ನುತ್ತ ಗಂಡನ ಕಡೆಗೆ ತಿರುಗಿ ವಿಜಯಾ ಅಂದಳು: "ಕೈಬಿಡಿ. ಏಳಿ. ಹೊತ್ತಾಯ್ತು."

ಆತ ಮೆಲ್ಲನೆದ್ದು, ಮೈಮುರಿದು, ಊ ಎಂದು ಉಸಿರುಬಿಟ್ಟು, ಹೆಂಡತಿಯನ್ನು ಹಿಂಬಾಲಿಸಿದ...

ಸ್ನಾನದ ಮನೆಗೆ ಗಂಡನನ್ನು ಕರೆದೊಯ್ಯುತ್ತಿದ್ದ ವಿಜಯಳನ್ನು, ಅಡುಗೆ ಮನೆಯ ಬಾಗಿಲಿನಲ್ಲಿ ನಿಂತು ಸುನಂದಾ ನೋಡಿದಳು. ತಂಗಿ ತಲೆಯೆತ್ತಿದಾಗ ಆಕೆಯನ್ನು ನೋಡಿ ಅಕ್ಕ ಸಣ್ಣನೆ ನಕ್ಕಳು. ವಿಜಯಳಿಗೆ ನಾಚಿಕೆಯಾಯಿತು.

ಆ ನಾಚಿಕೆಯ ಜಾಗದಲ್ಲಿ ಬೇರೊಂದು ಭಾವನೆ ಮರುಕ್ಷಣವೆ ಮೊಳೆಯಿತು. ಎಂತಹ ಹಿರಿಯ ಜೀವಿ ತನ್ನ ಅಕ್ಕ! ಹೃದಯದೊಳಗೆ ಅಷ್ಟೊಂದು ಬೇಗುದಿಯಿದ್ದರೂ ಆಕೆಯ ವೈಯುಕ್ತಿಕ ಬದುಕು ಬರಡು ಭೂಮಿಯಾಗಿ ಮಾರ್ಪಟ್ಟಿದ್ದರೂ ನಗುನಗುತ್ತ ಹೇಗೆ ಓಡಾಡುತ್ತಿದ್ದಾಳೆ ಆಕೆ! ತನ್ನ ಅಕ್ಕನನ್ನು ಈಗ ಆವರಿಸಿರುವುದು ತಂಗಿ ಸುಖಿಯಾಗಿರಬೇಕೆಂಬ ಆಸೆ ಮಾತ್ರ; ಒಡಹುಟ್ಟಿದವಳ ಬದುಕು ಸುಗಮವಾಗಬೇಕೆಂಬ ಅಭಿಲಾಷೆ ಮಾತ್ರ.

ಅಕ್ಕನ ದುರವಸ್ಥೆಯ ವಿಷಯ ತನ್ನ ಗಂಡನಿಗೆ ತಿಳಿಯದು. ಅವರಿಂದ ಬಚ್ಚಿಡುವುದಕ್ಕುಂಟೆ? ಆದಷ್ಟು ಬೇಗನೆ ಅದೆಲ್ಲವನ್ನೂ ತಾನು ಅವರಿಗೆ ಹೇಳಬೇಕು.

ಸ್ನಾನದ ಮನೆಯಲ್ಲಿ, ನೀರು ಜಾಸ್ತಿ ಬಿಸಿಯಾಗಿದೆಯೇನೋ ಎಂದು ನೋಡಲು ವಿಜಯಾ ಹಂಡೆಯೊಳಕ್ಕೆ ಬೆರಳಿಕ್ಕಿದಳು.

"ಸುಟ್ಟೀತು, ಹುಷಾರಿ!" ಎಂದ ಗಂಡ. "ಎಲ್ಲಿ, ನೋಡ್ಡೋಣ" ಎನ್ನುತ್ತ, ಹಂಡೆಯಿಂದ ಆಕೆ ಹೊರತೆಗೆದ ಬೆರಳನ್ನು ಆತ, ತನ್ನ ತುಟಿಗೊತ್ತಿಕೊಂಡು ಮಧುರ ಸ್ಪರ್ಶದ ಚಿಕಿತ್ಸೆಗೆ ಒಳಗು ಮಾಡಿದ.

"ಬಿಡೀಂದ್ರೆ. ಅಕ್ಕ ಬಂದ್ಬಿಡ್ತಾಳೆ," ಎಂದು ಪ್ರತಿಭಟಿಸಿದಳು ವಿಜಯಾ.

"ಖಂಡಿತ ಬರೋಲ್ಲ. ಅಷ್ಟೂ ತಿಳೀದು ಅಂತ ತಿಳಕೊಂಡಿಯಾ ನಿನ್ನಕ್ಕನಿಗೆ?"

ಹೆಂಡತಿ ಸ್ನಾನದ ಮನೆಯ ಬಾಗಿಲಿನತ್ತ ನೋಡಿದಳು. ಗಂಡ ಅದನ್ನು ಮುಚ್ಚಿದ....

...ಸರಸ್ವತಿ ಅಳತೊಡಗಿದಳು. ತಾಯಿ ಎತ್ತಿಕೊಂಡಾಗ, ಮಗುವಿನ ಬಾಯಿ ಅಭ್ಯಾಸ ಬಲದಿಂದ ಹೆತ್ತವಳ ಎದೆಯತ್ತ ತಿರುಗಿತು. ಸೀರೆಯನ್ನೂ ರವಕೆಯನ್ನೂ ಕಿತ್ತಾಡತೊಡಗಿದುವು ಆ ಪುಟ್ಟ ಕೈಗಳು. ಆದರೆ, ಆ ಸುಖ ಈಗ ತನಗಿಲ್ಲ ಎಂಬ ನೆನಪಾಗಿ ಅದರ ಅಳು ಹೆಚ್ಚಿತು. ಸುನಂದಾ ಮಗುವನ್ನೆತ್ತಿಕೊಂಡು ನಡು ಮನೆಗೆ ಬಂದಳು. ಅಲ್ಲಿಂದ ಮಗ್ಗುಲು ಕೊಠಡಿಗೆ. ಪಕ್ಕದ ಮನೆಯ ಬೆಕ್ಕು ಅಂಗೈಯಿಂದ ಮುಖ ತೀಡುತ್ತ ಹಿತ್ತಿಲ ಗೋಡೆಯ ಮೇಲೆ ಕುಳಿತಿತ್ತು. "ಅಗೋ ಬೆಕ್ಕು! ಬೆಕ್ಕು—ನೋಡು. ಮಿಯಾಂವ್!" ಎಂದು ಸುನಂದಾ ಸರಸ್ವತಿಯ ದೃಷ್ಟಿಯನ್ನು ಬೆಕ್ಕಿನೆಡೆಗೆ ಸೆಳೆದಳು. ಸರಸ್ವತಿ ಅಳು ನಿಲ್ಲಿಸಿ, "ಬೆಕ್ಕು!" ಎಂದು ಅಬ್ಬರಿಸಿ, ತಾಯಿಯ ಮುಖ ನೋಡಿದಳು. ಮನುಷ್ಯಸ್ವರಗಳನ್ನು ಕೇಳಿದ ಆ ಪ್ರಾಣಿ, ಕಿಟಿಕಿಯ ಕಡೆಗೊಮ್ಮೆ ನೋಡಿತು. ಕೆಳಕ್ಕೆ ಧುಮುಕಬೇಕು ಎನ್ನುವಷ್ಟರಲ್ಲೆ ಆ ಮನುಷ್ಯರು ಮನೆಯೊಳಗೇ ಇದ್ದರೆಂಬುದು ಅರಿವಾಗಿ, ಅವರತ್ತ ತಿರಸ್ಕಾರದ ದೃಷ್ಟಿಯನ್ನೊಮ್ಮೆ ಬೀರಿ, ಪುನಃ ಮುಖಮಾರ್ಜನದ ಕಾರ್ಯದಲ್ಲಿ ನಿರತವಾಯಿತು.

ಮತ್ತೆ ಮರುಕಳಿಸಬಯಸುತ್ತಿದ್ದ ಮಾನಸಿಕ ಸಂಕಟವನ್ನು ಹಿಂದಕ್ಕೆ ತಳ್ಳಲೆತ್ನಿಸುತ್ತ ಸುನಂದಾ ಮಗುವಿಗೆ ಮುದ್ದಿಟ್ಟಳು. ಈ ಪ್ರೀತಿ ಪ್ರದರ್ಶನ ತನಗೆ ಪ್ರಿಯವಾದುದೆಂದು ಮಗು 'ಇಚ್ಚಿ!' ಎಂದಿತು. ಒಲವಿನ ವಿಷಯದಲ್ಲಿ ತಾನೆಂದೂ ಬಡವೆಯಾಗಬಾರದು, ಎಂದುಕೊಂಡಳು ಸುನಂದಾ. ತನ್ನ ಹೊರತು ಬೇರೆ ಯಾರಿದ್ದಾರೆ ಈ ಮಗುವಿಗೆ? ತಂದೆಯನ್ನು ಇನ್ನು ಕಂಡಾಗ, ಆತನ ಪರಿಚಯವಾದರೂ ಅದಕ್ಕೆ ಇರುವುದೊ ಇಲ್ಲವೊ. ಮಗು ಬಸಿರಲ್ಲಿರುವಾಗಲೇ ಹೆಣ್ಣು ವಿಧವೆಯಾಗುವುದುಂಟು. ಅಥವಾ ಕೈಗೂಸನ್ನೂ ಅದರ ತಾಯಿಯನ್ನೂ ಬಿಟ್ಟು ಗಂಡು ಕಣ್ಣು ಮುಚ್ಚುವುದುಂಟು. ಅಂತಹ ಸಂದರ್ಭಗಳಲ್ಲಿ ಹೆತ್ತಾಕೆಯೇ ಮಗುವಿನ ಪಾಲಿಗೆ ತಂದೆ ತಾಯಿ ಎಲ್ಲವೂ. ಆದರೆ ತನ್ನ ಸ್ಥಿತಿಗತಿ ಅಂತಹುದಲ್ಲವಲ್ಲ. ತಾನು, ಗಂಡ ಕೈಬಿಟ್ಟ ಹೆಂಗಸು. ಕೂಸಿನ ಪಾಲಿಗೆ, ತಂದೆ ಇದ್ದೂ ಇಲ್ಲದಂತೆ. ಅದರ ಬಾಯಲ್ಲಿ ಉಚ್ಚಾರವಾಗುವ ಪದ—'ಅಮ್ಮಾ;' 'ಅಜ್ಜೀ' ಇಲ್ಲವೆ 'ತಾತ.' 'ಅಪ್ಪಾ' ಎನ್ನುವ ಅಗತ್ಯವೇ ಇಲ್ಲ

ಅದಕ್ಕೆ.

ಅಬ್ಬ! ಬದುಕೇ ಸುದೀರ್ಘವಾದೊಂದು ಇರುಳಾಗಿದೆ; ದುಃಸ್ವಪ್ನವೊಂದು ಕೊನೆಯೇ ಇಲ್ಲದಂತೆ ಬಲೆ ಹೆಣೆಯುತ್ತಿದೆ.

ಬೆಕ್ಕು 'ಮಿಯಾಂವ್' ಎನ್ನುತ್ತ, ಅಡುಗೆ ಸಿದ್ಧವಾಯ್ತು ಎಂದು, ಹಿತ್ತಿಲ ಗೋಡೆ ಯಾಚೆಗೆ ಕೆಳಕ್ಕೆ ಧುಮುಕಿತು.

"ಅಮ್ಮಾ, ಬೆಕ್ಕು ಇಲ್ಲ," ಎಂದು ಸರಸ್ವತಿ ತಾಯಿಗೆ ವರದಿಕೊಟ್ಟಳು.

"ಬೆಕ್ಕು ಇಲ್ಲ," ಎಂದು ತಾನೂ ಅದೇ ಮಾತನ್ನು ಅಂದಳು ಸುನಂದಾ, ಯಾಂತ್ರಿಕವಾಗಿ.

ಬೀದಿಯ ಕಡೆಗೆ ಹರಿಯಿತು ಮಗುವಿನ ಮನಸ್ಸು. ಯಾವುದೋ ಹೈ ಹೈ ಗಾಡಿ. 'ದಂಟಿನ ಸೊಪ್ಪು, ಅರಿವೇ ಸೊಪ್ಪು, ಕೊತಮಿರಿ ಸೊಪ್ಪು,' 'ಊವಾ ಬೇಕೇನ್ರವ್ವಾ ಊವಾ....'

ಸರಸ್ವತಿಯ ತಾಯಿಯ ಕಿವಿ ದಂಡೆಗೂ ಈ ಸ್ವರಗಳು ಅಪ್ಪಳಿಸಿ ಹಾಗೆಯೇ ಹಿಂತಿರುಗುತ್ತಿದ್ದುವು. ಕಿವಿ ಕೇಳುವ ಕೆಲಸವನ್ನಷ್ಟೆ ಮಾಡುತ್ತಿತ್ತೇ ಹೊರತು, ಯಾವ ಸಂದೇಶವನ್ನೂ ಮೆದುಳಿಗೆ ಮುಟ್ಟಿಸುತ್ತಿರಲಿಲ್ಲ. ಬಿಡುವೇ ಇರಲಿಲ್ಲ ಮೆದುಳಿಗೆ. ನೆನಪುಗಳ ಸೇನೆಯನ್ನು ಇದಿರ್ಗೊಳ್ಳುವುದರಲ್ಲೆ ಅದು ಮಗ್ನವಾಗಿತ್ತು.

ಅದೇ ಕೊಠಡಿ. ನಾಲ್ಕು ವರ್ಷಗಳ ಹಿಂದೆ. ಅನಂತರವೂ ಒಂದೆರಡು ಸಾರೆ. ಮೊದಲು ಸಂಕೋಚದಿಂದ ತಾನು ಗಂಡನ ಬಳಿ ಸೇರಿದ್ದಳು. ಪ್ರತಿಯೊಂದಕ್ಕೂ ತಾಯಿಯ ಮುಖವನ್ನೇ ನೋಡುತ್ತಿದ್ದ ಆತನೂ ಅಳುಕುತ್ತ ವರ್ತಿಸಿದ್ದ. ಮುಂದೆ, ಇಬ್ಬರೂ ಪರಸ್ಪರ ಬಯಸತೊಡಗಿದ ಬಳಿಕ, ಅವರೊಳಗಿನ ಸಂಬಂಧ ಸರಳವಾ ಯಿತು...ಆದರೂ ಅದು ವ್ಯಾವಹಾರಿಕವಾಗಿಯಷ್ಟೆ ಇತ್ತೆಂದು ಸುನಂದೆಗೆ ಈಗ ಅನಿಸು ತ್ತಿತ್ತು...ಪ್ರೇಮ...ಸಿಹಿ—ಎನ್ನುವಂತಹ ನೆನಪುಗಳು ಕೆಲವಿದ್ದುವು. ಆದರೆ, ಕಹಿಯ ಅಂಶವೇ ಹೆಚ್ಚು. ಸಿಹಿ ಮಕ್ಕಳಾಟದ ಮಣ್ಣುಗುಡ್ಡೆಯಾದರೆ, ಕಹಿ ಮಹಾ ಮೇರುವಿನಷ್ಟು....

ಸುನಂದಾ ನಡುಮನೆಗೆ ಬಂದು, ಗೋಡೆಯನ್ನೇ ಚಿತ್ರವಿಚಿತ್ರವಾಗಿ ಅಲಂಕರಿ ಸಿದ್ದ ದೇವದೇವತೆಯರ ರಾಮಸೀತೆಯರ ಋಷಿಮಹರ್ಷಿಗಳ ವರ್ಣಚಿತ್ರಗಳನ್ನು ನೋಡಿದಳು. ಕಲಾವಿದನ ಕಲ್ಪನಾ ಶಕ್ತಿಗೊಂದು ಮಿತಿಯೇ?....ಅಲ್ಲೇ ಬಾಗಿಲ ಮೇಲ್ಗಡೆ ದೊಡ್ಡದಾದ ಭಾವಚಿತ್ರವಿತ್ತು. ಕುರ್ಚಿಯ ಮೇಲೆ ಕುಳಿತಿದ್ದ ತಂದೆ: ಆತನ ಹಿಂಬದಿಯಲ್ಲಿ ವಿನೀತಳಾಗಿ ನಿಂತಿದ್ದ ತಾಯಿ. ಎಷ್ಟೋ ವರ್ಷಗಳಿಗೆ ಹಿಂದಿನ ಚಿತ್ರ. ಹೆತ್ತವಳು ತನ್ನನ್ನು ರಮಿಸುತ್ತಿಲ್ಲವೆಂದು ಅಸಹನೆ ತೋರತೊಡಗಿದ್ದ ಸರಸ್ವತಿಗೆ ಆ ಭಾವಚಿತ್ರವನ್ನು ತೋರಿಸುತ್ತಾ ಸುನಂದಾ ಅಂದಳು:

"ತಾತ, ಅಜ್ಜೀ..."

ಸರಸ್ವತಿಗೇನೂ ಗುರುತು ಸಿಗಲಿಲ್ಲ. ಆದರೂ ತನ್ನ ತಾಯಿಯ ಅಭಿಪ್ರಾಯ

ವನ್ನು ಅಲ್ಲಗಳೆಯಬಾರದೆಂದು ಆಕೆಯೂ ತೊದಲು ನುಡಿದಳು:

"ತಾತಾ, ಅಜ್ಜಿ....ಇಚ್ಚಿ!"

ನಿಂತಲ್ಲೆ ನಿಲ್ಲಲಾಗಲಿಲ್ಲ ಸುನಂದೆಗೆ. ದೃಷ್ಟಿ ಇನ್ನೊಂದು ಕೊಠಡಿಯತ್ತ ಹರಿಯಿತು. ವಿದ್ಯಾರ್ಥಿ ದೆಸೆಯಲ್ಲಿ ಸೋದರಿಯರಿಬ್ಬರಿಗೂ ಅದು ಅಧ್ಯಯನದ ಜಾಗವಾಗಿತ್ತು. ಸುನಂದಾ ಗಂಡನ ಮನೆ ಸೇರಿದ ಬಳಿಕ ವಿಜಯಳೂ ಅದನ್ನು ಒಂದೆರಡು ವರ್ಷ ಉಪಯೋಗಿಸಿದ್ದಳು. ಅನಂತರ ಆ ಕೊಠಡಿ ಡಬ್ಬ ತಪ್ಪಲೆಗಳನ್ನೂ ಹಾಸಿಗೆಗಳನ್ನೂ ಕೂಡಿಡುವ ಉಗ್ರಾಣವಾಗಿ ಮಾರ್ಪಟ್ಟಿತು.

"ಒಳಗೆ ಏನುಮಾಡುತ್ತಿರುವಳೊ ತಾಯಿ? ಮನಸ್ಸು ಕಸಿವಿಸಿಯಾದಾಗ ತಾಯಿಯ ನೆನಪು...."

ಸ್ನಾನದ ಮನೆಯಿಂದ, ಸುರಿದುಕೊಳ್ಳುತ್ತಿರುವ ನೀರಿನ ಸದ್ದು...ತಾನೂ ಒಂದೆಯೊಮ್ಮೆ...ಅಯ್ಯೋ!

ತಂಗಿಯ ವಿಷಯದಲ್ಲಿ ಅಸೂಯೆಯೆ? ಉಂಟೆ ಎಲ್ಲಾದರೂ?

ಹಾಳು ಕಂಬನಿ ಒತ್ತರಿಸಿ ಬರುತ್ತಿರುವುದಾದರೂ ಯಾಕೆ?

....ತಾಯಿ ಒಳಬಾಗಿಲ ಬಳಿಗೆ ಬಂದು ಕೇಳಿದರು:

"ಏನು ಯೋಚಿಸ್ತಾ ನಿಂತಿದೀಯೇ ಸುನಂದಾ?"

ಆ ತಾಯಿಯೂ ಹಿರಿಯ ಮಗಳಾದ ತನ್ನನ್ನು ಕುರಿತೇ ಯೋಚಿಸುತ್ತಿದ್ದಳೋ ಏನೋ.

"ಏನೂ ಇಲ್ಲಮ್ಮ."

"ಕಣ್ಣು ಕೆಂಪಗಿದೆ—"

"ಹೊಗೆ ಸೇರ್ಕೊಂಡ್ತು."

ಎಷ್ಟು ಸಹಸ್ರ ಸಾರೆ ಎಷ್ಟು ಸಹಸ್ರ ಹೆಂಗಳೆಯರು ಆ ಉತ್ತರವನ್ನು ಕೊಟ್ಟಿದ್ದರೋ!

ಸತ್ಯಸಂಗತಿಯನ್ನು ತಾಯಿ ಬಲ್ಲಳು. ವಯಸ್ಸಾದರೇನಾಯಿತು? ತನ್ನದೇ ಮಾಂಸದೊಂದು ತುಣುಕು ನೋವಿಸಿಂದ ನರಳಾಡಿದಾಗ ಆಕೆಗೆ ಸಂಕಟವಾಗದೆ ಇರುವುದುಂಟೆ?

—ಆದರೂ ಪ್ರಸ್ತಾಪ ಮಾಡದಿರುವುದೇ ಮೇಲು, ಎಂದಿತು ಮನಸ್ಸು.

"ಅವರದು ಎಷ್ಟು ಹೊತ್ತಾಗುತ್ತೋ ಏನೋ. ನೀನು ಕಾಫಿ ಕುಡೀಬಾರದೆ?"

"ಪರವಾಗಿಲ್ಲಮ್ಮ, ಏನೂ ಅವಸರವಿಲ್ಲ."

ತಾಯಿ ನಿಟ್ಟುಸಿರು ಬಿಟ್ಟು ಒಳಕ್ಕೆ ತಿರುಗಿದರು.

ಸುನಂದಾ ಬೀದಿಬಾಗಿಲ ಕಡೆಗೆ ತಲೆ ಹಾಕುವುದಕ್ಕೂ ತಂದೆ ಒಳಬರುವುದಕ್ಕೂ ಸರಿಹೋಯಿತು. ತಂದೆಯನ್ನು ಕಂಡೊಡನೆ ಸುನಂದಾ ಮುಖದ ಮೇಲೆ ಗೆಲುವಿನ ನಗೆ ಬರಿಸಿಕೊಂಡಳು. ಜೋಯಿಸರು ಸಿಕ್ಕಿದರೆ?—ಎಂದು ತಾನಾಗಿಯೇ ಪ್ರಶ್ನಿಸ

ಬೇಕೆನ್ನುವಷ್ಟರಲ್ಲಿ ಆಕೆಯ ತಂದೆ ಅಂದರು:

"ಎಲ್ಲಾ ಗೊತ್ಮಾಡ್ಕೊಂಡು ಬಂದಿದೀನಮ್ಮಾ. ನಾಳೆಯೇ ಆಗಿಹೋಗ್ಲಿ. ನಾಡದು ಪ್ರಯಾಣಕ್ಕೆ ಘಳಿಗೆ ಚೆನ್ನಾಗಿದೆ. ಆಗದಾ?"

"ಹಾಗೇ ಆಗಲಪ್ಪ," ಎಂದಳು ಸುನಂದಾ.

೩

ರಾತ್ರೆ ವೆಂಕಟರಾಮಯ್ಯನೊಬ್ಬನೆ ಕೊಠಡಿಯಲ್ಲುಳಿದ. ಸುನಂದೆಯ ತಂದೆ ಸೆಖೆ ಎನ್ನುತ್ತ ಜಗಲಿಯನ್ನಾಕ್ರಮಿಸಿದರು. ಆಕೆಯ ತಾಯಿ ತನ್ನಿಬ್ಬರು ಮಕ್ಕಳೊಡನೆ, ಮಾರನೆಯ ದಿನದ ಸಮಾರಂಭದ ಸಿದ್ಧತೆಯಲ್ಲಿ ತಲ್ಲೀನರಾದರು.

"ನಿನ್ನ ಯಜಮಾನರಿಗೆ ಕುಡಿಯೋಕೆ ನೀರಿಟ್ಟಿದೀಯೇನೆ?" ಎಂದು ಕೇಳಿದರು ತಾಯಿ.

"ಇಲ್ಲ," ಎಂದು ವಿಜಯ, ಮರೆತುಹೋಯಿತೆನ್ನುವ ಧ್ವನಿಯಲ್ಲಿ ಉತ್ತರ ವಿತ್ತಳು.

"ಹೋಗು, ಇಟ್ಟು ಬಾ," ಎಂದರು ಆಕೆ, ಸಿಟ್ಟಾದವರಂತೆ. "ಏನು ಮರೆವು ಈ ಚಿಕ್ಕ ವಯಸ್ಸಿನಲ್ಲೆ!" ಎಂದು ಗೊಣಗಿದರು.

ಆದರೆ ಸುನಂದೆಗೆ ಗೊತ್ತಿತ್ತು, ವಿಜಯ ಮರೆತಿರಲಿಲ್ಲವೆಂಬುದು. ಮತ್ತೊಮ್ಮೆ ಗಂಡನ ಕೊಠಡಿಗೆ ಹೋಗುವ ಅವಕಾಶ ದೊರೆಯಲೆಂದು ಆ ಕೆಲಸವನ್ನು ಹಾಗೆಯೇ ಮಾಡದೆ ಬಿಟ್ಟಿದ್ದಳು ಹುಡುಗಿ.

ವಿಜಯಾ ಗಂಡನ ಕೊಠಡಿಯಿಂದ ಹಿಂತಿರುಗುವುದು ಎರಡು ನಿಮಿಷ ತಡ ವಾಯಿತು.

ಅಡುಗೆ ಮನೆಯೊಳಕ್ಕೆ ಬಂದ ಮಗಳನ್ನು ಕುರಿತು ತಾಯಿ ಕೇಳಿದರು:

"ನಿದ್ದೆ ಬಂದಿತ್ತೆ?"

"ಇಲ್ಲಾಂತ ತೋರುತ್ತೆ. ನಾನು ಕೇಳ್ಲಿಲ್ಲ," ಎಂದಳು ವಿಜಯಾ.

ತಂಗಿಯ ಮಾತು ಕೇಳಿ ಸುನಂದೆಗೆ ನಗು ಬಂತು. ವಿಜಯಾಳನ್ನು ಆಕೆ ಗಟ್ಟಿಯಾಗಿ ಚಿವುಟಿದಳು.

"ಅಯ್ಯೋ!"

"ಅದೇನೇ ಅದು? ಸುಮ್ನಿರ್ಬಾರ್ದಾ? ಹೊರಗೆ ಕೇಳಿಸೀತು!" ಎಂದರು ತಾಯಿ.

"ಕೇಳಿಸ್ಲೀಂತಾನೆ ಕುಯ್ಯೋ ಅನ್ನೋದು. ಸಹಾಯಕ್ಕೆ ಬರ್ತಾರೇನೋಂತ

ಆಸೆ," ಎಂದಳು ಸುನಂದಾ ನಗುತ್ತ.

ಮಕ್ಕಳ ಒಲವಿನ ಕಲಹ ಕಂಡು ತಾಯಿಗೆ ಸಂತೋಷವಾಯಿತು.

"ಸರಸ್ವತಿ ಮಲಕ್ಕೊಂಡಿರ್ಬೇಕು ಅಲ್ವೆ ಸುನಂದಾ?"

"ಹೂನಮ್ಮಾ."

ಒಂದು ಕ್ಷಣ ಸುಮ್ಮನಿದ್ದು ಆಕೆ ಅಂದರು:

"ಹೋಗಿ, ನೀವೂ ಮಲಕ್ಕೊಳ್ಳಿ. ಇನ್ನೇನು ಬಂದ್ಬಿಡ್ತೀನಿ. ಹೋಗೀಮ್ಮಾ."

ನಿದ್ದೆಗೆ ಮುಂಚೆ ಸ್ವಲ್ಪ ಹೊತ್ತಾದರೂ ಜತೆಯಾಗಿ ಎಚ್ಚರವಿರುವುದು ಸಾಧ್ಯವಾಯಿತೆಂದು ಸಂತೋಷದಿಂದಲೆ ಅಕ್ಕ ತಂಗಿ ನಡುಮನೆಗೆ ಬಂದು ಹಾಸಿಗೆಗಳ ಮೇಲೆ ಕಾಲು ಚಾಚಿದರು.

ಆಗ ಒಮ್ಮೆಲೆ ವಿಜಯಳಿಗೆ ಅನಿಸಿತು—ಈ ದಿನ ಅಕ್ಕನಿಗೆ ತಾನು ಹೇಳಬೇಕಾದುದೇನೂ ಇಲ್ಲವೆಂಬುದು.

ಸುನಂದೆಗೂ ಬಾಯಿಯಿಂದ ಮಾತು ಹೊರಡಲಿಲ್ಲ. ತಂಗಿ ಸಮೀಪದಲ್ಲೇ ಇದ್ದರೂ ಆಕೆಯ ಹೃದಯ ಆಗಲೆ ತನ್ನಿಂದ ಬಲು ದೂರ ಸಾಗಿದ್ದಂತೆ ಅಕ್ಕನಿಗೆ ತೋರಿತು. ಸ್ವಚ್ಛಂದವಾಗಿ ಹಾರಾಡತೊಡಗಿದ್ದ ಆ ಹಕ್ಕಿ, ಅಕ್ಕನ ಸಂಕಟದ ಆವರಣದೊಳಗೆ ಮತ್ತೆ ತಂಗಬೇಕಾದುದಿರಲಿಲ್ಲ.

ವಿಜಯಾ ಸುಖಿಯಾಗಿದ್ದಳು. ಕೈ ಹಿಡಿದವನ ನಿರ್ಮಲ ಒಲವು ಆಕೆಗೆ ದೊರೆತಿತ್ತು. ಬದುಕು ಸದಾ ಕಾಲವೂ ಹಾಗೆಯೇ ಇರಲಾರದೆನ್ನುವ ಸಂದೇಹದ ಬಾಧೆಗೆ ಒಳಗಾಗಲು ಆಗ ಆಕೆ ಸಿದ್ಧಳಿರಲಿಲ್ಲ. ಆ ದಿನದ ತನ್ನ ಅನುಭವವನ್ನು ಕುರಿತು ಅಕ್ಕನಿಗೆ ಹೇಳಬೇಕೆನಿಸಿತೊಮ್ಮೆ. ಸ್ವಲ್ಪ ಮಟ್ಟಿಗೆ ಲಜ್ಜೆ ಅದಕ್ಕೆ ತಡೆಯಾಯಿತು. ಅದೇನಿದ್ದರೂ ಕೆಲವೊಂದು ವಿಷಯಗಳನ್ನು ಅಕ್ಕನಿಗೆ ಹೇಳುವುದು ಸಾಧ್ಯವಿತ್ತು. ಆದರೆ ವಿವೇಕ, ಕಟು ಧ್ವನಿಯಲ್ಲಿ ವಿಜಯಳನ್ನು ಕುಟುಕಿ ಕೇಳುತ್ತಿತ್ತು: ಅಭಾಗಿನಿಯಾದ ದುಃಖಿನಿಯಾದ ನಿನ್ನಕ್ಕನಿಗೆ ನಿನ್ನ ಸ್ವಂತದ ಸುಖ ತೃಪ್ತಿಯ ವಿಷಯ ಯಾವ ಬಾಯಿಯಲ್ಲಿ ಹೇಳುವೆ?

ತಂಗಿಯ ಮನಸ್ಸಿನ ಹೊಯ್ದಾಟವನ್ನು ತಿಳಿಯಲು ಸುನಂದಾ ಶಕ್ತಳಾಗಲಿಲ್ಲ. ಇನ್ನು ವಿಜಯಳಿಗೆ ತನ್ನೊಲವಿನ ಅಗತ್ಯವಿಲ್ಲವೆಂದೇ ಆಕೆ ಬಗೆದಳು. ಆ ಯೋಚನೆಯಿಂದ ದುಃಖವೆನಿಸಿತು. ಆದರೆ ಮರುಕ್ಷಣವೆ, ಇದರಿಂದ ತನಗೆ ಬೇಸರವಾಗಬಾರದು, ತಂಗಿ ಸುಖಿಯಾದುದನ್ನು ಕಂಡು ತಾನು ಸಂತೋಷಪಡಬೇಕು, ಎಂದುಕೊಂಡಳು.

ಅಕ್ಕನ ಹಾಸಿಗೆಯ ಕಡೆಗೆ ಮಗ್ಗುಲು ಹೊರಳಿದಳು ವಿಜಯಾ. ಒಲವು ತುಂಬಿದ ದೃಷ್ಟಿಯಿಂದ ತಂಗಿ ತನ್ನನ್ನೆ ನೋಡುತ್ತಿದ್ದುದನ್ನು ಸುನಂದಾ ಕಂಡಳು.

ಆಕೆಯ ಕೈ ವಿಜಯಳದನ್ನು ಹುಡುಕಿತು. ಬೆರಳುಗಳು ಪರಸ್ಪರ ಹೆಣೆದುಕೊಂಡವು.

ಆದರೂ ಮಾತು ಹೊರಡಲಿಲ್ಲ. ಕೊನೆಗೆ ಆ ಮೌನ ದುಸ್ಸಹವಾಯಿತೆಂದು ಸುನಂದಾ ಅಂದಳು:

"ಪದ್ಮಾ ಅಂತ ನಿನ್ನನ್ನು ಕೂಗಿದ್ದಕ್ಕೆ ಅವರೇನಂದರು?"

"ಪದ್ಮಾ ಅನ್ನೋದೂ ನನ್ನ ಹೆಸರೇ ಇರಬಹುದೂಂತ ತಿಳಿಕೊಂಡಿದ್ರು. ತಮಾಷಿ! ಅಂಥದೊಂದು ಹಾಡಿದೇಂತ ಅವರಿಗೆ ಗೊತ್ತೇ ಇರ್ಲಿಲ್ಲ!"

"ಹೇಳ್ಕೊಟ್ಟೆ ತಾನೆ?"

"ಶಿವಮೊಗ್ಗೆಗೆ ಹೋದ್ಮೇಲೆ ಮೈಸೂರು ಮಲ್ಲಿಗೆ ಪುಸ್ತಕ ಕೊಂಡ್ಕೊಳ್ಳೋಣಾಂದ್ರು."

ಸುನಂದೆಗೂ ಹಿಂದೆ ಅಂತಹ ಆಸೆಗಳಿದ್ದುವು. ಗತಕಾಲದೊಂದು ಸಂಭಾಷಣೆಯ ತುಣುಕು ಆಕೆಯ ಕಿವಿಗಳಲ್ಲಿ ಮೊರೆಯುತ್ತಿತ್ತು.

'ನಾವು ಕಲ್ಚರ್ಡ್ ಆಗಿರ್ಬೇಕು, ಅಲ್ವಾ?'

'ಅದೇನೆ ಕಲ್ಚರ್ಡ್ ಅಂದ್ರೆ?'

ಹಸುಳೆಯ ಮರು ಪ್ರಶ್ನೆಯಲ್ಲ—ತಿರಸ್ಕಾರ ಬೆರೆತ ವ್ಯಂಗ್ಯೋಕ್ತಿ. ಆಸೆಯ ಎಳೆಯ ಕುಡಿ ಕಡಿದು ಹೋಗಿತ್ತು ಅಲ್ಲಿಗೇ.

ಅಕ್ಕ ಮರುಮಾತನಾಡಲಿಲ್ಲವೆಂದು ಕಾತರ ಧ್ವನಿಯಲ್ಲಿ ವಿಜಯಾ ಕೇಳಿದಳು.

"ಯಾಕಕ್ಕ ಸುಮ್ನಿದೀಯಾ?"

ತೂಕಡಿಸುತ್ತಿದ್ದವಳನ್ನು ಎಚ್ಚರಿಸಿದ ಹಾಗಾಯಿತು ಸುನಂದೆಗೆ.

"ಏನೂ ಇಲ್ಲ ವಿಜಯಾ. ಸುಮ್ನೆ ಯೋಚಿಸ್ತಿದ್ದೆ."

"ಏನು ಯೋಚ್ನೆ? ಬೇಸರವಾಗುತ್ತಾ?...."

ಯೋಚನೆಯ ಮಾತೆತ್ತಿದುದೇ ತಪ್ಪಾಯಿತು. ಮತ್ತಷ್ಟು ತೊಡಕಿನ ಪ್ರಶ್ನೆ...

"ಇನ್ನು ನೀನು ಹೊರಟ್ಹೋಗ್ತೀಯಲ್ಲಮ್ಮ...."

ತಾನು ಹೊರಟು ಹೋದಮೇಲೆ ಉಳಿಯುವಾಕೆ ಅಕ್ಕನೊಬ್ಬಳೇ. ಚಿಕ್ಕಂದಿನಿಂದಲೂ ತಾವು ಒಬ್ಬರಿಗೊಬ್ಬರು ಅಂಟಿಕೊಂಡೇ ಬಂದವರು. ಗಂಡನ ಮನೆಯಿಂದ ಅಕ್ಕ ಹೊರಟು ಬಂದ ಮೇಲಂತೂ ಆ ಅನ್ಯೋನ್ಯತೆ ಹೊಸ ಹಂತವನ್ನು ಮುಟ್ಟಿತು. ಈ ಅಗಲಿಕೆಯಿಂದ ತನಗೂ ಸಂಕಟವಾಗುವುದು. ಆದರೆ ತನ್ನ ಇನಿಯನ ಸಾನ್ನಿಧ್ಯದಲ್ಲಿ ಆ ಸಂಕಟ ಮರೆತು ಹೋಗುವುದು ಖಂಡಿತ. ಅಕ್ಕನಿಗಾದರೆ ಹಾಗಲ್ಲ. ಆಕೆಯ ಕೊರಗಿಗೆ ಪರಿಹಾರ ಮಾರ್ಗವೇ ಇಲ್ಲ.

"ನಾನೇನಕ್ಕ ಮಾಡ್ಲಿ...?"

ದುಃಖದ ಸೆಲೆಯೊಡೆಯಿತು ವಿಜಯಳ ಧ್ವನಿಯಲ್ಲಿ, ಸುನಂದಾ ಧಿಗ್ಗನೆದ್ದು ದೀಪ ಆರಿಸಿ, ತಂಗಿಯ ಬಳಿ ಕುಳಿತಳು. ಕತ್ತಲಲ್ಲಿ ಕೈ ಬೆರಳುಗಳು ಒಡಹುಟ್ಟಿದವಳ ಮುಖವನ್ನು ತಡವುತ್ತ ಕಣ್ಣುಗಳನ್ನು ಮುಟ್ಟಿ ನೋಡಿದುವು. ತುಂಬಿ ಹರಿಯುತ್ತಿದ್ದ ಕಂಬನಿ. ತಂಗಿಯನ್ನು ತಬ್ಬಿಕೊಂಡು ಸುನಂದಾ ತಾನೂ ಅತ್ತಳು.

"ನೀನು ಸುಖಿಯಾಗಿರು ವಿಜಯಾ. ಅಷ್ಟೇ ಸಾಕು ನನಗೆ, ಅಷ್ಟೇ ಸಾಕು. ಭಗವಂತ ನಿನಗೆ ಒಳ್ಳೇದು ಮಾಡಲಿ...."

"ಅಕ್ಕಾ...ಅಕ್ಕಾ..."

"ಏನು ವಿಜಯಾ?"

"ನೀನೇನು ಪಾಪ ಮಾಡ್ದೇಂತ ಭಗವಂತ ನಿನಗೆ ಕೆಟ್ಟದು ಮಾಡ್ದ ಅಕ್ಕಾ?"

"ನನ್ನಾಣೆ! ಹಾಗೆಲ್ಲ ಮಾತಾಡ್ಬಾರದು ನೀನು..."

ಕಂಬನಿಯ ಅನಂತರ ನಿಟ್ಟುಸಿರು. ಬಳಿಕ ಮೌನ.

ಮೌನ ಮುರಿದು ಸುನಂದಾ ಅಂದಳು:

"ನಾವು ಜತೆಯಾಗಿರೋದು ಇದೇ ಕೊನೇ ರಾತ್ರೆ, ಅಲ್ಲವಾ?"

ಬೇರೆ ವಾತಾವರಣದಲ್ಲಿ ಆ ಮಾತು ಕೇಳಿ ವಿಜಯಳ ಮೈ ಪುಲಕಿತಗೊಳ್ಳು ವುದು ಸಾಧ್ಯವಿತ್ತು. ಮಾರನೆಯ ದಿನ ರಾತ್ರೆ ಆಕೆಯ ಶಯನ ಗಂಡನ ಜೊತೆಗೆ. ಆದರೆ ಈಗ ಆ ಯೋಚನೆ, ಮರಳಲ್ಲಿ ಇಂಗಿದ ನೀರ ಹನಿಯ ಹಾಗೆ ಹೇಳ ಹೆಸರಿಲ್ಲದೆ ಮರೆಯಾಯಿತು. ಉಳಿದುದೊಂದೇ–ಬೆಂಗಾಡಿನ ಉಸುಬು; ಸುಖಿಯಲ್ಲದ ಅಕ್ಕನನ್ನು ಬಿಟ್ಟಿರಬೇಕೆಂಬ ದುಃಖ.

"ಅಕ್ಕ, ನಿನ್ನ ಹಾಸಿಗೇನ ಇನ್ನೂ ಈಚೆಗೆ ಎಳಕೋ ಅಕ್ಕಾ."

ಸುನಂದಾ ಹಾಗೆ ಮಾಡಲೆಂದು ಮುಂದಾದಳು. ಸರಸ್ವತಿಗೆ ಎಚ್ಚರವಾಗದಂತೆ ಹಾಸಿಗೆಯನ್ನು ಮೆಲ್ಲನೆ ಎಳೆದು ತಂಗಿಯ ದಕ್ಕೆ ಜೋಡಿಸಿದಳು.

ಅಕ್ಕ–ತಂಗಿ ಮತ್ತೆ ಹಸುಳೆಗಳಾಗಿ ಒಬ್ಬರಿಗೊಬ್ಬರು ಆತುಕೊಂಡು ಮಲಗಿದರು.

....ಕತ್ತಲು ಕಳೆದು ಬೆಳಗಾಯಿತು. ಆ ಮನೆಯಲ್ಲಿ ಅದು ಸಂಭ್ರಮದ ಹಗಲು, ಬಳಿಕ ಸಂಭ್ರಮದ ಇರುಳು.

ಕೊನೆ ಘಳಿಗೆಯವರೆಗೂ ನಿಮಿಷವೂ ಬಿಡುವಿಲ್ಲದೆ ಸುನಂದಾ ಉತ್ಸಾಹದಿಂದ ಓಡಾಡಿದಳು. ಆಮಂತ್ರಿತರಾಗಿ ಬಂದಿದ್ದ ಮುತ್ತೈದೆಯರು ಕುತೂಹಲದಿಂದ ಆಕೆ ಯನ್ನು ನೋಡದಿರಲಿಲ್ಲ. 'ಸುನಂದೇನ ಗಂಡ ಬಿಟ್ಟುಬಿಟ್ಟಿದ್ದಾನಂತೆ' ಎಂಬ ಆಲಾ ಪನೆಯನ್ನು ಕೆಲವು ಸ್ತ್ರೀ ಕಂಠಗಳು ಈಗಾಗಲೇ ಮಾಡಿಯೂ ಇದ್ದುವು. ಅವರ ನೋಟಗಳೊಂದನ್ನೂ ಸುನಂದಾ ಲೆಕ್ಕಿಸಲೇ ಇಲ್ಲ. ಆಕೆ ಮುಂದಿರಿಸಿಕೊಂಡುದೊಂದೇ ಗುರಿ: ತಂಗಿಯನ್ನು ಹರ್ಷ ಚಿತ್ತಳಾಗಿಡುವುದು. ಅದಕ್ಕೋಸ್ಕರ ತಾನೊಂದು ಕ್ಷಣವೂ ಸಪ್ಪೆಮೋರೆ ಹಾಕುವಂತಿರಲಿಲ್ಲ. ಗುರಿ ಸಾಧನೆಯಲ್ಲಿ ಸುನಂದಾ ಯಶಸ್ವಿಯಾಗಿದ್ದಳು.

ಹಾಸಿಗೆಯ ಮೇಲೆ ಮೈಚಾಚಿದೊಡನೆ ಮಾತ್ರ, ಕತ್ತಲಲ್ಲಿ ಎಲ್ಲಿಲ್ಲದ ಬೇಸರ ಅವಳನ್ನು ಆವರಿಸಿತು. ಆದರೆ, ಬೇಸರಕ್ಕಿಂತಲೂ ಮಿಗಿಲಾಗಿತ್ತು ಓಡಾಟದ ಆಯಾಸ. ಸುನಂದೆಗೆ ಬೇಗನೆ ನಿದ್ದೆ ಬಂತು.

ಎರಡು ಮೂರು ದಿನಗಳಾದರೂ ಇದ್ದು ಹೋಗುವುದು ನ್ಯಾಯವಾಗಿತ್ತು, ಆದರೆ ಅಳಿಯನಿಗೆ ರಜವಿರಲಿಲ್ಲ. ಬೆಳಗ್ಗಿನ ರೈಲಿನಲ್ಲಿ ಹೊರಡುವುದೆಂದು ಗೊತ್ತಾಗಿತ್ತು.

ಆದರೆ ಗಂಡನಿದ್ದ ಕೊಠಡಿಯಿಂದ ಎದ್ದು ಬಂದು, "ರಾತ್ರೆಯ ಗಾಡಿಗೆ ಹೋಗ್ತೀವಿ" ಎಂದು ವಿಜಯಾ ಹೇಳಿದಾಗ, ಮನೆಯಲ್ಲಿ ಪ್ರತಿಯೊಬ್ಬರಿಗೂ ಸಂತೋಷ ವಾಗದೆ ಇರಲಿಲ್ಲ.

ಅಳಿಯನ ಪರವಾಗಿ ಮಗಳೇ ಈ ಮಾತು ಹೇಳಿದಳೆಂದು ಹೆಮ್ಮೆಪಡುತ್ತ ತಂದೆ, ವೆಂಕಟರಾಮಯ್ಯನೆದುರು ಅಂದರು:

"ಈ ರಾತ್ರಿ ಪ್ರಯಾಣ ಅಂದರೆ ನಿದ್ದೆ ಕೆಡಬೇಕು. ರಾತ್ರಿಯೂ ಇಲ್ಲೇ ಇದ್ದು ನಾಳೆ ಬೆಳಗ್ಗೆ ಹೊರಟರಾಗದೆ?"

"ಇಲ್ಲ, ಬೇಡಿ ಇನ್ನೊಂದು ದಿವಸ ರಜಾ ತಗೊಳೋದಕ್ಕಾಗಲ್ಲ."

ಅಳಿಯನ ಕಟ್ಟುನಿಟ್ಟಿನ ಜೀವನ ಕ್ರಮದ ಅಲ್ಪ ಪರಿಚಯ ಆಗಲೇ ಇದ್ದ ಮಾವ ಇದಿರು ಹೇಳಲಿಲ್ಲ.

"ನಿಮ್ಮಿಷ್ಟ. ಇವತ್ತು ಹಗಲಾದರೂ ಇದ್ದು ಹೋಗೀಂತ ನಾವೇ ಪ್ರಾರ್ಥಿ ಸ್ಬೇಕಾಗಿತ್ತು. ಅದಕ್ಕೆ ಅವಕಾಶವೇ ಇಲ್ಲದ ಹಾಗೆ ವಿಜಯಾನೇ ನಿಮ್ಮನ್ನ ಒಪ್ಪಿಸಿದ್ಲು!"

ವೆಂಕಟರಾಮಯ್ಯ ಮುಗುಳುನಕ್ಕ.

ಈಗ ಸಾಕಷ್ಟು ಬಿಡುವಿದ್ದುದರಿಂದ ಪ್ರಯಾಣ ಸಿದ್ಧತೆ ವ್ಯವಸ್ಥಿತವಾಗಿಯೆ ನಡೆಯಿತು. ಹಗಲೆಲ್ಲ ಅಕ್ಕನ ಜೊತೆಯಲ್ಲಿ ಇರಬೇಕೆಂದು ವಿಜಯಾ ಆಶಿಸಿದ್ದಳು. ಆದರೆ ಅದು ಸಾಧ್ಯವಾಗಲಿಲ್ಲ. ಒಬ್ಬನಿಗೇ ಹೊತ್ತು ಹೋಗುವುದಿಲ್ಲವೆಂದು ಹೆಂಡತಿ ಯನ್ನು ಆತ ಬಳಿಯಲ್ಲೇ ಇರಿಸಿಕೊಂಡ.

ಸಂಜೆ ದಂಪತಿ ಊರಿನ ಬೀದಿಗಳಲ್ಲಿ ಸುತ್ತಾಡಿ ಬಂದರು.

ಮಾತನಾಡುವ ಕೆಲಸವನ್ನೆಲ್ಲ ಗಂಡನಿಗೇ ಬಿಟ್ಟುಕೊಟ್ಟು, ಸುನಂದೆಯ ತಾಯಿ ಕಿರಿಯ ಮಗಳನ್ನು ಕಳುಹಿಸಿಕೊಡಲಾಗದೆ ಕಂಬನಿ ಸುರಿಸಿದರು. ತನ್ನ ತಂಗಿಯನ್ನು ಕರೆದೊಯ್ಯಲು ನಿಂತಿದ್ದ ವೆಂಕಟರಾಮಯ್ಯನನ್ನು ಸುನಂದಾ ದಿಟ್ಟಿಸಿದಳು. ತಾಯಿ ಮಕ್ಕಳ ಅಗಲುವಿಕೆಯ ದೃಶ್ಯವನ್ನು ನೋಡಲಾರದೆ ಆತ ಉಗುಳು ನುಂಗಿದಂತೆ ತೋರಿತು.

ಟ್ರಂಕು, ತಿಂಡಿಯ ಬುಟ್ಟಿ, ಚೀಲಗಳು ಜಟಕಾದಲ್ಲಿ ಕುಳಿತು, ನವದಂಪತಿಯ ಹಾದಿ ನೋಡಿದುವು.

"ತಡವಾಗುತ್ತೆ," ಎಂದರು ಸುನಂದೆಯ ತಂದೆ.

"ಸ್ಟೇಷನ್ನಿಗೆ ನೀನೂ ಬರ್ತೀಯಲ್ಲಕ್ಕ?" ಎಂದು ವಿಜಯಾ ಕೇಳಿದಳು.

ಹಿಂದೆ ಸುನಂದಾ ಗಂಡನ ಮನೆಗೆ ಹೋದಾಗ ಬೀಳ್ಕೊಡಲು ಬಂದಿದ್ದಳು ಆ ತಂಗಿ...

ತಂದೆಯ ಜತೆಯಲ್ಲಿ ರೈಲು ನಿಲ್ದಾಣದ ತನಕ ಸುನಂದೆಯೂ ಬರುವಳೆಂದೇ ಗೊತ್ತಾಗಿತ್ತು. ಮೂವರು ಪ್ರಯಾಣ ಹೊರಡಬಾರದೆನ್ನುವುದೂ ಅದಕ್ಕೊಂದು ಕಾರಣ. ಆದರೆ ಆ ಕುದುರೆ ಗಾಡಿಯಲ್ಲಿ ಜಾಗವಿರಲಿಲ್ಲ.

"ಈ ಸಾಮಾನುಗಳ ಜತೇಲಿ ನಾಲ್ಕು ಜನ ಕೂತ್ಕೊಳ್ಳೊಕಾಗೋಲ್ಲ," ಎಂದು ಅಸಹಾಯತೆಯ ಧ್ವನಿಯಲ್ಲಿ ಸುನಂದೆ ತಂದೆ ನುಡಿದರು.

ವೆಂಕಟರಾಮಯ್ಯ ಬೀದಿಯುದ್ದಕ್ಕೂ ಅತ್ತಿತ್ತ ನೋಡುತ್ತ ಕೇಳಿದ:

"ಇನ್ನೊಂದು ಜಟಕಾ ತರಿಸೋಣ, ಆಗದೆ?"

"ಜಟಕಾ ಬೇಕಾದರೆ ಮಾರ್ಕೆಟು ಚೌಕಕ್ಕೇ ಹೋಗ್ಬೇಕು. ಇಲ್ಲೆಲ್ಲಿ ಸಿಗುತ್ತೆ? ಟೈಮೂ ಆಗ್ಹೋಯ್ತು."

ನಿಲ್ದಾಣದವರೆಗೆ ತಾನೂ ಹೋಗಬಹುದೆಂದು ಕೊನರಿದ ಆಸೆಯನ್ನು ಅಷ್ಟರಲ್ಲಿ ಹಿಂದಕ್ಕೆ ತಳ್ಳಿ ಸುನಂದಾ ಅಂದಳು:

"ಏನೂ ಬೇಡ ಅಪ್ಪಾ. ತಡವಾಗುತ್ತೆ. ಆಮೇಲೆ ರೈಲ್ನಲ್ಲಿ ಕೂತಿರೋಕೆ ಸರಿಯಾಗಿ ಸೀಟೂ ಸಿಗೋಲ್ಲ. ಸರಸ್ವತೀನ ಎತ್ಕೊಂಡು ನೀವು ಹೊರಡಿ."

ವೆಂಕಟರಾಮಯ್ಯ ಮೊದಲು ಗಾಡಿಯನ್ನೇರಿದ. ಬೀದಿ ದೀಪದ ಬೆಳಕಿನಲ್ಲಿ ಕೈ ಗಡಿಯಾರವನ್ನು ನೋಡಿದ.

ವಿಜಯಾ ತುಟಿ ಬಿಗಿದುಕೊಂಡು ತಾಯಿಗೆ ಪ್ರಣಾಮ ಮಾಡಿದಳು. ಅಕ್ಕನ ಎದೆಯಲ್ಲಿ ಮುಖವಿಟ್ಟಳು. ಸರಸರನೆ ಹೊರಕ್ಕಿಳಿದು, ಅಕ್ಕಪಕ್ಕದ ಮನೆಗಳೆದುರು ನಸು ಬೆಳಕಿನಲ್ಲಿ ನಿಂತಿದ್ದ ಪರಿಚಿತ ಹೆಂಗಸರನ್ನೊಮ್ಮೆ ನೋಡಿದಳು. ಗಂಡ ನೀಡಿದ ಕೈಯನ್ನು ಹಿಡಿದು ಗಾಡಿಯನ್ನೇರಿದಳು.

ಸಾಬಿಯ ಕುದುರೆಗಾಡಿ 'ಟೇಸನಿ'ಗೆ ಹೊರಟಿತು.

ಬಹಳ ಹೊತ್ತು ಅಂಗಳದಲ್ಲೆ ನಿಂತ ಅನಂತರ, ಸೆರಗಿನಿಂದ ಕಣ್ಣೊರೆಸಿಕೊಳ್ಳುತ್ತ, ಬರಿದಾಗಿದ್ದ ಮನೆಯನ್ನು ಸುನಂದೆಯ ತಾಯಿ ಹೊಕ್ಕರು.

ಸುನಂದೆಯೂ ಒಳಬಂದಳು. ಒಂಟಿಯಾಗಿದ್ದ ಕೊಠಡಿ ಆಕೆಯನ್ನು ಕರೆಯಿತು. ಅಲ್ಲಿ ದೀಪ ಆರಿಸಿ, ಹೊರಗಿನ ಕತ್ತಲೆಯನ್ನು ಕಿಟಿಕಿಯ ಮೂಲಕ ದಿಟ್ಟಿಸುತ್ತ, ಆಕೆ ನಿಂತಳು. ಕಣ್ಣೀರ ಧಾರೆಗಳೆರಡು ಕಪೋಲಗಳನ್ನು ತೋಯಿಸುತ್ತ ಸದ್ದಿಲ್ಲದೆ ಕೆಳಕ್ಕೆ ಹರಿದುವು.

## ೪

ವಿಜಯಾ ಗಂಡನ ಮನೆಗೆ ಹೊರಟುಹೋದ ಮಾರನೆಯ ದಿನ ಆಕೆಯ ತಂದೆ ಕೃಷ್ಣಪ್ಪನವರು ಏಳುವುದು ತಡವಾಯಿತು. ಎಚ್ಚರವಾದರೂ ಮೈ ಕೈ ನೋಯುತ್ತಿತ್ತೆಂದು ಮುಸುಕೆಳೆದು ಹಾಗೆಯೇ ಮಲಗಿದರು.

ನಡುಮನೆಯಲ್ಲಿ ಕಸಗುಡಿಸಿದ ಬಳಿಕ ಕೊಠಡಿಯತ್ತ ಇಣಿಕಿನೋಡಿ ಸುನಂದಾ

ಅಂದಳು:

"ಅಪ್ಪಾ ಬೆಳಗಾಯ್ತು, ಏಳಲ್ವೇ?"

ಕೃಷ್ಣಪ್ಪ ಈಗ ಎದ್ದರು. ತೂರಿ ಒಳಕ್ಕೆ ಬರುತ್ತಿದ್ದ ಬೆಳಕನ್ನು ನೋಡುತ್ತ ಕಣ್ಣು ಕಿರಿದುಗೊಳಿಸಿದರು. ಬಳಿಕ, ತಮ್ಮ ನರನಾಡಿಗಳನ್ನು ಕತ್ತು ಹಣೆಗಳನ್ನು ತಾವೇ ಮುಟ್ಟಿ ನೋಡಿದರು.

"ಸುಂದಾ, ಮೈ ಬೆಚ್ಚಗಿದೆಯಲ್ಲೇ." ಎಂದರು.

ಎಷ್ಟೋ ದಿನಗಳಾಗಿದ್ದುವು 'ಸುಂದಾ' ಎಂದು ತಂದೆ ಕರೆಯದೆ. ಅದು, ಶೀರಾ ಆತ್ಮೀಯವಾದ ಘಳಿಗೆಯಲ್ಲಿ ಅವರು ಬಳಸುತ್ತಿದ್ದ ಪದ.

ಒಲವಿನ ಆ ಸಂಬೋಧನೆ ಕೇಳಿ ಸುನಂದೆಯ ಹೃದಯ ಹಿಗ್ಗಿತು. ಆದರೆ, ಅದರ ಬೆನ್ನಲ್ಲೆ ಬಂದ ಮಾತಿನಿಂದ ಮುಖ ಮುದುಡಿತು. ಕೈಯಲ್ಲಿದ್ದ ಪೊರಕೆಯನ್ನು ಕೆಳಕ್ಕೆಸೆದು, ಆಕೆ ಕೊಠಡಿಯೊಳಕ್ಕೆ ಕಾಲಿಟ್ಟಳು. ತಂದೆಯ ಹಣೆಯನ್ನು ಮುಟ್ಟಿ ನೋಡಿದಳು.

"ಎಲ್ಲೋ ಸ್ವಲ್ಪ ಬಿಸಿ ಇದೆ," ಎಂದಳು. "ಮೂರು ನಾಲ್ಕು ದಿವಸವೆಲ್ಲ ಓಡಾಡ್ತಾನೇ ಇದ್ದೆ. ಆ ಆಯಾಸಕ್ಕೆ ಹಾಗಾಗಿದೆ," ಎಂದು ತನ್ನ ಅಭಿಪ್ರಾಯವನ್ನೂ ಕೊಟ್ಟಳು.

ಕೃಷ್ಣಪ್ಪ ಕಂಬಳಿಯನ್ನು ಕೆಳಕ್ಕೆ ಸರಿಸಿ ಎದ್ದು ನಿಂತರು.

"ನಿಮ್ಮಮ್ಮನಿಗೆ ಹೇಳ್ಬೇಡ. ಗಾಬರಿ ಬೀಳ್ತಾಳೆ," ಎಂದರು.

ತಾಯಿಯ ಸ್ವಭಾವವನ್ನು ಚೆನ್ನಾಗಿಯೇ ತಿಳಿದಿದ್ದ ಸುನಂದೆಗೆ ತಂದೆಯ ಮಾತಿನಿಂದ ಆಶ್ಚರ್ಯವೇನೂ ಆಗಲಿಲ್ಲ.

"ಇವತ್ತು ಮನೇಲೇ ಇದ್ದು ವಿಶ್ರಾಂತಿ ತಗೋಪ್ಪಾ," ಎನ್ನುತ್ತ ಆಕೆ ಹಾಸಿಗೆ ಸುತ್ತಿದಳು...

....ಮುಂದೆ ಆ ದಿನ ಕಾತರಕ್ಕೆ ಕಾರಣವಾದುದು ತಂದೆಯ ಜ್ವರವಲ್ಲ,– ತಾಯಿಯ ಕಾಹಿಲೆ. ಸೂರ್ಯ ಮೇಲಕ್ಕೇರಿದಂತೆಯೆ ಆಕೆ ನರಳುವುದು ಹೆಚ್ಚಿತು. ಕೆಟ್ಟ ನೆಗಡಿ; ಮೂಗಿನಿಂದ ಒಂದೇ ಸಮನೆ ನೀರು ಸೋರುತ್ತಿತ್ತು. ಸಾಲದುದಕ್ಕೆ ವಿಜಯಳನ್ನು ಕುರಿತು ಏನಾದರೂ ಮಾತನಾಡುತ್ತ ಅವರು ಅಳುತ್ತಿದ್ದರು. ಮಧ್ಯಾಹ್ನದ ಅಡುಗೆಯೇನೋ ಆಯಿತು. ಆದರೆ ಸುನಂದೆಯ ತಾಯಿ ಊಟಕ್ಕೇಳಲಿಲ್ಲ. "ಯಾಕೋ ಮೈಯೆಲ್ಲ ಛಳಿ ಛಳಿ. ಸ್ವಲ್ಪ ಬೆಚ್ಚಗೆ ಮುಸುಕು ಹಾಕ್ಕೊಂಡು ಮಲಕ್ಕೋತೀನಿ," ಎನ್ನುತ್ತ ಅವರು ಹಾಸಿಗೆಯ ಆಶ್ರಯ ಪಡೆದರು. ಸ್ವಂತ ತಾಯಿಯ ಪರಿಸ್ಥಿತಿಯನ್ನು ತಂದೆಯಿಂದ ಬಚ್ಚಿಡುವ ಅಗತ್ಯ ಸುನಂದೆಗಿರಲಿಲ್ಲ. ತನ್ನಾಕೆಯ ಆರೋಗ್ಯ ಸರಿಯಾಗಿಲ್ಲವೆಂದು ತಿಳಿಯುವುದು ಕೃಷ್ಣಪ್ಪನವರಿಗೆ ಕಷ್ಟವಾಗಲಿಲ್ಲ. ಅದನ್ನು ಗಂಡನಿಂದ ಬಚ್ಚಿಡಲು ಆ ಸಾಧ್ವೀಮಣಿ ಯತ್ನಿಸಿದ್ದರೆ ತಾನೆ? ಅವರು ಕೈಹಿಡಿದವಳಿಗಾಗಿ ಕಷಾಯ ಸಿದ್ಧಗೊಳಿಸಿದರು. , ತಾವೇ ಕೈಯಾರ ಅದನ್ನು ಕುಡಿಸಿದರು.

"ಸ್ವಸ್ಥ ನಿದ್ದೆ ಹೋಗೆ. ಸಾಯಂಕಾಲದೊಳಗೆ ವಾಸಿಯಾಗುತ್ತೆ," ಎಂದರು.

ನಿದ್ದೆಯೇನೋ ಬಂತು. ಆದರೆ ಸಂಜೆಯ ಹೊತ್ತಿಗೆ ಜ್ವರ ಇಳಿಯಲಿಲ್ಲ. ತಮಗೆ ಏನು ಬೇಕಾದರೂ "ವಿಜಯಾ" ಎಂದು ಕರೆಯುತ್ತಿದ್ದರು ಆ ತಾಯಿ. ಸುನಂದೆ, "ಬಂದೆ ಅಮ್ಮಾ" ಎಂದು ತಾನೇ ಉತ್ತರಿಸುತ್ತಿದ್ದಳು.

ಸಂಜೆ ಒಲೆ ಹಚ್ಚಿ ಸಬ್ಬಕ್ಕಿ ಗಂಜಿಯನ್ನಿಷ್ಟು ಬೇಯಿಸಿ ಸುನಂದಾ ತಾಯಿಗೆ ಕುಡಿಸಿದಳು.

ತಮ್ಮ ಹಳೆಯ ಶಾಲು ಹೊದೆದು ಆರಾಮ ಕುರ್ಚಿಯ ಮೇಲೆ ಜಗಲಿಯಲ್ಲಿ ಕುಳಿತಿದ್ದರು ತಂದೆ. ಕೈಯಲ್ಲಿ ನಶ್ಯದ ಡಬ್ಬವಿತ್ತು. ಸರಸ್ವತಿ ತೊಡೆಯ ಮೇಲಿದ್ದಳು. ಸುನಂದಾ ಅವರ ಬಳಿಗೆ ಬಂದು ಹಣೆಯನ್ನು ಮುಟ್ಟಿ ನೋಡಿದಳು. ಕೃಷ್ಣಪ್ಪ ಮುಗುಳು ನಕ್ಕರು.

"ಮೈ ಬೆಚ್ಚಗಿದೆಯೇ ಏನೂಂತ ನೋಡಕ್ಕೆ ಬಂದಿಯಾ?"

ಮೈ ಬೆಚ್ಚಗಿರಲಿಲ್ಲ. ಆ ಜೀವದಲ್ಲಿ ಜ್ವರದ ಚಿಹ್ನೆ ಇರಲಿಲ್ಲ.

"ನಿಮ್ಮಮ್ಮ ಸೀನೋದು ಕೇಳಿದ ತಕ್ಷಣ ನನ್ನ ಜ್ವರ ಓಡ್ಹೋಯ್ತು. ಇಬ್ಬರೂ ಕಾಹಿಲೆ ಬೀಳೋದಕ್ಕಾಗುತ್ಯೆ? ಎಷ್ಟು ರೋಗಿಗಳ ಆರೈಕೆ ಮಾಡೀಯಮ್ಮಾ ನೀನಾದರೂ?"

ಹಾಗೆ ಹೇಳುತ್ತ ಅವರು ನಕ್ಕರು. ನಗುತ್ತಿದ್ದಂತೆ ಕುಣಿದ, ಸ್ವಲ್ಪ ನೀಳವಾಗಿದ್ದ, ಅವರ ಮೂಗನ್ನು ಸರಸ್ವತಿ ಹಿಡಿಯಲೆತ್ನಿಸಿದಳು.

...ಮಾರನೆಯ ಬೆಳಗ್ಗೆ ಸುನಂದೆಯ ತಾಯಿಯ ಮೈ ಬೆವತಿತು. ಆ ಮೇಲೆ ಜ್ವರ ಬರಲಿಲ್ಲ. ಆದರೆ ನೆಗಡಿ ಇತ್ತು. ಅದರ ಆಯುಸ್ಸು ಮೂರು ದಿನ.

ಜ್ವರ ಬಂದು ತಂದೆ ಹಾಸಿಗೆ ಹಿಡಿಯುವ ಬದಲು ತಾಯಿ ಕಾಹಿಲೆ ಬಿದ್ದುದು ಮೊದಲ ನೋಟಕ್ಕೆ ವಿಚಿತ್ರವೆನಿಸುತ್ತಿತ್ತು. ಆದರೆ ಸುನಂದೆ, ತನ್ನ ತಾಯಿ ಮತ್ತು ತಂದೆಯ ನಡುವೆ ಇದ್ದ ಪ್ರಗಾಢವಾದ ಆತ್ಮೀಯತೆಯನ್ನು ತಿಳಿಯದವಳಲ್ಲ ಮಗ ಳನ್ನು ಗಂಡನ ಮನೆಗೆ ಕಳುಹಿಸಿದ ಮನೋವೇದನೆಯೇ ಒಳಸಂಚು ನಡೆಸಿ ತಮ್ಮ ಕೈಹಿಡಿದಾಕೆಯ ಆರೋಗ್ಯದ ಮೇಲೆ ದಾಳಿನಡೆಸಿತ್ತೆಂದು ಕೃಷ್ಣಪ್ಪನವರು ಸುಲಭ ವಾಗಿಯೆ ಊಹಿಸಿದ್ದರು. ಅಂತಹ ದೌರ್ಬಲ್ಯ ತಾವು ತೋರಬಾರದೆಂದು ತಮ್ಮ ದೇಹಾಲಸ್ಯವನ್ನು ಅವರು ಕಡೆಗಣಿಸಿದರು. ನಿಸರ್ಗದ ಕಿರುಕುಳವನ್ನು ಇಚ್ಛಾಶಕ್ತಿ ಜಯಿಸಿತು. ಅವರ ಗೃಹವೈದ್ಯ, ಸಂತೈಸುವ ಎರಡು ನುಡಿ, ವಿಜಯಳ ಅಕ್ಕ ಸುನಂದೆಯ ಆರೈಕೆ ಸಂಪೂರ್ಣವಾಗಿ ಆಕೆಯ ತಾಯಿಯ ಕಾಹಿಲೆಯನ್ನು ಸೋಲಿಸಿದುವು.

....ಮತ್ತೆ ಏಕಪ್ರಕಾರವಾದ ದಿನಗಳು. ಹಗಲು—ಇರುಳು.

ಸುನಂದೆಯ ತಾಯಿ ಹೇಳುತ್ತಿದ್ದರು.

"ಪೋಸ್ಟಿನೋನು ಬರೋ ಹೊತ್ತಾಯ್ತೋ ಏನೋ. ಬೀದಿ ಕಡೆ ಹೋಗಮ್ಮ."

ವಾಚನಾಲಯದ ಕಡೆಗೋ ದಿನಸಿ ಅಂಗಡಿಗೋ ಹೋಗಿದ್ದ ಕೃಷ್ಣಪ್ಪನವರು, ಮನೆಗೆ ಬಂದೊಡನೆ ಕೇಳುತ್ತಿದ್ದರು:

"ಏನಾದರೂ ಕಾಗದ ಬಂತೇನೇ ಸುನಂದಾ?"

ವಿಜಯಾ ಗಂಡನ ಮನೆಗೆ ಹೋದ ಆರನೆಯ ದಿನ ಆ ಕಾಗದ ಬಂತು. ಒಂದು ಲಕೋಟೆಯೊಳಗೆ ಎರಡು. ತಮಗೊಂದು, ಅಕ್ಕನಿಗೊಂದು.

ಬರೆಯಲು ತಡವಾಯಿತೆಂದು ಕ್ಷಮಾಯಾಚನೆ. ತಾನು ಆರೋಗ್ಯವಾಗಿದೇನೆಂದೂ ತನ್ನನ್ನೆಲ್ಲರೂ ಚೆನ್ನಾಗಿ ನೋಡುಕೊಳ್ಳುತ್ತಿರುವರೆಂದೂ ಆಶ್ವಾಸನೆ ಬೇಡಿಕೊಂಡ ಆಶೀರ್ವಾದಗಳು.

"ಮಗು ಚೆನ್ನಾಗಿದಾಳಂತಾ?" ಎಂದು ಆಗಲೆ ಎರಡು ಬಾರಿ ಕೇಳಿ ಉತ್ತರ ದೊರೆಯದೆ ಸ್ವಲ್ಪ ಸಿಟ್ಟುಗೊಂಡಿದ್ದರು ಸುನಂದೆಯ ತಾಯಿ. ಮೂಗಿನ ಮೇಲೆ ಕನ್ನಡಕವೇರಿಸಿ ಕೃಷ್ಣಪ್ಪನವರು ಮೌನವಾಗಿ ಕಾಗದ ಓದಿ ಮುಗಿಸಿದ ವರೆಗೂ, ಅವರು ಸಹನೆಯಿಂದ ನಿಂತರು. ತಲೆ ಬಾಗಿಸಿ ಕನ್ನಡಕದೆಡೆಯಿಂದ ಅವರು ತಮ್ಮನ್ನು ಕುರಿತು ಮುಗುಳು ನಕ್ಕಾಗ ಮಾತ್ರ ಅವರಿಗೆ ಮೈಯುರಿಯಿತು.

"ಮಗು ಏನು ಬರೆದಿದೆ? ಸ್ವಲ್ಪ ಗಟ್ಟಿಯಾಗಿ ಓದ್ಬಾರ್ದೆ?"

ಕೃಷ್ಣಪ್ಪನವರು ಸಣ್ಣನೆ ನಕ್ಕು ತಲೆಯೆತ್ತಿ ಗಟ್ಟಿಯಾಗಿ ನಿಧಾನವಾಗಿ ಓದಿ ಹೇಳಿದರು.

ಓದಿ ಮುಗಿದ ಬಳಿಕ ಕಾಗದವನ್ನು ಮಡಚಿ ಹಾಗೆಯೇ ಲಕೋಟೆಯೊಳಗಿರಿಸಿ ಅವರು ಸಮಾಧಾನದ ನಿಟ್ಟುಸಿರು ಬಿಟ್ಟರು.

"ಅಂತೂ ವಿಜಯಾ ಒಳ್ಳೇ ಮನೆ ಸೇರಿದ ಹಾಗಾಯ್ತು. ಇನ್ನೆಲ್ಲಾ ದೇವ ರಿಚ್ಛೆ."

ಅಷ್ಟರಲ್ಲೆ ಅವರಿಗೆ, ತನ್ನ ಕಾಗದವನ್ನೆತ್ತಿಕೊಂಡು ಒಳಹೋಗಿದ್ದ ಸುನಂದೆಯ ನೆನಪಾಯಿತು. ಅವರು ಕರೆದರು:

"ಸುಂದಾ, ಅದೇನಮ್ಮ ಬರೆದಿದಾಳೆ ನಿಂಗೆ?"

....ಸುನಂದಾ ಆಗಲೇ ಕಾಗದವನ್ನು ಓದಿಯಾಗಿತ್ತು. ಅಕ್ಕನಿಗೆ ಬರೆದ ಆ ಓಲೆಯಲ್ಲಿದ್ದುದು ಸಲಿಗೆಯ ಧ್ವನಿ. 'ಈ ಊರು ಬೇಜಾರು. ಹೊತ್ತೇ ಹೋಗಲ್ಲ. ಅವರು ಆಫೀಸಿನಿಂದ ಬರೋವರೆಗೂ ಎಷ್ಟು ಕಷ್ಟವಾಗುತ್ತೇಂತ!' ಅತ್ತೆಯ ವಿಷಯ ವಾಗಿ ಒಳ್ಳೆಯ ಮಾತು. "ನಿನ್ನ ಕೈಲಿ ಎಷ್ಟಾಗುತ್ತೋ ಅಷ್ಟು ಸಹಾಯ ಮಾಡಮ್ಮಾ...ಅಂತಾರೆ...ಮೈದುನನೂ ಒಳ್ಳೆಯವರು. ಈಗಲೇ ಮದುವೆ ಮಾಡಿ ಕೊಳ್ಳೊದಿಲ್ಲವಂತೆ...ಮತ್ತೆ ತವರುಮನೆಯ ನೆನಪು. 'ನಿನ್ನೆ ರಾತ್ರೆ ಇದ್ದಕ್ಕಿದ್ದಂತೆ ಅಳು ಬಂದು ಬಿಡ್ತು. ಯಾಕಳ್ತೀಯಾ?—ಅಂದರು ನಮ್ಮವರು. ತವರು ಮನೆ ನೆನಪಾಯ್ತಾ?—ಅಂತ ಕೇಳಿದರು. ಹೂಂ—ಅಂದೆ. ಹುಚ್ಚಿ ಎಳೇ ಮಗು—ಅಂತ

ಗೇಲಿ ಮಾಡಿದರು. ಅದು ಸರೀನಾ ಅಕ್ಕಾ? ವಯಸ್ಸು ಎಷ್ಟಾದರೇನಂತೆ? ಹುಟ್ಟಿ ಬೆಳೆದ ಮನೆಯ ನೆನಪಾಗೋದು ಸ್ವಾಭಾವಿಕ ಅಲ್ವಾ? ನಿನ್ನೆ ಬರ್‍ತಾ ಅವರೊಂದು ವಸ್ತು ಕೊಂಡ್ಕೊಂಡು ಬಂದರು. ಏನು ಹೇಳು? ಊಹೂಂ. ಬೆಟ್ ಕಟ್ತೇನಿ. ನಿನ್ಕೈಲಾಗಲ್ಲ. ಮೈಸೂರು ಮಲ್ಲಿಗೆ ಕಣೇ. ಕಥೆ ಪುಸ್ತಕವಂತೂ ಈಗ ಬಹಳ ಅಗ್ಗ ಅಂದರು. ಅದು ನನಗೆ ಮೊದಲೇ ಗೊತ್ತಿತ್ತು—ಅಂದೆ. ತಿಂಗಳಿಗೊಂದು ಒಳ್ಳೇ ಕಥೆ ಪುಸ್ತಕ ಕೊಂಡ್ಕೊಳ್ಳೋಣ-ಅಂದರು. ನನಗ್ಯಾಕೋ ಭಯ. ಕೊಂಡು ಕೊಂಡ್ಮೇಲೆ ಚೆನ್ನಾಗಿಲ್ದೆ ಹೋದರೆ? ದುಡ್ಡು ದಂಡ. ಅದಕ್ಕೆ ಯಾವುದಾದರೂ ಲೈಬ್ರರಿಗೆ ಮೆಂಬರಾಗೋದೇ ವಾಸೀಂತಿದೀನಿ. ಆ ವಿಷಯ ಅವರಿಗೆ ಹೇಳ್ಬೇಕು. ನಿನ್ನದೇನು ಅಭಿಪ್ರಾಯ...ನನ್ನ ಪಾಲಿಗೆ ಬಂದ ಪಂಚಾಮೃತ ಹೀಗಿರುತ್ತೇಂತ ಕನಸಿನಲ್ಲೂ ನಾನು ಊಹಿಸಿರ್‍ಲಿಲ್ಲ ಅಕ್ಕ. ಆ ಗಿಣೀನ ಅವನ ಕೈಗೆ ಕೊಡ್ತಾರಲ್ಲಾ—ಅಂತ ಪಕ್ಕದ ಮನೆಯೋರು ಅಂದಿರ್‍ಲಿಲ್ವೆ ಆ ದಿವಸ? ಜ್ಞಾಪಿಸಿಕೊಂಡರೆ ನಗು ಬರುತ್ತೆ. ಆ ಗಿಣೀನ ಈಗ ಸಾಕ್ತಿರೋದು ಕಿರಾತನಲ್ಲ 'ದೇವರು!'........ಮತ್ತೆ ಪುನಃ ಬೇಸರದ ಧ್ವನಿ....'ನೀನು ಹ್ಯಾಗಿದೀಯಾ ಅಕ್ಕ? ನಾನು ಮನೆ ಬಿಟ್ಟು ಬಂದಮೇಲೆ ಏನು ವಿಶೇಷ? ಸರಸ್ವತಿ ನನ್ನನ್ನ ಮರೆತ್ಬಿಟ್ಟಿದಾಳೋ ಏನೋ. ಅಮ್ಮ ಅಪ್ಪನ್ನ ನೋಡ್ಕೊ ಅಕ್ಕ. ನೀನೂ ಇಲ್ಲದೆ ಹೋಗಿದ್ರೆ ಎಷ್ಟೊಂದು ಕಷ್ಟವಾಗ್ತಿತ್ತು ಅವರಿಗೆ: ಅಕ್ಕ–ಅಕ್ಕ–ನಿನ್ನ ಮನಸ್ಸು ಹೇಗಿದೆ? ಅಳು ಬರ್‍ತಿದೆ ನಂಗೆ. ನಿನ್ನನ್ನು ನೋಡಬೇಕೂಂತ ಆಸೆಯಾಗ್ತಿದೆ....ಕಾಗದ ಬರಿ ಅಕ್ಕಾ. ದೊಡ್ಡ ಕಾಗದ–ದೊಡ್ಡದು...'

ಓದಿ ಮುಗಿಸಿದಳು ಸುನಂದಾ, ಆಕೆಯ ಪಾಲಿಗೆ ಅದು ಅಪೂರ್ವ ಅನುಭವ. ಓದುತ್ತ ಆಗಾಗ್ಗೆ ನಗು ಬಂತು. ಒಮ್ಮೊಮ್ಮೆ ಮೆದುಳು ಧೀಂಗುಟ್ಟಿತು. ಉಗುಳು ಗಂಟಲಲ್ಲಿ ಸಿಲುಕಿತು. ಬಳಿಕ ಒಮ್ಮೆಲೆ ತಣುಪಾದ ಗಾಳಿ ಬೀಸಿದಂತಾಗಿ ಹೃದಯ ಹಾಡಿತು ಪುನಃ...

"...ಕಾಗದ ಓದಿಯಾಯ್ತೆ ಸುನಂದಾ?"

ಮತ್ತೆ ಬಂದಿತ್ತು ತಂದೆಯ ಸ್ವರ. ಸುನಂದಾ, ಸೆರಗಿನ ಅಂಚಿನಿಂದ, ತೇವಮಯವಾಗಿದ್ದ ಕಣ್ಣುಗಳನ್ನೊಮ್ಮೆ ಒತ್ತಿಕೊಂಡಳು. ಮುಗುಳು ನಗುತ್ತ ಕಾಗದದೊಡನೆ ಹೊರಬಂದಳು.

"ವಿಜಯಾ ನಿನಗೂ ಬರೆದಿದಾಳಾ?" ಎಂದು ತಾಯಿ ಕೇಳಿದರು.

"ಹೂಂ," ಎನ್ನುತ್ತ ಸುನಂದಾ ಕಾಗದವನ್ನು ತಂದೆಯ ಕೈಗೆ ಕೊಟ್ಟಳು. ಅವರು, ತಮ್ಮ ಕೈಲಿದ್ದುದನ್ನು ಮಗಳಿಗಿತ್ತು, ಆಗಲೆ ತೆಗೆದು ಕಿಟಕಿಯ ದಂಡೆಯ ಮೇಲಿರಿಸಿದ್ದ ಕನ್ನಡಕವನ್ನು ಮತ್ತೆ ಏರಿಸಿದರು. ಒಂದೆರಡು ಸಾಲುಗಳ ಮೇಲೆ ಮೌನವಾಗಿ ಕಣ್ಣೋಡಿಸಿ, ಬಳಿಕ, ಹೆಂಡತಿಗೂ ಕೇಳಿಸಲೆಂದು ಗಟ್ಟಿಯಾಗಿ ಓದತೊಡಗಿದರು. ಓದುತ್ತಲಿದ್ದಂತೆ ನಗು ಬಂತು. ಬಿದ್ದು ಬಿದ್ದು ನಕ್ಕರು. ನಗುತ್ತ ಓದಿದರು. ವಯಸ್ಸಾದ ಕಣ್ಣುಗಳಿಂದ ಹರ್ಷಾಶ್ರು ಉದುರಿತು. ಒಡಹುಟ್ಟಿದವರೊಳಗಿನ ಒಲ

ವನ್ನು ತಿಳಿದು ತಾನು ಧನ್ಯ ಎಂದುಕೊಂಡರು.

ಬಳಿಕ ಕೊನೆಯಲ್ಲಿ ಮಾರ್ಮಿಕವಾದ ಸಾಲುಗಳಿದ್ದುವು. ಅಕ್ಕನನ್ನು ಕುರಿತು ತಂಗಿಯ ಕೊರಗು. ಅದನ್ನೋದುತ್ತಲಿದ್ದಂತೆ ಆನಂದ ಬಾಷ್ಪ ಸಂಕಟದ ಕಂಬನಿ ಯಾಯಿತು. ಉಸಿರಾಡುವುದೆ ಕಷ್ಟವೆನಿಸಿತು ಒಂದು ಕ್ಷಣ.

ಮಗು ತಮಾಷೆಯಾಗಿ ಬರೆದಿದ್ದ ಕಾಗದವನ್ನು ಓದಿ ಕೇಳಿ ತಾಯಿಯೂ ಸಂತೋಷದಿಂದ ಅತ್ತರು.

ಅನಂತರ ಆ ದಿನವೆಲ್ಲ, ವಿಜಯಾ ತಮ್ಮೊಡನೆಯೇ ಸುಳಿದಾಡುತ್ತಿದ್ದಂತೆ ಅವ ರೆಲ್ಲರಿಗೂ ಭಾಸವಾಯಿತು. ವಿಜಯಾ ಬರೆದ ಕಾಗದಗಳಿಂದಲೇ ಹೃದಯ ತುಂಬಿ ತೆಂದು ಹೆಚ್ಚು ಮಾತನ್ನೇ ಯಾರೂ ಆ ಹೊತ್ತು ಆಡಲಿಲ್ಲ.

ಮಾರನೆಯದಿನವೇ ಸುನಂದಾ ತಂಗಿಗೆಮಾರೋಲೆ ಬರೆದಳು. ಬಲು ದೀರ್ಘ ವಾದ ಓಲೆ. ಅವರಲ್ಲಿಯೂ ಆಕೆ ಹೃದಯ ತೋಡಿಕೊಳ್ಳಲಿಲ್ಲ. ಆ ವಿಷಯ ಈ ವಿಷಯ, ಬಲು ಸ್ವಾರಸ್ಯವಾಗಿ, ತಂಗಿ ಅದನ್ನೋದಿ ಮೆಚ್ಚುವಂತೆ ನಗುವಂತೆ ಬರೆದಳು. ಕೃಷ್ಣಪ್ಪನವರು ಆಶೀರ್ವಾದ ತಿಳಿಸಿದರು; ತಾಯಿಯಿಂದ ಆರೈಕೆಯ ವಿಷಯವಾಗಿ ಹಿತವಚನ...

ಮತ್ತೆ ಎಂದಿನಂತೆಯೆ ದಿನಗಳು, ಹಗಲಿರುಳು...

ನಡುವೆ ಕೆಲ ವರ್ಷ ಸುಸಂದಾ ಅವರ ಮನೆಯಲ್ಲಿರಲಿಲ್ಲ, ಸರಸ್ವತಿ ಎಂಬ ಮಗು ಹಿಂದಿನಿಂದಲೂ ಅಲ್ಲಿರಲಿಲ್ಲ—ಎಂದು ಯಾರಾದರೂ ಅಂದರೆ, ಕೃಷ್ಣಪ್ಪನವರೂ ಅವರ ಪತ್ನಿಯೂ ಆ ಮಾತನ್ನು ಖಂಡಿತ ನಂಬಲಾರರು ಎನ್ನುವಂತಾಯಿತು ಪರಿಸ್ಥಿತಿ. ಆ ಮನೆಯ ಇರುವಿಕೆಯೊಡನೆ ಅಷ್ಟೊಂದು ಬೆರೆತು ಹೋಗಿದ್ದರು ಸುನಂದಾ ಮತ್ತು ಸರಸ್ವತಿ.

ಅದರೂ ಒಳಗಿಂದೊಳಗೇ ವ್ಯಥೆಯ ಕೀಟವೊಂದು ಆ ವೃದ್ಧ ದಂಪತಿಯನ್ನು ಕೊರೆಯುತ್ತಿತ್ತು, ಸುನಂದೆಯನ್ನು ಕೊರೆಯುತ್ತಿತ್ತು.

ಮುಂದೇನು? ಮುಂದೇನು? ಎನ್ನುವ ಪ್ರಶ್ನೆ ದಿನದಿಂದ ದಿನಕ್ಕೆ ಬೃಹದಾಕಾರ ತಳೆಯುತ್ತಿತ್ತು.

ಸುನಂದೆಯ ಒಡೆದು ಹೋಗಿದ್ದ ಸಂಸಾರದ ಪಾತ್ರೆಗೆ ಬೆಸುಗೆ ಹಾಕುವುದು ಸುಲಭವಾಗಿರಲಿಲ್ಲ. ಯತ್ನಿಸಿ ನೋಡಲು ಕೃಷ್ಣಪ್ಪನವರಿಗೆ ಮನಸ್ಸಿತ್ತು. ಆದರೆ ಆ ಯತ್ನ ವಿಫಲವಾಗುವುದೆಂಬ ಭಯದಿಂದ ಅವರು ಅಳುಕುತ್ತಿದ್ದರು.

ಒಮ್ಮೊಮ್ಮೆ ನಿರಾಸೆಯ ಸುಂಟರಗಾಳಿ ಅವರ ಮನವನ್ನೆಲ್ಲ ಆವರಿಸಿದಾಗ 'ಸುನಂದಾ ನನ್ನ ಪಾಲಿನ ಗಂಡು ಸಂತಾನ ಅಂತ ಭಾವಿಸ್ತೀನಿ' ಎಂದುಕೊಳ್ಳುತ್ತಿದ್ದರು ಕೃಷ್ಣಪ್ಪ. ಮತ್ತೆ ಒಮ್ಮೊಮ್ಮೆ, ತಮ್ಮ ಮೊದಲ ಅಳಿಯ ಹಾದಿಗೆ ಬರಬಹುದು, ಸುನಂದೆಯ ಬದುಕಿನಲ್ಲಿ ಪುನಃ ಭಾಗ್ಯೋದಯವಾಗಬಹುದು, ಎಂದು ಆಸೆ ನಂಬಿಕೆ ಗಳನ್ನು ಅವರು ರೂಪಿಸಿಕೊಳ್ಳುತ್ತಿದ್ದರು.

ಒಂದು ಸಂಜೆ ಕೃಷ್ಣಪ್ಪನವರು, ಮಗಳೊಡನೆ ಮಾತನಾಡಲು ನಿರ್ಧರಿಸಿದರು. ಆದರೆ ಹೇಗೆ ಮೊದಲು ಮಾತನಾಡಬೇಕೆನ್ನುವುದೆ ಅವರಿಗೆ ತಿಳಿಯಲಿಲ್ಲ. ಯಾವುದೋ ಹಳೆಯ ಪುಸ್ತಕವನ್ನು ಕೈಯಲ್ಲಿ ಹಿಡಿದುಕೊಂಡು ನಡು ಮನೆಗೆ ಬಂದರು. ಹೆಂಡತಿಯ ಎದುರಲ್ಲಿ ಈ ಪ್ರಸ್ತಾಪ ಸರಿಯಲ್ಲವೆಂದು ಮತ್ತೆ ಜಗಲಿಗೆ ಹೋದರು. ಪುಸ್ತಕವನ್ನು ಅಲ್ಲಿಯೇ ಬಿಟ್ಟು ಅಂಗಳಕ್ಕಿಳಿದರು. ಅಲ್ಲೇ ನಿಂತರು.

ತಂದೆಯನ್ನೇನೋ ಯೋಚನೆ ಬಾಧಿಸುತ್ತಿದೆ, ಎನಿಸಿತು ಸುನಂದೆಗೆ. ಶಿವಮೊಗ್ಗೆಯಿಂದ ಮತ್ತೆ ಕಾಗದ ಬರಲಿಲ್ಲವೆಂಬ ಕಾತರವಿರಬಹುದು, ಎಂದು ತನ್ನಷ್ಟಕ್ಕೆ ಅಂದಳು. ತನ್ನ ವಿಷಯವೇ ಇದ್ದೀತೆಂದು ಒಪ್ಪಲು ಆಕೆ ಇಷ್ಟ ಪಡಲಿಲ್ಲ.

ಅಷ್ಟರಲ್ಲಿ ತಂದೆಯ ಧ್ವನಿ ಕೇಳಿಸಿತು:

"ಸರಸ್ವತಿ ಎಲ್ಲಿದಾಳೆ, ಸುನಂದಾ?"

"ಒಳಗಿದಾಳೆ."

"ಇಲ್ಲಿಗೆ ಕರಕೊಂಡ್ಬಾ."

ಮಗಳನ್ನೆತ್ತಿಕೊಂಡು ಸುನಂದಾ ಹೊರಕ್ಕೆ ಬಂದಳು. ಮೊಮ್ಮಗಳನ್ನು ತಾವೆತ್ತಿಕೊಳ್ಳುತ್ತ ಕೃಷ್ಣಪ್ಪನವರು ಕೇಳಿದರು:

"ಬೆಂಗಳೂರಿನಲ್ಲಿ ನಿಮ್ಮನೆ ಪಕ್ಕದಲ್ಲೆ ಒಬ್ಬರಿದ್ದಾರಲ್ಲಾ ಅವರ ಹೆಸರೇನು?"

ಸುನಂದೆಯ ಎದೆ ಗುಂಡಿಗೆ ತೀವ್ರವಾಗಿ ಬಡಿಯತೊಡಗಿತು.

"ಯಾರು ರಾಧಮ್ಮನೆ? ರಾಮಯ್ಯ ಅಂತ ಅವರ ಯಜಮಾನ್ರು."

"ಅವರೇನೇ. ಸುನಂದಾ, ರಾಧಮ್ಮನಿಗೊಂದು ಕಾಗದ ಬರೀತೀಯಾ?"

"ಹೂಂ..."

ಏನೆಂದು ಆಕೆ ಕೇಳಲಿಲ್ಲ. ಕೇಳುವ ಅಗತ್ಯವಿರಲಿಲ್ಲ.

"ಬಹಳ ದಿವಸವಾಯ್ತು. ಒಮ್ಮೆ ಹೋಗಿಯಾದರೂ ಬರೋದು ಮೇಲು ಅನಿಸುತ್ತೆ. ಹೋಗೋಕ್ಮುಂಚೆ ವಿಷಯ ಏನೂಂತ ಸ್ವಲ್ಪವಾದರೂ ತಿಳಿದರೆ ಚೆನ್ನಾಗಿರುತ್ತೆ. ರಾಧಮ್ಮ ಉತ್ತರ ಬರೀಬಹುದು, ಅಲ್ವೆ?"

"ಬರೀಬಹುದು."

ಆ ವಿಷಯ ಅಲ್ಲಿಗೆ ನಿಂತು, ದೊಡ್ಡ ಭಾರವಿಳಿಸಿದವರಂತೆ ಕೃಷ್ಣಪ್ಪನವರು ಪ್ರಸನ್ನರಾಗಿ, ಮೊಮ್ಮಗಳನ್ನು ಹೆಗಲ ಮೇಲೆ ಕೂರಿಸಿಕೊಂಡರು.

೩

ರಾಧಮ್ಮನ ಕಾಗದಕ್ಕೋಸ್ಕರ ಬಹಳ ದಿನ ಕಾದಿರಬೇಕಾದ ಅಗತ್ಯವಿರಲಿಲ್ಲ. ಅದು ಬೇಗನೆ ಬಂತು. ಉತ್ತರ ರಾಧಮ್ಮನದೆ. ಹೇಳಿ ಬರೆಸಿದ್ದು. ಅವರ ಹುಡುಗನ

ಹಸ್ತಾಕ್ಷರ. ಅಲ್ಲಲ್ಲಿ ರಾಮಯ್ಯ ಅದನ್ನು ತಿದ್ದಿದ್ದರು.

ಕಾಗದ ಬಂತೆಂಬ ಸಂತೋಷ, ಅದನ್ನೋದುವಾಗ ಉಳಿಯುವುದು ಸಾಧ್ಯವಿರಲಿಲ್ಲ. ಅದರೊಳಗಿದ್ದ ವಿಷಯ ಅಂತಹುದು.

"ನೀವು ವಿಳಾಸ ಕೊಡದೆ ಹೋಗಿ ದೊಡ್ಡ ತಪ್ಪು ಮಾಡಿದಿರಿ. ಎಷ್ಟೋ ಸಲ ನಿಮಗೆ ಬರೆಯಬೇಕೆಂದು ತೋರುತ್ತಿತ್ತು. ಆದರೆ ವಿಳಾಸವಿರಲಿಲ್ಲ. ಈಗಲಾದರೂ ನೀವೇ ಬರೆದು ತಿಳಿಸಿದಿರಲ್ಲ. ಇದೇ ದೊಡ್ಡ ಸಮಾಧಾನ."

...ಸಮಾಧಾನದ ಜತೆಯಲ್ಲಿ ಇದ್ದುವು ವಿಷಾದ ಮತ್ತು ದುಃಖ.

"ಸಂತೋಷದ ವಿಷಯವೇನೂ ನಿಮಗೆ ಬರೆಯುವುದಕ್ಕಿಲ್ಲವಲ್ಲ ಎಂದು ವಿಷಾಧವಾಗುತ್ತದೆ. ನೀವು ಬರೆದಿದ್ದನ್ನೆಲ್ಲ ಓದಿ ಬಹಳ ದುಃಖವಾಯ್ತು. ನಿಮ್ಮ ಯಜಮಾನರು ಮನೆ ಖಾಲಿಮಾಡಿ ಆಗಲೇ ಎರಡು ತಿಂಗಳ ಮೇಲಾಯ್ತು. ನೀವಿದ್ದ ಮನೆಗೆ ಬೇರೆಯವರು ಬಿಡಾರ ಬಂದೂ ಆಯಿತು. ವರ್ಗವಾಯಿತೋ ಅಥವಾ ಬೇರೆಲ್ಲಿಯಾದರೂ ಮನೆ ಮಾಡುತ್ತಾರೋ ಎಂದು ತಿಳಿಯಲು ಪ್ರಯತ್ನಪಟ್ಟೆ. ಸಾಮಾನು ಸಾಗಿಸುವಾಗ ಅವರೊಡನೆ ಕೇಳಬೇಕೆಂದು ಕಾದು ನಿಂತೆ. ಆದರೆ ಸಾಮಾನುಗಳನ್ನೆಲ್ಲ ಗೋಣಿ ಚೀಲಗಳಲ್ಲಿ ಹೇರಿ ಗಾಡಿಯಲ್ಲಿಟ್ಟು ಸಾಗಿಸಿದವರು ಬೇರೆಯೇ ಒಬ್ಬರು. ನನಗೆ ತುಂಬಾ ದಿಗಿಲಾಯ್ತು. ಆತನನ್ನು ಕೇಳಿದರೆ ಪುಣ್ಯಾತ್ಮ ಉತ್ತರ ಹೇಳಲೇ ಇಲ್ಲ. ಅಂತೂ ನಿಮಗೆ ವಿಷಯ ಗೊತ್ತಿರಬಹುದು ಅಂತ ಸುಮ್ಮನಾದೆವು. ಹೀಗೆಂತ ತಿಳಿದಿದ್ದರೆ ನಮ್ಮ ಹುಡುಗನನ್ನು ಗಾಡಿಯ ಹಿಂದೆಯಾದರೂ ಕಳುಹಿಸಿ ಪತ್ತೆ ಹಚ್ಚುತ್ತಿದ್ದೆ. ನಿಮ್ಮ ಯಜಮಾನರು ಆಮೇಲೆ ಈ ಕಡೆ ಸುಳಿಯಲೇ ಇಲ್ಲ..."

....ಬಳಿಕ ಸಂದೇಹ ಸಲಹೆಗಳು.

"ಇಷ್ಟು ದಿವಸ ನೀವು ಸುಮ್ಮನಿರಬಾರದಾಗಿತ್ತು ಎನಿಸುತ್ತದೆ. ನೀವು ಹೋಗಿ ಆಗಲೆ ಎಂಟು ತಿಂಗಳಾಯಿತು. ತಂಗಿಯ ಮದುವೆ ಮುಗಿದ ಮೇಲೆ ನೀವು ಬರುವಿರೆಂದಿದ್ದೆ. ಬರಲೇ ಇಲ್ಲ. ಪೋಸ್ಟಿನವನೂ ನಿಮ್ಮ ಮನೆಗೆ ಬಂದದ್ದೇ ಇಲ್ಲ. ಅವರ ಆಫೀಸಿಗೇ ಕಾಗದ ಬರೆಯುತ್ತಿದ್ದಿರೋ ಏನೋ. ನನಗಾದರೂ ಸಮಾಚಾರ ತಿಳಿಸಿ ಕಾಗದ ಹಾಕಿದ್ದರೆ? ನೀವು ನನ್ನ ತಂಗಿಗೆ ಸಮಾನ. ನಿಮ್ಮ ಕಷ್ಟ ಬೇರೆ, ನನ್ನ ಕಷ್ಟ ಬೇರೆಯೇ? ನಿಮಗೆ ಬುದ್ಧಿವಾದ ಹೇಳಲು ಸಮರ್ಥಳಲ್ಲ. ಆದರೆ ಸೆರಗೊಡ್ಡಿ ಕೇಳುತ್ತೇನೆ. ದಯವಿಟ್ಟು ನಿಮ್ಮ ತಾಯಿ ಮತ್ತು ತಂದೆಯನ್ನು ಕರಕೊಂಡು ಬೇಗನೆ ಬನ್ನಿ. ತಡ ಮಾಡಬೇಡಿ, ನೀವೆಲ್ಲ ನಮ್ಮ ಮನೆಯಲ್ಲೇ ಬಂದಿಳಿಯಬೇಕು. ಖಂಡಿತ ಬನ್ನಿ."

...ವಿಜಯಳ ಮದುವೆಯ ವಿಷಯ ಓದಿ ಅವರಿಗೆ ಸಂತೋಷವಾಗಿತ್ತು.

"ದೇವರು ಆಕೆಯನ್ನು ಸುಖವಾಗಿಟ್ಟಿರಲಿ."

....ಆ ಕಡೆಯಿಂದಲೂ ಸಂತೋಷದೊಂದು ಸುದ್ದಿ ಇತ್ತು.

"ಕುಸುಮ ತವರು ಮನೆಗೆ ಹೋದಾಗ ನೀವು ಇಲ್ಲೇ ಇದ್ದಿರಿ. ಈಗ ಅವರು ವಾಪಸು ಬಂದಿದಾರೆ. ಒಂದು ತಿಂಗಳಾಯ್ತು. ಅವರ ಯಜಮಾನರಿಗೆ ಒಂದು ಗಂಡು ಮಗುವಿನ ಕಾಣಿಕೆ ಒಪ್ಪಿಸಿದಾರೆ. ಮಗು ತುಂಬಾ ಮುದ್ದಾಗಿದೆ. ಕುಸುಮಾ ನಿಮ್ಮ ವಿಷಯ ಬಹಳ ಕೇಳಿದರು. ಅವರು ಕಾಗದ ಬರೀತೀನೀಂತ ಹೇಳಿದ್ದವರು ತವರು ಮನೆಯಿಂದ ನಿಮಗೆ ಬರೆಯಲೇ ಇಲ್ಲವಂತೆ. ಈಗ ವಿಳಾಸ ಬೇಕು ಎಂದರು. ನಾಳೆ ಅವರಿಗೆ ಕೊಡುತ್ತೇನೆ. ತುಂಬಾ ಒಳ್ಳೆಯವರು. ನಿಮ್ಮ ಸ್ನೇಹಿತೆ ಅಂದ ಮೇಲೆ ಕೇಳಬೇಕೆ? ಓದಿದವಳೂಂತ ಯಾವ ಜಂಭವೂ ಇಲ್ಲ....ಈಗ ಇಲ್ಲಿ ನೀವಿಲ್ಲದೆ ತುಂಬಾ ಬೇಸರ. ನೀವಿದ್ದ ಮನೆಗೆ ಬಿಡಾರ ಬಂದಿರೋದು ಹೈಸ್ಕೂಲು ಮೇಸ್ಟ್ರು. ಮನೆ ತುಂಬಾ ಸಂಸಾರ. ಅಲ್ಲಿ ಹ್ಯಾಗಾದರೂ ಇರ್ತಾರೋಂತ ಆಶ್ಚರ್ಯವಾಗ್ತದೆ. ಮನೆ ಯಜಮಾನಿತಿ ಜಗಳಗಂಟಿ ಏನಲ್ಲ. ಆದರೂ ಹುಡುಗರನ್ನು ಸಮಾಧಾನಪಡಿಸಿ ಸಾಕೋ ಸಾಕಾಗಿ ಸಂಕಟಪಡ್ತಾ ಇರ್ತಾರೆ."

....ಮತ್ತೆ ಮುಕ್ತಾಯ.

"ಈ ಪುರಾಣ ಎಷ್ಟು ಬರೆದರೂ ಮುಗಿಯುವಂಥಾದ್ದಲ್ಲ. ನೀವೊಮ್ಮೆ ಬನ್ನಿ. ನಾಲ್ಕು ದಿವಸ ಹಗಲೂ–ರಾತ್ರೆ ಕೂತು ಹರಟೆ ಹೊಡೆಯೋಣ. ಪುನಃ ಹೇಳ್ತೇನೆ. ನೀವು ನಮ್ಮಲ್ಲೇ ಇಳೀಬೇಕು. ಯಾವತ್ತು ಬರ್ತೀರಿ ಅನ್ನೋದಕ್ಕೆ ಕಾಗದ ಬರೀರಿ."

ಉದ್ದನಾದ ಕಾಗದ. ಕೊನೆಯೇ ಇಲ್ಲದ ಕತೆಯ ಹಾಗೆ. ತನ್ನ ಬದುಕಿನಂಥದೇ.

ಅವಸರವಾಗಿ ಒಮ್ಮೆ ಓದಿ, ನಿಧಾನವಾಗಿ ಮತ್ತೊಮ್ಮೆ ಓದಿ, ನಿಟ್ಟುಸಿರು ಬಿಟ್ಟು ಸುನಂದಾ ಸುಮ್ಮನಾದಳು. ಅಂಚೆಯವನು ಬಂದುದನ್ನು ಆಕೆಯ ತಾಯಿ ಕಂಡಿರಲಿಲ್ಲವೆಂದು, "ಕಾಗದ ಯಾರದೇ" ಎಂಬ ಪ್ರಶ್ನೆಯಿಂದ ಮಗಳು ತಪ್ಪಿಸಿಕೊಂಡಿದ್ದಳು. ಆದರೆ ಕಾಗದ ಹೊತ್ತು ತಂದಿದ್ದ ಬೇಸರದ ದಟ್ಟನೆಯ ಮೋಡಗಳ ಮುಸುಕಿನಿಂದ ಮಾತ್ರ ತಪ್ಪಿಸಿಕೊಳ್ಳುವ ಹಾಗಿರಲಿಲ್ಲ.

ಸ್ನೇಹಿತರ ಮನೆಗೆಂದು ಹೊರ ಹೋಗಿದ್ದ ತಂದೆ ಹಿಂತಿರುಗಿ ಬರುವುದನ್ನೇ ಸುನಂದಾ ಕಾದು ಕುಳಿತಳು.

ಕೃಷ್ಣಪ್ಪನವರು ಬಂದಾಗ ಕಾಗದವನ್ನು ಅವರ ಕೈಗೆ ಆಕೆ ಹಾಕಿದಳು. ಅದನ್ನೋದುತ್ತಿದ್ದ ಅವರ ಮುಖಭಾವವನ್ನು ಪರೀಕ್ಷಿಸಿ ನೋಡುವ ಬಯಕೆಯೂ ಸುನಂದೆಗಿರಲಿಲ್ಲ. ತಂದೆಯನ್ನೂ ಅವರ ಯೋಚನೆಗಳನ್ನೂ ಒತ್ತಟ್ಟಿಗೆ ಬಿಟ್ಟು ಸುನಂದಾ ಮಗುವನ್ನೆತ್ತಿಕೊಂಡು ಹಿತ್ತಲ ಕಡೆಗೆ ಹೋದಳು.

ಹಿಂದಿರುಗಿ ಬಂದಾಗ ತಂದೆ ಓದುವುದು ಮುಗಿದಿತ್ತು. ಆಕೆ ಕಂಡುದು ಚಿಂತಾಕ್ರಾಂತವಾದ ಮುಖಮುದ್ರೆ. ಕೃಷ್ಣಪ್ಪನವರು ಮಗಳನ್ನು ಅಸಹಾಯತೆಯ ದೃಷ್ಟಿಯಿಂದ ನೋಡಿದರು. ವೃದ್ಧಾಪ್ಯದೊಡನೆ ಹೆಚ್ಚು ಸ್ಫುಟವಾಗಿದ್ದ ಮುಖದ ಮೇಲಿನ ಗೆರೆಗಳು ವ್ಯಥೆಯಿಂದ ಮತ್ತಷ್ಟು ಆಳವಾಗಿದ್ದುವು. ಆರಾಮ ಕುರ್ಚಿಯೊಳಗೆ ಆ ದೇಹ ಕುಗ್ಗಿದಂತೆ ತೋರಿತು.

ಸ್ವಲ್ಪ ಹೊತ್ತು ಸುಮ್ಮನಿದ್ದ ಬಳಿಕ, ತಮ್ಮ ಹೆಂಡತಿಗೆ ಕೇಳಿಸುತ್ತಿಲ್ಲವೆಂದು ಖಚಿತಪಡಿಸಿಕೊಂಡು, ಕೃಷ್ಣಪ್ಪ ಪಿಸುದನಿಯಲ್ಲಿ ಅಂದರು:

"ನಾನೊಮ್ಮೆ ಬೆಂಗಳೂರಿಗೆ ಹೋಗ್ಬರ್ತೀನಿ, ಆಗದಾ?"

"ಹೂಂ..."

"ಮನೆ ಖಾಲಿ ಮಾಡಿದ ಅಂದರೆ ಏನರ್ಥ?"

"......"

"ಹೋಟೆಲ್ನಲ್ಲೋ ಸ್ನೇಹಿತರ ಮನೇಲೊ ವಾಸವಾಗಿದಾನೇಂತ ತೋರುತ್ತೆ."

"ಇನ್ನೆಲ್ಲಿರ್ತಾರೆ?"

"ಅವನ ಆಫೀಸಿಗೆ ಶಾಪೆಗಳಂತೂ ಇಲ್ಲ ತಾನೆ?"

"ಇಲ್ಲ."

"ಹಾಗಾದರೆ ವರ್ಗದ ಮಾತೇ ಇಲ್ಲ."

"ಬೆಂಗಳೂರಲ್ಲಿ ಎಲ್ಲಿ ಹುಡುಕ್ತೀಯಾ ಅವರನ್ನು?"

"ಆತನ ಆಫೀಸಿಗೇ ಹೋಗ್ತೀನಿ. ಆಗದಾ?"

"ಹೂಂ...."

ಹೆಚ್ಚೇನನ್ನೂ ಹೇಳಲು ಸುನಂದಾ ಸಮರ್ಥಳಾಗಲಿಲ್ಲ. ಈ ಮೊದಲೇ ಹೋಗಬೇಕಾಗಿತ್ತು ಎನ್ನುವ ಸಂಕಟವೇನೂ ಆಕೆಯನ್ನು ಕೊರೆಯುತ್ತಿರಲಿಲ್ಲ. ದೀರ್ಘ ಕಾಲ ಸುಮ್ಮನಿರುವುದರಿಂದ ಗಂಡನ ಮನಸ್ಸಿನ ಮೇಲೆ ತನಗೆ ಅನುಕೂಲವಾಗಿ ಏನಾದರೂ ಪರಿಣಾಮವಾಗಬಹುದೆಂಬ ಆಸೆಯೊಂದು ಮಸಕು ಮಸಕಾಗಿ ಅವಳಿಗಿತ್ತು. ಅದು ಅಳಿಸಿಯೇ ಹೋಗಿತ್ತು. ಈಗ ನಿರ್ದಿಷ್ಟವಾದೊಂದು ಇಳಿಜಾರು ಹಾದಿಯಲ್ಲಿ ತನ್ನ ಬದುಕಿನ ರಥ ಉರುಳುತ್ತಿದೆ; ಕೆಳಗಿರುವ ಬಂಡೆಕಲ್ಲಿಗೆ ಬಡೆದು ಅದು ಪುಡಿಪುಡಿಯಾಗುವುದೇ ನಿಶ್ಚಯ—ಎಂದು ಸುನಂದೆಗೆ ಈಗ ಭಾಸವಾಗುತ್ತಿತ್ತು. "ಹಣೆಯಲ್ಲಿ ಏನು ಬರೆದಿದೆಯೋ ಹಾಗಾಗಲಿ," ಎನ್ನುವುದೊಂದೇ ಆಕೆಯ ಪಾಲಿಗಿದ್ದ ಸಮಾಧಾನದ ತತ್ವಜ್ಞಾನ. ವಿಧಿಲಿಖಿತ ಎನ್ನುವ ಮಾತಿನಲ್ಲಿ ಆಕೆಗೆ ನಂಬುಗೆ ಇತ್ತೆಂದಲ್ಲ. ನಂಬುಗೆಗಿಂತಲೂ ಹೆಚ್ಚಾಗಿ, ಆ ರೀತಿಯ ಭಾವನೆಯಿಂದ ಒಂದು ತೆರನಾದ ನೆಮ್ಮದಿ ಸಿಗುತ್ತಿತ್ತು.

ಯಾವುದೋ ಗವಿಯ ಆಳದಿಂದ ಬಂದಂತೆ ಕೃಷ್ಣಪ್ಪನವರ ಸ್ವರ ಕೇಳಿಸಿತು:

"ನಾನು ಯಾವತ್ತು ಹೊರಡಲಿ?"

ಪೂರ್ಣಬೋಧೆಯಿಲ್ಲದೆ ಪ್ರಶ್ನೆ ಅಸ್ಪಷ್ಟವಾಗಿ ಕೇಳಿಸಿದವಳಂತೆ ಸುನಂದಾ ಅಂದಳು:

"ಏನಂದೆ, ಅಪ್ಪಾ?"

"ನಾನು ಯಾವತ್ತು ಹೊರಟರಾದೀತೂಂತ?"

"ನಾಳೆ ಮಂಗಳವಾರ."

"ಹೂಂ"

"ಬುಧವಾರ ಹೊರಡ್ತೀನಿ, ಆಗದೆ?"

ಸುನಂದಾ ನಕ್ಕಳು.

"ಮಂಗಳವಾರ ಹೊರಟು ಅಶುಭ ಫಲ ಪ್ರಾಪ್ತಿಯಾಗೋದು ಬೇಡ. ಬುಧವಾರವೇ ಹೊರಡು."

ಕೃಷ್ಣಪ್ಪನವರು ಏನನ್ನೂ ಹೇಳಲಾರದೆ ನೀಳವಾಗಿ ಉಸಿರುಬಿಟ್ಟರು.

ಮಗಳೊಡನೆ ವಿಚಾರವಿನಿಮಯವಾದ ಬಳಿಕ, ಹೆಂಡತಿಯೊಡನೆ ಪ್ರಸ್ತಾಪ. ಆಕೆ ಇತ್ತೀಚೆಗೆ ಎಷ್ಟೋ ಸಾರೆ ಗಂಡನೊಡನೆ ತಮ್ಮ ಹಿರಿಯ ಅಳಿಯನ ವಿಷಯ ಕೇಳಿದ್ದರು. ದೊಡ್ಡ ಮಗಳ ಅದೃಷ್ಟ ಹೀಗಾಯಿತೇ ಎಂದು ಮರುಗಿ ಕಣ್ಣೀರು ಮಿಡಿದಿದ್ದರು. ವಿಜಯಳ ಮದುವೆಯ ಮತ್ತು ಅನಂತರದ ಸಂಭ್ರಮದಲ್ಲಿ, ಅವರ ಮನಸ್ಸಿನೊಳಗಿನ ಕೊರಗು ತನ್ನ ಸರದಿ ಕಾಯುತ್ತ ಮರೆಯಲ್ಲಿ ನಿಂತಿತು. ಅನಂತರವೂ ತಕ್ಷಣವೆ ಮುಖ ತೋರಿಸುವುದು ಅದಕ್ಕೆ ಸಾಧ್ಯವಾಗಲಿಲ್ಲ. ಎಷ್ಟೋ ಕಾಲದ ಬಳಿಕ ಮಕ್ಕಳನ್ನು ಜತೆಯಾಗಿ ಕಾಣುತಿದ್ದ ತಾಯಿ, ತಮ್ಮ ವಯಸ್ಸಾದ ಕಣ್ಣುಗಳು ಅನುಭವಿಸುತಿದ್ದ ಆ ಹಬ್ಬ ಆದಷ್ಟು ಹೆಚ್ಚು ದಿನ ಹಾಗೆಯೇ ಇರಲಿ ಎಂದು ಬಯಸಿದರು. ಆದರೆ ಈಗ ಹಾಗಲ್ಲ. ವಿಜಯ ಗಂಡನ ಮನೆಗೆ ಹೊರಟು ಹೋದ ಮೇಲೆ ಹಿರಿಯ ಮಗಳ ಪ್ರಶ್ನೆ ಮುಖ್ಯವಾಗಿ ಮುಂದೆ ನಿಂತಿತು. ವೃದ್ಧಾಪ್ಯದಲ್ಲಿ ಗಂಡು ಮಕ್ಕಳಿಲ್ಲದೆ ಸಂಕಟಪಡುವುದೇನೋ ಸರಿ. ಮಗಳೂ ಮೊಮ್ಮಗಳೂ ಜತೆಯಲ್ಲೇ ಇದ್ದರೆ ಆ ಸಂಕಟ ಕಡಮೆಯಾಗುವುದೆಂಬುದೂ ನಿಜ. ಆದರೆ ಆ ಮಗಳು ಮನೆಯಲ್ಲೇ ಇರಲಿ ಎಂದು ಪ್ರಾರ್ಥಿಸುವುದಕ್ಕುಂಟೆ? ಅದು ಹೆಣ್ಣು ಹೆತ್ತವರೆಂದಿಗೂ ಮಾಡಲಾಗದಂತಹ ಮಾಡಬಾರದಂತಹ ಯೋಚನೆ...

ಆ ವಿಷಯವಾಗಿ ಸುನಂದೆಯ ತಾಯಿ ಎಷ್ಟೋ ಚಿಂತಿಸಿದರು, ಗೊಣಗಿದರು. ಅಡುಗೆ ಮನೆಯಲ್ಲಿ ಒಬ್ಬರೆ ಇದ್ದಾಗ ಅಸ್ಪಷ್ಟವಾದ ಮಾತುಗಳು ಆಕೆಯ ಬಾಯಿಂದ ಆಗಾಗ್ಗೆ ಹೊರಬೀಳುತ್ತಿದ್ದುವು. "ಏನಮ್ಮಾ ಅದು?" ಎಂದು ಸುನಂದಾ ನಡುಮನೆಯಿಂದ ಕೇಳಿದರೆ, "ಏನಿಲ್ಲ ಕಣೇ. ಇನ್ನು ಅರುಳು ಮರುಳು–ವಯಸ್ಸಾಯ್ತು," ಎನ್ನುತ್ತಿದ್ದರು. ಆದರೆ ಗಂಡ ಒಬ್ಬರೇ ದೊರೆತಾಗ ಮಾತ್ರ, ಹೃದಯದ ದುಗುಡವನ್ನು ಹರಿಯಬಿಡುತ್ತಿದ್ದರು. ಆಗ ಕೃಷ್ಣಪ್ಪನವರು ಕೊಡುತ್ತಿದ್ದ ಭರವಸೆಯೊಂದೇ: "ತಾಳು, ದೇವರು ಬಿಟ್ಟು ಹಾಕಲಾರ. ಎಲ್ಲಾ ಸರಿಹೋಗುತ್ತೆ. ಸ್ವಲ್ಪ ತಾಳು."

ಬೆಂಗಳೂರಿಗೆ ಹೊರಡುವ ನಿರ್ಧಾರ ಮಾಡಿದ ಬಳಿಕ ಕೃಷ್ಣಪ್ಪನವರು ಅಡುಗೆ ಮನೆಯಲ್ಲಿದ್ದ ಒಡತಿಯ ಬಳಿಗೆ ಹೋದರು. ಅಪ್ತಾಲೋಚನೆ ಇದ್ದಾಗಲೆಲ್ಲ ಅಲ್ಲಿಗೆ ಬಂದು ಕುಳಿತುಬಿಡುವುದು ಅವರ ಪದ್ಧತಿ. ಆ ಮಾತುಕತೆಗೆ ಪೀಠಿಕೆಯಾಗಿ ಅವರು ಕೇಳುತ್ತಿದ್ದ ಪ್ರಶ್ನೆಯೊಂದಿತ್ತು: 'ಏನ್ಮಾಡ್ತೀಯಾ?' ಅಂತ. ಆದರೆ ಈ ದಿನ ಅವರಿಂದ ಆ ಪ್ರಶ್ನೆ ಬರಲಿಲ್ಲ. ಕುಳಿತವರು ಒಂದು ಕ್ಷಣ ಮೌನವಾಗಿದ್ದು ಬಳಿಕ ಹೇಳಿದರು:

"ಬುಧವಾರ ಬೆಂಗಳೂರಿಗೆ ಹೋಗ್ಬಿಟ್ಟು ಬರ್ತೀನಿ."

ಅವರ ಪತ್ನಿ ಯಾವ ಪ್ರತಿಕ್ರಿಯೆಯನ್ನೂ ತೋರಲಿಲ್ಲ. ಕೃಷ್ಣಪ್ಪನವರೇ ಅಂದರು:

"ಕೇಳಿಸ್ತೆ?"

ಕ್ಷೀಣವಾದ ಸ್ವರದಿಂದ ಉತ್ತರ ಬಂತು:

"ಹೂಂ."

ಸುನಂದೆಗೆ ರಾಘಮ್ಮ ಕಾಗದ ಬರೆದ ವಿಷಯವನ್ನು, ಬಂದ ಕಾಗದದಲ್ಲಿ ಅಳಿಯನನ್ನು ಕುರಿತು ಇದ್ದ ಮಾಹಿತಿಯನ್ನು, ಹೆಂಡತಿಗೆ ಕೃಷ್ಣಪ್ಪನವರು ತಿಳಿಸಲಿಲ್ಲ.

"ಆತ ಹೆಂಡತಿ ಮಗುವಿನ ಯೋಚನೇನೇ ಮಾಡ್ತಾ ಇಲ್ಲ ಅನಿಸುತ್ತೆ. ವಿಚಿತ್ರ ಮನುಷ್ಯ!" ಎಂದಷ್ಟೆ ಅಂದರು.

"ಯಾಕಾದರೂ ಹೀಗೆ ನಮ್ಮ ಹೊಟ್ಟೆ ಉರಿಸ್ತಾನೋ," ಎಂದು, ಸುನಂದೆಯ ತಾಯಿ ನಿಟ್ಟುಸಿರು ಬಿಟ್ಟರು.

"ವಿಜೀ ಮದುವೆ ಆದ್ಮೇಲೆ ಒಂದೆರಡ್ಸಲ ನಾನು ಬರೆದಾಗ್ಲೂ ಆತ ಉತ್ತರ ಕೊಡ್ಲಿಲ್ಲ."

"ಹೌದು."

"ಈಗ ಅವನನ್ನು ಕಂಡು ಏನು ಹೇಳ್ಲಿ?"

ಆ ಪ್ರಶ್ನೆಗೆ ಉತ್ತರ ಕಠಿನವೆಂದು ಸುನಂದೆಯ ತಾಯಿಗೆ ತೋರಿತು. ತಮಗೇನೂ ಹೊಳೆಯದೆ ಅವರೆಂದರು:

"ಏನ್ಹೇಳ್ತೀರಾ?"

ಒಲೆಯೊಳಗೆ ಉರಿಯುತ್ತಿದ್ದ ಸೌದೆಯನ್ನ ದಿಟ್ಟಿಸುತ್ತ ಕೃಷ್ಣಪ್ಪನವರು ಉತ್ತರ ಕೊಟ್ಟರು:

"ನಾವು ಹೆಣ್ಣು ಹೆತ್ತೋರು. ನಿಷ್ಠುರವಾಗಿ ಮಾತಾಡೋಕೆ ಆಗುತ್ತಾ ಹೇಳು? ಸಂಕಟ ಅನುಭವಿಸ್ಬೇಕಾದೋರು ನಾವು ತಾನೆ? ಆತನನ್ನ ಅಂಗಲಾಚಿ ಕೇಳ್ಕೊಳ್ತೀನಿ—ಹೀಗೆ ಮಾಡ್ಬೇಡ ಮಾರಾಯ, ಶತಾಪರಾಧವಾಗಿದ್ದರೂ ಕ್ಷಮಿಸು ಅಂತ."

ಮನಸ್ಸಾಕ್ಷಿ ಎಂದೂ ಒಪ್ಪದ, ಆದರೆ ಅಸಹಾಯತೆಯ ಫಲವಾಗಿ ಆಡಲೇಬೇಕಾದ, ಮಾತು! ಅದನ್ನು ಉಚ್ಚರಿಸುತ್ತಿದ್ದಂತೆಯೇ ಕೃಷ್ಣಪ್ಪನವರ ಕಂಠ ಗದ್ಗದಿತವಾಯಿತು. ಮೂವತ್ತು ವರ್ಷಗಳಿಗೂ ಮಿಕ್ಕಿ ಬದುಕಿನ ಜತೆಗಾರನಾಗಿದ್ದ ಆ ಜೀವದ ಬೇಗುದಿಯ ನಿಜರೂಪವನ್ನು ತಿಳಿಯುವುದು ಇನ್ನೊಂದು ಜೀವಕ್ಕೆ ಕಷ್ಟವಾಗಿರಲಿಲ್ಲ; ತಮ್ಮದೂ ಅದೇ ಬೇಗುದಿ ಎನ್ನುವಂತೆ ಶೋಕದ ಏದುಸಿರು ಬಿಡುತ್ತ ಸುನಂದೆಯ ತಾಯಿ ಅಂದರು:

"ನಿನ್ನ ವರ್ತನೇನ ದೇವರು ಮೆಚ್ಚಲಾರ—ಅಂತ, ಆ ಪಾಪಿಗೆ ಹೇಳಿ."

ಕೃಷ್ಣಪ್ಪನವರು ಉಗುಳು ನುಂಗಿದರು. ಸಾಧ್ಯವಿದ್ದಿದ್ದರೆ ಅದಕ್ಕಿಂತಲೂ ಕಠಿಣವಾದ ಮಾತನ್ನೆ ಆಡಲು, ಶಪಿಸಿಬರಲು, ಅವರು ಸಿದ್ಧರಿದ್ದರು. ಆದರೆ ಈಗ ಅವೆಲ್ಲ, ತಮ್ಮೊಳಗೆ ತಾವೇ ಅಂದುಕೊಳ್ಳಬೇಕಾದ ಮಾತುಗಳು ಮಾತ್ರ.

ಸುನಂದೆಯ ತಾಯಿ ಬಿಕ್ಕಿಬಿಕ್ಕಿ ಅತ್ತರು: ಉರಿಯುತ್ತಿದ್ದ ಬೆಂಕಿಯ ಮುಂದೆ ಬಿಸಿಯಾದ ಕಂಬನಿ ಒಂದರಮೇಲೊಂದಾಗಿ ತೊಟ್ಟಿಕ್ಕಿತು:

ಕೈಹಿಡಿದವಳ ಸಂಕಟವನ್ನು ಸಹಿಸಲಾರದೆ ಕೃಷ್ಣಪ್ಪನವರು ಅಸಹನೆಯಿಂದ ಅಂದರು;

"ಅಳಬೇಡ, ಯಾಕ್ಸುಮ್ನೆ ಅಳ್ತೀಯಾ? ನೀನು ಅತ್ತರೆ ಅವನಿಗೆ ಬುದ್ಧಿ ಬರುತ್ತೇನು?...ಮಾಡೋ ಕೆಲಸ ನಾವು ಮಾಡ್ಬೇಕು. ಉಳಿದದ್ದೆಲ್ಲ ಭಗವಂತನ ಇಚ್ಛೆ. ಸ್ವಸ್ಥವಾಗಿರು. ಎಲ್ಲಾ ಸರಿಹೋಗುತ್ತೆ."

ಆ ನಂಬಿಕೆಯೊಡನೆ ಅವರ ಮಾತುಕತೆ ಮುಕ್ತಾಯವಾಯಿತು.

...ಬುಧವಾರ ಬಂತು. ಹೊರಡಲನುವಾದ ಕೃಷ್ಣಪ್ಪನವರು ಹೆಂಡತಿಗೂ ಮಗಳಿಗೂ ಹೇಳಿದರು:

"ಬರೋದು ತಡವಾಗುತ್ತೋ ಏನೋ. ಭಾನುವಾರ ಆತನಿಗೆ ರಜಾ. ಅಂತೂ ಆ ರಾತ್ರಿಯೋ ಸೋಮವಾರವೋ ಅಲ್ಲಿಂದ ಹೊರಡ್ತೀನಿ."

"ಕಾಗದ ಬರೀತೀಯಾ?" ಎಂದು ಸುನಂದಾ ಕೇಳಿದಳು.

ಅಂತಹ ಅಭ್ಯಾಸವೇ ಸಾಮಾನ್ಯವಾಗಿ ಇಲ್ಲದ ಕೃಷ್ಣಪ್ಪನವರು ಉತ್ತರಕ್ಕಾಗಿ ಅರೆಕ್ಷಣ ತಡವರಿಸಿ ಅಂದರು:

"ತುರ್ತಾಗಿ ತಿಳಿಸ್ಬೇಕಾದ್ದು ಏನಾದರೂ ಇದ್ದರೆ ಬರೀತೀನಿ."

"ನಾನು ಬರ್ಬೇಕಾಗುತ್ತಾ?"

"ಪರಿಸ್ಥಿತಿ ನೋಡ್ಕೊಂಡು ಬರೀತೀನಿ ಸುನಂದಾ."

ಸುನಂದೆಯ ತಾಯಿ ಏನನ್ನೂ ಹೇಳಲಾರದೆ ಸುಮ್ಮನೆ ನಿಂತರು.

ಕೃಷ್ಣಪ್ಪನವರು ಹಳೆಯದಾಗಿದ್ದ ತಮ್ಮ ಚಪ್ಪಲಿ ಮೆಟ್ಟಿಕೊಂಡು, ಧೋತರದ ಅಂಚನ್ನು ಬಲಗೈಯಿಂದೆತ್ತಿ, ಎಡಗೈಯಲ್ಲಿ ಚೀಲಹಿಡಿದು, ರೈಲು ನಿಲ್ದಾಣದ ಕಡೆಗೆ ನಡೆದರು.

೬

ಕೃಷ್ಣಪ್ಪನವರು ಬೆಂಗಳೂರು ಸೇರಿದಾಗ ಸೂರ್ಯ ನಡುನೆತ್ತಿಯನ್ನು ದಾಟಿ ಪಕ್ಕಕ್ಕೆ ಸರಿದಿದ್ದ. ತಾಲ್ಲೋಕು ಕಚೇರಿಯ ಗುಮಾಸ್ತೆಯಾಗಿ ಹತ್ತೆಂಟು ಊರು

ತಿರುಗಿದ್ದ ಅವರಿಗೆ, ಸಂಸ್ಥಾನದ ಆಡಳಿತ ಕೇಂದ್ರವಾದ ಬೆಂಗಳೂರು ಹಳೆಯ ಪರಿಚಯದ ಜಾಗ. ಅದು ಬೇಸರ ಬರಿಸುವಷ್ಟು ಹಳೆಯ ಪರಿಚಯ.

ಆದರೆ ಈ ಸಾರೆಯಷ್ಟು, ಅಸ್ತವ್ಯಸ್ತ ಮನಸ್ಸಿನಿಂದ ಹಿಂದೆಂದೂ ಅವರು ಬೆಂಗಳೂರಿಗೆ ಬಂದಿರಲಿಲ್ಲ. ಮೊದಲ ನೋಟಕ್ಕೆ ಗೊಂದಲಪುರವಾಗಿ ಕಾಣುತಿದ್ದ ಬೆಂಗಳೂರಿನ ಹಿನ್ನೆಲೆಯಲ್ಲಿ, ಈಗ ಅವರ ತಲೆಯೊಳಗಿನ ಗೊಂದಲವೂ ಹೆಚ್ಚಿತು.

ಕಳೆದ ನಾಲ್ಕು ವರ್ಷಗಳಲ್ಲಿ ಅವರಿಗೆ ಬೆಂಗಳೂರು, ಒಂದು ರೀತಿಯಲ್ಲಿ ಆಪ್ತವಾಗಿತ್ತು. ಅವರ ಪಾಲಿಗೆ ಆ ಮಹಾ ನಗರ ಬರಿಯ ಗೆಳೆಯರಿದ್ದ ಊರು ಮಾತ್ರವಾಗಿರಲಿಲ್ಲ. ಅಲ್ಲಿತ್ತು ಅಳಿಯನ ಮನೆ—ತನ್ನ ಮಗಳ ಗಂಡನ ಮನೆ. ಆದರೆ ಈಗ ಆ ಊರಲ್ಲಿ ಯಾರೂ ಇಲ್ಲ. ಅಳಿಯ ಇನ್ನೂ ಅಲ್ಲೇ ಇದ್ದರೂ ಆ ನಗರವನ್ನು ಕುರಿತಾದ ಆತ್ಮೀಯತೆಗೆ ಕೃಷ್ಣಪ್ಪನವರ ಹೃದಯದಲ್ಲಿ ಎಡೆಯೇ ಇರಲಿಲ್ಲ.

ಅಭ್ಯಾಸ ಬಲದಿಂದಲೆ ಕೃಷ್ಣಪ್ಪನವರು ಬೀದಿಯುದ್ದಕ್ಕೂ ನಡೆದು, ನೀರಿಲ್ಲದ ಧರ್ಮಾಂಬುಧಿ ಕೆರೆಗಿಳಿದು, ಅದನ್ನು ಹಾದು, ಮೆಜೆಸ್ಟಿಕ್ ವೃತ್ತವನ್ನು ತಲಪಿದರು. ಅಲ್ಲಿ ನಿಂತು, 'ಇಲ್ಲಿ ತನಕ ಬಂದುದಾಯ್ತು, ಇನ್ನೆಲ್ಲಿಗೆ?' ಎಂದು ತಮ್ಮನ್ನೆ ಕೇಳಿದರು. ಈಗಲೇ ನೇರವಾಗಿ ಪುಟ್ಟಣ್ಣನ ಆಫೀಸಿಗೆ ಹೋಗುವುದೇ ಸರಿ ಎಂದು ಒಮ್ಮೆ ಯೋಚಿಸಿದರು. ಬಳಿಕ, ಆತುರಪಡುವುದು ಸರಿಯಲ್ಲ, ಈ ಹೊತ್ತು ಸುಮ್ಮನಿದ್ದು ನಾಳೆಯ ದಿನ ಆತನ ಭೇಟಿ ಮಾಡಿದರಾಯಿತು, ಎಂದು ಹಿಂದಿನ ಯೋಚನೆಯನ್ನು ಬದಿಗೆ ಸರಿಸಿದರು.

ಒಂದಲ್ಲ ಒಂದು ಕಾಲದಲ್ಲಿ ಸಹೋದ್ಯೋಗಿಗಳಾಗಿದ್ದ ಒಬ್ಬಿಬ್ಬರು ಗೆಳೆಯರೂ ಬೆಂಗಳೂರಲ್ಲಿದ್ದರು. ರಾಮಕೃಷ್ಣಯ್ಯನ ಮನೆಯಲ್ಲೆ ಇಳಿದುಕೊಂಡರಾಯಿತೆಂದು ತೀರ್ಮಾನಿಸಿದರು. ಅದಕ್ಕೆ ಕಾರಣವಿತ್ತು. ಅವರಿಬ್ಬರ ವಯಸ್ಸಿನಲ್ಲಿ ಎರಡು ಮೂರು ವರ್ಷಗಳ ಅಂತರವಿದ್ದರೂ ಆ ಇಬ್ಬರೂ ನೌಕರಿಯಿಂದ ನಿವೃತ್ತರಾದುದು ಒಂದೇ ವರ್ಷ. ಕೃಷ್ಣಪ್ಪನವರ ಸಂಸಾರಕ್ಕಿಂತಲೂ ದೊಡ್ಡದು ರಾಮಕೃಷ್ಣಯ್ಯನವರದು. ದೊಡ್ಡ ಸಂಸಾರದ ಸುಖದುಃಖಗಳ ಸವಿಯುಂಡು ರಾಮಕೃಷ್ಣಯ್ಯ ಅನುಭವಿಯಾಗಿದ್ದರು. ತಮ್ಮ ಅಥವಾ ಇನ್ನೊಬ್ಬರ ಕಷ್ಟವನ್ನು ಕಂಡು ಸುಮ್ಮನಿರುವ ಪ್ರವೃತ್ತಿ ಅವರದಲ್ಲ. ಎಂದೆಂದೂ ಬರಿದಾಗದಂತಹ ಸಹಾನುಭೂತಿಯ ಆಗರ ಅವರ ಹೃದಯ. ಹಿಂದೆ ಸಾಮಾನ್ಯವಾಗಿ ಕೃಷ್ಣಪ್ಪನವರು ತಮಗಿಂತ ಚಿಕ್ಕವನೊಬ್ಬನ ಮನೆಯಲ್ಲಿ ಇಳಿಯುತ್ತಿದ್ದರೂ ಈ ಸಾರೆ ರಾಮಕೃಷ್ಣಯ್ಯನ ಸಾಮೀಪ್ಯವನ್ನೇ ಬಯಸಿದರು.

ಒಂದಾಣೆಯ ಮೋಟಾರು ಪ್ರವಾಸ ಶೇಷಾದ್ರಿಪುರಕ್ಕೆ ಅವರನ್ನು ತಂದು ಬಿಟ್ಟಿತು. ಅಲ್ಲಿ ಐದು ನಿಮಿಷ ಕಾಲ್ನಡಿಗೆ. ರಾಮಕೃಷ್ಣಯ್ಯ ಮನೆಯಲ್ಲಿರಲಿಲ್ಲ. "ಬನ್ನಿ, ಕೂತ್ಕೊಳ್ಳಿ. ಅಪರೂಪವಾಗಿ ಬಂದಿರಿ. ಮನೇಲಿ ಎಲ್ಲರೂ ಸೌಖ್ಯವಾ? ವಿಜಯಾ ಮದುವೆ ಚೆನ್ನಾಗಿಯೇ ಆಯ್ತಂತೆ"....ಎಂದೆಲ್ಲ ರಾಮಕೃಷ್ಣಯ್ಯನವರ

ಹೆಂಡತಿ ಮಾತಿಗೆ ಆರಂಭಿಸಿದರು.

ಸ್ನೇಹಿತ ಊರಲ್ಲೇ ಇರುವನೆಂಬುದು ಖಚಿತವಾದ ಬಳಿಕ ಕೃಷ್ಣಪ್ಪನವರು ಜಗಲಿಯ ಮೇಲಿದ್ದ ಮಂಚದ ಮೇಲೆ ಕುಳಿತು, ಪ್ರಶ್ನೆಗಳಿಗೆ ಉತ್ತರ ಕೊಟ್ಟರು.

"ಸ್ಟೇಷನ್ನಿಂದ ಇಲ್ಲಿಗೇ ಬಂದೆ—ಅಂದಿರಾ? ಹಾಗಾದರೆ ಸುನಂದೆಯನ್ನು ನೀವು ನೋಡೇ ಇಲ್ಲ—ಅಲ್ಲವೆ?"

ಸುನಂದಾ ಇಲ್ಲೇ ಗಂಡನ ಮನೆಯಲ್ಲೇ ಇರಬೇಕೆಂದು ಆಕೆ ಭಾವಿಸಿದ್ದಳು.

"ಸುನಂದಾ ಈಗ ತವರ್ಮನೇಲೇ ಇದಾಳೆ."

"ಹಾಗೇನು? ಓ! ನನಗೆ ಗೊತ್ತೇ ಇರ್ಲಿಲ್ಲ. ಎಷ್ಟು ತಿಂಗಳು?"

ಕೃಷ್ಣಪ್ಪನವರ ಮುಖದ ಮೇಲೆ ಕರೀಮೋಡ ಕವಿಯಿತು. ಅವರು ನುಂಗಿದರು.

"ಅಂಥಾದೇನೂ ಇಲ್ಲ. ತಂಗಿಯ ಮದುವೆಗೇಂತ ಬಂದೋಳು ಅಲ್ಲಿಯೇ ನಿಂತಿದಾಳೆ."

ಕೇಳುತ್ತಿದ್ದಾಕೆಯ ಹುಬ್ಬುಗಳು ಮೇಲಕ್ಕೆ ಚಲಿಸಿ ಮುಖ ಪ್ರಶ್ನಾರ್ಥಕ ಚಿಹ್ನೆಯಾಯಿತು. ವಿಷಯವನ್ನು ಬಚ್ಚಿಡುವುದರಲ್ಲಿ ಅರ್ಥವಿಲ್ಲವೆನ್ನುತ್ತ ಕೃಷ್ಣಪ್ಪನವರು ಹೇಳಿದರು:

"ಏನೋ ವಿರಸ. ಇದ್ದೇ ಇರುತ್ತಲ್ಲ. ಅಳಿಯನನ್ನ ನೋಡ್ಕೊಂಡು ಮಾತಾಡಿಸ್ಕೊಂಡು ಹೋಗೋಣಾಂತ್ಲೇ ಬಂದೆ."

ಇದು ತನ್ನೊಬ್ಬಳದೇ ವಿವೇಚನೆಗೆ ಮೀರಿದ ವಿಷಯವೆಂದು ಮನೆಯೊಡತಿ ಮರುಮಾತಾಡಲಿಲ್ಲ. ಬೇಸರವನ್ನು ತನ್ನೊಳಗೇ ಇರಿಸಿಕೊಂಡು ಅವರು ಒಳ ಹೋದರು.

ಕೃಷ್ಣಪ್ಪನವರ ಆಗಮನದಿಂದ ಮನೆ ಹುಡುಗರ ಆಟಕ್ಕೆ ಭಂಗ ಬಂದಿತ್ತು. ಆದರೆ, ಮತ್ತೆರಡು ನಿಮಿಷಗಳಲ್ಲಿ, ಮನೆಗೆ ಬಂದ ಮುದಕನನ್ನು ಮರೆತು ಹುಡುಗರು ತಮ್ಮ ಆಟಗಳಲ್ಲಿ ತಲ್ಲೀನರಾದರು.

ಮನೆಯಾಕೆ ಪುನಃ ಹೊರಬಂದು ಕೇಳಿದರು;

"ಈಗ ಊಟ ಮಾಡ್ತೀರಾ? ತಿಂಡಿ ತಗೋತೀರಾ?"

"ನನಗೇನೂ ಹಸಿವಿಲ್ಲ."

"ಹಾಗಾದರೆ ಒಂದಿಷ್ಟು ಕಾಫಿ ಮಾಡ್ತೀನಿ. ಕತ್ತಲಾಗೋದರೊಳಗೆ ಅವರು ಬಂದ್ಬಿಡ್ತಾರೆ. ಊಟಕ್ಕೆ ಬೇರೆಲ್ಲಿಗೂ ಹೋಗ್ಬಾರದು."

ಸಂಕಟಕ್ಕೊಳಗಾಗಿದ್ದ ಸುನಂದೆಯ ತಂದೆಯ ನೋವನ್ನು ಉಪಚಾರದ ಮಾತುಗಳಿಂದ ಸ್ವಲ್ಪಮಟ್ಟಿಗಾದರೂ ಶಮನ ಮಾಡಲು ಹಲವು ಮಕ್ಕಳ ಆ ತಾಯಿ ಯತ್ನಿಸಿದಂತಿತ್ತು.

ಕೃಷ್ಣಪ್ಪನವರು ಆಕ್ಷೇಪಿಸಲಿಲ್ಲ. ಮಂಚದ ಮೇಲೆ ಮೈ ನೀಡಿಕೊಂಡು ವಿಶ್ರಾಂತಿ ಪಡೆದರು. ಕಾಫಿ ತಿಂಡಿಯ ಅನಂತರ ಸ್ವಲ್ಪ ಜೊಂಪು ಹತ್ತಿತ್ತು. ಸದ್ದು

ಗದ್ದಲ ಒಂದನ್ನೂ ಲೆಕ್ಕಿಸದೆ ನಿದ್ದೆ ಹೋಗುವ ಅವರ ಅಭ್ಯಾಸ ಅಸಾಧಾರಣ ವಾದದ್ದು...ಆಯಾಸದ ಪರಿಣಾಮವಾದ ನಿದ್ದೆ ಮುಗಿದು ಎಚ್ಚರವಾದಾಗ ಮುಚ್ಚಂಜೆ ಯಾಗಿತ್ತು. ರಾಮಕೃಷ್ಣಯ್ಯ ಇನ್ನೂ ಮನೆಗೆ ಬಂದಿರಲಿಲ್ಲ.

ಅವರು ಎಚ್ಚೆತ್ತುದನ್ನು ಗಮನಿಸಿ ಹೊರಬಂದ ಮನೆಯೊಡತಿಯನ್ನು ನೋಡಿ ಕೃಷ್ಣಪ್ಪ ಅಂದರು:

"ನಾನು ಸ್ವಲ್ಪ ತಿರುಗಾಡ್ಕೊಂಡು ಬರ್ತೀನಿ. ಚೀಲ ಇಲ್ಲೇ ಇರ್ಲಿ. ಆಗದೆ?"

"ಹೋಗ್ಬಿಟ್ಟು ಬನ್ನಿ. ಇನ್ನೇನು, ಅವರು ಬರೋ ಹೊತ್ತೂ ಆಯ್ತು," ಎಂದರು ರಾಮಕೃಷ್ಣಯ್ಯನ ಹೆಂಡತಿ, ಬೀದಿಯ ಕಡೆ ನೋಡುತ್ತ.

ನಿದ್ದೆ ಮುಗಿದು ಕಣ್ಣು ತೆರೆದಾಗಲೆ, ತಾವೊಮ್ಮೆ ರಾಧಮ್ಮನನ್ನು ಕಂಡು ಬರ ಬೇಕೆಂಬ ಅಪೇಕ್ಷೆ ಅವರ ಮನಸ್ಸಿನಲ್ಲಿ ಸ್ಫುಟವಾಗಿತ್ತು.

...ಎರಡು ಬೇರೆ ಬೇರೆ ಬಸ್ಸುಗಳನ್ನೇರಿ ಇಳಿದು, ಆ ಬಡಾವಣೆಗೆ ನಡೆದು ಕೃಷ್ಣಪ್ಪನವರು ತಮ್ಮ ಅಳಿಯ ಹಿಂದೆ ವಾಸವಾಗಿದ್ದ ಮನೆಯನ್ನು ತಲಪಿದರು.

ಬಾಗಿಲು ತಟ್ಟಿ, "ರಾಮಯ್ನೋರೇ" ಎಂದು ಕರೆದುದಾಯಿತು.

"ಯಾರು?" ಎನ್ನುತ್ತ ರಾಮಯ್ಯ ಕದ ತೆರೆದರು. ವಿದ್ಯುದ್ದೀಪದ ಮಂದ ಪ್ರಕಾಶ ಆ ಮನೆಯೊಳಗೆ ನೆರಳು-ಬೆಳಕುಗಳ ಚೆಲ್ಲಾಟ ನಡೆಸಿತ್ತು. ಬಂದ ವ್ಯಕ್ತಿಯ ಪರಿಚಯವಾಗದೆ ಇದ್ದರೂ "ಬನ್ನಿ" ಎಂದರು ರಾಮಯ್ಯ.

ಗಂಡನ ಹಿಂದೆಯೆ ಬಂದು ಹೊರನೋಡಿದ ರಾಧಮ್ಮ, ಕೃಷ್ಣಪ್ಪನವರ ಗುರುತು ಹಿಡಿದು ಸಂತೋಷದ ಧ್ವನಿಯಲ್ಲಿ ಅಂದರು:

"ಬನ್ನಿ...[ಸುನಂದೆಯ ತಂದೆ ಕಣ್ರೀ]...!"

"ದಯಮಾಡಿಸಿ, ದಯಮಾಡಿಸಿ," ಎಂದರು ರಾಮಯ್ಯ ಈಗ ಲವಲವಿಕೆಯಿಂದ ತುಂಬಿದ ಸ್ವರದಲ್ಲಿ. "ಮೊದಲು ಗುರುತು ಸಿಗಲಿಲ್ಲ. ಮುಖತಃ ಮಾತನಾಡಿ ಪರಿಚಯವಿಲ್ಲ ನೋಡಿ. ಹೀಗಾಗಿ..." ಎಂದೂ ಹೇಳಿದರು, ವಿವರಣೆ ಕೊಡುವ ಧ್ವನಿಯಲ್ಲಿ.

ಕೃಷ್ಣಪ್ಪನವರು ಒಳಹೊಕ್ಕು, ಮನೆಯವರು ಹಾಸಿದ ಚಾಪೆಯ ಮೇಲೆ ಕುಳಿತರು. ಓದುತ್ತ ಬರೆಯುತ್ತ ಕುಳಿತಿದ್ದ ಹುಡುಗರಿಬ್ಬರು ತಲೆಯೆತ್ತಿ ಬಂದವರನ್ನು ನೋಡಿದರು. 'ರಾಧಮ್ಮನ ಮಕ್ಕಳಿರಬೇಕು' ಎಂದುಕೊಂಡರು ಕೃಷ್ಣಪ್ಪ. ದೃಷ್ಟಿ ಬಾಗಿಲಿನಾಚೆಗೆ ಇರುಳನ್ನು ಭೇದಿಸುತ್ತ ಪಕ್ಕದಲ್ಲಿದ್ದ ಮನೆಯತ್ತ ಹರಿಯಿತು. ಸುನಂದೆ ಪುಟ್ಟಣ್ಣನೊಡನೆ ಸಂಸಾರ ಮಾಡಿದ ಮನೆ. ಅಲ್ಲಿಂದ ನಾಲ್ಕಾರು ಹುಡುಗರ ಸ್ವರಗಳು ಕೇಳಿಸುತ್ತಿದ್ದುವು: ಒಬ್ಬ ಮಗ್ಗಿ ಗಟ್ಟಿ ಮಾಡುತ್ತಿದ್ದ. ಇನ್ನೊಬ್ಬ ಇತಿಹಾಸವನ್ನು. ಇಬ್ಬರು ಜಗಳವಾಡುತಿದ್ದರು...

"ಸುನಂದಾನ ಕರಕೊಂಡು ಬರ್ಲಿಲ್ಲಾ?" ಎಂದು ಕೇಳಿದರು ರಾಧಮ್ಮ.

"ಇಲ್ಲ. ಮೊದಲು ನಾನೊಬ್ನೇ ನೋಡ್ಕೊಂಡು ಹೋಗೋಣಾಂತ-ಬಂದೆ."

"ನನ್ನ ಕಾಗದ ತಲಪ್ತೆ?"

"ಹೂಂ. ಅದು ಬಂದ ಮೇಲೆಯೇ ಹೊರಡೋ ತೀರ್ಮಾನ ಮಾಡ್ದೆ."

ರಾಮಯ್ಯನವರನ್ನು ರಾಧಮ್ಮ ಒಳಕ್ಕೆ ಕರೆದರು.

ಅಲ್ಲಿಂದ ಹೊರ ಬರುತ್ತ ರಾಮಯ್ಯ ಹೇಳಿದರು:

"ತಾವು ನಮ್ಮನೇಲೇ ಉಳಕೋಬೇಕು. ಬಡವರ ಮನೆ ಆತಿಥ್ಯ..."

ಈ ಪ್ರೇಮಾದರವೆಲ್ಲ ಮುಳ್ಳು ಮೊನೆಯಾಗಿತ್ತು ಕೃಷ್ಣಪ್ಪನವರ ಪಾಲಿಗೆ. ತಮ್ಮನ್ನು ಕುಗ್ಗಿಸುತ್ತಿದ್ದ ಹೃದಯದ ಭಾರವೊಂದಿಲ್ಲದೆ ಇದ್ದಿದ್ದರೆ, ಆತ್ಮೀಯತೆಯ ನುಡಿಗಳನ್ನು ಕೇಳಿದಾಗ ಅವರಿಗೆ ಹಾಗೆ ಸಂಕಟವಾಗುತ್ತಿರಲಿಲ್ಲ.

ರಾಧಮ್ಮನ ಅಪೇಕ್ಷೆಯನ್ನು ಮಾತಿನ ರೂಪದಲ್ಲಿ ವ್ಯಕ್ತಪಡಿಸಿದ ರಾಮಯ್ಯನವರ ಆಹ್ವಾನ ಕೇಳುತ್ತ, ಕೃಷ್ಣಪ್ಪನವರ ಕಣ್ಣು ಮಂಜಾಯಿತು.

"ದಯವಿಟ್ಟು ಕ್ಷಮಿಸ್ಬೇಕು. ನನ್ನ ಸ್ನೇಹಿತನೊಬ್ಬನ ಮನೇಲಿ ಆಗಲೆ ಚೀಲ ಇಟ್ಟು ಬಂದಿದೀನಿ. ಅಲ್ಲಿಯೇ ಇರ್ತೀನಿ. ನೀವೇನೂ ತಿಳ್ಕೋಬಾರದು."

ಬಾಗಿಲ ಬಳಿ ನಿಂತು ರಾಧಮ್ಮನೆಂದರು:

"ಹಾಗಾದರೆ ಊಟಾನಾದರೂ ಇಲ್ಲೇ ಮಾಡಿ."

"ಇಲ್ಲ ತಾಯಿ. ಆ ಮನೇಲಿ ಆಗ್ಲೆ ಅಡುಗೆ ಮಾಡ್ಬಿಟ್ಟಿದಾರೆ. ನಾನು ಇನ್ನೂ ಎರಡು ಮೂರು ದಿವಸ ಇರ್ತೀನಿ. ಊಟಕ್ಕೆ ಇನ್ನೊಮ್ಮೆ ಬರ್ತೀನಿ."

ಆ ಮಾತಿನಿಂದ ದಂಪತಿಗಳಿಗೆ ಸ್ವಲ್ಪ ಸಮಾಧಾನವಾದಂತಾಯಿತು.

...ಕೇಳಿ ತಿಳಿದುಕೊಂಡುದು, ರಾಧಮ್ಮ ಕಾಗದದಲ್ಲಿ ಬರೆದಿದ್ದ ವಿಷಯಗಳನ್ನೇ. ಮಾತನಾಡಿದವರು ರಾಧಮ್ಮನೇ. ರಾಮಯ್ಯ ನಡು ನಡುವೆ ತಲೆಯಾಡಿಸುತ್ತ ರಾಧಮ್ಮ "ಅಲ್ವೇನ್ರಿ?" ಎಂದು ತಮ್ಮೆಡೆಗೆ ತಿರುಗಿದಾಗ "ಹೌದೆ"ನ್ನುತ್ತಾ ಮಾತುಕತೆಯಲ್ಲಿ ಭಾಗಿಯಾದರು. "ರೂಮಿಗೆ ಹೋಗಿ ಓದ್ಕೊಳ್ರೋ" ಎಂದು ತಾಯಿ ಸೂಚಿಸಿದುದರಿಂದ ಹುಡುಗರು ಮೊದಲೆ ಎದ್ದು ಬಿಟ್ಟಿದ್ದರು.

"ಈಗ ನಾನೇನು ಮಾಡ್ಬೇಕೂಂತ ಹೇಳ್ತೀರಿ ತಾಯಿ?"

ಕೃಷ್ಣಪ್ಪನವರು ಕೇಳಿದ ಪ್ರಶ್ನೆಗೆ ರಾಧಮ್ಮನವರಲ್ಲಿ ಉತ್ತರ ಸಿದ್ಧವಿರಲಿಲ್ಲ. ಅವರು ತಮ್ಮ ಗಂಡನ ಮುಖ ನೋಡಿದರು. ಸುಮ್ಮನೆ ಪಿಳಿಪಿಳಿ ಕಣ್ಣು ಬಿಟ್ಟರು ರಾಮಯ್ಯ.

ಉತ್ತರ ಬರದೆ ಇದ್ದುದನ್ನು ಕಂಡು ಕೃಷ್ಣಪ್ಪನವರು ಒಂದೆರಡು ಕ್ಷಣ ಸುಮ್ಮನಿದ್ದು ಮತ್ತೆ ಅಂದರು:

"ನಾನೊಂದು ಪ್ರಶ್ನೆ ಕೇಳ್ತೀನಿ. ನನ್ನ ಮಗಳ ಹಿತಕ್ಕಾಗಿಯೇ ನಾನು ಹೀಗೆ ಕೇಳೋದು. ಯಾವ ಸಂಕೋಚವೂ ಇಲ್ದೆ ನೀವು ಉತ್ತರ ಕೊಡ್ಬೇಕು. ನನ್ನ ಅಳಿಯನಿಗೆ ಬೇಸರ ಬರೋ ರೀತೀಲಿ ಸುನಂದಾ ನಡ್ಕೊಳ್ತಾ ಇದ್ಲೆ?"

"ಛೆ! ಛೆ!" ಎಂದರು ರಾಧಮ್ಮ. ನೊಂದ ಧ್ವನಿಯಲ್ಲಿ ಈ ಆರೋಪ ಸರಿಯಲ್ಲ

ವೆಂಬ ಆಕ್ರೋಶವೂ ಬೆರೆತಿತ್ತು. ಮುಂದುವರಿಯುತ್ತ ಆಕೆಯೆಂದರು. "ನೀವು ಆ ರೀತಿ ಖಂಡಿತ ಭಾವಿಸ್ಬಾರ್ದು. ಸುನಂದೆಯಂಥ ಹೆಂಡತಿ ಸಿಗಬೇಕಾದರೆ ಜನ್ಮಾಂತರದ ಪುಣ್ಯ ಬೇಕು. ನಾನು ನೋಡಿಲ್ವೆ? ಆತ ಆಯೋಗ್ಯ ಮನುಷ್ಯ. ಅದೇನು ಬಂತೋ ಕಾಲ. ಹ್ಯಾಗಿದ್ದೋನು ಹ್ಯಾಗಾಗಿ ಹೋದ!"

ಗೆಳತಿಯನ್ನು ಸಮರ್ಥಿಸುವ ಆತುರದಲ್ಲಿ ಆಕೆಯ ಗಂಡನನ್ನು ಕುರಿತು ಸಂಬೋಧನೆ ಅನಿರೀಕ್ಷಿತವಾಗಿ ಏಕವಚನಕ್ಕಿಳಿದಿತ್ತು. ಕೃಷ್ಣಪ್ಪನವರಿಗೆ ಅದರಿಂದ ಬೇಸರವಾಗಲಿಲ್ಲ. ರಾಮಯ್ಯನವರೂ ಹೆಂಡತಿಯ ಉದ್ವೇಗವನ್ನು ಟೀಕಿಸುವ ಮುಖಭಾವ ತೋರಲಿಲ್ಲ. ಆದರೂ ರಾಧಮ್ಮನೇ ತುಟಿಮೀರಿದ ಮಾತಿಗಾಗಿ ತವಕಗೊಂಡರು.

"ನಿಮ್ಮ ಅಳಿಯನ ವಿಷಯದಲ್ಲಿ ಚಾಡಿ ಹೇಳಿದೇಂತ ದಯವಿಟ್ಟು ಭಾವಿಸ್ಬೇಡಿ. ಆತ ಸುಧಾರಿಸ್ಕೊಂಡು ಸುನಂದಾ ಸುಖವಾಗಿರ್ಬೇಕು ಅನ್ನೋದಷ್ಟೇ ನನ್ನ ಅಪೇಕ್ಷೆ," ಎಂದರು.

ಕೃಷ್ಣಪ್ಪನವರು ಹಾಗೆ ಭಾವಿಸಿದ್ದರೆ ತಾನೆ?

"ಇಲ್ಲವಮ್ಮ. ತಪ್ಪು ತಿಳಕೊಂಡೇನೇ ನಾನು? ನನ್ನ ಮಗಳ ವಿಷಯದಲ್ಲಿ ನನಗೇನೂ ಅಪನಂಬಿಕೆ ಇಲ್ಲ. ಆದರೆ ನಿಮ್ಮಂಥವರ ಬಾಯಿಂದಲೇ ಅಂಥ ಮಾತು ಕೇಳಿದಾಗ ಹೆಚ್ಚು ಸಮಾಧಾನವಾಗುತ್ತೆ." -

"ಯಾರ ಕೈಲಾದರೂ ನಿಮ್ಮ ಅಳಿಯನಿಗೆ ಹೇಳಿಸೋಕಾಗಲ್ವೆ?" ಎಂದು ರಾಮಯ್ಯ ಕೇಳಿದರು.

"ಆತನ ಕಡೇಲಿ ಹಿರಿಯರು ಅನ್ನೋರಿಲ್ಲ. ಯಾರ ಮಾತನ್ನೂ ಆತ ಕೇಳೋ ಹಾಗೂ ಕಾಣೆ. ಆದರೂ ಆತನ ಸ್ನೇಹಿತರು ಯಾರು ಎತ್ತ ಅಂತ ವಿಚಾರಿಸಿ ನೋಡ್ತೀನಿ. ಮಾಡೋ ಪ್ರಯತ್ನ ಮನುಷ್ಯ ಮಾಡ್ಬೇಕು. ಉಳಿದದ್ದು ದೇವರ ಚಿತ್ತ," ಎಂದರು ಕೃಷ್ಣಪ್ಪ.

ಸುನಂದೆಯ ಗಂಡ ಬೇರೆ ಊರಿಗೆ ಹೋಗಿರಲಾರ–ಎಂಬ ತಿಳಿವಳಿಕೆಯಿಂದ ರಾಧಮ್ಮನಿಗೆ ಸ್ವಲ್ಪ ಸಮಾಧಾನವಾಯಿತು.

"ಸಾಧ್ಯವಾದರೆ ನಿಮ್ಮ ಅಳಿಯನನ್ನ ಇಲ್ಲಿಗೂ ಒಮ್ಮೆ ಕರಕೊಂಡ್ಬನ್ನಿ," ಎಂದರು ಆಕೆ.

ಅದು ಸಾಧ್ಯವೆಂಬ ಭ್ರಮೆ ಕೃಷ್ಣಪ್ಪನವರಿಗೆ ಇರಲಿಲ್ಲ. ಆದರೂ ಉತ್ತರವಾಗಿ, "ಪ್ರಯತ್ನ ಮಾಡ್ತೀನಿ," ಅಂದರು.

ರಾಧಮ್ಮ ಒಂದು ಲೋಟ ಹಾಲು ತಂದಿಟ್ಟರು. ಆ ಮನೆಯ ಮಟ್ಟಕ್ಕೆ ಅನುಗುಣವಾದ ಹಾಲು. ರಾತ್ರೆ ಹುಡುಗರು ಮಕ್ಕಳು ಕುಡಿಯಬೇಕಾದುದು ಅತಿಥಿಗೆ ದೊರೆತಿತ್ತು. ನಿರಾಕರಿಸಲಾಗದೆ ಕೃಷ್ಣಪ್ಪ ಅದನ್ನು ಕುಡಿದರು.

ರಾಮಯ್ಯನವರನ್ನು ರಾಧಮ್ಮ ಒಳಕ್ಕೆ ಕರೆದರು. ಕೃಷ್ಣಪ್ಪನವರು ಹೊರಟು ನಿಂತುದನ್ನು ಕಂಡು ಅವಸರವಾಗಿಯೆ ಹೊರಬರುತ್ತ ರಾಮಯ್ಯನೆಂದರು:

"ಹ್ಯಾಗೂ ಭಾನುವಾರದವರೆಗೆ ಇರ್ತೀರಾ. ಶನಿವಾರ ಮಧ್ಯಾಹ್ನ ನಮ್ಮಲ್ಲಿಗೇ ಊಟಕ್ಕೆ ದಯಮಾಡಿಸ್ಬೇಕು. ನನಗೆ ಬೆಳಗ್ಗೆ ಆಫೀಸು. ಒಂದು ಘಂಟೆಗೆಲ್ಲ ಮನೆಗೆ ಬಂದಿರ್ತೀನಿ."

ರಾಧಮ್ಮ ಧ್ವನಿ ಕೂಡಿಸಿದರು:

"ಇಲ್ಲ ಅನ್ಬೇಡಿ. ಸಾಧ್ಯವಾದರೆ ಜತೇಲಿ ನಿಮ್ಮ ಅಳಿಯನನ್ನೂ ಕರಕೊಂಡ್ಬನ್ನಿ. ಕಾದಿರ್ತೀವಿ."

"ಆಗಲಿ, ಆಗಲಿ," ಎಂದರು ಕೃಷ್ಣಪ್ಪ.

...ಅವರು ಶೇಷಾದ್ರಿಪುರ ತಲಪಿದಾಗ ಆಗಲೆ ಎಂಟೂವರೆ ಗಂಟೆಯಾಗಿತ್ತು. ರಾಮಕೃಷ್ಣಯ್ಯ ಮನೆಗೆ ಬಂದಿದ್ದರು.

"ಬರ್ತೀನಿಂತ ಒಂದು ಕಾರ್ಡು ಹಾಕ್ಬಾರ್ದಾಗಿತ್ತೆ? ನಾನು ಸುಮ್ನುಮ್ನೆ ಯಾರ್‍ಯಾರ ಜತೇಲೋ ಹರಟೆ ಹೊಡೀತಾ ನಿಂತ್ಬಿಟ್ಟೆ. ಹೂಂ. ಎಲ್ಲಿ, ನಶ್ಯ ನೋಡೋಣ. ಬಹಳ ದಿವಸವಾಯ್ತು ನಿಮ್ಮೂರಿನ ನಶ್ಯ ಮೂಗಿಗೇರಿಸದೆ."

ಆ ಸ್ವಾಗತ ಭಾಷಣದ ಬಳಿಕ ರಾಮಕೃಷ್ಣಯ್ಯ, ಕೃಷ್ಣಪ್ಪ ನೀಡಿದ ಡಬ್ಬದಿಂದ ಚಿಟಿಕೆ ನಶ್ಯವನ್ನು ಏರಿಸಿ ಹೆ–ಹೆ–ಎಂದು ಸದ್ದು ಮಾಡಿದರು.

ಚಿಟಕ್ಕೆಂದು ಬೆರಳಿನಲ್ಲಿ ಉಳಿದಿದ್ದ ನಶ್ಯದ ಧೂಳಿಯನ್ನು ಗಾಳಿಗೆ ಹಾರಿಸಿ ಅವರೇ ಅಂದರು:

"ಸ್ನಾನ ಸಂಧ್ಯಾವಂದನೆ ಮುಗಿಸ್ಕೊಂಡ್ಬಿಡು. ಊಟಕ್ಕೇಳೋಣ, ಆಮೇಲೆ ಮಾತು."

ಬಿಸಿ ನೀರಿನ ಸ್ಪರ್ಶ ಹಿತಕರವಾಗಿತ್ತು. ಸಂಧ್ಯಾವಂದನೆಯ ಮಂತ್ರಗಳು ಅಭ್ಯಾಸ ಬಲದಿಂದ ಕೃಷ್ಣಪ್ಪನವರ ನಾಲಗೆಯ ಮೇಲೆ ಕುಣಿದುವು. ಅವು ಸರಿಯಾಗಿ ದ್ದುವೋ ಇಲ್ಲವೋ ಎಂದು ಯೋಚಿಸುವ ಗೋಜಿಗೆ ಅವರು ಹೋಗಲಿಲ್ಲ.

ಎಲೆಯ ಮುಂದೆ ಊಟಕ್ಕೆಂದು ಕುಳಿತಾಗ ಏನೂ ಬೇಡವೆನಿಸಿತು ಕೃಷ್ಣಪ್ಪನವ ರಿಗೆ. ಆದರೆ ರಾಮಕೃಷ್ಣಯ್ಯನ ನಗೆ ಮಾತುಗಳು ಮನೋವೇದನೆಯ ಇಕ್ಕುಳ ಹಿಡಿತದಿಂದ ಅವರನ್ನು ಸ್ವಲ್ಪ ಮಟ್ಟಿಗೆ ಸಡಿಲಿಸಿದುವು. ಅಂತೂ ರಾಮಕೃಷ್ಣಯ್ಯ ಊಟದಲ್ಲಿ ತೋರಿದ ಆಸಕ್ತಿಯ ಸ್ವಲ್ಪಾಂಶವನ್ನು ಕೃಷ್ಣಪ್ಪನವರೂ ತೋರಿದರು.

'ಊಟವಾದ ಮೇಲೆ ನನ್ನ ಸಂಕಟದ ಕತೆ ಕೇಳಿದಾಗ ಈತನಿಗೆ ಬೇಸರವಾಗು ವುದು ಇದ್ದೇ ಇದೆ,' ಎಂದು ತಮ್ಮಷ್ಟಕ್ಕೆ ಆಗ ಅವರು ಅಂದುಕೊಂಡರು.

ಆದರೆ ರಾಮಕೃಷ್ಣಯ್ಯನವರಿಗೆ ಮುನ್ಸೂಚನೆ ಬಂದೇ ಇತ್ತು. ಊಟವಾದ ಬಳಿಕ ಅವರಾಡಿದ ಮೊದಲ ಮಾತಿನಿಂದಲೇ ಕೃಷ್ಣಪ್ಪನವರಿಗೆ ಅದು ತಿಳಿಯಿತು.

"ಹೂಂ. ಇನ್ನು ಬಿಚ್ಚು–ಗೋಳಿನ ಕಂತೇನಾ."

ಆ ಆತ್ಮವಿಶ್ವಾಸದ ಧ್ವನಿ ಕೃಷ್ಣಪ್ಪನವರ ಹೃದಯವನ್ನು ಸ್ವಲ್ಪ ಮಟ್ಟಿಗೆ ಹಗುರಗೊಳಿಸಿತು. ಮಾತಿನ ನಡು ನಡುವೆ ಆ ಸ್ನೇಹಿತ ವ್ಯಕ್ತಪಡಿಸುತ್ತಿದ್ದ ಉದ್ಗಾರ–

ಮುಖಭಾವಗಳಂತೂ ಕೃಷ್ಣಪ್ಪನವರಲ್ಲಿ ಆಸೆಯನ್ನೂ ಧೈರ್ಯವನ್ನೂ ತುಂಬಿದುವು.

"ಈಗ ನಾನೇನು ಮಾಡ್ಬೇಕು ಅಂತೀಯಾ?"

ಅದು, ಉತ್ತರದ ಹಾದಿ ನೋಡುತ್ತ ಅಲೆಯುತ್ತಲಿದ್ದ ಪ್ರಶ್ನೆ.

"ಸರಿಯಾಗಿ ನಾಲ್ಕೇಟು ಬಿಗೀಬೇಕು ಆ ಮುಂಡೇ ಗಂಡನಿಗೆ."

ರಾಮಕೃಷ್ಣಯ್ಯ ಕೊಟ್ಟ ಉತ್ತರ ಅಂಥದು. ಆದರೆ ಅದರ ಜತೆಯಲ್ಲಿ "ಹೂಂ" ಎಂಬ ನಿಟ್ಟುಸಿರೂ ಅವರಿಂದ ಹೊರಬಿತ್ತು.

ಇದೀಗ ಆ ಮೃದು ಹೃದಯ ಸಹಾನುಭೂತಿ ತೋರಿಸುತ್ತಿದ್ದ ರೀತಿ. ಮತ್ತೆ ಅವರ ಬಾಯಿಯಿಂದ ಮಾತುಗಳು ಹೊರಟುವು.

"ನೀನು ನಾಳೆ ದಿವಸ ಹೋಗಿ ಮಾತಾಡ್ಕೊಂಡು ಬಾ. ಅವನ ಮನಸ್ನಲ್ಲೇ ನಿದೆಯೋ ಗೊತ್ತಾಗುತ್ತಲ್ಲ! ಆಮೇಲೆ ನಾನೂ ಒಂದ್ಸಲ ನಿನ್ಜತೇಲಿ ಬರ್ತೀನಿ."

ಕೃಷ್ಣಪ್ಪನವರು ಒಪ್ಪಿದರು. ಆ ದಿನವೆಲ್ಲ ಒಳಗಿನ ಕೊರಗನ್ನು ಹಾಗೆ ನಾಲ್ಕು ಜನರಿಗೆ ಹಂಚಿದ ಬಳಿಕ, ಅವರಿಗೆ ಈಗ ಸಮಾಧಾನವೆನಿಸಿತ್ತು. ಈ ಸಮಸ್ಯೆಯನ್ನು ಯಶಸ್ವಿಯಾಗಿ ಬಗೆಹರಿಸಬಹುದೆಂಬ ಭರವಸೆಯನ್ನೇನೂ ರಾಮಕೃಷ್ಣಯ್ಯ ಕೊಟ್ಟಿರಲಿಲ್ಲ. ಆದರೂ ಅಸಹಾಯತೆಯಿಂದ ನರಳುವುದರಲ್ಲಿ ಅರ್ಥವಿರಲಿಲ್ಲ.

ಕಿರಿಯ ಸೊಸೆಯ ಕೈಲಿ ಕುಡಿಯುವ ನೀರಿನ ಬಿಂದಿಗೆಯನ್ನೂ ಲೋಟವನ್ನೂ ಕೃಷ್ಣಪ್ಪನವರಿಗೆ ಕೊಡಿಸಿದ ಬಳಿಕ ರಾಮಕೃಷ್ಣಯ್ಯ ಮಲಗುವ ಕೊಠಡಿಗೆ ನಡೆದರು. ಹೊರಗಿದ್ದ ಬರಿಯ ಮಂಚ ಕೃಷ್ಣಪ್ಪನವರ ಸೇವೆಯನ್ನು ಸ್ವೀಕರಿಸಿತು. "ತಗೋ ಅಜ್ಜಾ," ಎನ್ನುತ್ತ ರಾಮಕೃಷ್ಣಯ್ಯನ ಮೊಮ್ಮಗು ತಂದು ಕೊಟ್ಟ ದಿಂಬಿನ ಮೇಲೆ ಕೃಷ್ಣಪ್ಪ ತಲೆ ಇರಿಸಿದರು. ಬರುತ್ತ ತಂದಿದ್ದ ಜೀರ್ಣವಾಗಿದ್ದ ಕಾಶ್ಮೀರಿ ಶಾಲನ್ನು ಹೊದೆದುಕೊಂಡರು. ದೀಪವಾರಿದ ಬಳಿಕ "ರಾಮಚಂದ್ರಾ" ಎಂದರು. ಹಗಲು ಸ್ವಲ್ಪ ಹೊತ್ತು ನಿದ್ದೆ ಮಾಡಿದ್ದುದರಿಂದ ರಾತ್ರೆ ಸ್ವಲ್ಪ ಹೊತ್ತು ಎಚ್ಚರವಿರಲೇ ಬೇಕಾಯಿತು. ಬೆಳಗಾದ ಮೇಲಿನ ಕಾರ್ಯಕ್ರಮವನ್ನು ಯೋಚಿಸುತ್ತ ಅವರು ಮಲಗಿದರು. ಅಳಿಯನೊಡನೆ ತಾವು ಆಡಬೇಕಾದ ಮಾತುಗಳೂ ರೂಪುಗೊಂಡುವು... ಹಾಗೆ ಸಿದ್ಧತೆ ನಡೆಯುತ್ತಿದ್ದಾಗಲೇ ಅವರಿಗೆ ನಿದ್ದೆ ಬಂತು.

೭

ಸುನಂದೆಯ ಗಂಡ ಪುಟ್ಟಣ್ಣ, ಮಾವನ ಆಗಮನವನ್ನು ನಿರೀಕ್ಷಿಸಿಯೇ ಇರಲಿಲ್ಲ ಎಂದಲ್ಲ. ಆದರೆ ಅದು ಆ ದಿನವೇ ಆಗುವುದೆಂದು ಆತ ಭಾವಿಸಿರಲಿಲ್ಲ. ಆಫೀಸಿಗೆ

ಬಂದು ಕಡತಗಳಿಗೆ ಕೈಹಾಕಿದಾಗ, ನಕಾಶೆಗಳನ್ನು ನೋಡಿದಾಗ, ಆತನ ಮನಸ್ಸಿನಲ್ಲಿ ಸುನಂದೆಯನ್ನು ಕುರಿತು ಯಾವ ಯೋಚನೆಯ ಸುಳಿವೂ ಇರಲಿಲ್ಲ.

ಪುಟ್ಟಣ್ಣ ಮನೆಯನ್ನು ಖಾಲಿಮಾಡಿದ್ದ–ಮುಂದೆಂದೂ ಅದರ ಅಗತ್ಯವಿಲ್ಲ ವೆಂದು. ಆತ ಬಯಸಿದ್ದುದು ಸಂಸಾರ ಸಂಬಂಧದಿಂದ ವಿಮೋಚನೆ. ಅದು ತಾನಾ ಗಿಯೇ ದೊರೆಯುವಂತಿರಲಿಲ್ಲ. ಅದಕ್ಕೋಸ್ಕರ, ಸ್ವತಃ ಆತನೇ ಮುಂದುವರಿದು ಆ ಬಂಧನದ ಬಳ್ಳಿಗಳನ್ನು ಕಡಿಯಲು ಹೊರಟಿದ್ದ.

ಆಫೀಸಿನ ಕೆಲಸಕಾರ್ಯಗಳಲ್ಲಿ ನಿಷ್ಠಾತವಂತನಾದ ಸಮರ್ಥನಾದ ಮನುಷ್ಯ. ಕೈಕೆಳಗಿನವರು ಆತನಿಗೆ ಹೆದರುತ್ತಿದ್ದರು. ಕಚೇರಿಯ ಮುಖ್ಯಸ್ಥನೂ ಕಾರಖಾನೆಯ ಒಡೆಯರೂ ಆತನಲ್ಲಿ ವಿಶ್ವಾಸವಿಟ್ಟಿದ್ದರು. ಅದೇ ನಿಜವಾದ ಯಶಸ್ಸು ಎಂದು ಭಾವಿಸುವವರು ಎಷ್ಟು ಜನರಿಲ್ಲ?

ಆದರೆ ದುಡಿಯುವ ಆ ಜಾಗದಲ್ಲಿ ಯಾರೂ ಪುಟ್ಟಣ್ಣನಿಗೆ ಸ್ನೇಹಿತರಿರಲಿಲ್ಲ. ಮುಖ್ಯತಃ ಯಾರ ಸ್ನೇಹವನ್ನೂ ಬಯಸಿರಲಿಲ್ಲ ಆತ. ಅಲ್ಲಿಯೇ ಗೆಳೆಯರಾದರೆ ತನ್ನ ವ್ಯಕ್ತಿತ್ವದ ಬಿಗುವಿಗೆ ಕುಂದು ಉಂಟಾಗಬಹುದೆಂಬುದು ಅವನ ಅಭಿಪ್ರಾಯ ವಾಗಿತ್ತು.

ಒಮ್ಮೆ ಆತನ ವಿಭಾಗದ ಮಾತುಗಾರನೊಬ್ಬ ಧೈರ್ಯ ತಂದುಕೊಂಡು ಕೇಳಿದ್ದ:

"ಮನೆ ಬದಲಾಯಿಸಿದಿರಂತೆ, ಹೌದೆ ಸಾರ್?"

ಆಗ ಪುಟ್ಟಣ್ಣ ಹಾಗೆ ಪ್ರಶ್ನೆ ಕೇಳಿದವನನ್ನೆ ದುರುಗುಟ್ಟಿಕೊಂಡು ನೋಡಿ, ನಯ ವಲ್ಲದ ಸ್ವರದಲ್ಲಿ ಹೇಳಿದ:

"ನಿಮ್ಮ ಕೆಲಸದ ಕಡೆ ಗಮನ ಕೊಡಿ!"

ಸಾಮಾನ್ಯರ ದೃಷ್ಟಿಯಲ್ಲಿ ವಿಚಿತ್ರ ಎನಿಸುವಂತಹ ಆ ವ್ಯಕ್ತಿತ್ವವನ್ನು ರೂಪಿಸಿ ಕೊಂಡು ಆತ ಸಾಧಿಸಿದ್ದೇನು? ಆ ಪ್ರಶ್ನೆಯ ಉತ್ತರ ಸ್ವತಃ ಆತನಿಗೇ ತಿಳಿದಿರಲಿಲ್ಲ. ಆದರೂ, ತಾನು ಮಾಡುತ್ತಿರುವುದು ಸರಿ; ತಾನು ನಡೆಯುತ್ತಿರುವುದೇ ಸರಿಯಾದ ಹಾದಿ–ಎಂಬುದು ಆತನ ದೃಢನಂಬುಗೆಯಾಗಿತ್ತು.

ತಾಯಿ ಇದ್ದಾಗಲೆಲ್ಲ ಆಕೆಗೆ ಅಂಟಿಕೊಂಡೇ ನೀನಿರುತ್ತಿದ್ದೆ; ಪ್ರತಿಯೊಂದಕ್ಕೂ "ಅಮ್ಮಾ"; ದಾಂಪತ್ಯ ಜೀವನದ ಕಲ್ಪನೆಯೇ ನಿನಗಿರಲಿಲ್ಲ; ತಾಯಿ ಸತ್ತಮೇಲೆ ಮಾತ್ರ ನೀನು ನಿನ್ನ ಮನೆಗೂ ನಿನ್ನ ಮನಸ್ಸಿಗೂ ಯಜಮಾನನಾದೆ; ಆ ಸ್ವಾತಂತ್ರ್ಯದ ವಿಕೃತ ರೂಪವನ್ನು ಕಲ್ಪಿಸುತ್ತ ಹುಚ್ಚೆದ್ದು ಕುಣಿದೆ–ಎಂದು ಯಾರಾದರೂ ಹೇಳಿದ್ದರೆ ಪುಟ್ಟಣ್ಣನೆಂದೂ ಒಪ್ಪುತ್ತಿರಲಿಲ್ಲ. ಆತ ತನ್ನ ಈಗಿನ ನಡತೆಗೆ ಕಾರಣವಾಗಿ ತೋರ ಬಯಸುತ್ತಿದ್ದುದು ಸುನಂದೆಯನ್ನು. ಆ ಮದುವೆಯೇ ತನಗಿಷ್ಟವಿರಲಿಲ್ಲ. ತಾನು ಆಕೆಯ ಕೈಹಿಡಿದುದು ತಾಯಿಯ ಮನಸ್ಸಮಾಧಾನಕ್ಕಾಗಿ ತನಗೂ ಆಕೆಗೂ ಎಂದೂ ಯಾವುದರಲ್ಲೂ ಒಮ್ಮತವಿರಲಿಲ್ಲ. ಓದಿದವಳೆಂದು ಎಂಥ ಒಣ ಹೆಮ್ಮೆ ಅವಳಿಗೆ! ತಾಯಿ ಬಳಿಕ ತಾನೇ ಸರ್ವಾಧಿಕಾರಿಣಿ ಎಂದಿದ್ದಳೇನೋ! ಸಲಿಗೆ ಕೊಟ್ಟಿದ್ದರೆ ಮೂಗು

ದಾರ ಹಾಕಿ ನನ್ನನ್ನು ಕುಣಿಸಿಯೂ ಕುಣಿಸುತ್ತಿದ್ದಳು! ಆದರೆ ತಾನು ಮೋಸ ಹೋಗಲಿಲ್ಲ!

ಮಗುವಿನ ನೆನಪಾಗುತ್ತಿತ್ತು ಒಮ್ಮೊಮ್ಮೆ. ಆ ಮಗು ಯಾವುದರ ಪ್ರತಿಫಲ? ಪುಟ್ಟಣ್ಣನ ದೃಷ್ಟಿಯಲ್ಲಿ ಮಗು ಹುಟ್ಟುವಂತಾದುದು ಮೂರ್ಖತನದ ಪರಮಾವಧಿ. ಒಂದು ವೇಳೆ ಗಂಡು ಹುಟ್ಟಿದ್ದರೆ, ತನ್ನ ಸ್ವಾತಂತ್ರ್ಯ ಘೋಷಣೆಗೆ ಸ್ವಲ್ಪ ತಡೆಯಾಗು ತ್ತಿತ್ತೋ ಏನೋ. ಹುಟ್ಟಿದುದು ಹೆಣ್ಣು. ಗಂಡಸಿನ ಮೇಲೆ ಸವಾರಿ ಮಾಡಲು ಬಯಸುವ ಜಾತಿಗೆ ಸೇರಿದ್ದು. ಒಂದು ದಿನ ಇನ್ನೊಬ್ಬರ ಮನೆಗೆ ಹೋಗಬೇಕಾದುದು, ತಾಯಿಯ ಜತೆಯಲ್ಲಿ ಆ ಮಗುವೂ ತನ್ನಿಂದ ಬೇರೆಯಾಗಬೇಕಾದುದು ಅನಿವಾರ್ಯ...

ಸರ್ವತಂತ್ರ ಸ್ವತಂತ್ರನಾಗಬಯಸಿದವನಿಗೆ ಕುಡಿತ ಬೆಲೆವೆಣ್ಣುಗಳ ಸಹವಾಸ ಯಾಕೆ?–ಅದರಲ್ಲಿ ತಪ್ಪಿಲ್ಲ; ತಾನು ಸ್ವತಂತ್ರ ಎಂದು ತೋರಿಸುವುದಕ್ಕೋಸ್ಕರ ಗಂಡಸು ಅಷ್ಟನ್ನು ಮಾಡಬಹುದು. ಅಲ್ಲದೆ, ಅದು ತನ್ನಿಷ್ಟ....

ಇದು ಧರ್ಮವೇನು? ಹೀಗೆ ಮಾಡುವುದು ನ್ಯಾಯವೇನು?–ಧರ್ಮ! ನ್ಯಾಯ! ಎಲ್ಲಾ, ಬೋಡಮ್ಮಂದಿರಿಗೆ ಉಪದೇಶಿಸಬೇಕಾದ ವೇದಾಂತ. ಅರ್ಥವಿಲ್ಲದ ಪದಗಳು. ಪ್ರಪಂಚದಲ್ಲಿ ಮುಖ್ಯವಾದುವು ಬಲ ಮತ್ತು ಧನ. ಬಲಶಾಲಿಯೇ ಯಜಮಾನ; ಹಣವಿದ್ದವನೆ ಧರ್ಮಾತ್ಮ.

ಹಿಂದೆ ಈ ತಿಳಿವಳಿಕೆ ಇತ್ತೆ?–ಇರಲಿಲ್ಲ; ಅದೇ, ತಾನು ಆಗ ಮೋಸ ಹೋಗಲು ಕಾರಣ. ಆದರೆ ತಿಳಿವಳಿಕೆ ಉಂಟಾದ ಮೇಲೆ, ಆದ ತಪ್ಪನ್ನು ಆ ಕ್ಷಣವೇ ತಿದ್ದು ವುದು ಅಗತ್ಯ....

....ಯಾರಾದರೂ ಈ ವಿಷಯವಾಗಿ ತನ್ನೊಡನೆ ಮಾತನಾಡಬಹುದೆಂಬ ಶಂಕೆ ಪುಟ್ಟಣ್ಣನಿಗೆ ಇದ್ದೇ ಇತ್ತು, ಹಾಗೆ ಯಾವನಾದರೂ ಪ್ರಸ್ತಾಪ ಮಾಡಿದರೆ, 'ಬಾಯ್ಮುಚ್ಚು! ಇದು ವೈಯಕ್ತಿಕ ವಿಷಯ!' ಎಂದು ಗದರಿಸಿ ನುಡಿಯಲು ಆತನು ಸಿದ್ಧನಾಗಿದ್ದ.

ಬೆಂಗಳೂರಿಗೆ ಬಂದ ಮಾರನೆಯ ದಿನ ಕೃಷ್ಣಪ್ಪನವರು, ಪುಟ್ಟಣ್ಣ ಕೆಲಸ ಮಾಡುತ್ತಿದ್ದ ಆಫೀಸಿನ ಕಡೆಗೆ ಸುಳಿದರು. ಅಪಾರವಾದ ಸಹನೆಯಿಂದ ದೂರದಲ್ಲೆ ಮರೆಯಾಗಿ ಕಾದು ನಿಂತು, ಪುಟ್ಟಣ್ಣ ಅಲ್ಲಿಯೆ ಇರುವನೆಂಬುದನ್ನು–ಆ ದಿನವೂ ಬಂದನೆಂಬುದನ್ನು—ಗೊತ್ತು ಹಚ್ಚಿದರು. ತಾನು ಬಂದುದರ ಸುಳಿವು ಭೇಟಿಗೆ ಮುಂಚೆ ಅಳಿಯನಿಗೆ ಸಿಗಬಾರದೆಂದು ತೀರ್ಮಾನಿಸಿದ್ದ ಕೃಷ್ಣಪ್ಪನವರು, ಆಫೀಸಿನ ಜವಾನರನ್ನು ಕೇಳಿ ತಿಳಿದುಕೊಳ್ಳುವ ಗೊಡವೆಗೆ ಹೋಗಲಿಲ್ಲ. ದೂರದಿಂದಲೇ ಸ್ವತಃ ಕಣ್ಣಾರೆ ಪುಟ್ಟಣ್ಣನನ್ನು ಕಂಡಾಗ ಅವರ ಮೈ ಉರಿಯಿತು. ದರ್ಪದ ಠೀವಿಯ ಆ ನಡಿಗೆಯೋ! ಇಳಿ ವಯಸ್ಸಿನಲ್ಲಿ ತಮಗೂ ತಮ್ಮಾಕೆಗೂ ಅನಗತ್ಯವಾದ ಕಾತರಕ್ಕೆ ಕಾರಣನಾಗಿದ್ದ ಪಾಪಿ! ಹೆತ್ತ ಹೆಂಡತಿಯನ್ನೂ ಮಗುವನ್ನೂ ದುರ್ಲಕ್ಷ್ಯ ಮಾಡಿರುವ ನರಾಧಮ!....

ಆ ಬೆಳಗ್ಗೆ ಕೃಷ್ಣಪ್ಪನವರು ಮನೆ ಬಿಟ್ಟಾಗಲೇ ರಾಮಕೃಷ್ಣರಾಯರು ಕೇಳಿದ್ದರು:

"ಮಧ್ಯಾಹ್ನ ಊಟಕ್ಕೆ ಇಲ್ಲಿಗೇ ಬಂದ್ಬಿಡು."

ಕೃಷ್ಣಪ್ಪ ಒಪ್ಪಿರಲಿಲ್ಲ.

"ಅತನ ದರ್ಶನ ಎಷ್ಟು ಹೊತ್ತಾಗುತ್ತೋ? ನಾನಿನ್ನು ಬರೋದು ರಾತ್ರೆಗೇ. ಮಧ್ಯಾಹ್ನ ಅಲ್ಲೇ ಎಲ್ಲಾದರೂ ಊಟಮಾಡ್ತೀನಿ."

ರಾಮಕೃಷ್ಣಯ್ಯ ಅಂದಿದ್ದರು:

"ಊಟ ಏನ್ಮಾಡ್ತೀಯಾ! ಕಡಲೇಕಾಯಿ ತಿಂದು ನೀರು ಕುಡೀತಿ. ನನಗ್ಗೊತ್ತಿಲ್ವೆ?...ನಿನ್ನಿಷ್ಟ. ಹ್ಯಾಗೆ ಅನುಕೂಲವಾಗುತ್ತೋ ಹಾಗೆ ಮಾಡು."

ಮೊದಲ ಹೆಜ್ಜೆಯನ್ನು ಈಗ ಇಟ್ಟುದಾಗಿತ್ತು. ಇನ್ನು ಸಂಜೆ ಐದು ಘಂಟೆಯವರೆಗೂ ಹೊತ್ತು ಕಳೆಯಬೇಕು. ಉಪಾಹಾರದ ಬಿಡುವಿನಲ್ಲಿ ಅಳಿಯನನ್ನು ಕಾಣಲು ಕೃಷ್ಣಪ್ಪನವರು ಒಪ್ಪಲಿಲ್ಲ. ಆ ಅವಸರದ ಮಾತುಕತೆಯಿಂದ ಯಾವ ಪ್ರಯೋಜನವೂ ಇಲ್ಲ—ಸಂಜೆಯೇ ಸರಿ ಎಂದುಕೊಂಡು, ಅಷ್ಟರವರೆಗೆ ಹೊತ್ತು ಕಳೆಯುವ ವಿಧಾನವನ್ನು ಹುಡುಕಿದರು.

ತಮ್ಮ ಊರಿನಲ್ಲಾದರೆ ನಮಸ್ಕಾರ ಚಮತ್ಕಾರಗಳಾಗದೆ ನಾಲ್ಕು ಹೆಜ್ಜೆ ನಡೆಯುವಹಾಗಿಲ್ಲ. ಜನದಟ್ಟಣೆಯ ಬೆಂಗಳೂರಿನ ಬೀದಿಗಳಲ್ಲಿ ಹಾಗಲ್ಲ. ಎಷ್ಟು ದೂರಬೇಕಾದರೂ ಪರಿಚಯದ ಒಂದು ಮುಖವೂ ಕಾಣಿಸದೆ ಒಂಟಿಯಾಗಿಯೆ ಸಾಗಬಹುದು. ಕೃಷ್ಣಪ್ಪನವರಿಗೆ ಅದರಿಂದೊಂದು ರೀತಿಯ ತೃಪ್ತಿ ದೊರೆಯಿತು. ಮಾರ್ಕೆಟಿನವರೆಗೂ ನಡೆದು ಹೋದರು. ಒಳಹೋಗಿ ಒಂದು ಎಳನೀರು ಕುಡಿದರು. ಎರಡು ಪಚ್ಚಬಾಳೆಹಣ್ಣು ಕೊಂಡು ಉತ್ತರೀಯದಲ್ಲಿ ಕಟ್ಟಿದರು. ಬಳಿಕ ಒಂದು ಪಾವು ಕಡಲೇಕಾಯಿ. ಅದನ್ನು ಕೊಳ್ಳುತ್ತಿದ್ದಂತೆ ರಾಮಕೃಷ್ಣಯ್ಯ ಆಡಿದ್ದ ಮಾತು ನೆನಪಾಗಿ ಅವರಿಗೆ ನಗು ಬಂತು. ಅಲ್ಲಿಂದ ಪುರಭವನದ ಕಡೆಗೆ ನಡೆದು ಆ ಹಾದಿಯಾಗಿ ಅಠಾರಾ ಕಚೇರಿಯತ್ತ ಹೊರಟರು. ನಡೆಯುತ್ತಿದ್ದಂತೆ ಕಾಲುಗಳು ಸೋತುವು. ತಾವೀಗ ಯುವಕನಲ್ಲವೆಂಬುದು ಅವರಿಗೆ ಹೊಳೆಯಿತು. ಅಠಾರಾ ಕಚೇರಿಯಲ್ಲಿ ಮಂತ್ರಿಗಳನ್ನು ಭೇಟಿ ಮಾಡುವ ಕೆಲಸವೇನೂ ಅವರಿಗಿರಲಿಲ್ಲ. ಕಬ್ಬನ್ ಪಾರ್ಕಿನಲ್ಲಿ ಮರದ ಕೆಳಗಿನ ತಣ್ಣನಲ್ಲಿ ಕಲ್ಲುಬೆಂಚಿನ ಮೇಲೆ ಅವರು ವಿರಮಿಸಿದರು. ಮಧ್ಯಾಹ್ನ ತಿರುಗಿ ಸ್ವಲ್ಪ ಹೊತ್ತಾದ ಮೇಲೆ, ತಂದುದನ್ನು ಮುಂದಿರಿಸಿ ಉಪಾಹಾರ ಸ್ವೀಕರಿಸಿದರು. ಅಲ್ಲಿಂದ ಮತ್ತೆ ಪುಟ್ಟಣ್ಣನ ಆಫೀಸಿನ ಕಡೆಗೆ. ಇನ್ನೂ ನಾಲ್ಕು ದಾಟಿತ್ತು ಅಷ್ಟೆ. ಮತ್ತೂ ಒಂದು ಘಂಟೆಯ ಕಾಲ ಅವರು ತಡೆದರು.

ಅಳಿಯ ಬೀದಿಗಿಳಿಯುತ್ತಿದ್ದ ಘಳಿಗೆ ಬಂತು. ಡವಡವನೆ ಹೊಡೆದುಕೊಳ್ಳುತ್ತಿತ್ತು ಕೃಷ್ಣಪ್ಪನವರ ಎದೆ. ಹೃದಯವೇ ಮೇಲಕ್ಕೆ ಒತ್ತರಿಸಿ ಬಂದಂತಾಗಿ ಅವರಿಗೆ ಉಸಿರು ಕಟ್ಟಿತು. ಕಾಲುಗಳು ಕಂಪಿಸಿದುವು. ಆದರೆ ಹೀಗಾದುದು ಅರೆ ಕ್ಷಣ ಮಾತ್ರ.

ಪುನಃ ಧೈರ್ಯ ತಳೆದು ಹೊರಗೇಟಿನ ಮರೆಯಲ್ಲಿ ಅವರು ನಿಂತರು.

"ಪುಟ್ಟಣ್ಣ!"

ಇನ್ನೂ ನೆನಪಿರುವ ಸ್ವರ, 'ಸಾರ್' ಎಂಬ ಸಂಬೋಧನೆಯಿಲ್ಲ 'ಮಿಸ್ಟರ್' ಎನ್ನುವ ವಿಶೇಷಣವೂ ಇಲ್ಲ. 'ಪುಟ್ಟಣ್ಣನವರೆ' ಎಂದಾದರೂ ಹೇಳುವ ಶಿಷ್ಟಾಚಾರವೂ ತಿಳಿಯದು. 'ನಾನು ಮಾವ' ಎನ್ನುವ ಅಧಿಕಾರದ ಧ್ವನಿಯೇ.

ಕರೆ ಕೇಳಿದ ಮೇಲೂ ಮುಂದೆ ಸಾಗುತ್ತಲಿದ್ದ ಪುಟ್ಟಣ್ಣನನ್ನು ಕುರಿತು ಆತನ ಸಹೋದ್ಯೋಗಿಯೊಬ್ಬ ಹೇಳಿದ:

"ಸಾರ್, ಯಾರೋ ನಿಮ್ಮನ್ನು ಕೂಗ್ತಿದಾರೆ."

ಈಗಲೂ ಕೇಳಿಸದವನಂತೆ ತಪ್ಪಿಸಿಕೊಳ್ಳುವುದು ಸಾಧ್ಯ–ಎನಿಸಿತು ಪುಟ್ಟಣ್ಣನಿಗೆ. ಆದರೆ ನಾಳೆಯ ದಿನ? ನಾಡದು? ಈಗ ತಪ್ಪಿಸಿಕೊಳ್ಳುವುದೆಂದರೆ ಸ್ವಲ್ಪ ಕಾಲದ ಮಟ್ಟಿಗೆ ಸಮಸ್ಯೆಯನ್ನು ಮುಂದೆ ಹಾಕುವುದು–ಅಷ್ಟೆ. ಅದರಿಂದೇನು ಪ್ರಯೋಜನ? ಪೂರ್ತಿ ಪರಿಹಾರ ಎಷ್ಟು ಬೇಗ ಸಾಧ್ಯವಾಗುವುದೋ ಅಷ್ಟು ಮೇಲು. ಅದಕ್ಕೋಸ್ಕರ, ತನ್ನನ್ನು 'ಪುಟ್ಟಣ್ಣ' ಎಂದು ಕರೆದ ವ್ಯಕ್ತಿಯನ್ನು–ಮಾವನನ್ನು–ಕಾಣುವುದೇ ಸರಿ.

ನಡಿಗೆಯ ವೇಗ ಆತನಿಗೆ ಅರಿಯದಂತೆಯೆ ಕಡಮೆಯಾಗಿತ್ತು. ಅಷ್ಟರಲ್ಲೆ ಮತ್ತೊಮ್ಮೆ ಕರೆ ಕೇಳಿಸಿತು:

"ಪುಟ್ಟಣ್ಣ!"

ಪುಟ್ಟಣ್ಣ ತಡೆದು ನಿಂತು, ಹಿಂದಕ್ಕೆ ತಿರುಗಿ ಮಾವನನ್ನು ನೋಡಿದ. ಮುಖದ ಮೇಲೆಲ್ಲಾ ಕುರುಚಲು ಗಡ್ಡ. ಕಳೆದ ಸಾರಿ ತಾನು ಕಂಡಿದ್ದಾಗ ತೊಟ್ಟಿದ್ದ ಕಂದು ಬಣ್ಣದ ಕೋಟು....ಪುಟ್ಟಣ್ಣನ ಒಳದನಿ ತಿರಸ್ಕಾರದಿಂದ ಉರಿಯಿತು. 'ಎಂಥ ಅಸಹ್ಯ ವ್ಯಕ್ತಿ!'

"ಏನಾಗ್ಬೇಕು?"

ಇದೇ ಸರಿ–ಎಂದು ಮನಸಿನೊಳಗೇ ಪುಟ್ಟಣ್ಣ ನಕ್ಕರೆ, ಎಲಾ ಮಗನೇ–ಎಂದು ಕೃಷ್ಣಪ್ಪನವರು ಉಗುಳು ನುಂಗಿದರು. ಕೆಂಪಗಾಯಿತು ಅವರ ಮುಖ.

"ನನ್ನ ಗುರುತು ಸಿಗಲಿಲ್ವೆ? ನಾನು ಕೃಷ್ಣಪ್ಪ. ಸುನಂದೆಯ ತಂದೆ. ನಿಮ್ಮನ್ನು ಕಂಡು ಮಾತನಾಡ್ಬೇಕೂಂತ ಊರಿಂದ ಬಂದೆ."

"ಹಾಗೇನು? ಸರಿ. ಮಾತಾಡ್ಬಹುದಲ್ಲ!"

"ಇಲ್ಲಿಯೇ?"

ಅನಿರೀಕ್ಷಿತವಾಗಿ ಶನಿ ಗಂಟು ಬಿತ್ತೆಂದು ಪುಟ್ಟಣ್ಣ ಬೆಚ್ಚಲಿಲ್ಲ. ಹೋಟೆಲಿನಲ್ಲಿ ಸತ್ಕಾರ ಮುಗಿಸಿ ಮುಂದಕ್ಕೆ ಹೋದರಾಯ್ತು–ಎನಿಸಿತು. ಆದರೆ ಇಂತಹ ಸತ್ಕಾರ ಇನ್ನು ಸರಿಯಲ್ಲ–ಎಂದು ಒಡನೆಯೆ ಆತ ಮನಸ್ಸು ಬದಲಾಯಿಸಿದ.

"ನಡೀರಿ. ಓ ಅಲ್ಲೊಂದು ಶಾಲೆಯಿದೆ. ಅಲ್ಲಿ ಎಲ್ಲಾದರೂ ಕೂತ್ಕೊಬಹುದು"

ಅಳಿಯನನ್ನು ಅನುಸರಿಸಿ ಮಾವ ನಡೆದರು. ಶಾಲೆಯ ಆಟದ ಬಯಲಲ್ಲಿ ಹುಡುಗರು ಆಡುತ್ತಿದ್ದರು. ಬಯಲಿನ ಅಂಚಿನಲ್ಲಿ ಎತ್ತರದ ಜಾಗದಲ್ಲಿ ಹಾಸುಕಲ್ಲು ಗಳಿದ್ದುವು. ಕರವಸ್ತ್ರವನ್ನು ಹೊರ ತೆಗೆದು ಬಿಡಿಸಿ, ಅದನ್ನು ಕಲ್ಲಿನ ಮೇಲೆ ಹಾಸಿ ಪುಟ್ಟಣ್ಣ ಕುಳಿತ. ಅವನಿಂದ ತುಸು ದೂರದಲ್ಲಿ ಸ್ವಚ್ಛವಾಗಿದ್ದ ಆ ಕಲ್ಲಿನ ಮೇಲೆ ಕೃಷ್ಣಪ್ಪ ಕುಳಿತರು.

ಮಾತಿಲ್ಲದೆ ಎರಡು ನಿಮಿಷಗಳು ಸಂದುವು. ಹಿಂದಿನ ರಾತ್ರೆಯೂ ಈ ಹಗಲೂ ಯೋಚಿಸಿದ್ದ ಮಾತುಗಳೊಂದೂ ನೆನಪಿಗೆ ಬಾರದೆ ಕೃಷ್ಣಪ್ಪನವರಿಗೆ ಸಂಕಟವಾಯಿತು. ಈ ಗಂಡಾಂತರದ ಘಳಿಗೆಯೊಮ್ಮೆ ಕೊನೆಯಾದರೆ ಸಾಕು ಎಂದು ಪುಟ್ಟಣ್ಣನೂ ಹುಬ್ಬುಗಂಟಿಕ್ಕಿದ. ಕುಳಿತಲ್ಲಿಂದಲೆ, ಶುಭ್ರವಾಗಿದ್ದ ತನ್ನ ಶೂಗಳನ್ನು ಆತ ದಿಟ್ಟಿಸಿದ; ಬಳಿಕ ಬಳಿಯಲ್ಲೇ ಇದ್ದ ವ್ಯಕ್ತಿಯ ಮುಖವನ್ನು.

ಎದೆಬಡಿತವನ್ನು ಕೃಷ್ಣಪ್ಪನವರು ಸ್ತಿಮಿತಕ್ಕೆ ತಂದುಕೊಂಡರು. ಇನ್ನು ಮೌನ ಸಲ್ಲದೆಂದು ಗಂಟಲು ಸರಿಪಡಿಸಿದರು. ಮೊದಲು ಬಲು ಕ್ಷೀಣವಾದ ಧ್ವನಿಯಲ್ಲೇ ಮಾತು ಹೊರಟಿತು.

"ನಿಮ್ಮ ಕಡೆಯಿಂದ ಕಾಗ್ದವಿಲ್ದೆ, ಸುಸಂದಾ—ನಮಗೆಲ್ಲ ಬಹಳ ಗಾಬರಿ ಯಾಗ್ಬಿಟ್ಟಿತ್ತು."

ಪುಟ್ಟಣ್ಣ ಸುಮ್ಮನಿದ್ದ. ಮನಸ್ಸು ವ್ಯಗ್ರವಾಗುತ್ತಿತೆಂಬುದುದನ್ನು ದವಡೆಯ ಮೂಳೆಗಳ ಚಲನ ತೋರಿಸಿತು. ಅಳಿಯನ ಮೌನವನ್ನು ಲೆಕ್ಕಿಸದೆ ಮಾವ ಮುಂದು ವರಿದರು:

"ನಾನು ನಿನ್ನೇ ಬಂದವನೇ ನಿಮ್ಮ ಮನೆ ಕಡೆ ಹೋದೆ. ಆದರೆ ನೀವು ಮನೆ ಖಾಲಿ ಮಾಡಿದ್ದಿರೀಂತ ತಿಳೀತು."

ರಾಧಮ್ಮನ ಕಾಗದದ ಪ್ರಸ್ತಾವಿಲ್ಲದೆಯೇ ಮಾತನಾಡುವುದು ಹೆಚ್ಚು ಪರಿ ಣಾಮಕಾರಿ ಎಂದು ಕೃಷ್ಣಪ್ಪ ಭಾವಿಸಿದರು. ಮುಂದಿನ ಮಾತು ಹೊರಟಿತು:

"ಮನೆ ಬದಲಾಯಿಸಿದ ವಿಷಯ ನೀವು ಸುಸಂದೆಗೆ ಬರದೇ ಇರ್ಲಿಲ್ಲ. ಎಲ್ಲಿ ಮಾಡಿದೀರಾ ಮನೆ?"

ಪ್ರಶ್ನೆಯ ರೂಪದಲ್ಲಿ ಮಾತು ನಿಂತಿತೆಂದು ಪುಟ್ಟಣ್ಣ ಉತ್ತರ ಕೊಡಲೇ ಬೇಕಾಯಿತು.

"ಇಲ್ನೋಡಿ! ನವುರು ನವುರಾದ ಈ ಮಾತುಕತೆಯಲ್ಲ ನನಗೆ ಬೇಕಿಲ್ಲ. ನೀವು ಬಂದಿರೋ ಉದ್ದೇಶ ಏನೂಂತ ಸ್ಪಷ್ಟವಾಗಿ ಹೇಳಿ. ನಾನೂ ಸ್ಪಷ್ಟವಾದ ಉತ್ತರ ಕೊಡ್ತೀನಿ. ಅರ್ಥವಾಯ್ತೆ?"

ಅಳಿಯನ ಮನೋವೃತ್ತಿಯನ್ನು ಚೆನ್ನಾಗಿ ತಿಳಿದಿದ್ದ ಕೃಷ್ಣಪ್ಪನವರಿಗೆ ಆತನ ಮಾತಿನಿಂದೇನೂ ಆಶ್ಚರ್ಯವಾಗಲಿಲ್ಲ. ಅವರು ಎದೆಗುಂದದೆ ಶಾಂತವಾದ ಧ್ವನಿ ಯಲ್ಲಿ ತಮ್ಮ ಸರಣಿಯಲ್ಲೆ ಮುಂದುವರಿದರು:

"ಸುನಂದಾ ನಿಮ್ಮ ವಿಷಯವೇ ಯೋಚಿಸಿ ಯೋಚಿಸಿ ಸೊರಗಿದಾಳೆ. ಮಗು ಅಪ್ಪನನ್ನ ಕೇಳುತ್ತಿರತ್ತೆ."

ಸತ್ಯ-ಸುಳ್ಳು ಎರಡೂ ಸೇರಿದ ಗುಟುಕು.

ಪುಟ್ಟಣ್ಣನ ಕಣ್ಣುಗಳು, ದಪ್ಪನೆಯ ತಣ್ಣನೆಯ ಗಾಜಿನಂತೆ ಕ್ಷಣಕಾಲ ಚಲಿಸದೆ ನಿಂತುವು. ಆತ ಎರಡೂ ತುಟಿಗಳನ್ನೊಮ್ಮೆ ಸಂಕುಚಿತಗೊಳಿಸಿ ಪ್ರಯತ್ನಪೂರ್ವಕ ವಾಗಿ ಬಾಯಿ ತೆರೆದ.

"ನಾನು ಹೇಳೋದು ಕೇಳಿ. ನಮ್ಮ ನಿಮ್ಮ ಸಂಬಂಧ ಕಡಿದ್ಹೋಯ್ತೂಂತ ಭಾವಿಸ್ಕೊಳ್ಳಿ!"

ಕೃಷ್ಣಪ್ಪನವರ ವಯಸ್ಸಾದ ಮುಖದ ಮೇಲೂ ರಕ್ತ ಸಂಚಾರವಾಯಿತು. ತಾನು ಮುಳುಗುತ್ತಿದ್ದಂತೆ ಅನಿಸಿತು ಅವರಿಗೆ. ಆಸರೆಯಾಗಿ ಏನನ್ನು ಹಿಡಿಯಲೆಂದು ಅವರು ಕಾತರರಾದರು.

"ಏನು ಹಾಗೆಂದರೆ? ಅಗ್ನಿ ಸಾಕ್ಷಿಯಾಗಿ ಮದುವೆಯಾದ...."

"ಬಿಚ್ಬೇಡಿ ಪುರಾಣಾನ! ನಾನು ಯಾವತ್ತೋ ತೀರ್ಮಾನಮಾಡ್ಬಿಟ್ಟಿದೀನಿ!"

"ಏನಪ್ಪ ಹಾಗಂದ್ರೆ? ಅದೇನು ನಿಮ್ಮೊಬ್ಬರಿಗೆ ಸಂಬಂಧಿಸಿದ ವಿಷಯವೆ? ನಿಮ್ಮನ್ನೇ ನಂಬಿರೋ ಆ ಹುಡುಗಿ ಗತಿ ಏನು? ಮಗುವಿನ ಗತಿ ಏನು?"

"ಆ ವಿಷಯ ನನ್ನನ್ನು ಕೇಳ್ಬೇಡಿ. ನೀವು ಬೇಕಾದ್ದು ಮಾಡಬಹುದು."

"ತಾಯಿ ಮಗೂನ ಪುನಃ ಕರಿಸ್ಕೊಳೋದಿಲ್ವೆ ಹಾಗಾದರೆ?"

"ಯಾಕೆ ಕೇಳಿದ್ದನ್ನೇ ಕೇಳ್ತೀರಾ? ಒಂದು ಸಾರೆ ಹೇಳಿದರೆ ಅರ್ಥ ಆಗ ಲ್ವೇನು?"

"ನೀವು ಈ ರೀತಿ ಶಿಕ್ಷೆ ಕೊಡೋದಕ್ಕೆ ನನ್ನ ಮಗಳು ಮಾಡಿದ ತಪ್ಪಾದರೂ ಯಾವುದು?"

ಮುದುಕನ ಸ್ವರವೇರಿತ್ತು. ಪುಟ್ಟಣ್ಣ ತಿರಸ್ಕಾರದಿಂದ ತುಟಿ ಕೊಂಕಿಸಿ ಮುಗುಳು ನಕ್ಕ.

"ಆ ಪ್ರಶ್ನೆಗೆ ಉತ್ತರ ಕೊಡಲೇಬೇಕಾದ ಸಮಯ ಬಂದಾಗ ಕೊಡ್ತೀನಿ. ಈಗ ನಿಮಗೆ ಹೇಳೋದಿಷ್ಟೆ. ಇನ್ನು ಮುಂದೆ ಭೇಟಿಗೆ ಬರಬೇಡಿ. ಅದರಿಂದ ಬಿಡಿಕಾಸಿನ ಪ್ರಯೋಜನವೂ ಆಗೋದಿಲ್ಲ."

ಆಟದ ಬಯಲನ್ನೊಮ್ಮೆ ಕೃಷ್ಣಪ್ಪ ನೋಡಿದರು. ಪಶ್ಚಿಮಕ್ಕೆ ವೇಗವಾಗಿ ಧಾವಿಸುತ್ತಿದ್ದ ಸೂರ್ಯನನ್ನೂ ದಿಟ್ಟಿಸಿದರು.

"ಇದೇನು ಹುಡುಗಾಟವೆ? ಎರಡು ದಿವಸ ಜತೇಲಿ ಆಟವಾಡಿ ಮೂರನೇ ದಿನ ಬಿಡೋದಕ್ಕೆ?"

"ನನಗೆ ನೀವು ಹಿತೋಪದೇಶ ಮಾಡಬೇಕಾದ್ದಿಲ್ಲ."

"ಉಪದೇಶ ಯಾರಿಗೆ ಬೇಕಾಗಿದೆ ಈಗಿನ ಕಾಲದಲ್ಲಿ? ನನ್ನ ಮಗಳ ಗತಿ ಏನು

ಅಂತಲಾದರೂ ಕೇಳೋ ಹಕ್ಕು ನನಗಿದೆ ತಾನೆ?"

"ನನ್ನನ್ನೇನು ಕೇಳ್ತೀರಾ? ನಿಮ್ಮ ಮಗಳು ವಿದ್ಯಾವಂತೆ—ಪ್ರಾಯಸ್ಥೆ. ಏನು ಮಾಡೋದಕ್ಕೂ ನನ್ನಷ್ಟೇ ಸ್ವಾತಂತ್ರ್ಯ ಆಕೆಗೂ ಇದೆ!"

"ಮಾತು ಅತಿಯಾಯ್ತು—ವಿವೇಚನೆ ಇಲ್ಲದೆ ಹೀಗೆಲ್ಲ ಆಡಬಾರದು."

ಪುಟ್ಟಣ್ಣ ತಟಕ್ಕನೆ ಎದ್ದು ನಿಂತ. ಕರವಸ್ತ್ರವನ್ನೆತ್ತಿಕೊಂಡು ಮಡಚಿ ಕೋಟಿನ ಜೇಬಿನೊಳಗಿರಿಸಿದ. ಆತನ ಮುಖ ರಕ್ತಕಣಗಳ ಸಿಕ್ಕುಬಲೆಯಾಯಿತು.

ಕ್ಷೀಣಧ್ವನಿಯ ಆರ್ತನಾದವೇ ಎನ್ನುವ ಹಾಗೆ ಕೃಷ್ಣಪ್ಪನೆಂದರು:

"ಎದ್ದೇ ಬಿಟ್ಟಿರಲ್ಲ ಪುಟ್ಟಣ್ಣ!"

"ನಿಮ್ಮ ಜತೇಲಿ ನಾನು ಮಾತನಾಡಬೇಕಾದ್ದೇನೂ ಇಲ್ಲ."

"ಅಯ್ಯೊ! ಹಾಗೆ ಮಾಡ್ಬೇಡಿ! ದೇವರ ಭಯವಾದರೂ ಇರ್ಲಿ!"

ಮುದುಕನ ಧ್ವನಿ ಗೊಗ್ಗರವಾಯಿತು. ದುರ್ಬಲ ಜಂತುವೆಂಬಂತೆ ಪುಟ್ಟಣ್ಣ ತುಚ್ಛೀಕಾರದಿಂದ ಕೃಷ್ಣಪ್ಪನವರನ್ನು ನೋಡಿದ.

ನಡೆಯತೊಡಗಿದ ಪುಟ್ಟಣ್ಣನ ಬಾಯಿಯಿಂದ ಕೊನೆಯ ಎಚ್ಚರಿಕೆಯ ಮಾತು ಬಂತು:

"ಈಗಲೇ ಹೇಳಿದೀನಿ. ಭೇಟಿಗೆ ಅಂತ ಇನ್ನು ಬರಬೇಡಿ. ಬಂದರೆ ಯಾವ ಪ್ರಯೋಜನವೂ ಇರೋದಿಲ್ಲ, ನೆನಪಿಟ್ಕೊಳ್ಳಿ."

ಕೃಷ್ಣಪ್ಪನವರೂ ತವಕಗೊಳ್ಳುತ್ತ ಎದ್ದು ಅಳಿಯನನ್ನು ಹಿಂಬಾಲಿಸಿದರು. ಆತನನ್ನು ಬಿಡಬಾರದು, ಆತ ವಾಸವಾಗಿರುವ ಜಾಗಕ್ಕೆ ಹೋಗಿ ಮಾತು ಮುಂದುವರಿಸಬೇಕು, ಇದಾಗದೆ ಹೋದರೆ ಕೆಲಸ ಕೆಟ್ಟಂತೆಯೇ—ಎಂದು ಕೃಷ್ಣಪ್ಪನವರು ಕಸಿವಿಸಿಪಡುತ್ತ, ವೇಗವಾಗಿ ನಡೆಯುತ್ತಿದ್ದ ಅಳಿಯನ ಹಿಂದೆಯೆ ತಾವೂ ಸಾಗಿದರು. ಆತ ತಿರುಗಿ ನೋಡಲಿಲ್ಲ. ಯುವಕನ ನಡಿಗೆಯ ತೀವ್ರತೆ ತಮ್ಮ ಶಕ್ತಿಗೆ ಮೀರಿದಾಗ, ಕೃಷ್ಣಪ್ಪನವರು ಸ್ವಲ್ಪ ದೂರ ಓಡುತ್ತ ಸ್ವಲ್ಪ ದೂರ ನಡೆಯುತ್ತ ಹಿಂಬಾಲಿಸಿದರು. ಮತ್ತೆ ಜನಜಂಗುಳಿ. ಆ ಗದ್ದಲದಲ್ಲಿ ಅಳಿಯ ಮರೆಯಾಗದಂತೆ ಕೃಷ್ಣಪ್ಪನವರು ಮತ್ತಷ್ಟು ಹೆಚ್ಚು ಎಚ್ಚರಿಕೆ ವಹಿಸಬೇಕಾಯಿತು. ನಸುಗತ್ತಲಾಗಿ, ವಿದ್ಯುದ್ದೀಪಗಳು ಮಿನುಗಿದುವು. ಆಯಾಸಪಡುತ್ತ ಏದುತ್ತ ಕೃಷ್ಣಪ್ಪನವರು ಹಿಂಬಾಲಿಸಿದರು.

ಪುಟ್ಟಣ್ಣನಿಗೆ ಯಾಕೋ ಸಿಂಬಾದನ ಕೊರಳಿಗೆ ಆತುಬಿದ್ದ ಮುದುಕನ ನೆನಪೇ ಆಗುತಿತ್ತು. ಆತ ಆಟೋ ರಿಕ್ಷಾದ ಆಶ್ರಯ ಪಡೆದ, ಕೃಷ್ಣಪ್ಪನವರಿಗೆ ಅಪರಿಚಿತವಾಗಿದ್ದ ಆ ನೂತನ ವಾಹನ ಪುಟ್ಟಣ್ಣನನ್ನು ಹೊತ್ತುಕೊಂಡು ವೇಗವಾಗಿ ಹೊರಟು ಹೋಯಿತು. ಆಗಲೂ ಮುದುಕ ತನ್ನನ್ನು ಅಟ್ಟಿಸಿಕೊಂಡು ಬರಬಹುದೆಂದು ಪುಟ್ಟಣ್ಣ ಭಾವಿಸಿದ್ದನಾದರೂ ಕೃಷ್ಣಪ್ಪನವರಿಗೆ ಅಂತಹ ಸಾಧ್ಯತೆ ಹೊಳೆದೇ ಇರಲಿಲ್ಲ.

ಅವರು ಹತಾಶರಾಗಿ ಮೆಲ್ಲನೆ ಪಾದಗಳನ್ನೆಳೆಯುತ್ತ ಮೆಜೆಸ್ಟಿಕ್ ವೃತ್ತಕ್ಕೆ ನಡೆದು ಬಂದರು. ಅಲ್ಲಿ ಬಸ್ ನಿಲ್ದಾಣದ ಒರಗು ಬೆಂಚಿನ ಮೇಲೆ ಕುಸಿಕುಳಿತರು.

ಅಲ್ಲಿಂದ ಎದ್ದು ಮುಂದೆಹೋಗುವುದು ತಮ್ಮಿಂದ ಸಾಧ್ಯವಾಗದೆನ್ನುವಷ್ಟು ಅವರಿಗೆ ನಿತ್ರಾಣವೆನಿಸಿತು.

ಸ್ವಲ್ಪ ಹೊತ್ತಾದ ಬಳಿಕ, ಅವರು ಮೂಗಿಗೆ ನಶ್ಯವೇರಿಸಿದರು. ಊರಿನಲ್ಲಿ ತುಂಬಿಸಿದ್ದ ಡಬ್ಬ ಖಾಲಿಯಾಗುತ್ತ ಬಂದಿತ್ತು. ಇನ್ನು ಹೊಸದಾಗಿ ಕೊಳ್ಳಬೇಕು. ಆದರೆ ಅದಕ್ಕೋಸ್ಕರ ಅಂಗಡಿ ಹುಡುಕುವ ಚೈತನ್ಯ ಅವರಿಗಿರಲಿಲ್ಲ.

ಬಲು ದೀರ್ಘವೆನಿಸಿದ್ದ ಅರ್ಧ ಘಂಟೆಯ ಕಾಲ ಅಲ್ಲಿ ಕುಳಿತಿದ್ದು, ಅನಂತರ ಕ್ಯೂನಲ್ಲಿ ಸ್ವಲ್ಪ ಹೊತ್ತು ನಿಂತು, ಬಸ್ಸನ್ನೇರಿ ಅವರು ಶೇಷಾದ್ರಿಪುರ ತಲಪಿದರು.

....ಸ್ನೇಹಿತನ ಹಾದಿ ನೋಡುತ್ತಲೇ ಇದ್ದ ರಾಮಕೃಷ್ಣಯ್ಯ, ಕೃಷ್ಣಪ್ಪನವರಿಂದ ವಿವರ ತಿಳಿದಾಗ ಒಮ್ಮೆಲೆ ಏನನ್ನೂ ಹೇಳಲಿಲ್ಲ.

ಸ್ವಲ್ಪ ಹೊತ್ತಾದ ಬಳಿಕ, ಎತ್ತರದಿಂದ ವಿದ್ಯುದ್ದೀಪ ಬೀರುತಿದ್ದ ಮಂದ ಬೆಳಕಿನಲ್ಲಿ ಕೃಷ್ಣಪ್ಪನವರ ಮುಖವನ್ನು ದಿಟ್ಟಿಸುತ್ತ ಅವರೆಂದರು:

"ಮಹಾರಾಯ ಬೇರೆ ಯಾರನ್ನಾದರೂ ಇಟ್ಕೊಂಡು ಸಂಸಾರ ನಡೆಸ್ತಿದಾನೋ ಏನೋ."

ಇಷ್ಟರವರೆಗೆ ಆ ಸಂದೇಹ ತಮ್ಮನ್ನು ಭಾಧಿಸಿಯೇ ಇರಲಿಲ್ಲವೆನ್ನುವುದು ಕೃಷ್ಣಪ್ಪನವರಿಗೆ ಆಶ್ಚರ್ಯದ ಮಾತಾಗಿತ್ತು. ಅಂತಹ ಭಾವನೆಯುಂಟಾಗುವಂತೆ ಸುನಂದೆಯೂ ಶಂಕೆ ವ್ಯಕ್ತಪಡಿಸಿರಲಿಲ್ಲ.

ಈಗಲೂ ಅವರು, ಅಂತಹ ಸಂಶಯಕ್ಕೆ ತಮ್ಮಲ್ಲಿ ಎಡೆಕೊಡಲು ಇಷ್ಟ ಪಡದೆ ಅಂದರು:

"ಇರಲಾರದು."

"ಏನೋಪ್ಪ."

"ನಾಳೆ ಹ್ಯಾಗಾದರೂ ಮಾಡಿ ಆತ ವಾಸವಾಗಿರೋ ಜಾಗ ಪತ್ತೇ ಹಚ್ತೀನಿ."

"ಅಷ್ಟು ಮಾಡು. ಸಾಯಂಕಾಲದ ಹೊತ್ತಿಗೆ ಇಬ್ಬರೂ ಅಲ್ಲಿಗೆ ಹೋಗೋಣ."

"ಹೂಂ."

"ಆತ ಎಂಥ ಮನುಷ್ಯ ಅನ್ನೋದನ್ನ ನಾನೂ ಒಮ್ಮೆ ನೋಡೇ ಬಿಡ್ತೀನಿ,"

"ಅದೇನು ನೋಡ್ತೀಯೋ ನೋಡಪ್ಪ. ನನಗಂತೂ ಬೇಜಾರಾಗ್ಬಿಟ್ಟಿದೆ."

"ಬೇಜಾರು ಅಂತ ಸುಮ್ನಿರೋಕಾಗುತ್ತೇನಯ್ಯ? ಧೈರ್ಯವಾಗಿರ್ಬೇಕು. ನೋಡೋಣ."

ರಾಮಕೃಷ್ಣಯ್ಯ ಹಾಗೆ ಹೇಳಿದರೇನೋ ನಿಜ. ಆದರೆ, ಪ್ರಶ್ನೆ ಜಟಿಲವಾಗಿದೆ ಎನ್ನುವುದು ಅವರಿಗೆ ಆಗಲೇ ಮನದಟ್ಟಾಗಿತ್ತು. ಗೆಳೆಯನ ಕುಟುಂಬಕ್ಕೆ ಪ್ರಾಪ್ತವಾದ ಸಂಕಟಕ್ಕಾಗಿ ಅವರ ಮನಸ್ಸು ಮರುಗಿತು.

೮

ಪುಟ್ಟಣ್ಣನ ವಾಸ ಸ್ಥಾನವನ್ನು ತಿಳಿಯಲು ಕೃಷ್ಣಪ್ಪನವರು ಕೈಗೊಂಡ ಉಪಾಯ ಬಲು ಪುರಾತನವಾದದ್ದು. ಬೆಳಗ್ಗೆ ಬೇಗನೆದ್ದು ಅವರು ಮುಖ ಕ್ಷೌರ ಮಾಡಿಸಿಕೊಂಡರು. ಪ್ರಾತರ್ವಿಧಿಗಳ ಬಳಿಕ, ಪುಟ್ಟಣ್ಣನ ಆಫೀಸಿಗೆ ಹೊತ್ತಿಗೆ ಮುಂಚೆಯೇ ಹೋಗಿ, ಅಲ್ಲಿನ ಒಬ್ಬ ಜವಾನನನ್ನು ಕುರಿತು "ಅಪ್ಪಾ" ಎಂದರು.

ಕೃಷ್ಣಪ್ಪನವರ ಎಂಟಾಣೆಯ ನಾಣ್ಯ ಆತನ ಅಂಗೈಯೊಳಗೆ ಕುಳಿತಿತು.

ಕಾರಣವಿಲ್ಲದೆಯೇ ಇಂತಹ ಕಾಣಿಕೆ ಸ್ವೀಕರಿಸುವುದು ಸರಿಯಲ್ಲ ಎನ್ನುವಂತೆ ಆತನೆಂದ:

"ಏನು ಸಮಾಚಾರ ಹೇಳಿ."

"ನಿಮ್ಮ ಆಫೀಸಿನಲ್ಲಿ ಎಂಜಿನಿಯರ್ ಸಾಹೇಬರು ಪುಟ್ಟಣ್ಣ ಅವರಿಲ್ವೆ? ಅವರ ಕಡೆಯಿಂದ ನನಗೊಂದು ಕೆಲಸ ಆಗ್ಬೇಕಾಗಿದೆ. ಅವರನ್ನ ನಾನು ತುರ್ತಾಗಿ ನೋಡ್ಬೇಕು. ಸಾಹೇಬರ ಮನೆ ಎಲ್ಲಿದೆ ಅಂತ ತೋರಿಸ್ತೀಯಾ?"

ಜವಾನ ಎಂಟಾಣೆಯನ್ನು ಜೇಬಿನೊಳಕ್ಕೆ ತುರುಕಿದ. ಪುಟ್ಟಣ್ಣ ಈಗ ಇರುವುದೆಲ್ಲೆಂದು ಆತನಿಗೆ ಗೊತ್ತಿರಲಿಲ್ಲ. ಹೀಗಾಗಿ, ಪುಟ್ಟಣ್ಣನ ವಿಭಾಗದ ಕರೆಹುಡುಗನನ್ನು ಆತ ಕರೆದ.

"ಏಯ್ ಪುಟ್ಟಣ್ಣ ಸಾಹೇಬರು ಇರೋದೆಲ್ಲೋ ಈಗ?"

"ಅವರ ಮನೆಯೋರಿಗೆ ಕಾಯಿಲೇಂತ ಹೋಟ್ಲಲ್ಲಿ ರೂಂ ಮಾಡ್ಕೊಂಡವ್ರೆ."

ಹೋಟೆಲು ಯಾವುದೆಂದು ತಿಳಿಯುವ ಆತುರದಲ್ಲಿ ಕಾಹಿಲೆಯ ಅಂಶವನ್ನು ಕೃಷ್ಣಪ್ಪನವರು ಗಮನಿಸಲಿಲ್ಲ.

ಹಿರಿಯ ಜವಾನನೇ ಕೇಳಿದ:

"ಯಾವ್ಹೋಟ್ಲೊ ?"

"ಮಲ್ಲೇಶ್ವರ ಬಸ್ ಸ್ಟ್ಯಾಂಡ್ ಹತ್ರಾನೇ ಕೋಮ್ಲ ವಿಲಾಸ ಅಂತಿಲ್ವಾ?"

"ಈ ರಾಯರ್ನ ಅಲ್ಲಿಗೆ ಕರಕೊಂಡ್ಹೋಗಿ ಬುಟ್ಬರ್ತೀಯಾ? ನಿನಗೇನಾದರೂ ಕೊಡ್ತಾರೆ."

"ಇನ್ನರ್ಧ ಘಂಟೆಯೊಳಗೆ ಅವರೇ ಬರೋದಿಲ್ವಾ?"

"ಅರ್ಜೆಂಟಂತೆ ಕಣೋ."

ಒಂದು ನಿಮಿಷ ಅನಿಶ್ಚಯತೆಯಿಂದ ಮನಸ್ಸು ತೂಗಾಡಿದ ಬಳಿಕ ಹುಡುಗನೆಂದ:

"ಇಲ್ಲಪ್ಪೋ, ಟೇಮಿಲ್ಲ."

ಕೃಷ್ಣಪ್ಪನವರೆಂದರು:

"ಬೇಡ ಬಿಡು. ಮಲ್ಲೇಶ್ವರ ಬಸ್ ಸ್ಟ್ಯಾಂಡ್ ಹತ್ರ ತಾನೇ? ನಾನೇ ಹೋಗ್ತೀನಿ."

ಹೊರಟ ಕೃಷ್ಣಪ್ಪನವರಿಗೆ ಹಿರಿಯ ಜವಾನ ನಮಸ್ಕರಿಸಿದ.

"ನಾನೇ ಹೋಗಿ ಸಾಹೇಬರನ್ನ ನೋಡ್ತೀನಿ. ಯಾರೋ ಹುಡುಕ್ಕೊಂಡು ಬಂದಿದ್ರೂಂತ ಹೇಳ್ಬೇಕಾದ್ದಿಲ್ಲ," ಎಂದರು ಕೃಷ್ಣಪ್ಪ.

"ಆಗ್಩ಿ ಸೋಮಿ," ಎಂದ ಜವಾನ. ಅಂತಹ ಯೋಚನೆ ಆತನಿಗೆ ಇದ್ದಿದ್ದರೆ ತಾನೆ?

ಕೃಷ್ಣಪ್ಪನವರು ಆಗಲೇ ಮಲ್ಲೇಶ್ವರಕ್ಕೆ ಹೊರಡಲಿಲ್ಲ. ರಾಮಕೃಷ್ಣಯ್ಯನನ್ನೂ ಕರೆದುಕೊಂಡು ಹೋಗಲು ಸಂಜೆಯೇ ಪ್ರಶಸ್ತವಾದುದೆಂದು ಅವರು ತೀರ್ಮಾನಿಸಿದ್ದರು. ಆ ಭೇಟಿಯ ಫಲಿತಾಂಶವೇನೇ ಆಗಲಿ, ಆ ಸಲದ ಪ್ರವಾಸದ ಕೆಲಸ ಅಲ್ಲಿಗೆ ಮುಗಿಯುತ್ತಿತ್ತು. ಮಾರನೆಯ ದಿನವೇ ಶನಿವಾರ. ರಾಧಮ್ಮನವರಲ್ಲಿಗೆ ಹೋಗಿ ಹಾಗೆಯೇ ಊರಿಗೆ ಹೊರಟುಬಿಡಬಹುದು...ಹಾಗೆ ಯೋಚಿಸಿ ಕೃಷ್ಣಪ್ಪನವರು ಶನಿವಾರ ರಾತ್ರೆ-ತಪ್ಪಿದರೆ ಭಾನುವಾರ ಬೆಳಗ್ಗೆ-ಮನೆಗೆ ಬರುವೆನೆಂದು ಮಗಳಿಗೆ ಕಾರ್ಡು ಬರೆದರು. 'ನಿನ್ನ ಯಜಮಾನರನ್ನು ಕಂಡಿದ್ದೆ. ಆರೋಗ್ಯವಾಗಿದಾರೆ. ಇವತ್ತೂ ನೋಡುತ್ತೇನೆ. ಬರೆದು ತಿಳಿಸುವಂಥಾದ್ದೇನೂ ಇಲ್ಲ. ಸಮಸ್ತ ವಿಷಯಗಳನ್ನೂ ಬಂದ ಮೇಲೆ ತಿಳಿಸುತ್ತೇನೆ'—ಎಂದೂ ಸೇರಿಸಿದರು.

ಕಾರ್ಡನ್ನು ಕೆಂಪು ಡಬ್ಬದೊಳಗೆ ಇಳಿಬಿಟ್ಟ ಮೇಲೆ, ಸಂಜೆಯವರೆಗೆ ಇನ್ನೇನು ಮಾಡಲಿ? ಎಂದು ತಮ್ಮನ್ನೆ ಕೇಳಿಕೊಂಡರು. ಶಂಕರಪುರದಲ್ಲಿದ್ದ ತಮ್ಮ ಇನ್ನೊಬ್ಬ ಸ್ನೇಹಿತನಲ್ಲಿಗೆ ಹೋದರಾದೀತು-ಎನಿಸಿತು. ಬಳಿಕ, ಕೆಲಸಕ್ಕೆ ಹೊರಟವನು ಇಷ್ಟು ಹೊತ್ತಿಗೆ ಸಿಗಲಾರ-ಎಂಬುದು ನೆನಪಾಯಿತು. ಶೇಷಾದ್ರಿಪುರಕ್ಕೆ ಹೋಗುವುದೇ ವಾಸಿ-ಎಂದವರು ಯೋಚಿಸಿದರು. ಮೊದಲು ಆ ಹೋಟೆಲು ಅಲ್ಲಿದೆಯೇ ಏನೆಂದು ನೋಡಿಕೊಂಡು ಬರುವುದು ಸೂಕ್ತವೆಂದೂ ತೋರಿತು.

ಕೃಷ್ಣಪ್ಪನವರು ಮಲ್ಲೇಶ್ವರಕ್ಕೆ ಹೋದರು. ಕೋಮಲವಿಲಾಸ ವಸತಿ ಗೃಹ ಅಲ್ಲಿತ್ತು. ಮದುವೆಯಾದ ಹೆಂಡತಿಯನ್ನು ಬಿಟ್ಟು ಹೋಟೆಲಿನಲ್ಲಿ ವಾಸವಾಗಿರುವ ಮಹಾನುಭಾವ-ಎಷ್ಟೊಂದು ವಿಚಿತ್ರವಾಗಿದೆ ಪ್ರಪಂಚ ಎನ್ನುತ್ತ—ಅವರು ಶೇಷಾದ್ರಿಪುರಕ್ಕೆ ನಡೆದರು.

"ಒಬ್ಬನೇ ಇದಾನೆ ಅನ್ನೋದು ಶುಭಸೂಚನೆಯೇ. ನೋಡೋಣ," ಎಂದರು ರಾಮಕೃಷ್ಣಯ್ಯ.

ಸದ್ಯಕ್ಕೆ ಆ ವಿಷಯ ಅಷ್ಟು ಸಾಕೆಂದು ಬದಿಗಿರಿಸಿ, ತಮ್ಮ ಕಾಲದ ಹಲವಾರು ಸಂಗತಿಗಳನ್ನು ಕುರಿತು ಗೊತ್ತುಗುರಿಯಿಲ್ಲದೆ ಗೆಳೆಯನೊಡನೆ ರಾಮಕೃಷ್ಣಯ್ಯನವರು ಮಾತು ಬೆಳೆಸಿದರು. ಮುಖ್ಯ ಪ್ರಶ್ನೆಯನ್ನು ತಾತ್ಕಾಲಿಕವಾಗಿ ಮರೆಯಲು ಸಹಾಯಕವಾದ ಆ ಹರಟೆ ಕೃಷ್ಣಪ್ಪನವರಿಗೂ ಪ್ರಿಯವೆನಿಸಿತು.

....ಒಂದು ಸಲದ ಭೇಟಿಯಿಂದಲೆ ಕೃಷ್ಣಪ್ಪನವರು ನಿರಾಶರಾಗಿ ಊರಿಗೆ ಹಿಂತಿರುಗಬಹುದೆಂದು ಪುಟ್ಟಣ್ಣ ಭಾವಿಸಿರಲಿಲ್ಲ. ಆದರೆ ಮಾರನೆಯ ದಿನ ಆ ಕುರು

ಜಲು ಗಡ್ಡದ ಅಳುಮೋರೆಯು ದರ್ಶನವಿರದೇ ಇದ್ದಾಗ ಆತನಿಗೆ ಸ್ವಲ್ಪ ಆಶ್ಚರ್ಯ ವಾಯಿತು. ಸದ್ಯಕ್ಕೆ ಮಾರಿ ತೊಲಗಿತೇನೋ–ಎಂದುಕೊಂಡ.

ಸಂಜೆ ನೇರವಾಗಿ ಆತ ಕೊಠಡಿಗೆ ಮರಳುತ್ತಿದ್ದುದೇ ಕಡಮೆ. ಈ ದಿನವೂ ಆಫೀಸು ಬಿಟ್ಟೊಡನೆಯೇ ಆತ ಪವ್ಯಾಸ ಬಂಧುಗಳ ಕಡೆಗೆ ನಡೆದ. ಹಿಂದಿನ ಸಂಜೆ ಯಿಂದ ತನ್ನನ್ನು ಕಾಡಿದ್ದ ಅಪ್ರಿಯವಾದ ಯೋಚನೆಗಳನ್ನು ಸಂಪೂರ್ಣವಾಗಿ ಕಿತ್ತು ಹಾಕಲು ಆತನಿಗೆ ಸಹವಾಸ ಸುಖ ಬೇಕಿತ್ತು, ದೇಹ ಸುಖ ಬೇಕಿತ್ತು.

....ಕೋಮಲವಿಲಾಸದ ಕೆಳಭಾಗದಲ್ಲಿ ಫಲಾಹಾರ ಮಂದಿರವೂ ಇತ್ತು. ಕೃಷ್ಣಪ್ಪ ರಾಮಕೃಷ್ಣಯ್ಯನ ಜತೆಗೂಡಿ ಐದೂವರೆ ಘಂಟೆಯಿಂದಲೇ ಅಲ್ಲಿ ಕಾದು ಕುಳಿತರು. ಎರಡು ಸಾರೆ ಕಾಫಿಯಾಯಿತು. ಸದ್ಯಃ ಗಿರಾಕಿಗಳ ಗದ್ದಲವಿರಲಿಲ್ಲ. ಹೀಗಾಗಿ ಆ ಮಾತು ಈ ಮಾತು ಆಡುತ್ತ, ಬಾಗಿಲ ಕಡೆಗೇ ನೋಡುತ್ತ ಅವರಿಬ್ಬರೂ ಹೊತ್ತು ಕಳೆದರು.

ಗಂಟೆ ಎಂಟಾದರೂ ಪುಟ್ಟಣ್ಣ ಅತ್ತ ಸುಳಿಯಲಿಲ್ಲ. ಇವರಿಬ್ಬರೂ ಒಂದೇ ಸಮನೆ ಕುಳಿತುದು, ವಸತಿ ಗೃಹದ ಹುಡುಗರ ಕುತೂಹಲಕ್ಕೆ ಸಹಜವಾಗಿಯೇ ಕಾರಣ ವಾಯಿತು. ಒಬ್ಬ ಹುಡುಗ ಅವರನ್ನು ಸಮೀಪಿಸಿ ಕೇಳಿದ:

"ಯಾರನ್ನಾದರೂ ಕಾಣ್ಬೇಕಾಗಿತ್ತಾ?"

ರಾಮಕೃಷ್ಣಯ್ಯ ಉತ್ತರವಿತ್ತರು;

"ಹೂನಪ್ಪಾ. ಪುಟ್ಟಣ್ಣ ಅಂತ ಇಲ್ಲಿ ಒಬ್ಬರು ವಾಸವಾಗಿಲ್ವೆ? ಅವರು ನಮ್ಮ ಸ್ನೇಹಿತರು. ಅವರನ್ನ ಕಾಣ್ಬೇಕಾಗಿತ್ತು."

ಹುಡುಗನೆಂದ:

"ಇಷ್ಟು ಹೊತ್ತಿಗೆ ಎಲ್ಲಿ ಸಿಗ್ತಾರೆ? ಅವರು ಬರೋದು ಹನ್ನೊಂದು ಘಂಟೆಗೋ ಹನ್ನೆರಡು ಘಂಟೆಗೋ."

ಕೃಷ್ಣಪ್ಪನವರ ಮುಖ ಕಪ್ಪಿಟ್ಟಿತು: ಈ ದಿನ ಭೇಟಿ ಸಾಧ್ಯವಿಲ್ಲ ಎಂಬುದು ಒಂದು ಕಾರಣ; ಅಷ್ಟು ರಾತ್ರಿಯವರೆಗೂ ಅಳಿಯ ಕೆಟ್ಟವರ ಸಹವಾಸದಲ್ಲೆ ಇರುವ ನೆಂಬುದು ಇನ್ನೊಂದು ಕಾರಣ.

ರಾಮಕೃಷ್ಣಯ್ಯನವರಿಗೂ ಆ ಅಂಶಗಳು ಹೊಳೆದುವು. ಆದರೂ ಅವ ರೆಂದರು:

"ಊಟಕ್ಕೆ ಇಲ್ಲಿಗೆ ಬರಲ್ವೇನು?"

"ಗ್ಯಾರಂಟಿ ಇಲ್ಲ."

"ನಡೀಪ್ಪಾ ಹೋಗೋಣ," ಎಂದರು ರಾಮಕೃಷ್ಣಯ್ಯ ಕೃಷ್ಣಪ್ಪನವರನ್ನು ದ್ದೇಶಿಸಿ.

"ಅವರಿಗೇನಾದರೂ ಹೇಳ್ಬೇಕೆ?" ಎಂದ ಹುಡುಗ.

"ಏನೂ ಬೇಡ. ನಾಳೆ ನಾವೇ ಬಂದು ನೋಡ್ತೀವಿ" ಎಂದು ರಾಮಕೃಷ್ಣಯ್ಯ

ಎದ್ದು, ಕೃಷ್ಣಪ್ಪನವರನ್ನೂ ಎಬ್ಬಿಸಿದರು.

ಅಲ್ಲಿ ಬಿಲ್ಲನ್ನು ರಾಮಕೃಷ್ಣಯ್ಯ ತೆತ್ತರು. ಬೀದಿಗಿಳಿಯುತ್ತಿದ್ದಂತೆ ಕೃಷ್ಣಪ್ಪ ನವರೆಂದರು:

"ನಾವು ಬಂದದ್ದು ಗೊತ್ತಾದರೆ ನಾಳೆ ತಪ್ಪಿಸ್ಕೊತಾನೋ ಏನೋ."

"ಬೆಳಗ್ಗೆ ಆತ ಏಳೋಕ್ಮುಂಚೇನೇ ಬಂದುಬಿಡೋಣ...ಅಲ್ದೆ, ತಪ್ಪಿಸಿಕೊಳ್ಳೋ ಪ್ರಯತ್ನ ಆತ ಮಾಡಲಾರ ಅನ್ನಿಸುತ್ತೆ. ಎಷ್ಟು ದಿನಾಂತ ತಪ್ಪಿಸ್ಕೋಬಹುದು?" ಎಂದು ರಾಮಕೃಷ್ಣಯ್ಯನವರು ಸಮಾಧಾನ ಹೇಳಿದರು.

...ಅವರು ಹೇಳಿದುದೇ ನಿಜವಾಗಿತ್ತು. ಪುಟ್ಟಣ್ಣ, 'ಯಾರೋ ಇಬ್ಬರು ಬಂದಿದ್ದರೆ'ಂಬುದನ್ನು ರಾತ್ರಿಯೇ ತಿಳಿದ. ವಯಸ್ಸಾದವರು ಎಂದ ಮೇಲೆ, ಒಬ್ಬಾತ ತನ್ನ ಮಾವನೇ ಇರಬಹುದೆಂದು ಊಹಿಸಿದ. ಇನ್ನೊಬ್ಬ...? ಸರಿ–ಬಂದಾಗ ನೋಡಿ ಕೊಂಡರಾಯ್ತು, ಎಂದು ಸುಮ್ಮನಾದ.

ಆತ ಏಳುವುದಕ್ಕೆ ಮುಂಚೆಯೇ ಅವರು ಬಂದರು– ಪುಟ್ಟಣ್ಣನಿಗೆ ಸಣ್ಣನೆ ತಲೆ ಸಿಡಿಯುತ್ತಿತ್ತು. 'ಈಗ ಪುರಸೊತ್ತಿಲ್ಲ' ಎಂದು ಹೇಳಬೇಕೆಂದು ಯೋಚಿಸುತ್ತ ಆತ ಕದ ತೆರೆದ.

ರಾಮಕೃಷ್ಣಯ್ಯ ಹಲ್ಲು ಕಿರಿದು "ನಮಸ್ಕಾರ" ಎಂದರು. ಈ ಹೊಸ ವ್ಯಕ್ತಿ ಯನ್ನು ಕಂಡು ಕುತೂಹಲವೆನಿಸಿ ಪುಟ್ಟಣ್ಣ, ತಾನು ಹೇಳಬೇಕೆಂದಿದ್ದುದನ್ನು ಮರೆತ. ರಾಮಕೃಷ್ಣಯ್ಯ ಮುಂದುವರಿಸಿದರು.

"ನಿಮಗೆ ನನ್ನ ಜ್ಞಾಪಕವಿದೆಯೋ ಇಲ್ಲವೋ. ನಿಮ್ಮ ಮದುವೇಲೇ ಮೊದಲು ನೋಡಿದ್ದು. ಆಮೇಲೆ ಸುನಂದಾ ಮತ್ತು ನೀವು ಜತೇಲಿ ಒಮ್ಮೆ ಮಾರ್ಕೆಟಿಗೆ ಬಂದಿ ದ್ದಾಗ ಅಲ್ಲಿ ಅಕಸ್ಮಾತ್ ಭೇಟಿಯಾಗಿತ್ತು, ನಿಮ್ಮ ಮಾವನೂ ನಾನೂ ಹಳೇ ಸ್ನೇಹಿತರು."

ಪುಟ್ಟಣ್ಣ ಮಾವನ ಮುಖ ನೋಡಿದ. ಅಲ್ಲಿ ಕುರುಚಲು ಗಡ್ಡವಿರಲಿಲ್ಲ. ಗಲ್ಲದ ಮೂಳೆಗಳೀಗ ಕಂಡುಬರುತ್ತಿದ್ದುವು. ಪುಟ್ಟಣ್ಣನಿಗೆ ಅದು ಮತ್ತಷ್ಟು ಅಸಹ್ಯ ವೆನಿಸಿತು.

ಇಬ್ಬರನ್ನೂ ನೋಡುತ್ತ ಆತ ಕೇಳಿದ:

"ಏನಾಗ್ಬೇಕಾಗಿದೆ ನನ್ನಿಂದ?"

ರಾಮಕೃಷ್ಣಯ್ಯನೆಂದರು:

"ಇಲ್ಲಿ ನೀವಿರೋದು ತಿಳೀತು. ಹೀಗೇ ನೋಡ್ಕೊಂಡು ಹೋಗೋಣಾಂತ ಬಂದ್ವಿ."

ರಾಮಕೃಷ್ಣಯ್ಯ ಕೊಠಡಿಯೊಳಕ್ಕೆ ಬಂದು ಅಂದರು:

"ನೀವು ಮುಖ ತೊಳ್ಕೊಂಡು ಬನ್ನಿ. ಸಂಕೋಚ ಯಾತಕ್ಕೆ? ಬೇಕಾದರೆ ನಾವು ಹೊರಗೇ ಇರ್ತೀವಿ."

ಪುಟ್ಟಣ್ಣ ಒಂದು ಕ್ಷಣ ಅನುಮಾನಿಸಿ, "ಇಲ್ಲಿ ಕೂತ್ಕೋಬಹುದು" ಎಂದು ಹೋಟೆಲಿನ ಸ್ನಾನದ ಮನೆಗೆ ನಡೆದ.

"ಬಾರಯ್ಯ ಒಳಗೆ. ಅಳಿಯನ ಮನೆ ಆತಿಥ್ಯ ಸ್ವೀಕರಿಸು," ಎಂದು ರಾಮ ಕೃಷ್ಣಯ್ಯ ಕೃಷ್ಣಪ್ಪನವರನ್ನು ಕರೆದರು.

ಸೊಳ್ಳೆ ಪರದೆ ಇದ್ದ ಮಂಚ. ಮೃದು ಹಾಸಿಗೆ. ಗೋಡೆಯಲ್ಲಿ ಬೀರು. ದೊಡ್ಡ ಮೇಜು. ಕನ್ನಡಿ. ಕರಿ ಮರದ ಕುರ್ಚಿ. ಬೆತ್ತದೊಂದು ಆರಾಮ ಕುರ್ಚಿ. ಎರಡು ದೊಡ್ಡ ಟ್ರಂಕುಗಳು. ಸ್ಟಾಂಡಿನಲ್ಲಿ ಅಸ್ತವ್ಯಸ್ತವಾಗಿ ತೂಗಾಡುತ್ತಿದ್ದ ಬಟ್ಟೆ ಬರೆ.

ರಾಮಕೃಷ್ಣಯ್ಯ ಬೆತ್ತದ ಕುರ್ಚಿಯನ್ನು ಹಾಸಿಗೆಯ ಪಕ್ಕಕ್ಕೆ ಎಳೆದು ಅದರ ಮೇಲೆ ಆಸೀನರಾದರು. ಹಾಸಿಗೆಯ ಅಂಚಿನಲ್ಲಿ ಕೃಷ್ಣಪ್ಪನವರು ಕುಳಿತರು.

ಇದೀಗ ಅಳಿಯನ ವಸತಿ. ಒಂದು ಹೆಣ್ಣಿನ ಬದುಕನ್ನು ನಿಷ್ಕಾರಣವಾಗಿ ಮಣ್ಣುಗೂಡಿಸಲು ಯತ್ನಿಸಿದ ಬಳಿಕ, ಇದೀಗ ಆತ ಅನುಭವಿಸುತ್ತಿದ್ದ ಭೋಗ ವಿಲಾಸ.

"ಹೆಚ್ಚಿನ ಮಾತುಕತೆಯೆಲ್ಲ ನಾನೇ ಮಾಡ್ಲೇನಪ್ಪ?" ಎಂದರು ರಾಮಕೃಷ್ಣಯ್ಯ.

"ಹೂಂ."

"ನೀನು ಧೈರ್ಯವಾಗಿರು. ಸಿಟ್ಟಿನಲ್ಲಿ ಏನಾದರೂ ಅಂದೇನು ಅಂತ ಚಿಂತಿಸ್ಬೇಡ. ದಂಡೋಪಾಯ ಅಗತ್ಯವಾದರೆ ಅದಕ್ಕಿನ್ನೂ ಸಮಯವಿದೆ. ಮುಂದೆ ಮಾಡಿದರಾಯ್ತು."

"ಹ್ಯಾಗೆ ತೋಚುತ್ತೋ ಹಾಗ್ಮಾಡು."

ಸುತ್ತಲೂ ದೃಷ್ಟಿ ಹರಿಸುತ್ತ ರಾಮಕೃಷ್ಣಯ್ಯ, "ಅಂತೂ ಒಂಟಿ ಜೀವನ ಚೆನ್ನಾಗಿ ಒಗ್ಗಿದೆ ಈ ಮನುಷ್ಯನಿಗೆ," ಎಂದರು.

ಅಷ್ಟರಲ್ಲೇ ಪುಟ್ಟಣ್ಣ ಹಿಂತಿರುಗಿದ. ಮುಖಕ್ಕಷ್ಟು ನೀರನ್ನಷ್ಟೆ ಹನಿಸಿ, ಬಂದಿದ್ದವರನ್ನು ಬೇಗನೆ ಹೊರಹಾಕುವ ನಿರ್ಧಾರದಿಂದಲೇ ಆತ ಒಳಬಂದ.

ತೆರವಾಗಿದ್ದ ಕುರ್ಚಿಯ ಮೇಲೆ ಕುಳಿತು ಆ ಇಬ್ಬರನ್ನೂ ಪುಟ್ಟಣ್ಣ ದಿಟ್ಟಿಸಿದ. ಮಾವನ ಜತೆಯಲ್ಲಿ ಬಂದಿದ್ದಾತನ ಉದ್ಧಟತನದ ನೋಟ ಅಸಹನೀಯವಾಗಿ ಅಕ್ಷಮ್ಯವಾಗಿ ಆತನಿಗೆ ತೋರಿತು.

"ನನಗೆ ತುಂಬಾ ಕೆಲಸವಿದೆ. ವಿಷಯವೇನಿದೆಯೋ ಚುಟುಕಾಗಿ ತಿಳಿಸಿದರೆ ನಿಮಗೇ ಅನುಕೂಲ," ಎಂದ ಪುಟ್ಟಣ್ಣ.

"ಹಾಗೇ ಆಗಲಿ," ಎಂದರು ರಾಮಕೃಷ್ಣಯ್ಯ. ಕೃಷ್ಣಪ್ಪನವರ ಕಡೆಗೊಮ್ಮೆ ನೋಡಿ ಅವರು ಮುಂದುವರಿಸಿದರು: "ನಿಮ್ಮನ್ನು ಒಂದು ವಿಷಯದಲ್ಲಿ ಸಲಹೆ ಕೇಳೋಣಾಂತ ಬಂದಿದ್ದೀನಿ ಪುಟ್ಟಣ್ಣನವರೆ. ನನಗೊಬ್ಬಳು ಮಗಳಿದ್ದಾಳೆ. ಸುಂದರಿ, ವಿದ್ಯಾವತಿ–ಎಲ್ಲಾ ಗುಣಗಳೂ ಇವೆ. ನನ್ನ ಅಳಿಯ ವಿನಾಕಾರಣ ಆಕೆಯನ್ನೂ

ಆಕೆಯಲ್ಲಿ ಹುಟ್ಟಿದ ಮಗುವನ್ನೂ ಬಿಟ್ಟು ಬಿಟ್ಟಿದ್ದಾನೆ. ಸಮಾಜ ಆ ಹುಡುಗಿಯ ವಿಷಯದಲ್ಲಿ ಇಲ್ಲಸಲ್ಲದ ಮಾತು ಆಡುತ್ತೆ. ನಾನೋ ಮುದುಕ ಎದೆಯೊಡೆದು ಸಾಯೋದಕ್ಕೆ ಈ ಸಂಕಟವೇ ಸಾಕು. ಆದರೆ ಹೀಗಾಗೋದು ನ್ಯಾಯ ಸಮ್ಮತವೆ? ತಿಳಿದವರಾದ ನೀವು—"

"ನಿಲ್ಲಿಸಿ!" ಎಂದು ಸ್ವರವೇರಿಸಿ ಕೂಗಿದ ಪುಟ್ಟಣ್ಣ. ಈ ಆಸಾಮಿ ಉದ್ಧಟ ನಷ್ಟೇ ಅಲ್ಲ, ನೀಚ ಕೂಡ—ಎನಿಸಿತು ಆತನಿಗೆ.

ರಾಮಕೃಷ್ಣಯ್ಯ ಒಂದು ಕ್ಷಣ ಸುಮ್ಮನಿದ್ದು ಕೇಳಿದರು:

"ಯಾಕೆ, ಈ ವಿಷಯ ನಾನು ಪ್ರಸ್ತಾಪಿಸಬಾರದಾಗಿತ್ತೆ? ನಾನು ನಿಮ್ಮ ಸಲಹೆ ಕೇಳೋದು ತಪ್ಪೆ?"

ಪುಟ್ಟಣ್ಣ ಮುಖ ಕೆಂಪೇರಿ ಕಿರಿಚಿದ:

"ಇಲ್ಲಿ ಮುಂದುಗಡೆ, ವಕೀಲರು ಅಂತ ಬೋರ್ಡು ನೋಡಿದಿರೇನು ನೀವು? ನಿಮಗೆ ಬೇಕಾದ ಸಲಹೆ ವಕೀಲರು ಕೊಡ್ತಾರೆ, ಇಲ್ಲಿಂದ ಹೊರಡಿ!"

ಕೃಷ್ಣಪ್ಪನವರು, ತಮ್ಮ ಮಗಳ ಕತೆ ಮುಗಿದಂತೆಯೇ ಎಂದು ನಿರಾಶೆಯಿಂದ ಮೌನವಾಗಿ ತಲೆಯಾಡಿಸಿದರು. ರಾಮಕೃಷ್ಣಯ್ಯನ ಮುಖ ವಿವರ್ಣವಾಯಿತಾದರೂ ಅದನ್ನು ಅವರು ತೋರಗೊಡಲಿಲ್ಲ. ಪುಟ್ಟಣ್ಣ ಸರಾಗವಾಗಿ ಉಸಿರಾಡುವಂತೆ ಎರಡು ನಿಮಿಷ ಅವಕಾಶ ಕೊಟ್ಟು, ತಗ್ಗಿದ ಸ್ವರದಲ್ಲಿ ಅವರೆಂದರು:

"ಅಪ್ಪಾ, ನೀವು ಹೀಗೆ ಮಾಡೋದು ಯಾರಿಗೆ ಸಮ್ಮತ? ನಿಮ್ಮಷ್ಟು ತಿಳಿದೋರು ವಿದ್ಯಾವಂತರು ಸಾರಾಸಾರ ಯೋಚ್ನೆ ಮಾಡ್ಬೇಡ್ವೆ? ಇದೇನು ಆಸ್ತಿಪಾಸ್ತಿಗೆ ಸಂಬಂಧಪಟ್ಟ ವಿಷಯವೆ—ಹೀಗೆ ಕಿತ್ತಾಡೋದಕ್ಕೆ? ಹಿಂದೂಗಳಾಗಿ ಹುಟ್ಟಿ—"

"ನಿಮ್ಮ ವ್ಯಾಖ್ಯಾನ ಕೇಳೋದು ನನಗಿಷ್ಟವಿಲ್ಲ!"

"ರೇಗ್ಬೇಡಿ ಪುಟ್ಟಣ್ಣ. ನನಗೆ ನಿಮ್ಮಷ್ಟೇ ವಯಸ್ಸಿನ ಇಬ್ಬರು ಅಳಿಯಂದಿರಿದಾರೆ. ಕೃಷ್ಣಪ್ಪನವರೂ ನಾನೂ ತುಮಕೂರಲ್ಲಿ ಜತೇಲಿದ್ದಾಗ, ಎಳೇಮಗು ಸುನಂದೆನ ಎತ್ತಿ ಆಡಿಸ್ದೋನು ನಾನು. ಸಂಬಂಧವಿಲ್ದೋನು, ಯಾವನೋ ಬಂದು ತಲೆಹರಟೆ ಆಡ್ತಿದಾನೇಂತ ದಯವಿಟ್ಟು ಭಾವಿಸ್ಬೇಡಿ. ಮಗಳ ಅವಸ್ಥೆ ಹೀಗಾಯಿತಲ್ಲಾಂತ ನನ್ನ ಸ್ನೇಹಿತ ಪಡ್ತಿರೋ ಸಂಕಟ ನೋಡೋಕಾಗ್ದೆ ನಾನೂ ಎರಡು ಮಾತು ಹೇಳೋಣ, ಕೈಯೊಡ್ಡಿ ಭಿಕ್ಷೆ ಕೇಳೋಣಾಂತ ಬಂದೆ. ಇನ್ನೇನೂ ಭಾವಿಸಬೇಡಿಪ್ಪಾ..."

ತಾವೂ ಏನನ್ನೋ ಹೇಳಬೇಕೆಂದು ಕೃಷ್ಣಪ್ಪನವರು ಗಂಟಲು ಸರಿಪಡಿಸಿಕೊಂಡರು. ಆದರೆ ಅದಕ್ಕೆ ಅವಕಾಶ ಕೊಡಲಾರೆನೆನ್ನುವಂತೆ ಪುಟ್ಟಣ್ಣ ಮಾತನಾಡಿದ:

"ಎಲ್ಲಾ ಮುಗಿಯಿತು ತಾನೆ? ಏನು ಉತ್ತರ ಕೊಡಬೇಕೋ ಅದನ್ನು ನಿನ್ನೆಯೇ ತಿಳಿಸಿದ್ದೇನೆ. ನೀವಿನ್ನು ಹೋಗಬಹುದು."

ಆದರೆ ರಾಮಕೃಷ್ಣಯ್ಯ ಮಿಸುಕಲಿಲ್ಲ.

"ಸಂಸಾರ ಅಂದ್ಮೇಲೆ ವಿರಸ ಇದ್ದೇ ಇರುತ್ತೆ ಪುಟ್ಟಣ್ಣ. ಒಮ್ಮೆಯೂ ಜಗಳಾಡದ ಗಂಡ ಹೆಂಡತಿಯರಿದ್ದಾರೆಯೆ ಹೇಳಿ. ಅಂಥದೇನು ಬಂದರೂ ಸರಿಪಡಿಸಿಕೊಂಡು ಹೋಗೋದು ವಾಡಿಕೆ. ಅಲ್ವೆ? ಸುನಂದಾ ಅನ್ನ ನೀರು ಸೇರದೆ ಕೊರಗ್ತಿದಾಳೆ. ನಿಮ್ಮನ್ನು ಬಿಟ್ಟರೆ ಬೇರೆ ಯಾರಿದಾರೆ ಆಕೆಗೆ? ತನ್ನದೇನು ತಪ್ಪಿದ್ದರೂ ಕ್ಷಮಿಸ್ಬೇಕೂಂತ ಆಕೆ ಕೇಳ್ಕೊಂಡಿದಾಳೆ. ನೀವು ಹ್ಯಾಗಿರು ಅಂದರೆ ಹಾಗಿರ್ತ್ತಾಳೆ. ಆಕೆ ಮತ್ತು ಆ ಮಗುವಿನ ಪ್ರಾಣರಕ್ಷಣೆ ನಿಮ್ಮ ಕೈಲಿದೆ."...

ಕುಳಿತಿದ್ದ ಪುಟ್ಟಣ್ಣ, ಕುರ್ಚಿಯನ್ನು ಸರ್ರನೆ ಹಿಂದೆ ನೂಕಿ ಎದ್ದು ನಿಂತ.

ಬಾಗಿಲನ್ನು ಹಾದು ಹೋಟೆಲಿನ ಇತರ ನಿವಾಸಿಗಳೂ ಹುಡುಗರೂ ಅತ್ತಿತ್ತ ಹೋದ ಹಾಗಾಯಿತು.

ಒರಟು ಧ್ವನಿಯಲ್ಲಿ ಪುಟ್ಟಣ್ಣನೆಂದ:

"ನೀವು ಈಕ್ಷಣ ಇಲ್ಲಿಂದ ಹೊರಡ್ಬೇಕು. ಇಲ್ದೇ ಇದ್ರೆ ಹೋಟೆಲಿನವರಿಗೆ ಹೇಳಿ ಆಳುಗಳನ್ನ ಕರಿಸ್ತೀನಿ. ಕೇಳಿಸ್ತೆ?"

"ಕೇಳಿಸ್ತು. ಇನ್ನು ಏಳಿ ಕೃಷ್ಣಪ್ಪ," ಎಂದರು ರಾಮಕೃಷ್ಣಯ್ಯ.

ಕೃಷ್ಣಪ್ಪನವರೆದ್ದು ತಾವೂ ಅಂದರು:

"ಪುಟ್ಟಣ್ಣ....ಪುಟ್ಟಣ್ಣ...ಹೀಗೆ ಮಾಡ್ಬೇಡವಪ್ಪ..."

ರಾಮಕೃಷ್ಣಯ್ಯ ಕೈಮುಗಿದರು:

"ಹೋಗಿ ಬರ್ತೀವಿ ಪುಟ್ಟಣ್ಣನವರೆ. ನನ್ನ ಹೆಸರು ನಿಮಗೆ ಗೊತ್ತಿರಲಾರದು. ರಾಮಕೃಷ್ಣಯ್ಯ ಅಂತ. ಶೇಷಾದ್ರಿಪುರದಲ್ಲಿದೀನಿ. ನಿಮ್ಮ ಮಾವನ ಹಾಗೆ ನನಗೂ ರಿಟೈರಾಗಿದೆ. ಇವತ್ತೇನೋ ಹೀಗಂದಿರಿ. ಆದರೆ ಒಂದು ತಿಂಗಳಾದ್ಮೇಲೂ ಇದೇ ಮಾತು ಹೇಳ್ತೀರೀಂತ ನಾನು ಭಾವಿಸೋದಿಲ್ಲ, ಆ ಪರಮಾತ್ಮ ನಿಮಗೆ ಒಳ್ಳೇ ಬುದ್ಧಿ ಕರುಣಿಸ್ದೆ ಇರ್ತಾನ್ಯೆ?......ಆಗಲಿ......ಇನ್ನೊಮ್ಮೆ ಯಾವತ್ತಾದರೂ ಭೇಟಿಯಾಗೋಣ..."

ಮೈಯೆಲ್ಲ ಉರಿಯುತ್ತಿದ್ದ ಪುಟ್ಟಣ್ಣನನ್ನು ಅಲ್ಲೆ ಬಿಟ್ಟು ಬಂದವರಿಬ್ಬರೂ ಮೆಟ್ಟಲುಗಳನ್ನಿಳಿದು ಬೀದಿ ಸೇರಿದರು...

ರಾಮಕೃಷ್ಣಯ್ಯ ಹೊದೆದಿದ್ದ ಶಾಲನ್ನು ಸರಿಪಡಿಸಿಕೊಂಡರು. ಹೆಚ್ಚು ಕಡಮೆ ನುಣ್ಣಗಾಗಿದ್ದ ತಲೆಯ ಮೇಲೊಮ್ಮೆ ಕೈಯಾಡಿಸಿದರು. ಅಸ್ಪಷ್ಟವಾಗಿ ಏನನ್ನೋ ಗೊಣಗಿದರು.

ಖಿನ್ನವಾಗಿತ್ತು ಕೃಷ್ಣಪ್ಪನವರ ಮನಸ್ಸು. ಇನ್ನೇನೂ ಆಸೆ ಉಳಿದಂತೆ ಅವರಿಗೆ ತೋರಲಿಲ್ಲ. ತಮ್ಮ ದೇಹ ಅರ್ಧಕ್ಕರ್ಧ ಕುಗ್ಗಿ ಹೋದಂತೆ, ತಾವು ಭೂಮಿಗೆ ಕುಸಿದಂತೆ, ಅವರಿಗೆ ಅನಿಸಿತು.

ದಪ್ಪನೆಯ ಗಂಟಲಿನಲ್ಲಿ ರಾಮಕೃಷ್ಣಯ್ಯ ಬಡಬಡಿಸಿದರು:

"ಎಲ್ಲಾದರೂ ಉಂಟೆ? ಹೀಗಾಗೋದು ಅಂದರೆ ಏನರ್ಥ? ಛೆ! ಛೆ! ಎಷ್ಟು

ದಿವಸ ಅಂತ ಹೀಗೆ ಪೊಂಡುತನ ಮಾಡ್ತಾನೋ ನೋಡೋಣ. ಅವನನ್ನು ಹಾದಿಗೆ ತರಲೇಬೇಕು. ಇಲ್ಲದಿದ್ರೆ ನಾವೆಲ್ಲಾ ಬದುಕಿದ್ದೂ ಏನು ಪ್ರಯೋಜನ? ನೀನು ಹೆದರಬೇಡ ಕೃಷ್ಣಪ್ಪ. ಊರಿಗೆ ಹೋಗಿ ನಿಶ್ಚಿಂತೆಯಾಗಿರು. ಇವನ ಮೇಲೆ ನಾನು ಕಣ್ಣಿಟ್ಟಿರ್ತೀನಿ. ಸ್ವಲ್ಪ ದಿವಸ ಬಿಟ್ಕೊಂಡು ಪುನಃ ಪ್ರಯತ್ನಿಸೋಣ. ಎಲ್ಲಾ ಸರಿ ಹೋಗ್ಬಹುದು... ಎಲ್ಲಾ ಸರಿಹೋಗುತ್ತೆ..."

...ಬಂದ ಕೆಲಸ ಹಾಗೆ ಮುಗಿಯಿತೆಂದು ಆ ದಿನವೆ ಊರಿಗೆ ಹೊರಡಲು ಕೃಷ್ಣಪ್ಪನವರು ಸಿದ್ಧರಾದರು.

ರಾಧಮ್ಮನವರ ಮನೆಗೆ ಊಟಕ್ಕೆ ಬರಹೇಳಿದ್ದರು. ಬೇರೆ ಊಟ ಅವರ ಒಲವಿನ ಸಂಕೇತ, ಅಷ್ಟೆ. ಅದಕ್ಕಿಂತಲೂ ಮುಖ್ಯವಾಗಿದ್ದುದು, ಸುನಂದೆಗೋಸ್ಕರ ಚಡಪಡಿಸುತ್ತಿದ್ದ ರಾಧಮ್ಮನಿಗೆ ಪರಿಸ್ಥಿತಿಯ ವಿವರವನ್ನಿಷ್ಟು ತಿಳಿಸುವುದು.

ಕೃಷ್ಣಪ್ಪನವರು ಅವರ ಮನೆ ಸೇರಿದಾಗ ರಾಮಯ್ಯ ಅದೇ ಆಗ ಆಫೀಸಿನಿಂದ ಬಂದಿದ್ದರು.

ರಾಧಮ್ಮ ಅಡುಗೆ ಮನೆಯೊಳಗಿನಿಂದ ಹೊರಕ್ಕಿಣಿಕಿ ಕೃಷ್ಣಪ್ಪನವರ ಮುಖ ನೋಡಿದರು. ನೋಡಿದಾಕೆಯ ಮುಖ ಕಪ್ಪಿಟ್ಟಿತು.

"ಮೊದಲು ಊಟವಾಗಲಿ, ಆಮೇಲೆ ಮಾತಾಡುವಿರಂತೆ," ಎಂದರು ರಾಧಮ್ಮ, ತಮ್ಮ ಗಂಡನನ್ನೂ ಕೃಷ್ಣಪ್ಪನವರನ್ನೂ ಉದ್ದೇಶಿಸಿ.

ಅಲ್ಲೆ ಇರಿಸಿದ್ದ ಎರಡು ಎಲೆಗಳನ್ನು ಕಂಡು, ಕೈಕಾಲು ತೊಳೆದುಬಂದ ಕೃಷ್ಣಪ್ಪನವರು ಕೇಳಿದರು:

"ನಿಮ್ಮ ಹುಡುಗರ ಊಟವಾಯ್ತೆ?"

"ಮನೇಲಿ ಹೊತ್ತು ಹೋಗುತ್ತೇನು ಅವಕ್ಕೆ? ಆಗ್ಲೆ ಊಟ ಮಾಡಿ ಎದ್ಬಿಟ್ಟಿದ್ದಾರೆ," ಎಂದರು ರಾಧಮ್ಮ.

ಊಟ ಮಾತಿಲ್ಲದೆಯೆ ನಡೆಯಿತು. ಇಚ್ಛೆ ಇಲ್ಲದಿದ್ದರೂ ಮನೆಯೊಡತಿಯ ಒತ್ತಾಯಕ್ಕೋಸ್ಕರ ಕೃಷ್ಣಪ್ಪನವರು ವಿಶೇಷದ ಅಡುಗೆಯನ್ನು ಉಂಡರು.

ಗಂಡಸರು ವೀಳ್ಯ ಹಾಕಿಕೊಳ್ಳುತ್ತಿದ್ದಂತೆ ರಾಧಮ್ಮ ಅವಸರವಾಗಿಯೇ ಊಟ ಮುಗಿಸಿ ಕೈತೊಳೆದು ಬಂದರು.

ವ್ಯಥೆಪಡುತ್ತ ಆಕೆ ಕೇಳಿದುದು ಕಹಿಯಾದ ಕಥೆಯನ್ನೇ.

ರಾಧಮ್ಮನವರು ಕೊಟ್ಟುದೊಂದೇ ಸಲಹೆ:

"ನೀವು ಸುನಂದೇನ ಕರಕೊಂಡ್ಬನ್ನಿ. ಸುನಂದೆ-ಮಗು ಇಬ್ಬರನ್ನೂ ಕರಕೊಂಡ್ಬನ್ನಿ, ಆತ ಯಾಕೆ ಹಾದಿಗೆ ಬರಲ್ವೊ ನೋಡೋಣ."

"ಸ್ವಲ್ಪ ಸಮಯ ಬಿಟ್ಕೊಂಡು ಹಾಗೇ ಮಾಡ್ತೀನಿ ತಾಯಿ," ಎಂದರು ಕೃಷ್ಣಪ್ಪ.

....ರಾತ್ರೆ ಇದ್ದು ಹೋಗಲು ಒಪ್ಪದೆ ಸಂಜೆಯ ರೈಲಿಗೇ ಅವರು ಊರಿಗೆ ಹೊರಟರು. ಬೇಡಬೇಡವೆಂದರೂ ಕೇಳದೆ ರಾಧಮ್ಮ, ಸುನಂದೆಗಾಗಿ ಚಕ್ಕುಲಿ ಕೋಡುಬಳೆಯ ಪೊಟ್ಟಣ ಕಟ್ಟಿಕೊಟ್ಟರು:

ಅಲ್ಲಿಂದ ಹೊರಬೀಳುತ್ತಿದ್ದಂತೆ ಕೃಷ್ಣಪ್ಪನವರು ಪಕ್ಕದಲ್ಲೆ ಅಳಿಯನೂ ಮಗಳೂ ವಾಸವಾಗಿದ್ದ ಮನೆಯನ್ನೊಮ್ಮೆ, ನೋವು ತುಂಬಿದ ನೋಟದಿಂದ ನೋಡಿದರು.

೬

ತಮ್ಮ ಗಂಡನ ಕಾಗದ ಬಂದೊಡನೆ ಸುನಂದೆಯ ತಾಯಿ ಕೇಳಿದ್ದರು:

"ಏನು ಬರೆದಿದ್ದಾರೆ ಸುನಂದಾ?"

"ಏನೂ ಇಲ್ಲಮ್ಮ," ಎಂದು ಸುನಂದಾ, ಮುಖ್ಯವೆಂದು ತೋರಿದ್ದ ನಾಲ್ಕು ವಾಕ್ಯಗಳನ್ನು ಓದಿ ಹೇಳಿದ್ದಳು: 'ನಿನ್ನ ಯಜಮಾನರನ್ನು ಕಂಡಿದ್ದೆ. ಆರೋಗ್ಯ ವಾಗಿದ್ದಾರೆ. ಇವತ್ತೂ ನೋಡುತ್ತೇನೆ. ಬರೆದು ತಿಳಿಸುವಂಥಾದ್ದೇನೂ ಇಲ್ಲ...'

ತಾನೊಬ್ಬಳೇ ಆ ವಾಕ್ಯವನ್ನು ಹಲವು ಸಾರೆ ಸುನಂದಾ ಓದಿದ್ದಳು. ಕಾತರ ದಿಂದ, ಶುಭ ಸೂಚಕವಾದ ಅಂಶವೇನಾದರೂ ಅಲ್ಲಿರಬಹುದೆಂಬ ಆಸೆಯಿಂದ, ಓದಿದಳು. ಆದರೆ, ತಂದೆ ಒಳ್ಳೆಯ ಸುದ್ದಿಯೊಡನೆ ಹಿಂತಿರುಗುವರೆಂಬುದಕ್ಕೆ ಅಲ್ಲಿ ಯಾವ ಆಧಾರವಿತ್ತು? ಇದೆಯೇನೋ ಎಂಬ ಭ್ರಮೆ ತನಗೆ ಎಂದು—ಕೊನೆಯಲ್ಲಿ ಸುನಂದಾ ನಿರಾಸೆಯ ನಿಟ್ಟುಸಿರು ಬಿಟ್ಟಳು.

ಶನಿವಾರ ರಾತ್ರೆಯೇ ಕೃಷ್ಣಪ್ಪನವರು ಮನೆ ಸೇರಿದರು. ನೋಡಿದರೆ, ಕಾಹಿಲೆ ಮನುಷ್ಯನೇನೋ ಎನ್ನುವಂತಿತ್ತು. ಪ್ರಯಾಣದ ಬಳಿಕ ಅವರು ಯಾವಾಗಲೂ ಇಷ್ಟಪಡುತ್ತಿದ್ದುದು ಹಿತವಾದ ಬಿಸಿ ನೀರಿನ ಸ್ನಾನವನ್ನು, ಸುನಂದಾ ತಂದೆ ಬರ ಬಹುದೆಂಬ ನಂಬಿಕೆಯಿಂದ ಆ ಮೊದಲೇ ಸ್ನಾನದ ಒಲೆಗೆ ಸಣ್ಣನೆ ಉರಿ ಹಾಕಿದ್ದಳು. ತಮ್ಮ ಪ್ರವಾಸದ ವಿಷಯವಾಗಿ ಏನು ಹೇಳಬೇಕು, ಹೇಗೆ ಮೊದಲು ಮಾಡಬೇಕು, ಎನ್ನುವುದೇ ಕೃಷ್ಣಪ್ಪನವರಿಗೆ ಸ್ಪಷ್ಟವಾಗಿರಲಿಲ್ಲ. ಆದರೂ ಸ್ನಾನದ ಮನೆಗೆ ಹೊರ ಡುತ್ತ, ಮಗಳನ್ನೂ ತಮ್ಮಾಕೆಯನ್ನೂ ಉದ್ದೇಶಿಸಿ ಅವರೆಂದರು:

"ಮಹಾರಾಯನನ್ನು ನೋಡಿ ಬಂದಿದ್ದೆ ಷ್ಟೋ ಅಷ್ಟೆ. ಹೆಚ್ಚೇನೂ ಪ್ರಯೋ ಜನವಾಗ್ಲಿಲ್ಲ. ಇನ್ನೊಂದ್ಸಾರೆ ಹೋಗ್ಬೇಕು. ಅಂತೂ ಬೆಂಗಳೂರಲ್ಲೇ ಇದಾನೆ."

ಸುನಂದಾ ತುಟಿ ಪಿಟಕ್ಕೆನ್ನಲಿಲ್ಲ. ಆಕೆಯ ತಾಯಿ ಮಾತ್ರ, ತಮ್ಮಷ್ಟಕ್ಕೆ ಅಸ್ಪಷ್ಟ ವಾಗಿ ಏನನ್ನೋ ಗೊಣಗಿದರು. ಹೀಗೆ ಗೊಣಗುವ ಪ್ರವೃತ್ತಿ ದಿನ ಕಳೆದಂತೆ ಅವರಲ್ಲಿ

ಹೆಚ್ಚುತ್ತ ಬಂದಿತ್ತು.

ಸುನಂದಾ ಸರಸ್ವತಿಯನ್ನು ಮಲಗಿಸಿದಳು. ಊಟಕ್ಕೆ ತಟ್ಟೆ ಇಟ್ಟಳು. ತಾಯಿ ತಂದೆಯರಿಗೆ ಹಾಸಿಗೆ ಹಾಸಿದಳು.

ಒಳಗೆ ಹೃದಯ ತುಡಿದುಕೊಳ್ಳುತ್ತಲೇ ಇತ್ತು. ಈ ನಿರಾಸೆಯ ಬದುಕು ಇನ್ನು ತನಗೆ ಅಭ್ಯಾಸವಾಗಬೇಕು; ತಾನು ಧೈರ್ಯಗೆಡಬಾರದು; ಹೆತ್ತವರ ಸಂಕಟವನ್ನು ಹೆಚ್ಚಿಸಬಾರದು—ಎಂದು ಸುನಂದಾ ತನಗೆ ತಾನೇ ಬುದ್ಧಿವಾದದ ಮಾತನ್ನಾಡಿದಳು.

ಊಟಕ್ಕೆ ಕುಳಿತ ಕೃಷ್ಣಪ್ಪನವರು ವಿವರವಾಗಿ ಎಲ್ಲವನ್ನೂ ಹೇಳಿದರು. ವಾಸ ಮಾಡುತ್ತಿದ್ದ ಮನೆಯನ್ನು ಆತ ಬಿಟ್ಟುಕೊಟ್ಟ ವಿಷಯವನ್ನೂ ಈ ದಿನ ಸುನಂದೆಯ ತಾಯಿಗೆ ತಿಳಿಸಿದುದಾಯಿತು.

ಸುನಂದಾ ಸುಮ್ಮನಿದ್ದರೂ ಆಕೆಯ ತಾಯಿ ನಡು ನಡುವೆ ಶಪಿಸುತ್ತ ಗೊಣಗುತ್ತ ಗಂಡನ ವರದಿಗೆ ಕಿವಿಗೊಟ್ಟರು.

ಮಧ್ಯಾಹ್ನ ರಾಧಮ್ಮನ ಮನೆಯಲ್ಲಿ ಊಟ ಮಾಡಿದ ವಿಷಯವನ್ನು ಹೇಳುತ್ತಿದ್ದಂತೆ, ಮರೆತು ಹೋಗಿದ್ದುದೊಂದು ನೆನಪಾಗಿ ಕೃಷ್ಣಪ್ಪನವರೆಂದರು:

"ಕೈ ಚೀಲದಲ್ಲಿ ಚಕ್ಕುಲಿ ಕೋಡುಬಳೆ ಪೊಟ್ಣ ಇದೆ, ಸುಂದಾ. ನಿನಗೆ ಕೊಡಬೇಕೂಂತ ರಾಧಮ್ಮ ಕಟ್ಟಿಕೊಟ್ರು."

ತನಗೊದಗಿದ ದುರ್ಗತಿಯ ಕತೆ ಕೇಳುತ್ತ ನಿಂತಾಗಲೂ ಅಳದೆ ಇದ್ದ ಸುನಂದೆಯ ಕಣ್ಣುಗಳಲ್ಲಿ, ರಾಧಮ್ಮ ತನಗೋಸ್ಕರ ತಿಂಡಿ ಕಳುಹಿದ ಪ್ರಸ್ತಾಪ ಬಂದಾಗ ಕಂಬನಿ ಫಳಕ್ಕನೆ ಚಿಮ್ಮಿತು. ಬಡಿಸಲು ಬಾಗಿದ ನೆಪದಲ್ಲಿ ಅದನ್ನಾಕೆ ಮರೆಸಿಕೊಂಡಳು.

ನಿಮಿಷ ತಡೆದು, ಹೃದಯವನ್ನು ಹತೋಟಿಯಲ್ಲಿರಿಸಿಕೊಳ್ಳುತ್ತ ಆಕೆ ಕೇಳಿದಳು:

"ರಾಧಮ್ಮನ ಮಕ್ಕಳು ಚೆನ್ನಾಗಿದಾರಾ?"

"ಹೂಂ."

"ಶ್ಯಾಮು ಯಾವಾಗಲೂ ನನ್ನನ್ನ ಅತ್ತೆ ಅತ್ತೆ ಅಂತ ಕರೀತಿದ್ದ. ಸರಸ್ವತಿ ಎಂದರೆ ಅವನಿಗೆ ತುಂಬಾ ಇಷ್ಟ."

ಇಲ್ಲ, ಅತ್ತೆಯ ಮಗಳನ್ನು ಹುಡುಗ ಶ್ಯಾಮು ಬಯಸಿದನೆಂದಲ್ಲ. ಅದು ಮುಗ್ಧವಾಗಿ, ಇದ್ದುದನ್ನು ಇದ್ದಂತೆ, ಹೇಳಿದ ವೈಖರಿ.

"ಒಳ್ಳೇ ಹುಡುಗರು. ಒಟ್ಟಿನಲ್ಲಿ ಒಳ್ಳೇ ಸಂಸಾರ."

"ಕುಸುಮಾ ಸಿಕ್ಕಿದ್ಲೆ?"

"ಯಾರು ಕುಸುಮಾ?"

"ಹೇಳೋಕೆ ಮರೆತ್ಹೋಯ್ತು. ಎದುರಿಗಿದ್ದ ಮಹಡಿ ಮನೆಯೋಳು. ರಾಧಮ್ಮ ಆ ದಿವಸ ಕಾಗದದಲ್ಲಿ ಬರೆದಿರ್ಲಿಲ್ವೆ?"

ತಾಯಿಯತ್ತ ದೃಷ್ಟಿ ಬೀರಿ, ಆ ಕಾಗದದ ವಿಷಯ ತಾನು ಎತ್ತಬಾರದಾಗಿ ತ್ತೆಂದು ಸುನಂದಾ ನಾಲಿಗೆ ಕಚ್ಚಿಕೊಂಡಳು. ಆದರೆ ತಂದೆ-ಮಗಳ ಆ ಸಂವಾದದಲ್ಲಿ ಆಸಕ್ತಿಯೇ ಇಲ್ಲದವರಂತೆ ತಮ್ಮದೇ ಯೋಚನೆಯಲ್ಲಿ ನಿಮಗ್ನರಾಗಿ ಅಂತರ್ಮುಖಿ ಯಾಗಿ ಕುಳಿತಿದ್ದರು ತಾಯಿ.

"ನನಗೂ ರಾಧಮ್ಮನನ್ನ ಕೇಳೋಕೆ ನೆನಪಾಗ್ಲಿಲ್ಲ. ಸುಮ್ನೆ ಓಡಾಟದಲ್ಲೇ ಹೊತ್ತು ಕಳೀತು."

ಕುಸುಮಳನ್ನು ತಂದೆ ನೋಡದೆ ಇದ್ದುದರಿಂದೇನೂ ಸುನಂದೆಗೆ ಬೇಸರವಾಗಿರ ಲಿಲ್ಲ. ಮಾತುಕತೆಯ ವಿಷಯವನ್ನು ಬದಲಿಸುವ ಬಯಕೆಯಿಂದ ಆಕೆ ಆ ಪ್ರಶ್ನೆ ಕೇಳಿದ್ದಳು.

....ಆ ರಾತ್ರೆ ದಿಂಬಿಗೆ ತಲೆ ಸೋಂಕಿದೊಡನೆ ಕೃಷ್ಣಪ್ಪನವರಿಗೆ ನಿದ್ದೆ ಬಂತು. ಅಷ್ಟು ಹೊತ್ತು ಹೆಂಡತಿಯೊಡನೆಯೂ ಮಗಳೊಡನೆಯೂ ಮಾತನಾಡಿದ್ದುದರಿಂದ ಆ ದಿನದ ಮಟ್ಟಿಗೆ ಶಮನವಾಗಿತ್ತು ಅವರ ಮಾನಸಿಕ ವ್ಯಥೆ.

ನಡುಮನೆಯಲ್ಲಿ ಮಗಳು ಮತ್ತು ಮೊಮ್ಮಗಳೊಡನೆ ಮಲಗಿದ ಸುನಂದೆಯ ತಾಯಿ, ಬಹಳ ಹೊತ್ತು ನಿದ್ದೆ ಬಾರದೆ ಹೊರಳಾಡಿದರು.

ಅಲ್ಲಿ ಆ ರಾತ್ರೆ ನಿದ್ದೆಯಿಂದ ಅತ್ಯಂತ ಹೆಚ್ಚು ದೂರವಿದ್ದವಳು ಸುನಂದಾ. ಆಕೆ ಅತ್ತಿತ್ತ ಹೆಚ್ಚಾಗಿ ಮಿಸುಕದೆ ಸದ್ದು ಮಾಡದೆ ಗಂಟೆಗಟ್ಟಲೆ ಮಲಗಿದಳು. ಅಸಹಾಯತೆಯ ಅಳು ಜತೆಗಾರ್ತಿಯಾಗಿರಲು ಅಪೇಕ್ಷೆಪಟ್ಟಿತು. ಆದರೆ ಸುನಂದಾ ಮನಸ್ಸನ್ನು ಬಿಗಿಹಿಡಿದು ಜಯಶೀಲೆಯಾದಳು. ಬಹಳ ಹೊತ್ತಾದ ಬಳಿಕ, ಮಲಗಿದ ತಾನು ಅಳಲೇ ಇಲ್ಲ ಎಂಬ ಅಂಶದಿಂದ ಆಕೆಗೆ ಆಶ್ಚರ್ಯವಾಯಿತು, ಸಮಾಧಾನ ವೆನಿಸಿತು....

....ತಂದೆ ಇಲ್ಲದೆ ಇದ್ದಾಗ ವಿಜಯಳ ಕಾಗದ ಬಂದಿತ್ತು. ಮಾರನೆಯ ದಿನ ಬೆಳಗ್ಗೆ ಸುನಂದಾ ಅದನ್ನು ತಂದು ಕೃಷ್ಣಪ್ಪನವರಿಗೆ ಕೊಟ್ಟಳು. ಒಟ್ಟಿನಲ್ಲಿ ತಾನು ಸುಖಿಯಾಗಿದೇನೆ—ಎಂದು ಸಾರಿ ಹೇಳುತ್ತಿತ್ತು ಕಾಗದ.

'ಸದ್ಯಃ ಅವಳಾದರೂ ನೆಮ್ಮದಿಯಿಂದಿರ್ಲಿ'—ಎಂದು ಕೃಷ್ಣಪ್ಪನವರು ಮನಸ್ಸಿ ನಲ್ಲೆ ಅಂದುಕೊಂಡರು.

ಅವರು ಬೆಂಗಳೂರಿನಿಂದ ಹಿಂತಿರುಗಿದ ಮರುದಿನ ದೊಡ್ಡದೊಂದು ಲಕೋಟೆ ಬಂತು. ಮೇಲಿದ್ದುದು ಸುನಂದೆಯ ಹೆಸರು. ರಾಧಮ್ಮ ಮತ್ತು ಕುಸುಮಾ ಬರೆ ದಿದ್ದರು.

'ಮಗೂನ ಕರಕೊಂಡು ಇನ್ನೊಂದು ವಾರದಲ್ಲೇ ಹೊರಟು ಬನ್ನಿ' ಎಂದು ಆಗ್ರಹ ಪಡಿಸಿದ್ದರು ರಾಧಮ್ಮ 'ಕುಸುಮಾ ಕಾಗದ ಉದ್ದಕ್ಕೆ ಇಂಗ್ಲಿಷಿನಲ್ಲಿದೆ. ಅದೇ ನೇನು ಬರೆದಿದ್ದಾಳೋ ಪರಮಾತ್ಮನೇ ಬಲ್ಲ!'

ಪರಭಾಷೆಯಾದರೂ ಸರಳವಾದ ಅಚ್ಚುಕಟ್ಟಾದ ಶೈಲಿ. 'ಕನ್ನಡ ಸರಿಯಾಗಿ

ಓದಿ ಕಲಿಯದ ತಪ್ಪಿಗೆ 'ಇಂಗ್ಲಿಷಿನಲ್ಲಿ ಬರೆಯುವ ಶಿಕ್ಷೆ' ಎಂದು ತನ್ನನ್ನೇ ಶಪಿಸಿಕೊಂಡಿದ್ದಳು ಕುಸುಮಾ. ಉದ್ದಕ್ಕೂ ಹರಿದಿದ್ದುವು ಅನುಕಂಪದ ಸಹಾನುಭೂತಿಯ ನುಡಿಗಳು.

'ನನಗೆ ಆಗಲೇ ಅನಿಸಿತ್ತು, ನನ್ನ ಪ್ರೀತಿಯ ಸುನಂದಾ. ನಿಮ್ಮ ಮುಖ ನೋಡಿದಾಗಲೆಲ್ಲ ಒಳಗಿಂದೊಳಗೇ ನೀವೇನೋ ಸಂಕಟ ಅನುಭವಿಸುತ್ತಿದ್ದಿರಿ ಎನಿಸುತ್ತಿತ್ತು. ದಾಂಪತ್ಯ ಜೀವನದ ವಿಷಯ ನಾವು ಮಾಡಿದ ಚರ್ಚೆ–ವಾಗ್ವಾದ....ಈಗ ನೆನಸಿಕೊಂಡರೆ ಅದೆಲ್ಲಾ ಅನುಚಿತವಾಗಿತ್ತೇನೋ ಅಂತ ಭಯವಾಗ್ತದೆ. ರಾಧಮ್ಮ ಮೊನ್ನೆ ಒಂದು ದಿವಸ–ಅವರಿಗೆ ನಿಮ್ಮ ಕಾಗದ ಬಂದ ಮೇಲೆ–ಸೂಕ್ಷ್ಮವಾಗಿ ವಿಷಯ ತಿಳಿಸಿದರು. ನನ್ನ ಎದೆ ಧಸಕ್ಕೆಂದಿತು. ಇಂಥದೆಲ್ಲ ಬೇರೆಯವರಿಗೆ ಸಂಭವಿಸಿದಾಗ ದೂರದಲ್ಲಿದ್ದು ನೋಡಿ ವಿಮರ್ಶೆ ಮಾಡುವುದು ಚೆನ್ನಾಗಿರ್ತದೆ. ಅದರ ಬದಲು ನಮಗೇ ಅದು ಸಂಭವಿಸಬೇಕೆ? ನನ್ನ ಪ್ರೀತಿಯ ಸುನಂದಾ, ಆ ವಿಷಯ ಕೇಳಿದಾಗಿನಿಂದ ನನಗೆ ಏನೇನೋ ಆಗ್ತಿದೆ. ಕೆಲವೇ ತಿಂಗಳ ನಮ್ಮ ಸ್ನೇಹ, ಎಷ್ಟೋ ವರ್ಷಗಳ ಗಾಢ ಬಂಧುತ್ವವಾಗಿ ಮಾರ್ಪಟ್ಟಿದೆ. ನಿಮ್ಮೂರಿಗೆ ಬಂದು ನಿಮ್ಮನ್ನು ಕಾಣಬೇಕು ಎನ್ನುವಷ್ಟು ಒದ್ದಾಡ್ತಿದೇನೆ. ಆದರೆ ಕೈಮಗುವನ್ನು ಬಿಟ್ಟು ನಾನೆಲ್ಲೂ ಹೊರಡುವ ಹಾಗಿಲ್ಲ. ನಿಮಗಾಗಿ ನಾನು ಏನು ಮಾಡಬೇಕು ಹೇಳಿ? ನಿಮಗೆ ಯಾವ ರೀತಿ ಸಹಾಯ ಮಾಡಿದರೆ ನನಗೆ ಸಮಾಧಾನವಾದೀತು?...ನೀವು ನಂಬುವಿರೋ ಇಲ್ಲವೋ. ರಾಧಮ್ಮ ಮತ್ತು ನಾನು ಸೇರಿದಾಗಲೆಲ್ಲ ಈಗ ಮಾತನಾಡುತ್ತಿರುವುದು ನಿಮ್ಮ ವಿಷಯವನ್ನೆ. ಒಂದು ಅಂಶದಲ್ಲಿ ನಾನು ನಿಮ್ಮ ಕ್ಷಮೆ ಕೇಳಬೇಕು. ನಮ್ಮವರಿಗೆ ಚುಟುಕಾಗಿ ನಿಮ್ಮ ವಿಷಯ ತಿಳಿಸಿದೆ. (ತಿಳಿಸಬಾರದಾಗಿತ್ತೆ? ನೀವು ಆಕ್ಷೇಪಿಸಲಾರಿರಿ ಅಂತ ನನಗೆ ಗೊತ್ತು) ಕೇಳಿ ಅವರು ವ್ಯಥೆಪಟ್ಟರು, ಹೀಗಾಗಬಾರದಿತ್ತು, ಪಾಪ, ಎಷ್ಟೊಂದು ಹಿಂಸೆ–ಎಂದರು.

'ಮೊನ್ನೆ ನಿಮ್ಮ ತಂದೆ ಬಂದಿದ್ದರಂತೆ. ಶನಿವಾರ ಅವರು ಊಟಕ್ಕೆ ಬಂದಾಗ ಮಾತನಾಡಲು ನನ್ನನ್ನು ಕರೆಯುವುದಾಗಿ ರಾಧಮ್ಮ ಹೇಳಿದ್ದರು. ಆದರೆ ನಿಮ್ಮ ತಂದೆ ಅವಸರವಾಗಿ ರೈಲಿಗೆ ಹೊರಟುದರಿಂದ ಕರೆಯುವುದು ಆಗಲಿಲ್ಲವಂತೆ. ನನಗೆ ಅವರ ಮುಖ ಪರಿಚಯವಿಲ್ಲವಾದರೂ ಅವರ ಕೂಡ ಮಾತನಾಡಬೇಕೆಂದು ನಿರ್ಧಾರ ಮಾಡಿದ್ದೆ. ನನ್ನ ದುರದೃಷ್ಟದಿಂದ ಅದು ಸಾಧ್ಯವಾಗಲಿಲ್ಲ.

'ನೀವು ಯಾವಾಗ ಬರುತ್ತೀರಿ? ಮಗುವನ್ನೂ ಕರೆದುಕೊಂಡು ನೀವೇ ಬರುವುದು ಮೇಲು ಎಂದು ನಮ್ಮೆಲ್ಲರ ಅಭಿಪ್ರಾಯ. ಅಲ್ಲದೆ ನಮ್ಮ ಮನೆಯ ರಾಜಕುಮಾರನಿಗೆ ನಿಮ್ಮ ಮುತ್ತಿನ ಉಡುಗೊರೆ ಬಾಕಿ ಇದೆ. ನೀವು ನಮ್ಮಲ್ಲಿಯೇ ಉಳಿಯಬೇಕು. ರಾಧಮ್ಮನದೇ ಮೊದಲ ಹಕ್ಕು ಅಂತ ನನಗೆ ಗೊತ್ತಿದೆ. ಆದರೂ ಆಸೆ ಇಟ್ಟುಕೊಂಡು ಕೇಳಿದ್ದೇನೆ.'

ಮನಸ್ಸಿನಲ್ಲೆ ಓದಿ ಮುಗಿಸಿದಾಗ ಸುನಂದೆಯ ಗಂಟಲು ಗೊಗ್ಗರ ಸದ್ದು

ಮಾಡಿತು. ತನ್ನ ದುಸ್ಥಿತಿಗಾಗಿ ಸಂಕಟವಾಗದಿದ್ದರೂ ಆ ದುಸ್ಥಿತಿಯ ವಿಷಯದಲ್ಲಿ ಇತರರು ತೋರುತ್ತಿದ್ದ ಸಹಾನುಭೂತಿಯನ್ನು ಕಂಡು ಆಕೆಗೆ ಕಸಿವಿಸಿ ಎನಿಸಿತು.

ಮಗಳಷ್ಟು ವಿದ್ಯಾಭ್ಯಾಸ ಮಾಡದೆ ಇದ್ದ ತಂದೆಯೂ ಇಂಗ್ಲಿಷಿನಲ್ಲಿ ಬಂದಿದ್ದ ಕಾಗದವನ್ನೋದಿದರು. ಮಗಳ ವಿಷಯದಲ್ಲಿ ಒಳ್ಳೆಯವರಾದ ಬೇರೆ ಬೇರೆ ಜನರು ತೋರುತ್ತಿದ್ದ ಆದರವನ್ನು ಕಂಡು, ದುಃಖದ ಹಿನ್ನೆಲೆಯಲ್ಲೂ ಕೃಷ್ಣಪ್ಪನವರಿಗೆ ಹೆಮ್ಮೆ ಮೂಡಿತು. ಅಂತಹ ಮಗಳನ್ನು ಧಿಕ್ಕರಿಸಲು ಮುಂದಾದ ಅಳಿಯನನ್ನು ನೆನೆದು ಅವರು 'ಅಯ್ಯೋ' ಎಂದರು.

...ಮತ್ತೆ ದಿನಗಳು ಕಳೆದುವು. ಮುಂದೇನು ಮಾಡಬೇಕೆಂಬುದನ್ನು ಕುರಿತು ತಂದೆ–ಮಗಳು ಮಾತನಾಡದೆ ಇದ್ದರೂ ರಾಧಮ್ಮನಿಗೂ ಕುಸುಮಳಿಗೂ ಬೇಗನೆ ಬರುವುದಾಗಿ ತಿಳಿಸಿ ಸುನಂದಾ ಕಾಗದ ಬರೆದಳು. ತನ್ನ ಬದುಕಿನ ಹಾದಿಯನ್ನು ಸುಗಮಗೊಳಿಸುವ ಯತ್ನ ಇನ್ನೂ ನಡೆದಿದೆ–ಎಂದಷ್ಟೆ ತಿಳಿಸಿ ಒಲವಿನ ತಂಗಿಗೂ ಕಾಗದ ಹಾಕಿದಳು.

....ಸರಸ್ವತಿ ಅಜ್ಜನಿಗೆ ಅಂಟಿಕೊಂಡಳು. ಮಾತೆತ್ತಿದರೆ 'ತಾತ,' ಆ ಎಳೆಯ ಮಗುವಿನ ತೊದಲು ನುಡಿಗಳು ಕೃಷ್ಣಪ್ಪನವರ ಘಾಸಿಗೊಂಡ ಹೃದಯಕ್ಕೆ ಆಪ್ಯಾಯಮಾನವಾಗಿದ್ದುವು.

ಮಗುವಿನೊಡನೆ ತನ್ನ ತಂದೆ ಆಟವಾಡುತ್ತಿದ್ದುದನ್ನು ನೋಡುತ್ತ ಸುನಂದಾ ಒಮ್ಮೆ ನಿಂತಾಗ ಕೃಷ್ಣಪ್ಪನೆಂದರು:

"ಎಲ್ಲಾ ನಿನ್ನ ಹಾಗೆಯೇ ಸುಂದಾ. ನೀನು ಚಿಕ್ಕವಳಿದ್ದಾಗ ಹೀಗೆಯೇ ತುಂಟತನ ಮಾಡ್ತಿದ್ದೆ. ಎಲ್ಲಾ ನಿನ್ನದೇ ಪ್ರತಿರೂಪ."

ಹೌದೋ, ಅಲ್ಲವೋ. ಅಂತೂ ತಂದೆಯ ಕಣ್ಣಿಗೆ ಹಾಗೆ ಕಾಣುತ್ತಿತ್ತು. ದೂರವೇ ಉಳಿದ ಪುಟ್ಟಣ್ಣಗೆ ಆ ಮಗುವಿನ ಮೇಲೆ ಅಧಿಕಾರವೇ ಇಲ್ಲ ಎನ್ನುವ ಹಾಗೆ ಮಾತು.

ಮೊಮ್ಮಗಳ ಬಾಲಲೀಲೆಗಳು ಸುನಂದೆಯ ತಾಯಿಗೂ ಇಷ್ಟವಾಗಿದ್ದುವು. ಆದರೂ ಹೊತ್ತು ಹೋಗುತ್ತಿರಲಿಲ್ಲ.

"ರಾಮ ಮಂದಿರದಲ್ಲಿ ಪುರಾಣವಂತೆ. ಪಕ್ಕದ್ಮನೆ ಸಾವಿತ್ರಮ್ಮ ಹೇಳಿದ್ಲು. ವಿಜೀ ಮದುವೆ ಆದ್ಮೇಲಿಂದ ಪುರಾಣಕ್ಕೆ ಹೋಗೇ ಇಲ್ಲ. ಹೋಗೋಣ ಬರ್ತಿಯೇನೆ?" ಎಂದ ಸುನಂದೆಯ ತಾಯಿ ಒಂದು ಸಂಜೆ ಮಗಳನ್ನು ಕೇಳಿದರು.

"ಮನೇಲಿ ಯಾರಾದರೂ ಇರೋದು ಬೇಡ್ವೆ? ನೀನು ಹೋಗಮ್ಮ. ನಾನೂ ಬಂದ್ರೆ ಸರಸ್ವತಿ ಸುಮ್ನಿರ್ತಾಳೇನು?" ಎಂದಳು ಸುನಂದಾ. ಪುರಾಣ ಕೇಳಲು ಬೇಕಾದಷ್ಟು ನೆಮ್ಮದಿ ತನಗಿಲ್ಲವೆಂದು ಆಕೆ ಹೇಳಲಿಲ್ಲ.

"ನೀವಾದರೂ ಬರ್ತೀರಾ?" ಎಂದು ಸುನಂದೆಯ ತಾಯಿ ತಮ್ಮ ಯಜಮಾನರನ್ನು ಕೇಳಿದರು.

"ಒಬ್ಬಳೇ ಹೋಗೋಕೆ ಭಯವಾಗುತ್ತಾ?" ಎಂದು ಹೇಳಿ ಕೃಷ್ಣಪ್ಪನವರು ಮುಗುಳು ನಕ್ಕರು.

"ನಿಮಗೆಲ್ಲ ಪುರಾಣದಲ್ಲಿ ಆಸಕ್ತೀನೇ ಇಲ್ಲ. ಹೋಗಲಿ, ನಾನೊಬ್ಬಳಾದರೂ ಹೋಗ್ತೀನಿ," ಎಂದು ಆಕೆ ದಿನವೂ ಸಂಜೆ ರಾಮಮಂದಿರಕ್ಕೆ ಹೋದರು.

ತಾವು ಬರುವುದಿಲ್ಲವೆಂದು ಕೃಷ್ಣಪ್ಪನವರು ಹೇಳಲು ಬೇರೆ ಒಂದು ಕಾರಣವಿತ್ತು. ಸಂಜೆಯ ಹೊತ್ತು ಎಲ್ಲಾದರೂ ಅಂಗಡಿಯಲ್ಲಿ ಲೆಕ್ಕ ಬರೆಯುವ ಕೆಲಸ ವಹಿಸಿಕೊಳ್ಳುವುದು ಅಗತ್ಯವೆಂದು ಅವರು ಯೋಚಿಸಿದ್ದರು. ಅವರಿಗೆ ಬರುತ್ತಿದ್ದ ನಿವೃತ್ತಿವೇತನ ನಾಲ್ವತ್ತು ರೂಪಾಯಿ. ಆ ಸಣ್ಣ ಮನೆ ಸ್ವಂತದ್ದೆ ಆಗಿದ್ದುದರಿಂದ ಬಾಡಿಗೆ ಕೊಡುವ ತೊಂದರೆ ಇರಲಿಲ್ಲ. ಆದರೂ ಪ್ರವಾಸದಂತಹ ವಿಶೇಷ ವೆಚ್ಚ ಒದಗಿದಾಗ ಬಲು ಕಷ್ಟವಾಗುತ್ತಿತ್ತು. ಹುಡುಗಿಯರಿಬ್ಬರೂ ಹೊರಟುಹೋದ ಮೇಲೆ ತಾನು ಸಂಪಾದನೆ ಆರಂಭಿಸಬೇಕು, ವಿಜಯಳ ಮದುವೆಗೋಸ್ಕರ ಆಗಿದ್ದ ಸ್ವಲ್ಪ ಸಾಲವನ್ನು ಸಂದಾಯಮಾಡಬೇಕು; ಮನೆಗೆ ಏನೂ ಧಕ್ಕೆ ತಗಲದೆ ಕೊನೆಯಲ್ಲಿ ಮಕ್ಕಳದಾಗಿ ಅದು ಉಳಿಯಬೇಕು ಎಂದು ಅವರು ಆಶಿಸಿದ್ದರು.

ಒಂದು ಸಂಜೆ ಕೃಷ್ಣಪ್ಪನವರು, ತಮ್ಮ ಹೆಂಡತಿ ಪುರಾಣಕ್ಕೆ ಹೋಗಿದ್ದಾಗ, ಸಾಲ ವ್ಯವಹಾರದ ಕಾಗದ ಪತ್ರಗಳನ್ನು ಹೊರ ತೆಗೆದು ಸುನಂದೆಯ ಮುಂದಿರಿಸಿ ಪ್ರತಿಯೊಂದನ್ನೂ ವಿವರಿಸಿದರು.

"ಇನ್ನು ತಿರುಗಿ ಕೆಲಸಕ್ಕೆ ಹೋಗೋದು ಕಷ್ಟವಾಗಲ್ವಾ?" ಎಂದು ಸುನಂದಾ ಕೇಳಿದಳು.

"ಒಂದೆರಡು ಗಂಟೆ ಕೆಲಸ ಏನು ಮಹಾ?"

"ಇನ್ನೂ ಸ್ವಲ್ಪ ದಿವಸ ಹೋಗಲಿ, ಆಗದಾ?"

ನಿನ್ನ ಪ್ರಶ್ನೆ ಇತ್ಯರ್ಥವಾಗಲೆಂದೇ ಇಷ್ಟು ದಿನ ಕಾದುದು ಎಂದು ಮನಸ್ಸಿನಲ್ಲಿದ್ದುದನ್ನು ಬಾಯಿ ಬಿಚ್ಚಿ ಕೃಷ್ಣಪ್ಪನವರು ಹೇಳಲಿಲ್ಲ. ಬದಲು "ಹೂಂ," ಎಂದರು.

ಕಾಗದ ಪತ್ರಗಳನ್ನು ಸರಸ್ವತಿಗೆ ಸಿಗದಂತೆ ಎತ್ತಿಡುತ್ತ ಕೃಷ್ಣಪ್ಪನವರು ಹೇಳಿದರು:

"ನೀನು ಗಂಡಾಗಿ ಹುಟ್ಬೇಕಾಗಿತ್ತು ಸುನಂದಾ. ನಮ್ಮ ದುರದೃಷ್ಟದಿಂದ ಹೆಣ್ಣಾದೆ."

ಆ ಮಾತಿಗೆ ಸುನಂದೆ ಉತ್ತರ ಕೊಡಲಿಲ್ಲ.

## ೧೦

ಹಿರಿಯ ಮಗಳ ಗಂಡ ಬೆಂಗಳೂರಲ್ಲಿಲ್ಲ, ಪ್ರವಾಸ ಹೋಗಿದ್ದಾನೆ; ಆದಕ್ಕೋಸ್ಕರ ಮಗಳು ತವರುಮನೆಗೆ ಬಂದಿದ್ದಾಳೆ–ಎಂದು ಕೃಷ್ಣಪ್ಪನವರು ಆ ಕುರಿತು ಮಾತು

ಬಂದಾಗ ಮೊದಲು ಹೇಳಿದ್ದರು.

ಆದರೆ ಸದಾ ಕಾಲವೂ ಪ್ರವಾಸದ ಮೇಲೆಯೇ ಇರುವುದು ಸಾಧ್ಯವೆ? ಹೀಗಾಗಿ ಉತ್ತರ ಕ್ರಮೇಣ ರೂಪಾಂತರ ತಳೆಯಿತು.

ಅಳಿಯನ ಆಫೀಸಿನವರು ಆತನನ್ನು ಬೊಂಬಾಯಿಯ ಪ್ರತಿನಿಧಿಯಾಗಿ ನೇಮಿಸಿದ್ದಾರೆ; ಆ ಊರಿನ ಅವಸ್ಥೆ ಗೊತ್ತೇ ಇದೆಯಲ್ಲ,...ಮನೆ ಸಿಗದೆ ತೊಂದರೆಯಾಗಿದೆ; ಈಗ ಸುನಂದೆಯೂ ಆಕೆಯ ಮಗುವೂ ನಮ್ಮಲ್ಲೇ ಇದ್ದಾರೆ–ಹೀಗೆ.

ಸುನಂದೆಗೂ ನೇರವಾದ ಉತ್ತರ ಕೊಡಬೇಕಾದ ಪ್ರಮೇಯಗಳು ಒದಗುತ್ತಿದ್ದವು. ಸ್ವತಃ ಆಕೆ ಗೆಳತಿಯರನ್ನು ಹುಡುಕಿಕೊಂಡು ಹೋಗುತ್ತಿರಲಿಲ್ಲ. ಆದರೂ ಒಮ್ಮೊಮ್ಮೆ ಬಾಲ್ಯದ ಒಡನಾಡಿಗಳ ಭೇಟಿಯಾಗುತ್ತಿತ್ತು.

"ಯಾವತ್ತು ಬಂದೆ?" ಎಂದು ನಗುತ್ತ ಚೇಷ್ಟೆ ಮಾಡುವವರಿದ್ದರು.

"ವಿಜಯಾ ಮದುವೆಗೆ ಬಂದವಳು ಹೋಗೇ ಇಲ್ವೇನೆ?" ಎಂದು ಕೇಳುವವರಿದ್ದರು.

ಆಗ ಬಲು ಕಷ್ಟಪಟ್ಟು ಒಣನಗೆ ಬೀರುತ್ತ ಸುನಂದಾ ಉತ್ತರ ಕೊಡುತ್ತಿದ್ದಳು. ತನ್ನ ತಂದೆ ಇತರರಿಗೆ ಕೊಡುತ್ತಿದ್ದ ಉತ್ತರವನ್ನೇ.

ಆದರೆ ಹಾಗೆ ಸುಳ್ಳಾಡುವುದು ತಾಯಿಯಿಂದ ಮಾತ್ರ ಸಾಧ್ಯವಿರಲಿಲ್ಲ. ಈ ವಾರ ಬರಬಹುದು, ಈ ತಿಂಗಳು ಬರಬಹುದು, ಹಬ್ಬಕ್ಕೆ ಬರಬಹುದು–ಎಂದೆಲ್ಲ ಆಕೆ ಉತ್ತರ ಕೊಡುತ್ತಿದ್ದರು. "ಅಳಿಯ ಬೊಂಬಾಯಿಯಲ್ಲಿದಾನೇಂತ ಹೇಳ್ಬಾರ್ದೇನೋ" ಎಂದು ಗಂಡ ನುಡಿದಾಗ, "ಸುಳ್ಳು ಹೇಳೋದೆಲ್ಲ ನನ್ಕೈಲಾಗಲ್ಲ" ಎಂದು ಆಕೆ ರೇಗಾಡುತ್ತಿದ್ದರು.

ಸುನಂದೆಯ ತಾಯಿ ಪುರಾಣಶ್ರವಣಕ್ಕೆ ಹೋಗತೊಡಗಿದ ಮೇಲೆ ಹೆಚ್ಚು ಪೀಕಲಾಟಕ್ಕಿಟ್ಟುಕೊಂಡಿತು.

"ಪುರಾಣಕ್ಕೆ ಬರೋದೇ ನಿಲ್ಲಿಸ್ಬಿಟ್ಟಿದ್ರಿ," ಎಂದರು ಒಬ್ಬಾಕೆ.

"ಎರಡನೆ ಮಗಳ ಮದುವೇನೂ ಆದ್ಮೂರಿಯಿಂದ್ಲೆ ಮಾಡ್ಬಿಟ್ರು. ಅವರಿಗೆ ಇನ್ಯಾವ ಯೋಚ್ನೆ ಇದೆ ಹೇಳಿ?" ಎಂದರು ಮತ್ತೊಬ್ಬಾಕೆ.

ಮೂರನೆಯ ಸ್ವರ 'ಬಲು ಗುಟ್ಟು' ಎನ್ನುವಂತೆ ಅವರನ್ನು ಸಮೀಪಿಸಿತು.

"ಸುನಂದೇನ ಗಂಡನ ಮನೆಗೆ ಕಳಿಸ್ಕೊಟ್ರಾ? ಯಾಕೆ–ವಿರಸ ಇನ್ನೂ ಸರಿ ಹೋಗ್ಲಿಲ್ವೆ?"

"ಅಂಥಾದೇನೂ ಇಲ್ಲ. ಸರಿಹೋಗುತ್ತೆ—ಸರಿಹೋಗುತ್ತೆ," ಎನ್ನುವುದು ಸುನಂದೆಯ ತಾಯಿಯ ಉತ್ತರ.

ಆದರೆ ಅವರಿಗೆ ಗೊತ್ತಿತ್ತು, ಆ ಪಿಸುದನಿ ಬರಿಯ ನಟನೆ ಎಂಬುದು. ಅತ್ತ ಕಡೆಗೆ ಮುಖ ತಿರುಗಿಸಿ ಆ ಹೆಂಗಸರು ಆ ವಿಷಯವನ್ನೇ ಎತ್ತಿಕೊಂಡು ಗಟ್ಟಿಯಾಗಿ ಮಾತನಾಡುತ್ತಿದ್ದರೆಂಬುದನ್ನು ಅವರು ತಿಳಿದಿದ್ದರು.

ಪುರಾಣಕ್ಕೆ ಹೋದ ನಾಲ್ಕಾರು ದಿನಗಳಲ್ಲೂ ಇದೇ ಅನುಭವವಾಯಿತು ಸುನಂದೆಯ ತಾಯಿಗೆ.

ಒಂದು ವಾರದ ಬಳಿಕ ಅವರೊಂದು ಸಂಜೆ ನಿರ್ಧಾರದ ಸ್ವರದಲ್ಲಿ ಅಂದರು:

"ಸಾಕು ಪುರಾಣ ಕೇಳಿದ್ದು! ಇನ್ನು ನಾನು ಹೋಗಲ್ಲ!"

ಆ ತೀರ್ಮಾನದ ಹಿನ್ನೆಲೆಯನ್ನು ಸುನಂದಾ ಆಗಲೇ ಊಹಿಸಿಕೊಂಡಿದ್ದಳು. ಆದರೂ ಮಾತನಾಡದಿರುವುದು ಸರಿಯಲ್ಲವೆಂದು ಕೇಳಿದಳಾಕೆ:

"ಯಾಕಮ್ಮ?"

"ನನಗಿಷ್ಟವಿಲ್ಲ. ಆ ಪುರಾಣವೂ ಸಾಕು, ಹರಕುಬಾಯಿಗಳ ಮಾತೂ ಸಾಕು."

"ಹೋಗಲಿಬಿಡು, ಸುಮ್ನೆ ಅದನ್ನೆಲ್ಲ ಮನಸ್ಸಿಗೆ ಹಚ್ಕೋಬೇಡ. ಮನೇಲಿ ಇದ್ದರಾಯ್ತು."

ಕೃಷ್ಣಪ್ಪನವರೂ ಅಂಥದೇ ಮಾತು ಅಂದರು:

"ಆಡೋ ನಾಲಿಗೆ ಸಾವಿರ ಅನ್ನುತ್ತೆ. ನಮ್ಮ ಪಾಡಿಗೆ ನಾವು ಇದ್ದರಾಯ್ತು."

ಅಂದಿನಿಂದ ಸುನಂದೆಯ ತಾಯಿಯ ಪುರಾಣ ಶ್ರವಣ ನಿಂತಿತು.

ಪ್ರತಿ ಸಂಜೆಯೂ ರಾಮಮಂದಿರಕ್ಕೆ ಹೋಗಿಬರುವುದು, ಪುರಾಣ ಕೇಳುವುದು, ಆ ವೃದ್ಧೆಗೆ ಒಂದು ರೀತಿಯ ವಿಹಾರವಾಗಿತ್ತು. ತನ್ನಿಂದಾಗಿ ಆ ಸುಖಕ್ಕೆ ಕಲ್ಲು ಬಿತ್ತೆಂದು ಸುನಂದಾ ದುಃಖಿಸಿದಳು.

ಆದರೆ ಹೆಚ್ಚಿನ ದುಃಖಕ್ಕೆ ಬೇರೊಂದು ಕಾರಣವಿತ್ತು. ಅದು ತನ್ನ ವಿಷಯದಲ್ಲಿ ಇತರ ಹೆಂಗಸರು ಮಾತನಾಡಿಕೊಳ್ಳುತ್ತಿದ್ದ ರೀತಿ.

ಕಾಲೇಜಿನಲ್ಲಿ ಸುನಂದೆಯ ಸಹಪಾಠಿಯಾಗಿದ್ದವಳು ಒಂದು ದಿನ ಗೆಳತಿಯನ್ನು ನೋಡಲು ಬಂದಳು. ಆಕೆ, ಮದುವೆಯಾದ ಒಂದು ವರ್ಷದಲ್ಲೇ ಗಂಡನನ್ನು ಕಳೆದುಕೊಂಡಿದ್ದ ಅಭಾಗಿನಿ. ಅವಳ ವಿಷಯದಲ್ಲಿ ಅತ್ತೆಮನೆಯವರು ಅತಿ ಕ್ರೂರವಾಗಿ ವರ್ತಿಸಿದ್ದರು. ಕೊನೆಗೆ, ಬರಿಗೈಯಲ್ಲಿ ಬರಿ ಹಣೆಯಲ್ಲಿ ಆ ವಿಧವೆ ತವರು ಮನೆಗೆ ಬಂದಿದ್ದಳು.

ಸುನಂದೆ ಒಂದು ರೀತಿಯಲ್ಲಾದರೆ; ಇನ್ನೊಂದು ರೀತಿಯಲ್ಲಿ ಆ ಸಕೇಶಿಯೂ ಕೆಲ ಹೆಂಗಸರ ಕುಹಕ ನುಡಿಗಳಿಗೆ ಗುರಿಯಾಗಿದ್ದ ಜೀವ.

"ಬಾಮ್ಮ ಚಂಪಾ, ಹೋದ ಯುಗದಲ್ಲಿ ನಿನ್ನನ್ನು ಕಂಡಿದ್ದೇಂತ ತೋರುತ್ತೆ," ಎಂದಳು ಸುನಂದಾ.

"ನಮ್ಮಮ್ಮ ಎಲ್ಲಿಗೂ ಹೋಗಬೇಡ ಅಂತಾಳೆ. ಬೇಜಾರು ಕಣೇ. ಅಂತೂ ಇವತ್ತು ಅಮ್ಮನನ್ನ ಒಪ್ಪಿಸಿ ಬಂದ್ಬಿಟ್ಟೆ," ಎಂದು ಆ ಗೆಳತಿ ಅಂದಳು.

ಜೀವನ ನೀಡಿದ್ದ ಹೊಚ್ಚ ಹೊಸದಾದ ಕಹಿಯನ್ನು ಮರೆಯಲೆಂದು, ಗೆಳತಿಯರು ಬಲು ಹಳೆಯ ನೆನಪುಗಳ ಬುತ್ತಿಯನ್ನು ಬಿಚ್ಚಿ, ಆ ಸಂಗ್ರಹದಿಂದ

ಒಂದೊಂದನ್ನೆ ಮೆಲ್ಲನೆ ಸವಿದರು. ಆದರೂ ಒಗರು ತೇಗಿನಂತೆ ಈಗಿನ ಇರುವಿಕೆ ಆಗಾಗ್ಗೆ ಬಿಸು ಸುಯ್ಯುತ್ತಿತ್ತು.

ಚಂಪಾ ಅಂದಳು:

"ನಿನ್ನ ವಿಷಯ ನನಗೆ ಗೊತ್ತಾದ್ದು ಮೊನ್ನೆ ಮೊನ್ನೆ. ಕೇಳಿ ಎಷ್ಟು ಸಂಕಟ ಪಾಯ್ತೂಂತ."

ಸುನಂದಾ ನಗಲು ಯತ್ನಿಸಿದಳು.

"ಇಲ್ಲವಮ್ಮ. ಸಂಕಟಪಡೋದರಲ್ಲಿ ಅರ್ಥವಿಲ್ಲ. ಈ ಪ್ರಪಂಚದಲ್ಲಿ ದುಃಖಿಗಳು ನಾವು ಮಾತ್ರ ಅಲ್ಲವಲ್ಲಾ—ಅಂತ ಸಮಾಧಾನ ಪಡ್ಬೇಕು."

ಸುನಂದೆಯು ಗೆಳತಿ ಸರಸ್ವತಿಯನ್ನೆತ್ತಿಕೊಂಡು ಮುದ್ದಿಟ್ಟಳು. "ನಿನ್ನತ್ತೆ ಕಣೋ" ಎಂದು, ಬಂದವಳನ್ನು ಸರಸ್ವತಿಗೆ ಸುನಂದಾ ಪರಿಚಯಮಾಡಿ ಕೊಟ್ಟಳು.

ಸಜಲನಯನೆಯಾಗಿ ಆ ಅತ್ತೆ ಅಂದಳು:

"ಒಳ್ಳೆಯವರಮ್ಮ. ಚಿನ್ನದಂಥ ಮನುಷ್ಯ. ನನಗೆ ಭಾಗ್ಯ ಇರಲಿಲ್ಲ."

"ಅಯ್ಯೋ, ಎಲ್ಲಾ ಸುಮ್ನೆ ಅನ್ನೋದು ಕಣೇ. ಭಾಗ್ಯ-ಭಾಗ್ಯ ಅಂತ ಬಡಕೋತೀವಿ. ಆಗೋದು ಆಗುತ್ತೆ ಹೋಗೋದು ಹೋಗುತ್ತೆ."

"ಮೊನ್ನೆ ನಮ್ಮ ಆಚೆ ಮನೆ ಲಂಕಿಣಿ-ಜಯಮ್ಮನ ತಾಯಿ ಕಣೇ-ನಿನ್ನ ವಿಷಯ ಎಂಥ ಕೆಟ್ಟ ಮಾತು ಆಡಿದಳೂಂತೀ."

"ಸುನಂದಾ ಕೆಟ್ಟು ಹೋದ್ಲು ಅಂದ್ಲೇನು?"

ಆ ಪ್ರಶ್ನೆಯೊಡನೆ ಜೆರೆತಿತ್ತು ವ್ಯಂಗ್ಯವಾದ ನಗು. ಚಂಪಾಗೆ ಕಸಿವಿಸಿಯಾಯಿತು.

"ನಿನ್ನ ನಡತೆ ಸರಿಯಾಗಿಲ್ಲಾಂತ ಗಂಡ ಬಿಟ್ಬಿಟ್ಟಿದ್ದಾನೆ ಅಂದ್ಲು."

"ಅಷ್ಟೆ ತಾನೆ?"

"ನಾನು ಸಿಟ್ಟು ತಡೆಯೋಕಾಗದೆ ದಬಾಯಿಸ್ದೆ. ನಿಮ್ಮ ಜಯಾನೂ ಯಾವತ್ತಾದರೂ ಮನೆಗೆ ವಾಪಸು ಬಂದಾಳು, ಹುಷಾರಿ-ಅಂದೆ, ನನ್ನ ಜಯಾನಾ ಮುಂಡೆಯಾಗು ಅಂತಿಯೇನೇ ಪಾಪೀ-ಅಂತ ಎಷ್ಟೊಂದು ಕೂಗಾಡಿದ್ಲೂಂತ. ನಮ್ಮಮ್ಮ ನನ್ನನ್ನು ಒಳಕ್ಕೆ ಎಳಕೊಂಡು ಹೋದ್ರು, ಬಯ್ದರು."

ತನ್ನನ್ನು ದೂಷಿಸಿದವಳಿಗೆ ಗೆಳತಿ ಇದಿರಾಡಿದಳೆಂದು ಸುನಂದೆಗೆ ಸಮಾಧಾನವಾಯಿತು. ಆದರೂ ಆಕೆ ಎಂದಳು:

"ನೀನು ಸುಮ್ನಿರ್ಬೇಕಾಗಿತ್ತು."

"ಹೂಂ. ಯಾಕಿರ್ಲಿ ಸುಮ್ನೆ?"

ಸುನಂದೆಯ ತಾಯಿ ಕಾಫಿ ಮಾಡಿ ತಂದರು.

"ಕೂತ್ಕೊ ಅಮ್ಮ," ಎಂದಳು ಸುನಂದಾ, ತಾಯಿ ತನ್ನೊಡನೆ ಕೂತಿರುವುದು ತನಗಿಷ್ಟವಿಲ್ಲದಿದ್ದರೂ.

"ಒಳಗೆ ಒಂದು ರಾಶಿ ಕೆಲಸವಿದೆ. ನೀವು ಮಾತಾಡ್ತಾ ಇರಿ," ಎಂದು ಸುನಂದೆಯ ತಾಯಿ ತಮ್ಮ ಅಡುಗೆ ಮನೆಯ ಲೋಕಕ್ಕೆ ವಾಪಸಾದರು.

ಸುನಂದಾ, ಕಾಫಿ ಹೀರುತ್ತಿದ್ದ ಗೆಳತಿಯನ್ನೇ ದಿಟ್ಟಿಸಿದಳು. ಗಂಡ ಮುದ್ದಿಸಿಯೇ ಇರಲಿಲ್ಲವೇನೋ ಎನ್ನುವಂತಹ ಪುಟ್ಟ ತುಟಿಗಳು; ನೀಳವಾಗಿದ್ದ ಕಣ್ಣುಗಳು; ಅಗಲ ಕಿರಿದಾದ ಹಣೆ; ಗುಂಗುರು ಗುಂಗುರಾದ ಕಾಡು ಪೊದೆಯಂತಹ ಮೋಹಕ ಕೇಶರಾಶಿ.

ಆ ಕೂದಲನ್ನೆ ಹೆಚ್ಚು ಹೊತ್ತು ನೋಡಿ, ಸುನಂದಾ ಅಂದಳು:

"ಸದ್ಯಃ ನಿನಗೇನೂ ತೊಂದರೆ ಇಲ್ಲ ತಾನೆ?"

ಚಂಪಾಗೆ ಅರ್ಥವಾಗಲಿಲ್ಲ.

"ಏನು ತೊಂದರೆ?"

"ಇರುತ್ತಲ್ಲವಮ್ಮ—ಮಡಿವಂತರ ಶಾಸ್ತ್ರ."

"ಊಂ," ಎಂದಳು ಚಂಪಾ ತಲೆಯಾಡಿಸಿ. ಆಕೆಗೆ ಅರ್ಥವಾಗಿತ್ತು. "ಅತ್ತೆ ಮನೇಲಿ ಯಾರೂ ಅದರ ಮಾತೆತ್ತಿಲ್ಲ. ಈ ಶನಿ ತೊಲಗಿದರೆ ಸಾಕು ಅನಿಸಿತ್ತು ಅವರಿಗೆ."

"ಹಾಗಾದರೆ ಇಲ್ಲೇ ಇರ್ತೀಯಾ ಇನ್ನು?"

"ಹೂಂ."

ತರಗತಿಯಲ್ಲಿ ಚುರುಕಾಗಿದ್ದವಳು ಚಂಪಾ. ಅದರ ನೆನಪಿಗಾಗಿ ಸುನಂದಾ ಕೇಳಿದಳು.

"ಪುನಃ ಓದ್ಬೇಕೂಂತಿದೀಯಾ?"

"ಆಸೆ ಏನೋ ಇದೆ. ನಮ್ಮಣ್ಣನ್ನ ಹೇಗಾದರೂ ಮಾಡಿ ಒಪ್ಪಿಸ್ಬೇಕು. ಬಿ.ಎ. ಮುಗಿಸೋದು ಸುಲಭ. ಯಾವುದಾದರೂ ಹೈಸ್ಕೂಲ್‌ನಲ್ಲಿ ಕೆಲಸ ಸಿಕ್ಕಿಯೇ ಸಿಗುತ್ತೆ. ಆಮೇಲೆ ಬಿ.ಟಿ. ನೂ ಮಾಡ್ಕೊಂಡ್ರಾಯ್ತು."

"ಹೌದು ಚಂಪಾ, ಸರಿಯಾಗಿಯೇ ಯೋಚ್ನೆ ಮಾಡಿದೀಯಾ. ಏನಾದರೂ ಮಾಡಿ ಮನೆಯವರ್ನ ನೀನು ಒಪ್ಪಿಸ್ಲೇ ಬೇಕು."

ಗೆಳತಿಯ ಬೆಂಬಲದ ಪ್ರೋತ್ಸಾಹದ ನುಡಿಯಿಂದ ಚಂಪಾಗೆ ಸಂತೋಷವಾಯಿತು.

ಅನಂತರವೂ ಸ್ವಲ್ಪ ಹೊತ್ತಿದ್ದು ಆಕೆ ಹೊರಟು ನಿಂತಳು.

"ಈ ಊರಲ್ಲಿ ನೀನು ಇರುವಷ್ಟು ಕಾಲವೂ ನಮ್ಮ ಮನೆಗೆ ಆಗಾಗ್ಗೆ ಬರಬಾರ್ದೆ ಸುನಂದಾ?" ಎಂದು ಕೇಳಿದಳು.

"ಇನ್ನೆಷ್ಟು ದಿನ ಇಲ್ಲಿರ್ತೀನೋ?"

"ಯಾಕೆ? ಬೆಂಗಳೂರಿಗೆ ಹೋಗ್ಬೇಕೂಂತಿದಿಯೇನು?"

"ಮಾಡೋ ಯತ್ನವೆಲ್ಲ ಮಾಡ್ಬೇಕಲ್ಲ ಚಂಪಾ?"

"ನಿಜವೇ. ಆದರೂ ಹೋಗೋಕ್ಮುಂಚೆ ಬಾ."

"ಆಗ್ಲಿ. ನೀನೂ ವಾರಕ್ಕೊಮ್ಮೆ ಬರ್ತ್ತಿರು."

...ಗೆಳತಿ ಬಂದಾಗ ಸುನಂದೆಗೆ ಸಂತೋಷವಾಗಿತ್ತು. ಆದರೆ ಆಕೆ ಹೊರಟು ಹೋದ ಬಳಿಕ, ಸುನಂದೆಯ ಮನಸ್ಸನ್ನು ದುಃಖ ಆವರಿಸಿತು.

ಚಂಪಾ ವಿದ್ಯಾರ್ಥಿ ದೆಸೆಯಲ್ಲಿ ಪುಸ್ತಕ ಕೀಟವಾಗಿದ್ದಳೇ ಹೊರತು ಎಂದೂ ದಿಟ್ಟೆಯೆಂದು ಹೆಸರು ಪಡೆದಿರಲಿಲ್ಲ. ಆದರೆ ಬದುಕಿನ ಸುತ್ತಿಗೆ-ಪೆಟ್ಟು ಆಕೆಯನ್ನು ಉಕ್ಕಾಗಿ ಹದಗೊಳಿಸಿತ್ತು. ವಿದ್ಯಾಭ್ಯಾಸವನ್ನು ಮುಂದುವರಿಸಿ ಅಧ್ಯಾಪಿಕೆಯಾಗಿ ಯಾರಿಗೂ ಹೊರೆಯಾಗದೆಯೇ ಇರುವ ಅಪೇಕ್ಷೆ......ಅದು ಯೋಗ್ಯವಾಗಿತ್ತು, ಪ್ರಶಂಸನೀಯವಾಗಿತ್ತು.

ತನಗಾದರೋ ಅದೂ ಇಲ್ಲ. ಒತ್ತರಿಸಿ ಬರುತ್ತಿದ್ದ ನಿರಾಸೆಯ ಸುಳಿಯಲ್ಲಿ ಸಿಲುಕಿ ಸುನಂದಾ ಮೌನವಾಗಿ ಗೋಳಾಡಿದಳು. ತನಗಿಂತಲೂ ವಿಧವೆಯಾದ ಚಂಪಾ ವಾಸಿ; ಈ ಅಪಮಾನಿತ ಬದುಕಿಗಿಂತಲೂ ವೈಧವ್ಯ ಮೇಲು....

ಪುಟ್ಟ ಕೂಸು ಸರಸ್ವತಿ: ಅದು ತನ್ನ ಅಸಹಾಯತೆಯನ್ನು ಹೆಚ್ಚಿಸಿರುವ ಇನ್ನೊಂದು ಅಂಶ. ಆದರೂ ತನಗೆ ಪ್ರಿಯವಾದುದು. ಹಿಂದೆಯೊಮ್ಮೆ ದಾಂಪತ್ಯ ದುಃಖದ ಮಾತು ಬಂದಿದ್ದಾಗ ತಂದೆಯೊಡನೆ ಸುನಂದಾ ಅಂದಿದ್ದಳು: 'ಮಗೂ ಗೋಸ್ಕರ ಸಹಿಸ್ಕೊಂಡಿದೀನಿ ಅಪ್ಪಾ. ನಮ್ಮ ಸಂಸಾರದ ವಿಷಯ ಬೀದಿ ಮಾತಾ ಗ್ಬಾರದು, ನಾನು ಹುಟ್ಟಿದ ಮನೆಗೆ ಕೆಟ್ಟ ಹೆಸರು ಬಾರದು, ಅಂತ ಸಹಿಸ್ಕೊಂಡಿ ದೀನಿ...'

ಆದರೂ ಸಹನೆಗೊಂದು ಮಿತಿ?

ಆಗ ತಂದೆ ಅಂದಿದ್ದರು: 'ಗಂಡಸು ಏನು ತಪ್ಪು ಮಾಡಿದರೂ ನಡೆದು ಹೋಗುತ್ತೆ. ನರಕ ಅನುಭವಿಸ್ಬೇಕಾದ್ದು ಹೆಂಗಸೊಬ್ಬಳೇ. ನೀನು ತುಂಬಾ ಹುಷಾ ರಾಗಿರ್ಬೇಕಮ್ಮಾ.'

ಸುನಂದಾ ಹುಷಾರಾಗಿಯೇ ಇದ್ದಳು. ಆದರೂ ಏನಾಯಿತು?

...ಇಂತಹ ವಿಷಯದಲ್ಲಿ ಯಾವಾಗಲೂ ಹೆಚ್ಚಿನ ಜನ ಹೆಣ್ಣನ್ನೇ ದೂರುವುದು ಆಶ್ಚರ್ಯಕರವಾಗಿತ್ತು. ಗಂಡಸರು ತನ್ನ ಗಂಡನ ಪರವಾದಿಸಿದ್ದರೆ ಅದು ವಿಚಿತ್ರ ವೆನಿಸುತ್ತಿರಲಿಲ್ಲ. ಆದರೆ ಹೆಂಗಸರು? ಅವರ ದೃಷ್ಟಿಯಲ್ಲೂ ಕೆಟ್ಟಿರುವುದು ತನ್ನ ನಡತೆಯೇ. ತನಗೆ ಅನ್ಯಾಯವಾಗಿರಬಹುದೆಂದು, ಅವರು ಯೋಚಿಸುವುದೇ ಇಲ್ಲ.

ನಿಜ ಸಂಗತಿಯನ್ನು ತಿಳಿದವರು ಯಾರೂ ಇರಲಿಲ್ಲವೆಂದಲ್ಲ. ರಾಧಮ್ಮ, ಕುಸುಮಾ, ಚಂಪಾ...ಹೀಗೆಯೇ ಬೇರೆ ಕೆಲವರು. ಆದರೆ ಇವರ ಸಂಖ್ಯೆ ಕಡಮೆ. ತಿಳಿದು ಸಹಾನುಭೂತಿ ತೋರುವವರಿಗಿಂತಲೂ ತಿಳಿಯದೆ ಕುಹಕವಾಡುವವರೇ ಹೆಚ್ಚು ಜನ.

...ಇಂತಹ ಯೋಚನೆಯಿಂದ ಸುನಂದೆಯ ಮಿದುಳು ಬಿಸಿಯಾಯಿತು. ಆಕೆ

ಮಗುವನ್ನೆತ್ತಿಕೊಂಡು ಅಂಗಳಕ್ಕಿಳಿದು, ತಣ್ಣನೆ ಬೀಸುತ್ತಿದ್ದ ಗಾಳಿಗೆ ಮುಖ ಒಡ್ಡಿದಳು.

....ಮಾರನೆಯ ದಿನ ರಾಮಕೃಷ್ಣಯ್ಯನ ಕಾಗದ ಬಂತು. ತಮಗೂ ಕೃಷ್ಣಪ್ಪನವರಿಗೂ ಇದ್ದ ಗೆಳೆತನವನ್ನು ತಿಳಿಯದವರೊಬ್ಬರು ತಮ್ಮಲ್ಲಿಗೆ ಬಂದು 'ಪುಟ್ಟಣ್ಣ ನಿಮಗೆ ಪರಿಚಯವಂತೆ; ನಮ್ಮ ಪರವಾಗಿ ಮಾತಾಡ್ತೀರಾ?' ಎಂದಿದ್ದರಂತೆ. ನಮ್ಮ ಪರವಾಗಿ ಎಂದರೆ ಅವರ ಅವಿವಾಹಿತೆ ಮಗಳ ಸಂಬಂಧದಲ್ಲಿ. ಒಂದು ಜಾಗ ಖಾಲಿಯಾದರೆ ಸಾವಿರ ಅರ್ಜಿ. 'ಅಂತೂ ಸುನಂದೆಯನ್ನು ಕರಕೊಂಡು ಬೇಗನೆ ಬಂದುಬಿಡುವುದು ಮೇಲು.'

ತಾನು ಬದುಕಿದ್ದಾಗಲೇ ತನ್ನ ಗಂಡನಿಗೆ ಇನ್ನೊಂದು ಮದುವೆಯ ಮಾತು. ಹೆಣ್ಣು ಕೊಡುವವರ ಆತುರ....ಸುನಂದೆಗೆ ನಗು ಬಂತು. ಆಕೆ ಗಟ್ಟಿಯಾಗಿ ನಕ್ಕಳು.

ಕೃಷ್ಣಪ್ಪನವರಿಗೆ ದಿಗಿಲಾಯಿತು. "ಸುನಂದಾ" ಎಂದು ಮಗಳನ್ನೊಮ್ಮೆ ಹೆಸರು ಹಿಡಿದು ಕರೆದು, ಅವರೆಂದರು: "ನಾಳೆಯೇ ಬೆಂಗಳೂರಿಗೆ ಹೊರಡೋಣ, ಆಗದಾ?"

## ೧೧

ಬೆಂಗಳೂರು ಸಮೀಪಿಸುತ್ತಿದ್ದಂತೆ ಕೃಷ್ಣಪ್ಪನವರು ಕೇಳಿದರು:

"ಎಲ್ಲಿ ಉಳ್ಕೊಳ್ಳೋಣ ಸುನಂದಾ?"

"ರಾಮಕೃಷ್ಣಯ್ಯನವರಿಗೆ ತೊಂದರೆಯಾಗೋದಿಲ್ಲ, ಅಲ್ವೆ?"

"ಅವನಿಗೇನು ತೊಂದರೆ? ಹತ್ತರ ಜೊತೇಲಿ ಹನ್ನೊಂದು."

"ಹಾಗಾದರೆ ಅವರ ಮನೆಗೇ ಹೋಗೋಣ."

"ಮಗೂನ ಕರಕೊಂಡು ನೀನು ರಾಧಮ್ಮನವರಲ್ಲಿಗೆ ಹೋಗ್ತಿಯೇನೋ ನೋಡು. ನಾನೊಬ್ಬ ಬೇಕಾದರೆ ಶೇಷಾದ್ರಿಪುರದಲ್ಲಿರ್ತೀನಿ."

"ಪುನಃ ಹಿಂದಿನ ಮನೆ ಸಮೀಪದಲ್ಲೇ ಇರೋಕೆ ನನಗಿಷ್ಟವಿಲ್ಲಾಪ್ಪ."

"ಹಾಗೇ ಆಗಲಿ."

"ನಾಳೆ ಬೆಳಗ್ಗೆ ಹೋಗಿ ಒಪ್ಪತ್ತಿದ್ದು ಬಂದರಾಯ್ತು."

"ನಿನ್ನಿಷ್ಟ."

...ರಾಮಕೃಷ್ಣಯ್ಯನವರ ಮನೆ ಸೇರಿದಾಗ ಅವರು ಸ್ವಾಗತ ಬಯಸಿದರು.

"ಬಾ ತಾಯಿ. ಸತ್ಯವಾನನ್ನ ಹುಡುಕಿಕೊಂಡು ಬಂದಿರೋ ಸಾವಿತ್ರಿ, ಬಾ!"

ಅವರ ಹೆಂಡತಿಗೂ ಪರಿಚಿತಳೇ ಆದ ಸುನಂದಾ ಮನೆಯೊಳಗಿನ ಗುಂಪಿನಲ್ಲಿ

ಸೇರಿಹೋದಳು.

ರಾಮಕೃಷ್ಣಯ್ಯ ಕಾಗದದಲ್ಲಿ ಬರೆದಿದ್ದ ವಿಚಾರಗಳು ಚರ್ಚೆಯಾದಾಗ ಕೃಷ್ಣಪ್ಪನವರು ತಮ್ಮ ಸಂದೇಹವನ್ನು ಮುಂದಿಟ್ಟರು.

"ಮೊದಲ್ನೇ ಹೆಂಡತಿ ಬದುಕಿರುವಾಗ ಇನ್ನೊಂದು ಮದುವೆ ಹ್ಯಾಗೆ ಮಾಡ್ಕೋತಾನೆ?"

"ಕಾನೂನು ವಿಷಯ ತಾನೆ ನೀನು ಕೇಳೋದು?"

"ಹೌದು."

"ಇವತ್ತಾದರೆ ಮಾಡ್ಕೋ ಬಹುದು. ನಮ್ಮ ಸಂಸ್ಥಾನದಲ್ಲಿ ಅದಕ್ಕಿನ್ನೂ ಅವಕಾಶ ಇದೆ. ಒಂದು ತಿಂಗಳಾದ್ಮೇಲೆ ಆಗೋಲ್ಲ."

"ಅಂದರೆ?"

"ಹಿಂದೂ ವಿವಾಹದ ಮಸೂದೆ ಪಾರ್ಲಿಮೆಂಟಿನಲ್ಲಿ ಚರ್ಚೆಯಾಗ್ತಿರೋ ವಿಷಯ ಪತ್ರಿಕೇಲಿ ಓದಿದಿಯೋ ಇಲ್ವೋ?"

"ಓದಿದೀನಿ."

"ಅದೇನು ಓದಿದೀಯೋ? ಇನ್ನು ಸ್ವಲ್ಪ ದಿವಸಗಳಲ್ಲೆ ಮಸೂದೆ ಮಂಜೂರಾಗಿ ಶಾಸನವಾಗುತ್ತೆ. ಅದಕ್ಕೆ ರಾಷ್ಟ್ರಾಧ್ಯಕ್ಷರ ಸಹಿ ಬಿದ್ಮೇಲೆ ಇಬ್ಬರು ಹೆಂಡಿರನ್ನ ಕಟ್ಕೊಳ್ಳೋಕಾಗಲ್ಲ."

"ಸರಿ. ಸರಿ."

ಆ ಮಸೂದೆಯಲ್ಲಿ ಬೇರೆಯೂ ಅಂಶಗಳಿದ್ದುವು. ವಿವಾಹ ವಿಚ್ಛೇದನವನ್ನು ಅದು ನ್ಯಾಯ ಸಮ್ಮತಗೊಳಿಸಿತ್ತು. ಕೃಷ್ಣಪ್ಪನವರಿಗೂ ಅದು ತಿಳಿದಿದ್ದ ಸಂಗತಿಯೇ. ಹೀಗಿದ್ದರೂ ರಾಮಕೃಷ್ಣಯ್ಯನವರು ಮಸೂದೆಯ ವಿವರಗಳನ್ನು ಪ್ರಸ್ತಾಪಿಸ ಬಯಸಲಿಲ್ಲ. ಆಗಿನ ವಾತಾವರಣದಲ್ಲಿ ಅಂತಹ ಪ್ರಸ್ತಾಪ ಯೋಗ್ಯವಲ್ಲವೆಂದು ಅವರಿಗೆ ತೋರಿತು.

ಅಷ್ಟರಲ್ಲೆ ಸುನಂದಾ ಮಗುವನ್ನೆತ್ತಿಕೊಂಡು ಹೊರಬಂದಳು.

"ಏನ್ಹೇಳ್ತೀಯಮ್ಮ ಸುನಂದಾ?" ಎಂದು ರಾಮಕೃಷ್ಣಯ್ಯನವರು ಕೇಳಿದರು.

"ಏನಿದೆ ನಾನು ಹೇಳೋದು?"

"ಅವಳಿಗೆ ಬಹಳ ಬೇಸರವಾಗಿದೆ ರಾಮಕೃಷ್ಣಯ್ಯ," ಎಂದರು ಕೃಷ್ಣಪ್ಪನವರು.

"ಆಗದೆ ಇರತ್ಯೆ" ಎಂದು ಕನಿಕರದ ಧ್ವನಿಯಲ್ಲಿ ನುಡಿದು ರಾಮಕೃಷ್ಣಯ್ಯನವರು ಮುಂದುವರಿದರು; "ಧೈರ್ಯವಾಗಿರ್ಬೇಕಮ್ಮ ನೀನು. ಕಲಿತೋಳು—ವಿದ್ಯಾವಂತೆ. ಯಾವುದಕ್ಕೂ ಹೆದರ್ಕೊಡದು."

"ಇಲ್ಲ ಮಾವ. ಧೈರ್ಯವಾಗೇ ಇದೀನಿ. ಏನು ಬಂದರೂ ಅನುಭವಿಸೋಕೆ ಸಿದ್ಧವಾಗಿದೀನಿ."

ಪುಟ್ಟಣ್ಣನನ್ನು ಕಾಣಲು ಕೈಗೊಳ್ಳಬೇಕಾದ ವಿವರ ಚರ್ಚೆಯಾಯಿತು. ಎಲ್ಲರೂ

ನೇರವಾಗಿ ಹೋಟೆಲಿಗೆ ಹೋಗುವುದೇ ಸೂಕ್ತ—ಎಂದು ರಾಮಕೃಷ್ಣಯ್ಯ ಅಭಿಪ್ರಾಯ ಪಟ್ಟರು.

ತಾನು ನಾಯಿಕೆಯಾಗಿ ನಡೆಯಲಿರುವ ನಾಟಕವನ್ನು ಕಲ್ಪಿಸಿಕೊಂಡು ಸುನಂದೆಗೆ ನಗುಬಂತು. ಮಗುವನ್ನು ಮುಖಕ್ಕೆ ಅಡ್ಡವಾಗಿ ಹಿಡಿದು ಆ ನಗುವನ್ನು ಆಕೆ ಮರೆಸಿ ಕೊಂಡಳು.

ಕೃಷ್ಣಪ್ಪನವರಿಗೆ ಆ ಮಾರ್ಗ ಅಷ್ಟು ಹಿತವೆನಿಸಲಿಲ್ಲ.

"ಹೋಟೆಲಿನಲ್ಲಿ ಗದ್ದಲವಾಗುತ್ತೆ. ಆತ ನಮ್ಮನ್ನ ಹೊರಹಾಕಿಸ್ಬಹುದು."

"ಖಂಡಿತ ಹೊರ ಹಾಕಿಸೋದಿಲ್ಲ. ಬೇರೆ ಎಲ್ಲಿಂತ ಅವನನ್ನ ಹಿಡೀತೀಯಾ? ಆತನನ್ನ ಆ ದಿನವೆ ನೋಡ್ಲಿಲ್ವೆ? ಬಲು ಘಾಟಿ. ಅವನಿರೋ ಜಾಗಕ್ಕೆ ಹೋಗದೆ ಬೇರೆ ಉಪಾಯವೇ ಇಲ್ಲ."

"ಸರಿ. ಹಾಗೇ ಮಾಡೋಣ....ಈಗಲೂ ಅಲ್ಲೇ ಇದಾನೋ ಇಲ್ವೋ ಅಂತ ಮೊದಲು ನೋಡ್ಬೇಕಾದ್ದಿಲ್ಲ, ಅಲ್ವೆ?"

ರಾಮಕೃಷ್ಣಯ್ಯ ಅಂದರು:

"ಏನೂ ಬೇಡ. ಈ ಸಲ ಸುನಂದೆಯೂ ಇರೋದರಿಂದ, ಸುಳಿವು ಸಿಗದೇನೇ ಹೋಗ್ಬೇಕು."

ಹಾಗೆ ಯೋಜನೆ ಸಿದ್ಧಗೊಳಿಸುತ್ತಿದ್ದ ರಾಮಕೃಷ್ಣಯ್ಯನ ವಿಷಯದಲ್ಲಿ ಸುನಂದೆಗೆ ಗೌರವ ಹೆಚ್ಚಿತು. ಆದರೂ ರಾಧಮ್ಮ ಕುಸುಮೆಯರನ್ನು ನೋಡದೆ, ದಂಡಯಾತ್ರೆಗೆ ಹೊರಡಲು ಆಕೆ ಸಿದ್ಧಳಿರಲಿಲ್ಲ.

"ಅಪ್ಪಾ, ನಾಳೆ ಬೆಳಗ್ಗೆ ರಾಧಮ್ಮನ ಮನೆಗಿಷ್ಟು ಹೋಗಿ ಬರ್‍ತೀನಿ."

"ಆಗಲಿ, ಹೋಗ್ಬಿಟ್ಟು ಬಾ," ಎಂದರು ಕೃಷ್ಣಪ್ಪನವರು.

ವಿವರಣೆ ಬರುವುದಕ್ಕೆ ಮುಂಚೆಯೇ ರಾಮಕೃಷ್ಣಯ್ಯ ಅಂದರು:

"ರಾಧಮ್ಮ? ಓ ನೆರೆಮನೆಯೋರು. ಸರೀನಮ್ಮ. ಹೋಗಿ ಬಾ. ಆ ಮಹಾಶಯನಲ್ಲಿಗೆ ನಾಡದು ಬೆಳಗ್ಗೆ ಹೊರಟರಾಯ್ತು."

...ಕತ್ತಲು ಕಳೆಯುವುದು ಕಷ್ಟವಾಗಿರಲಿಲ್ಲ. ಆದರೆ ಬೆಳಕು ಬಂದಂತೆ ಬೆಂಗಳೂರಿನ ನೆನಪುಗಳೂ ಬಳಿಗೆ ಧಾವಿಸಿ, 'ನಮ್ಮ ಪರಿಚಯವಿದೆಯೇ? ನಮ್ಮ ಪರಿಚಯ ವಿದೆಯೇ?' ಎಂದು ಕೇಳಿದುವು.

ರಾಧಮ್ಮನ ಮನೆಯಲ್ಲಿ ಮಗಳನ್ನು ಬಿಟ್ಟು ಬರಲೆಂದು ಕೃಷ್ಣಪ್ಪನವರೇ ಹೊರಟರು. ಮೆಜೆಸ್ಟಿಕ್ಕಿನಲ್ಲಿ ಬಸ್ಸು ಬದಲಾಯಿಸಬೇಕಾಯಿತು. ಸರಸ್ವತಿ ಪಕ್ಕದಲ್ಲಿ ಕುಳಿತಿದ್ದ ಹೆಂಗಸಿನ ಸೆರಗೆಳೆದಳು, ಹಿಂಬದಿಯಲ್ಲೇ ಇದ್ದ ಯಾವನೋ ಗಂಡಸಿನ ನಗೆಗೆ ಮುಗುಳುನಗೆಯ ಪ್ರತ್ಯುತ್ತರವನ್ನಿತ್ತಳು, ಆದರೆ ಸುನಂದೆಯ ಗಮನವೆಲ್ಲ ತಾನು ಕುಳಿತಿದ್ದ ಬದಿಯ ಬೀದಿಯಲ್ಲೇ ನೆಟ್ಟಿತ್ತು... ಇಷ್ಟು ಹೊತ್ತಿನಲ್ಲಿ ಅವರು ಮನೆ ಬಿಡುವ ಪದ್ಧತಿಯಿಲ್ಲ. ಇದು, ಮುಖಕ್ಷೌರ ಮುಗಿಸಿ ಸ್ನಾನಮಾಡಬೇಕಾದ ಸಮಯ...

ಆ ಸಿನಿಮಾ ಮಂದಿರ, ಅಲ್ಲಿಗೇ ಇಬ್ಬರೂ ಜತೆಯಾಗಿ ನಾಲ್ಕಾರು ಸಾರೆಯಾದರೂ ಬಂದಿದ್ದರು. ....ಪರಿಚಿತವಾದ ಕಟ್ಟಡಗಳು, ಆತನಾಗಿಯೇ ಹೇಳಿರಲಿಲ್ಲವಾದರೂ ತಾನಾಗಿ ಕೇಳಿ ತಿಳಿದುಕೊಂಡಿದ್ದಳು...ಬೆಳಗಿನ ಹೊತ್ತು. ಬಸ್ಸಿನಲ್ಲಿದ್ದ ಹೆಂಗಸರು ಮೂರೇ ಜನ. ಒಬ್ಬಾಕೆಯ ವಯಸ್ಸು ಚಿಕ್ಕದು. ಆಕೆಯ ಸಮೀಪವಾಗಿಯೇ ಗಂಡಸರ ಸೀಟಿನಲ್ಲಿ ಕುಳಿತಿರುವ ಯುವಕನ ಕಣ್ಣುಗಳಲ್ಲಿ ಒಲವು ತುಂಬಿದೆ. ಬಯಕೆ ಯಲ್ಲ, ಒಲವು. ದಂಪತಿ ಇರಬಹುದು. ಹೊಸತಾಗಿ ಮದುವೆಯಾದ ಗಂಡು–ಹೆಣ್ಣು.

ಮುಂದೆಯೊಂದು ಕಡೆ ಅವರಿಬ್ಬರೂ ಇಳಿದರು–ಆ ಯುವಕ ಮತ್ತು ಯುವತಿ. ಅವರು ದಂಪತಿಗಳೆಂದು ಸುನಂದಾ ಊಹಿಸಿದ್ದುದೇ ಸರಿಯಾಗಿತ್ತು—ಆದರೆ ಜತೆ ಯಾಗಿರಲು ದಂಪತಿಯೇ ಆಗಬೇಕೆಂದುಂಟೆ?....ಎಂಥ ಯೋಚನೆ! ಸುನಂದೆಯ ಮೈ ನಡುಗಿತು....ಸೀಟಿನ ಮೇಲೆ ನಿಂತು ಹೊರ ನೋಡತೊಡಗಿದ್ದ ಸರಸ್ವತಿಯನ್ನು ಆಕೆ ಗಟ್ಟಿಯಾಗಿ ಹಿಡಿದುಕೊಂಡಳು ಮತ್ತು ಕೈ ಹೊರಹಾಕದಂತೆ ಆ ಕಡೆಗೇ ಲಕ್ಷ್ಯ ನೆಟ್ಟಳು...

........ಮನೆಗೆ ಬಂದ ಸುನಂದೆಯನ್ನು ರಾಧಮ್ಮ ಆದರದಿಂದ ಬರಮಾಡಿ ಕೊಂಡರು.

"ಶ್ಯಾಮಾ, ಸುನಂದತ್ತೆ ಬಂದಿದಾರೇಂತ ಕುಸುಮಮ್ಮಿಗೆ ಹೇಳ್ಬಿಟ್ಟು ಬಾಪ್ಪಾ," ಎಂದರು.

ರಾಮಯ್ಯನವರೊಡನೆ ಮಾತನಾಡಲು ತಂದೆಯನ್ನು ಬಿಟ್ಟು, ಸುನಂದಾ ಅಡುಗೆ ಮನೆಗೆ ನಡೆದಳು.

ಕುಸುಮಾ ಬರುವುದು ತಡವಾಗಲಿಲ್ಲ. ಬಂದವಳೇ, ಚಾಪೆಯ ಮೇಲೆ ಕುಳಿ ತಿದ್ದ–ತನಗೆ ಅಪರಿಚಿತರಾದ–ಕೃಷ್ಣಪ್ಪನವರನ್ನು ಕಂಡು ಕೈಮುಗಿದಳು.

"ನಮಸ್ಕಾರ."

"ನಮಸ್ಕಾರ ತಾಯಿೞ," ಎಂದರು ಕೃಷ್ಣಪ್ಪ. ಈ ಬಳುಕುವ ಕೋಮಲ ಹೆಣ್ಣೇ ಕುಸುಮಾ ಇರಬೇಕೆಂದು ಅವರು ಊಹಿಸಿದರು;

"ಎಲ್ಲಿ ಬಚ್ಚಿಟ್ಕೊಂಡಿದೀರಾ ರಾಧಮ್ನೋರೆ?" ಎನ್ನುತ್ತಾ ಕುಸುಮಾ ಅಡುಗೆ ಮನೆಯ ಕಡೆಗೆ ನಡೆದಳು.

ರಾಧಮ್ಮನವರ ಜತೆ ಒಲೆಯ ಬಳಿ ಕುಳಿತಿದ್ದ ಸುನಂದಾ ಎದ್ದು ನಿಂತು ಗೆಳತಿ ಯನ್ನು ದಿಟ್ಟಿಸಿದಳು.

ಒಬ್ಬರನ್ನೊಬ್ಬರು ಮುಟ್ಟಿ ನೋಡಬೇಕೆಂಬ ಬಯಕೆಯಾಯಿತು ಅವರಿಗೆ.

ಏನು ಮಾಡಬೇಕೆಂದು ತಿಳಿಯದೆ ಕುಸುಮಾ ಅಂದಳು:

"ಚೆನ್ನಾಗಿದೀರಾ ಸುನಂದಾ?"

ಆ ಪ್ರಶ್ನೆ ಕೇಳುತ್ತ ಆಕೆ, ಉತ್ತರದ ಹಾದಿ ನೋಡದೆ ಸರಸ್ವತಿಯನ್ನೆತ್ತಿ ತಬ್ಬಿ ಕೊಂಡು ಮುದ್ದಾಡಿದಳು.

"ಎಷ್ಟು ಬೇಗ ದೊಡ್ಡೋಳಾಗ್ಬಿಟ್ಟೀದೀಯೆ! ನನ್ನ ನೆನಪಿದೆಯೇನೇ ನಿಂಗೆ?"

ಸರಸ್ವತಿಗೇನೂ ನೆನಪಿರಲಿಲ್ಲ. ಆದರೂ ಆಕೆ ಪ್ರತಿಭಟಿಸಲಿಲ್ಲ.

"ನಿನ್ನತ್ತೆ ಕಣೇ," ಎಂದಳು ಸುನಂದಾ.

ಎಷ್ಟೊಂದು ಅತ್ತೆಯರು ತನಗೆ—ಎಂದು ಸರಸ್ವತಿ ತಬ್ಬಿಬ್ಬಾಗಬೇಕಾದ ಪ್ರಮೇಯ. ಆದರೂ ಎದೆಗುಂದದೆ, "ಅತ್ತೆ" ಎಂದು ಕುಸುಮಳನ್ನು ಆಕೆ ಸಂಬೋಧಿಸಿದಳು.

"ಅಯ್ಯೋ! ಎಷ್ಟೊಂದು ಚೆನ್ನಾಗಿ ಮಾತಾಡ್ತಾಳೆ!" ಎಂದು ಆಶ್ಚರ್ಯವನ್ನೂ ಸಂತೋಷವನ್ನೂ ಕುಸುಮಾ ವ್ಯಕ್ತಪಡಿಸಿದಳು.

ಒಲೆಯ ಮೇಲೆ ಕುದಿಯುತ್ತಿದ್ದ ಕಾಫಿ ನೀರನ್ನೂ ರಾಧಮ್ಮನವರನ್ನೂ ನೋಡುತ್ತ ಆಕೆ ಎಂದಳು:

"ಸುನಂದಕ್ಕನನ್ನ ಇಲ್ಲೇ ಕಟ್ಟಿ ಹಾಕ್ಬೇಡಿ, ತಿಳೀತೆ? (ಸುನಂದೆಯ ಕಡೆ ತಿರುಗಿ) ಕಾಫಿ ಮುಗಿಸ್ಕೊಂಡು ನಮ್ಮನೆಗೆ ಬಂದ್ಬಿಡಿ."

ಸರಸ್ವತಿಯನ್ನು ಸುನಂದೆಯ ಕೈಗೊಪ್ಪಿಸಿ ಹೊರಬಿದ್ದು, "ಬರ್ತೀನಿ" ಎಂದು ಸುನಂದೆಯ ತಂದೆಗೆ ಹೇಳಿ, ಕುಸುಮಾ ತನ್ನ ಮನೆಗೆ ಹೋದಳು.

ಕೃಷ್ಣಪ್ಪನವರು ನಿಟ್ಟುಸಿರು ಬಿಟ್ಟರು. ತಮ್ಮ ಮಗಳ ವಿಷಯದಲ್ಲಿ ಅವರೆಲ್ಲ ತೋರುತ್ತಿದ್ದ ಒಲವು ಎಂತಹ ಹಬ್ಬವಾಗಿತ್ತು ಅವರ ವಯಸ್ಸಾದ ಕಣ್ಣುಗಳಿಗೆ! ಆದರೂ ಕಾಳಸರ್ಪದ ಫೂತ್ಕಾರ ಎಷ್ಟೊಂದು ಸಮೀಪ! ಇದು ನಂದನ ಎಂದು ಹೆಜ್ಜೆ ಇಟ್ಟಾಗ ಮಗ್ಗುಲಲ್ಲೆ ಕಾಣಿಸುತ್ತಿತ್ತು ನರಕ....

ಕೃಷ್ಣಪ್ಪನವರು ಎದ್ದರು.

"ನಾನು, ಮೂರು–ನಾಲ್ಕು ಘಂಟೆ ಹೊತ್ತಿಗೆ ಬರ್ಲೆ ಸುನಂದಾ?" ಎಂದು ಕೇಳಿದರು.

ಆಗ ರಾಧಮ್ಮ ತೋರಿದ ದುಗುಡವೊ! ನೋಡುತ್ತಿದ್ದವನನ್ನು ಮೂಕನಾಗಿ ಮಾಡಲು ಅದೊಂದೇ ಸಾಕು.

"ಇನ್ನು ಮೂರು–ನಾಲ್ಕು ದಿವಸ ಸುನಂದಾ ಎಲ್ಲಿಗೂ ಬರೋದಿಲ್ಲ!"

"ಹಾಗಲ್ಲ, ತಾಯಿ. ನಾಳೆ ಬೆಳಗ್ಗೆ ಅವನನ್ನು ನೋಡ್ಬೇಕೂಂತ ಗೊತ್ಮಾಡಿ ದೇವೆ. ಅದಕ್ಕೆ ರಾಮಕೃಷ್ಣಯ್ಯನ ಮನೇಲಿದ್ದು ಹೊರಡೋದೇ ಅನುಕೂಲ."

ತಂದೆಯ ವಿವರಣೆಯನ್ನು ಸುನಂದಾ ಪುಷ್ಟೀಕರಿಸಿದಳು.

"ಹೌದು ರಾಧಮ್ನೋರೆ..."

...ರಾಧಮ್ಮ ಹೆಚ್ಚು ಒತ್ತಾಯಿಸಲಾರದೆ ಕೃಷ್ಣಪ್ಪನವರಿಗೆ ಅಂದಳು:

"ಮಧ್ಯಾಹ್ನದ ಊಟಕ್ಕಾದರೂ ನೀವೂನೂ ಇಲ್ಲಿಗೇ ಬನ್ನಿ."

ಮಗಳ ಆ ಸ್ನೇಹಲೋಕ ಅಬಾಧಿತವಾಗಿಯೆ ಸಾಗಲೆಂದು ಬಯಸಿ ಕೃಷ್ಣಪ್ಪ ನೆಂದರು:

"ಕ್ಷಮಿಸಿ ತಾಯಿ. ಅಗತ್ಯವಾಗಿ ಮಾಡಬೇಕಾದ ಕೆಲಸ ಒಂದಿಷ್ಟು ಉಳಿದಿದೆ. ಈಗ ನಾನು ಹೋಗೇ ತೀರ್ಬೇಕು."

ತಮ್ಮ ಮಾತಿಗೆ ಪ್ರತ್ಯುತ್ತರ ಬರದೆ ಇದ್ದುದನ್ನು ಕಂಡು ಮಗಳ ಕಡೆಗೆ ತಿರುಗಿ ಅವರು ಕೇಳಿದರು.

"ಎಷ್ಟು ಹೊತ್ತಿಗೆ ಬರ್ಲಿ ಸುನಂದಾ?"

ದಿನವನ್ನೆಲ್ಲಾ ಇಲ್ಲಿಯೇ ಕಳೆಯಬಯಸಿದ ಸುನಂದಾ ಅಂದಳು:

"ಏಳೆಂಟು ಗಂಟೆ ಹೊತ್ತಿಗೆ ಬಾ, ಸಾಲ್ದೆ?"

"ಹೂಂ...."

....ಸರಸ್ವತಿ ಮನೆಯ ಉದ್ದಗಲಕ್ಕೂ ಓಡಾಡಿದಳು. ಐದು ನಿಮಿಷಗಳಲ್ಲೇ ಆತ್ಮೀಯನಾಗಿದ್ದ ಶ್ಯಾಮನ ಮೇಲೆ ಕುಳಿತು ಕುದುರೆ ಸವಾರಿ ಮಾಡಿದಳು.

ಸುನಂದೆಯ ದೃಷ್ಟಿ ಕಿಟಿಕಿಯನ್ನು ಹಾದು ತನ್ನ ಮನೆಯತ್ತ ಸರಿಯಿತು. ಆ ಮನೆ!....ಅದರಾಚೆಗಿನ ಬರಿಬಯಲಲ್ಲಿ ಈಗ ಹೊಸದಾಗಿ ಮನೆ ಕಟ್ಟಲು ಅಡಿಪಾಯ ಹಾಕಿದ್ದರು. ವಿಷಮ ದಾಂಪತ್ಯದ ಸಮಸ್ಯೆಯನ್ನು ಸುಲಭವಾಗಿ ಬಗೆಹರಿಸಿದ ತಮಿಳು ಕೂಲಿಗಳಿದ್ದುದು ಆ ಬಯಲಿನಲ್ಲೇ. ಆ ಬಳಿಕ ಶ್ಯಾಮ ಅದನ್ನು ಕ್ರಿಕೆಟ್ ಗ್ರೌಂಡಾಗಿ ಮಾರ್ಪಡಿಸಿದ್ದ.

ಶ್ಯಾಮನತ್ತ ನೋಡಿ ಸುನಂದಾ ಕೇಳಿದ್ದಳು:

"ಈಗ ಕ್ರಿಕೆಟ್ ಎಲ್ಲಾಡ್ತೀರಾ ಶ್ಯಾಮೂ?"

"ಈಗೆಲ್ಲಾ ಸ್ಕೂಲ್ನಲ್ಲೆ ಅತ್ತೆ," ಎಂದ ಶ್ಯಾಮ.

ರಾಮಯ್ಯನವರು ಆಫೀಸಿಗೂ ಹುಡುಗರು ಶಾಲೆಗೂ ಹೋದ ಬಳಿಕ ಮನ ದಣಿಯೆ ಮಾತನಾಡಲು ರಾಧಮ್ಮ ಮತ್ತು ಸುನಂದಾ ಇಬ್ಬರೇ ಉಳಿದರು. ಆವರೆ ಕುಸುಮಾ ತನ್ನ ಗಂಡನನ್ನು ಕಳುಹಿಸಿದ ಬಳಿಕ, ಸುನಂದೆಗೆ ಎರಡು ಸಾರೆ ಕರೆ ಬಂತು. ಮಗುವನ್ನೆತ್ತಿಕೊಂಡು ಸುನಂದಾ ಅವರ ಮನೆಗೆ ಹೋದಳು.

ಕುಸುಮಳ ಮುದ್ದುಮಗು...

"ಹೆಸರು ಏನಿಟ್ಟಿದೀರಾ?" ಎಂದಳು ಸುನಂದಾ.

"ಸೋಮನಾಥ—ಅಂತ."

"ಎಷ್ಟು ಪೌಂಡಿದೆ?"

ಹಾಗೆ ಪ್ರಶ್ನೆ ಕೇಳುತ್ತ ನಗೆ ಬಂತು ಸುನಂದೆಗೆ.

"ಹನ್ನೆರಡು. ಯಾಕೆ ನಗ್ತಿದೀರಾ?"

"ಹಿಂದೆ, ಸರಸ್ವತಿ ಎಷ್ಟು ಪೌಂಡೂಂತ ನೀವು ಕೇಳಿದ್ರಿ. ನಾನು ಪೆಚ್ಚಾಗಿದ್ದೆ."

"ಓ!" ಎಂದಳು ಕುಸುಮಾ ಅದರ ನೆನಪಾಗಿ...

...ಅಲ್ಲಿ ಊಟ. ಇಲ್ಲಿ ಕಾಫಿ ತಿಂಡಿ. ಎರಡೂ ಕಡೆ ಮಾತು. ಕೊನೆಯೇ ಇಲ್ಲವೇನೋ ಎನ್ನಿಸುವಷ್ಟು.

ಅವರು ಅತ್ಯಂತ ಕಡಮೆ ಮಾತನಾಡಿದ ಒಂದು ವಿಷಯವಿತ್ತು; ಅದು ಸುನಂದೆಯ ವೈವಾಹಿಕ ಜೀವನದಲ್ಲಿ ಉದ್ಭವಿಸಿದ್ದ ತೊಡಕು.

ಇಂತಹ ಸ್ನೇಹವಿರುವಷ್ಟು ಕಾಲ ತನ್ನ ವೈಯಕ್ತಿಕ ಸಂಕಟವೆಲ್ಲ ಹುಲ್ಲು ಕಡ್ಡಿಗೆ ಸರಿ–ಎಂದು ತೋರಿತು ಸುನಂದೆಗೆ.

ಆಕೆ ಒಮ್ಮೆಯೂ ಅಳಲಿಲ್ಲ.

## ೧೨

ಏಕಾಂಗಿಯಾಗಿ ಹೋಟೆಲಿನಲ್ಲಿ ಉಳಿದರೆ ಹುಡುಕಿಕೊಂಡು ಬರುವವರು ಬಹಳ ಮಂದಿ. ಒಳ್ಳೆಯ ಹೆಣ್ಣಿದೆ, ಬನ್ನಿ–ಎನ್ನುವ ತಲೆ ಹಿಡುಕರು; ರೂಪ ಗುಣ ಸಂಪನ್ನೆಯಾದ ಕನ್ಯೆ ಇದಾಳೆ–ಎನ್ನುವ ಮದುವೆ ದಳ್ಳಾಳಿಗಳು. ಮಗಳ ಕೈ ಹಿಡಿದು ಉದ್ಧರಿಸಿ–ಎಂದು ಪ್ರಾರ್ಥಿಸುವ ಕನ್ಯಾ ಪಿತೃಗಳು. ಹೀಗೆ.

ದೇಹಬಯಸಿದಾಗ ಬೆಲೆವೆಣ್ಣಿನ ಬಳಿಗೆ ಹೋಗುತ್ತಿದ್ದ ಪುಟ್ಟಣ್ಣ. ಆತ, ಕೈಗೆ ನಾಲ್ಕು ಕಾಸು ಕೊಡಲು ಸಿದ್ಧನಿದ್ದನೇ ಹೊರತು, ಕೊರಳಿಗೆ ತಾಳಿ ಕಟ್ಟುವುದಕ್ಕಲ್ಲ.

ಪುಟ್ಟಣ್ಣನ ದೃಷ್ಟಿಯಲ್ಲಿ ಆತನ ವಿವಾಹ ಪ್ರಕರಣವೊಂದು ದುರ್ಘಟನೆ. ಎಷ್ಟು ಬೇಗ ಎಷ್ಟು ಸುಲಭವಾಗಿ ಅದು ಮುಕ್ತಾಯವಾಗುವುದೋ ಅಷ್ಟು ಸಮಾಧಾನ ಅವನಿಗೆ. ಬಹುಮಟ್ಟಿಗೆ ಆತ ತನ್ನ ಸ್ವಾತಂತ್ರ್ಯವನ್ನು ಸಾಧಿಸಿದ್ದ. ಆದರೂ ಕೆಲ ಕ್ರಿಯೆಗಳು ಇನ್ನೂ ಉಳಿದಿದ್ದುವು. ತಾನಾಗಿ ಏನನ್ನೂ ಆ ದಿಕ್ಕಿನಲ್ಲಿ ಮಾಡಬೇಕಾದ್ದಿಲ್ಲವೆನ್ನುವುದು ಅವನ ಅಭಿಪ್ರಾಯವಾಗಿತ್ತು. ಮಾವನಾಗಲೀ, ಆ ದಿನ ಆತನ ಜತೆಯಲ್ಲಿ ಬಂದಿದ್ದ ರಾಮಕೃಷ್ಣಯ್ಯನಾಗಲೀ ತನ್ನ ಗೋಜಿಗೆ ಇನ್ನು ಬರಲಾರರೆಂದು ಪುಟ್ಟಣ್ಣ ನಂಬಿರಲಿಲ್ಲ. ಸುನಂದೆಯೂ ಬಂದು ತೊಂದರೆ ಕೊಡಬಹುದೆಂಬ ಭಯವೂ ಇತ್ತು. ಆದರೆ, ಪ್ರತಿದಿನವೂ ಆ ರೀತಿ ಭೀತಿಯ ವಾತಾವರಣವನ್ನು ಕಲ್ಪಿಸಿಕೊಂಡೇ ಬದುಕಲು ಆತ ಸಿದ್ಧನಿರಲಿಲ್ಲ.

... ಆ ದಿನ ಬೆಳಗ್ಗೆ ಎಚ್ಚರಗೊಂಡಿದ್ದ ಪುಟ್ಟಣ್ಣ ಏಳುವುದಕ್ಕೆ ಮುಂಚೆಯೇ ಬಾಗಿಲು ತಟ್ಟಿದ ಸದ್ದಾಯಿತು.

"ಯಾರದು?" ಎಂದ ಪುಟ್ಟಣ್ಣ ಮಲಗಿದಲ್ಲಿಂದಲೇ.

ಉತ್ತರವಿತ್ತುದು ಹೋಟೆಲಿನ ಹುಡುಗನ ಸ್ವರ.

"ನಿಮ್ಮನ್ನು ಹುಡುಕ್ಕೊಂಡು ಯಾರೋ ಬಂದಿದಾರೆ ಸಾರ್."

ಪುಟ್ಟಣ್ಣ ಎದ್ದನಾದರೂ ಚಿಲಕ ತೆಗೆಯಲಿಲ್ಲ. ಬಾಗಿಲಿಗೆ ಕಿವಿಗೊಟ್ಟು ಸದ್ದನ್ನು ಆಲಿಸಿದ. ಬಂದ ವ್ಯಕ್ತಿ ಯಾವ ಸಪ್ಪಳವನ್ನೂ ಮಾಡದೆ ನಿಂತ ಹಾಗಿತ್ತು. ಮತ್ತೆ

ಒಮ್ಮೆಲೆ ಒಳ್ಳೆಯ ಕಿಂಕಿಣಿ ನಾದ. 'ತಾತ' ಎಂದು ಕರೆದ ಮಗುವಿನ ಮೊದಲ ನುಡಿ. ಪುಟ್ಟಣ್ಣನ ಎದೆ ಧಸಕ್ಕೆಂದಿತು. ಮಗುವನ್ನೆತ್ತಿಕೊಂಡು ಸುನಂದೆಯೇ ಬಂದಿದ್ದ ಳೆಂಬುದರಲ್ಲಿ ಸಂದೇಹವಿರಲಿಲ್ಲ. [ತನ್ನ ಮಗುವೇ ಅಲ್ಲವೆ ತೊದಲು ಮಾತನಾಡು ತ್ತಿದ್ದುದು?] ಈಗೇನು ಮಾಡಬೇಕು ತಾನು? ಬಾಗಿಲನ್ನು ತೆರೆಯದೆಯೇ ನಿಂತಿರ ಬಹುದು. ಆದರೆ ಎಷ್ಟು ಹೊತ್ತು ಹೀಗೆ? ಇವರು ನೇರವಾಗಿ ಹೋಟೆಲಿಗೇ ಬರ ಬಹುದೆಂದು ಈತನೆಂದೂ ಭಾವಿಸಿರಲಿಲ್ಲ. [ಇದೆಲ್ಲ ಆ ರಾಮಕೃಷ್ಣಯ್ಯನ ಕುತಂತ್ರವೇ ಇರಬೇಕು. ಗುಳ್ಳೆ ನರಿಯ ಹಾಗಿದ್ದಾನೆ, ಖದೀಮ!] ಈಗ ತಪ್ಪಿಸಿಕೊಳ್ಳುವ ಬಗೆ?

ಅಂತೂ ಕೊನೆಯ ಅಧ್ಯಾಯವಾಗಿ ಇದು ಅನಿವಾರ್ಯವಾಗಿತ್ತೇನೋ. ಅದು ದಾಗಲಿ ಎದುರಿಸಿಯೇ ಬಿಡುವುದು—ಎಂದು ಪುಟ್ಟಣ್ಣ ತೀರ್ಮಾನಿಸಿದ.

ಹೊರಗಿದ್ದವರು ಅವಸರಪಡುತ್ತಿದ್ದಂತೆಯೇ ಕಾಣಲಿಲ್ಲ. ಮತ್ತೆ ಬಾಗಿಲು ತಟ್ಟಲಿಲ್ಲ ಅವರು. ಪುಟ್ಟಣ್ಣ ಶರಟು ತೊಟ್ಟುಕೊಂಡ. ಕೂಜೆಯಿಂದಿಷ್ಟು ನೀರು ತೆಗೆದು ಮುಖದ ಮೇಲೆ ಹನಿಸಿದ. ಕ್ರಾಪು ಬಾಚಿದ. ಕನ್ನಡಿಯಲ್ಲಿ ಪ್ರತಿಬಿಂಬಿತ ವಾಗಿದ್ದ ಮುಖದ ದೃಢಭಾವವನ್ನು ಕಂಡು ಸಮಾಧಾನ ಪಟ್ಟ.

ಇಷ್ಟಾದ ಮೇಲೆ ಪುಟ್ಟಣ್ಣ ಚಿಲಕ ತೆಗೆದ. ಆ ಸದ್ದಾಯಿತೆಂದು ಹೊರಗಿನಿಂದ ಯಾರೂ ತವಕಗೊಂಡು ಬಾಗಿಲನ್ನು ತಳ್ಳಲಿಲ್ಲ. ಒಂದು ಕ್ಷಣ ಹಾಗೆಯೆ ನಿಂತಿದ್ದು ಪುಟ್ಟಣ್ಣ ಬಾಗಿಲು ತೆರೆದ.

ಮನೆ ಬಾಗಿಲ ಬಳಿ ತನ್ನನ್ನು ಕರೆಯುತ್ತ ಮಗುವನ್ನೆತ್ತಿಕೊಂಡು ನಿಂತಿರುತ್ತಿದ್ದ ದೃಶ್ಯವೇ. ಹಸುಗೂಸಲ್ಲ-ಸ್ವಲ್ಪ ದೊಡ್ಡದಾಗಿದ್ದ ಮಗು. ಆ ಮುಖ....

ಗಂಡನನ್ನು ಕಂಡಳು ಸುನಂದಾ. ನಿಂತಲ್ಲಿಂದಲೆ ಬಾಗಿ ಆತನ ಪಾದ ಮುಟ್ಟಿ ದಳು. ಮಗುವನ್ನೂ ಪಾದಗಳ ಬಳಿ ಇಟ್ಟಳು.

ಹಾವು ಕಚ್ಚಿದವನಂತೆ ಪುಟ್ಟಣ್ಣ ಕಾಲುಗಳನ್ನು ಹಿಂದಕ್ಕೆಳೆದುಕೊಂಡ. ಸರಸ್ವತಿ ಗಾಬರಿಯಾಗಿ ಅತ್ತಳು–

ಸಂಸಾರ ನಾಟಕದ ಭೀಕರವಾದೊಂದು ಅಂಕ ಆರಂಭವಾಗಿತ್ತು. ಆ ಅಳು ಮೊದಲ ಆಲಾಪನೆ. ನಾಟಕದ ಪ್ರೇಕ್ಷಕರಾಗಿ ಅಲ್ಲೆ ಸ್ವಲ್ಪ ದೂರದಲ್ಲಿ ನಿಂತಿದ್ದರು, ಸುನಂದೆಯ ತಂದೆ ಮತ್ತು ರಾಮಕೃಷ್ಣಯ್ಯ. ಕಾತರ ತುಂಬಿದ ಮುಖಗಳು. ಅವ ರಿಬ್ಬರನ್ನೂ ಹಾಗೆಯೇ ನುಂಗಿ ಬಿಡುವೆನೆಂಬಂತೆ ಪುಟ್ಟಣ್ಣ ಕ್ರೂರವಾಗಿ ದಿಟ್ಟಿಸಿದ.

ಮೊದಲು ಮಾತನಾಡಿದ ಪಾತ್ರಧಾರಿ—ರಾಮಕೃಷ್ಣಯ್ಯ.

"ನಮಸ್ಕಾರ ಪುಟ್ಟಣ್ಣನವರೆ."

ಉತ್ತರ ರೂಪವಾಗಿ ದೊರೆತುದು ಬಿರುಗಣ್ಣಿನ ನೋಟ.

ಮೊದಲೇ ಗೊತ್ತು ಮಾಡಿದ್ದ ಮಾತನ್ನು ಪಾಠ ಒಪ್ಪಿಸುವವರಂತೆ ಕೃಷ್ಣಪ್ಪ ಹೇಳಿದರು:

"ನೀವು ಅಗ್ನಿ ಸಾಕ್ಷಿಯಾಗಿ ಕೈ ಹಿಡಿದ ಹೆಂಡತಿಯನ್ನೂ ನಿಮ್ಮಿಬ್ಬರ ಮಗುವನ್ನೂ

ನಿಮಗೆ ಒಪ್ಪಿಸಿದೀನಿ, ಪುಟ್ಟಣ್ಣ. ನನ್ನ ಕರ್ತವ್ಯ ನಾನು ಮಾಡಿದ ಹಾಗಾಯಿತು. ದೇವರು ನಿಮಗೆ ಒಳ್ಳೇದು ಮಾಡಲಿ."

ಅನಂತರ ರಾಮಕೃಷ್ಣಯ್ಯನ ಸ್ವರ:

"ನಾವಿನ್ನು ಬರ್ತೀವಿ, ಮಿ. ಪುಟ್ಟಣ್ಣ."

ಬಾಗಿಲಿಗೆ ಅಡ್ಡವಾಗಿ ನಿಂತಿದ್ದ ಪುಟ್ಟಣ್ಣ ನೋಡುತ್ತಲೇ ಇದ್ದ. ಪರಿಸ್ಥಿತಿ ಆ ರೂಪ ತಳೆಯುವುದೆಂದು ಆತ ಭಾವಿಸಿರಲಿಲ್ಲ. ಅವರಿಬ್ಬರೂ ನಿಜವಾಗಿಯೂ ಹೊರಟುದನ್ನು ಕಂಡು ಆತ ಗಾಬರಿಯಾದ, ಎದೆ ಡವಡವನೆ ಹೊಡೆದುಕೊಂಡು, ಮೆದುಳು ದಿಕ್ಕು ತೋಚದೆ ಧೀಂಗುಟ್ಟಿತು. ಆ ಗಂಡಸರಿಬ್ಬರು ತೋರುತ್ತಿದ್ದುದು ಪೊಳ್ಳು ಬೆದರಿಕೆ ಎನ್ನಲು ಆಧಾರವೆಲ್ಲಿತ್ತು? ಅವರಿಬ್ಬರು ಹೋಗಿಯೇ ಬಿಟ್ಟರೆ, ಗತಿ?

"ನಿಲ್ಲಿ! ನಿಲ್ಲಿ!" ಎನ್ನುತ್ತ ಪುಟ್ಟಣ್ಣ ಆ ಇಬ್ಬರ ಹಿಂದೆ ಧಾವಿಸಿದ.

ಇಳಿದು ಬೀದಿ ಸೇರುತ್ತಿದ್ದವರು ಹಿಂತಿರುಗಿಯೂ ನೋಡಲಿಲ್ಲ.

'ಘಾತವಾಯಿತು, ಬಾಗಿಲು ತೆರೆದಿಟ್ಟು ಬಂದು ಮೋಸಹೋದೆ'–ಎಂದು ಪುಟ್ಟಣ್ಣ ಪುನಃ ಕೊಠಡಿಯ ಕಡೆಗೆ ಓಡಿದ.

ಘಾತವಾಗಿತ್ತು! ಸುನಂದಾ ಒಳಹೊಕ್ಕು ಮಗುವಿನೊಡನೆ ಹಾಸಿಗೆಯ ಮೇಲೆ ಕುಳಿತಿದ್ದಳು.

"ಹೊರಡು, ಹೊರಡಿಲ್ಲಿಂದ!" ಎಂದು ಪುಟ್ಟಣ್ಣ ಕಿರಿಚಿದ.

ಆತನ ಮುಖ ಕೆಂಪಿಟ್ಟಿತು. ತುಟಿಗಳು ಅದುರಿದುವು. ಮೈ ಬೆವತಿತು.

ಆದರೆ ಆ ರೋಷಾವೇಶದ ಮುಂದೆ ಸುನಂದಾ ಬೆಚ್ಚಿಬೀಳಲಿಲ್ಲ. ಗಂಡನ ಮುಖವನ್ನೊಂದು ಕ್ಷಣ ವ್ಯಥೆ ತುಂಬಿದ ಕಣ್ಣುಗಳಿಂದ ದಿಟ್ಟಿಸಿ, ಬಳಿಕ ನೆಲ ನೋಡುತ್ತ ಕುಳಿತಳು.

ಪುಟ್ಟಣ್ಣನ ಅಂಗೈ ಮುಷ್ಟಿಯಾಯಿತು. ಸುನಂದೆಯ ಮೇಲೆ ಕೈ ಮಾಡಲು ಬಂದವನಂತೆ ಆತ ಹೆಜ್ಜೆ ಮುಂದಿರಿಸಿದ. ತಾನು ಹಿಂದೆಂದೋ ಮೂಸಿದ್ದ ಕೈಯಾಡಿ ಸಿದ್ದ ತಲೆ ಕೂದಲನ್ನ ಕೆಂಗಣ್ಣಿನಿಂದ ನೋಡುತ್ತ ಆತ ಕಿರಿಚಿದ:

"ಹೊರಡೂಂತಲ್ವೆ ಅಂದಿದ್ದು? ಪಿಶಾಚಿ!"

ಒಮ್ಮೆ ಅತ್ತು ಸುಮ್ಮನಾಗಿದ್ದಳು ಸರಸ್ವತಿ. ಆದರೆ ಅಮ್ಮನನ್ನು ಗದರಿಸುತ್ತಿದ್ದ ಕರ್ಕಶ ಧ್ವನಿ ಕೇಳಿ ಮತ್ತೊಮ್ಮೆ ಆಕೆ ಅಳತೊಡಗಿದಳು.

ಮಗುವನ್ನು ಎತ್ತಿ ಎದೆಗವಚಿಕೊಂಡಳು ಸುನಂದಾ. ಆದರೆ ಏಳಲಿಲ್ಲ.

ಅದು ಮಹಡಿಯಿದ್ದ ಕೋಮಲ ವಿಲಾಸ. ಪುಟ್ಟಣ್ಣನ ಕೊಠಡಿಯಿದ್ದುದು ಮೇಲುಗಡೆ–ಒಂದು ಸಾಲಿನ ಕೊನೆಯಲ್ಲಿ. ಹೀಗಾಗಿ, ಈ ಕೂಗಾಟ ಕೇಳಿ ಮೊದಲು ಎದ್ದು ಕಿವಿಗೊಟ್ಟುದು ಒಂದು ಮಗ್ಗುಲಿನವರು ಮಾತ್ರ. ಬಳಿಕ ಮೆಲ್ಲನೆ ಸ್ವರ ಸದ್ದು, ಇತರರ ಗಮನವನ್ನೂ ಸೆಳೆದುವು. ಹೋಟೆಲಿನ ಇಬ್ಬರು ಹುಡುಗರು ಎರಡು ಸಾರೆ ಅತ್ತಿತ್ತ ಹಾದು ಹೋದರು.

ಈತ ತನಗಿನ್ನು ಹೊಡೆಯಬಹುದು: ಹೇಗೂ ಸಿದ್ಧಳಾಗಿಯೇ ಬಂದಿದೀನಲ್ಲ— ಎಂದು ಯೋಚಿಸುತ್ತ ಸುನಂದಾ ತಡೆ ತಡೆದು ಉಸಿರುಬಿಟ್ಟಳು.

ಧಡಾರನೆ ಸದ್ದು ಕೇಳಿಸಿತು, ಕದ ಮುಚ್ಚಿದ ಸದ್ದು. ಸುನಂದೆಯ ಮೈ ಬಿಗಿಯಾಯಿತು. ಕಣ್ಣು ಮುಚ್ಚಿಕೊಂಡಳು ಆಕೆ.

ಪುಟ್ಟಣ್ಣ ಒಮ್ಮೆಲೆ ಬೆತ್ತದ ಕುರ್ಚಿಯ ಮೇಲೆ ಕುಸಿ ಕುಳಿತು, ಕಾಲಿನಿಂದ ಕರಿಮರದ ಕುರ್ಚಿಯನ್ನು ತಳ್ಳಿದ. ಅದು ಕಿರೋ ಎಂದು ಕಿರಿಚಿತು. ಬುಸುಗುಟ್ಟುತ್ತ ಪುಟ್ಟಣ್ಣ ನುಡಿದ:

"ನಿನಗೆ ಹೊಡೀತೀನಿ ಅಂತ ತಿಳಕೊಂಡೆಯೇನು? ಅಂಥಾ ಆಸೆ ಇಟ್ಕೋ ಬೇಡ. ಕೆಳಕ್ಕೆ ಹಾಕಿ ಒದೆಯೋಣಾಂತ ಮನಸ್ಸೇನೋ ಆಗುತ್ತೆ. ಆದರೆ ಹಾಗೆ ಮಾಡೋದಿಲ್ಲ. ಶನಿ! ಯಾಕ್ಬಂದೆ? ಹೇಳು!"

ಸುನಂದಾ ತಲೆಯೆತ್ತಿ, ಒಂದು ಕಾಲದಲ್ಲಿ ತನ್ನ ಪ್ರೀತಿಗೆ ಪಾತ್ರವಾಗಿದ್ದ ಆ ಜೀವವನ್ನು ಕನಿಕರದಿಂದ ನೋಡಿದಳು.

ಮತ್ತೆ ಗಂಡು ಸ್ವರ ಗರ್ಜಿಸಿತು:

"ಮಾತಾಡೇ ಮೂದೇವಿ!"

ಆ ಕ್ಷಣ ಅದೆಲ್ಲ ಸುನಂದೆಗೆ ಅಸಹ್ಯವೆನಿಸಿತು—ಆ ಕೊಠಡಿ, ಆ ಮನುಷ್ಯ, ಆ ಮಾತು, ಬದುಕು, ಎಲ್ಲವೂ. ಯಾಕಾದರೂ ಬಂದೆ ಇಲ್ಲಿಗೆ? ಯಾಕೆ ಬಂದೆ? ಎಂದು ಆಕೆಯ ಮನಸ್ಸು ಗೋಗರೆಯಿತು.

"ಹೀಗೆ ನಾಟಕ ಹೂಡೂಂತ ಯಾವ ಚಂಡಾಲ ಹೇಳ್ಕೊಟ್ಟೋನು? ಯಾಕೆ ಬಂದೆಯೇ ಇಲ್ಲಿಗೆ?"

ಸರಸ್ವತಿ ಅಳುತ್ತಲೇ ಇದ್ದಳು. ಬೆನ್ನು ತಟ್ಟುತ್ತ ಮಗುವನ್ನು ಸಂತೈಸಲು ಸುನಂದಾ ಯತ್ನಿಸಿದಳು.

ರಾತ್ರೆ ರಾಮಕೃಷ್ಣಯ್ಯನೂ ತಂದೆಯೂ ಕೇಳಿದ್ದರು: 'ಆತ ಗಲಾಟೆ ಮಾಡಿದರೆ ಏನ್ಮಾಡ್ತೀಯಾ?' ಎಂದು. 'ಅದೆಲ್ಲಾ ನನಗೆ ಬಿಟ್ಬಿಡಿ. ನಾನು ನೋಡ್ಕೋತೀನಿ' ಎಂದಿದ್ದಳು ಸುನಂದಾ. ಅದನ್ನೀಗ ಆಕೆಗೇ ಬಿಟ್ಟು ಅವರು ತೆರಳಿದ್ದರು. ಆತ ಗಲಾಟೆ ಮಾಡುತ್ತಿದ್ದ. ಹಾಗೆಯೇ ಸುಮ್ಮನಿರುವಂತಿರಲಿಲ್ಲ. ಏನನ್ನಾದರೂ ಆಕೆ ಹೇಳಬೇಕು. ಸರಿಯಾದುದೇ ಏನನ್ನಾದರೂ.

ಯೋಚಿಸುವುದಕ್ಕೆ ಮುಂಚೆಯೇ ಮಾತುಗಳನ್ನು ಆಕೆಯ ನಾಲಗೆ ಹೊರಗೆಡವಿತು.

"ಮನೆಗೆ ಬಂದ ಹೆಂಡತಿಗೂ ಮಗೂಗೂ ಇಂಥಾದೇನಾ ನೀವು ಕೊಡೋ ಸ್ವಾಗತ?"

"ಮುಚ್ಚು ಬಾಯಿ! ಯಾರ ಹೆಂಡತಿ? ಯಾರ ಮಗು? ಯಾರು ನಿನಗೆ ಬಾ ಅಂದೋರು?"

ಎಡಗೈಯಲ್ಲಿ ಮಗುವನ್ನೆತ್ತಿಕೊಂಡು, ಬಲಗೈಯಿಂದ ಮಾಂಗಲ್ಯಸೂತ್ರವನ್ನು ಮುಟ್ಟಿ ತೋರಿಸುತ್ತಾ ಸುನಂದಾ ಕೇಳಿದಳು:

"ಇದು ನೆನಪಿದೆಯಾ?"

ಆ ನೆನಪು ಆತನಿಗೆ ನೀಡುತ್ತಿದ್ದುದೆಲ್ಲ ಈತಿ ಬಾಧೆಯ ನರಳಾಟ.

"ಸುನಂದಾ!"

"ಹ್ಹಾ! ಹೆಸರು ಮರೆತಿಲ್ಲ ನೀವು!"

"ಹೇಳಬೇಕಾದ್ದನ್ನೆಲ್ಲ ನಿನ್ನ ತಂದೆಗೆ ಆ ದಿವಸವೆ ಹೇಳಿದೀನಿ. ಪುನಃ ನೀವೆಲ್ಲ ಯಾಕ್ಬಂದಿದೀರಾ?"

"ನೀವು ಹೇಳಿದಿರಿ. ಆದರೆ ನಾನು ಹೇಳೋದು ಬೇಡ್ವೆ?"

"ಅಷ್ಟು ವರ್ಷ ಜತೇಲಿದ್ದಾಗ ಎಲ್ಲಾ ಹೇಳಿ ಮುಗಿಸಿದೀಯಾ ನೀನು. ಇನ್ನೂ ಏನು ಉಳಿದಿರೋದು?"

"ಯಾಕೆ ಹೀಗೆಲ್ಲ ಮಾತಾಡ್ತೀರಾ? ಏನಾಗಿದೆ ನಿಮಗೆ?"

"ನನಗೂ ನಿನಗೂ ಯಾವ ಸಂಬಂಧವೂ ಇಲ್ಲ—ತಿಳೀತೆ?"

"ಇದ್ದದ್ದೇನಾಯ್ತು?"

"ನಿಲ್ಸು ಮಾತು!"

ಅವರಿಬ್ಬರೂ ಮಾತನಾಡುತ್ತಿದ್ದರೆಂದು ಅಳು ನಿಲ್ಲಿಸಿ ಆ ಇಬ್ಬರ ಮುಖಗಳನ್ನೇ ಸರಸ್ವತಿ ನೋಡಿದಳು.

"ನೀವು ಕತ್ತು ಕುಯ್ದು ಹಾಕ್ತೀನಿ ಅಂದರೂ ಆಡೋ ಮಾತು ನಾನು ಆಡ್ಬೇಕು."

ಕುಳಿತಿದ್ದ ಕುರ್ಚಿಯ ಎರಡೂ ಕೈಗಳನ್ನು ಪುಟ್ಟಣ್ಣ ಹಿಡಿದು ಹಿಸುಕಿದ.

ಹೊರಗಿನಿಂದ ಹೋಟೆಲಿನ ಹುಡುಗನ ಸ್ವರ ಕೇಳಿಸಿತು:

"ಸಾರ್, ಕಾಫಿ ತರ್ಲಾ?"

"ಬೇಡ. ನಾನೇ ಕೆಳಗ್ಬರ್ತೀನಿ," ಎಂದ ಪುಟ್ಟಣ್ಣ.

ಸಾಮಾನ್ಯ ಗಿರಾಕಿಯಾಗಿದ್ದಿದ್ದರೆ ಹೋಟೆಲಿನ ಮ್ಯಾನೇಜರರಿಂದ 'ಬುಲಾವ್' ಬರುತ್ತಿತ್ತು. ಪುಟ್ಟಣ್ಣ ಆ ಜಾತಿಯವನಲ್ಲ. ಆದರೆ ಅಸಾಮಾನ್ಯ ಗಿರಾಕಿಯೂ ಅಲ್ಲ ಪುಟ್ಟಣ್ಣ. ಹೋಟೆಲಿನವರು ಕೇಳುವುದಕ್ಕೆ ಮುಂಚೆ ತಾನಾಗಿಯೇ ವಿವರಣೆ ಕೊಡುವುದು ಯೋಗ್ಯವಾಗಿತ್ತು. ಅಂತೂ ನಾಲ್ಕು ಜನರೆದುರು ನಗೆಗೀಡಾಗುವ ಪ್ರಮೇಯ, ಸಾರ್ವಜನಿಕ ಅಪಮಾನ. ಇಷ್ಟೂ ಆ ಸೊಕ್ಕಿದ ಹೆಣ್ಣಿನಿಂದಾಗಿ.

ಪುಟ್ಟಣ್ಣನಿಗೆ ಕಾಫಿ ಬೇಕಾಗಿರಲಿಲ್ಲ, ಆತನಿಗೆ ಬೇಕಿದ್ದುದು ಯೋಚಿಸಲು ಅವಕಾಶ. ಆ ಅವಕಾಶ ದೊರಕಿಸಿಕೊಳ್ಳಲೆಂದು ಆತ ಕೊಠಡಿಯಿಂದ ಹೊರಬಿದ್ದ. ಮುಖ ತೊಳೆಯುವ ಹಲ್ಲುಜ್ಜುವ ಯಾವ ಗೋಜಿಗೂ ಹೋಗದೆ, ಯಾರೂ ಇಲ್ಲದ ಮೂಲೆಯಲ್ಲಿ ಕುಳಿತು ಕಾಫಿ ಬಟ್ಟಲನ್ನು ಕೈಗೆತ್ತಿಕೊಂಡ.

ಅಲ್ಲಿಗೆ ಮ್ಯಾನೇಜರನ ಆಗಮನವಾಯಿತು. ಕಚ್ಚೆ ಪಂಚೆ, ಬಿಳಿ ಜುಬ್ಬ, ನೀಳ ವಾದ ತೆಳು ದೇಹ. ಮಾತಿಗೆ ಮುಂಚೆ ಮುಗುಳು ನಗು. ಆತ ಪುಟ್ಟಣ್ಣನೆದುರು ಕುಳಿತು ತನಗೂ ಕಾಫಿ ತರುವಂತೆ ಹುಡುಗನಿಗೆ ಹೇಳಿದ.

ಮ್ಯಾನೇಜರು ಗಿರಾಕಿಯ ಜತೆಯಲ್ಲಿ ಹಾಗೆ ಕುಳಿತುಕೊಳ್ಳುವುದು ಆತ್ಮೀಯತೆಯ ಚಿಹ್ನೆ. ಅದು ಗಿರಾಕಿಗೆ ಸಲ್ಲುವ ಗೌರವ.

ಆ ಮ್ಯಾನೇಜರು ವಿಷಯವೇನೆಂದು ಸೂಕ್ಷ್ಮವಾಗಿ ತಿಳಿದುಕೊಳ್ಳುವ ಸಾಮರ್ಥ್ಯವಿದ್ದ ಮನುಷ್ಯ. ಎಂದಿನಂತೆಯೆ ನಿರ್ವಿಕಾರವಾದ ಸಹಜಧ್ವನಿಯಲ್ಲೆ ಆತ ಕೇಳಿದ:

"ಮನೆಯವರು ಬಂದಿದಾರೇನು?"

"ಹೂಂ ಕಣ್ರೀ."

ಪುಟ್ಟಣ್ಣನ ಬೇಸರವೆಲ್ಲ ಆ ಉತ್ತರದಲ್ಲೆ ಅಡಕವಾಗಿತ್ತು.

"ಹೆಂಡತಿ ಮಗು ಬಂದರೂಂತ ಸಂತೋಷವಾಗೇ ಇಲ್ಲ ನೀವು!"

"ಸುಡುಗಾಡು ಸಂತೋಷ."

"ಸಮಾಧಾನವಾಗಿರಿ. ಇದೆಲ್ಲ ಏನು ಮಹಾ?"

"ಒಕ್ಕರಿಸ್ಕೊಂಡಿದೆ. ಹ್ಯಾಗೆ ಕಳಿಸ್ಬೇಕೋ ಗೊತ್ತಾಗ್ತಿಲ್ಲ."

"ಅಷ್ಟೇ ತಾನೆ? ನಿಧಾನವಾಗಿ ಪ್ರಯತ್ನಿಸಿ ನೋಡಿ. ನಮ್ಮ ಸಹಾಯ ಬೇಕೂಂತ ಅನಿಸಿದರೆ ಒಂದು ಮಾತು ಹೇಳಿ, ಅದೆಷ್ಟರ ಕೆಲಸ!"

"ಥ್ಯಾಂಕ್ಸ್," ಎಂದ ಪುಟ್ಟಣ್ಣ, ಉಳಿದಿದ್ದ ಕಾಫಿಯನ್ನು ಒಂದೇ ಗುಟುಕಿಗೆ ಕುಡಿದು.

"ನಮ್ಮ ಗಿರಾಕಿಗಳಿಗೆ–ಅದರಲ್ಲೂ ಸ್ನೇಹಿತರಿಗೆ–ಇಷ್ಟು ಭರವಸೇನೂ ಕೊಡದೇ ಇದ್ದರೆ, ನಾವಿದ್ದೂ ಏನು ಪ್ರಯೋಜನವಾದ ಹಾಗಾಯ್ತು?"

ಬೆಳಗ್ಗಿನ ಪ್ರಕರಣದಿಂದ ಈ ಹೋಟೆಲನ್ನು ತಾನು ಬಿಡಬೇಕಾಗಿ ಬರಬಹುದೆಂದು, ಸುನಂದೆಯಿಂದ ತಪ್ಪಿಸಿಕೊಳ್ಳಲು ಅದೊಂದೇ ಹಾದಿಯೆಂದು ಪುಟ್ಟಣ್ಣ ಭಾವಿಸಿದ್ದ. ಹಾಗೆ ಮಾಡುವುದೆಂದರೆ ಒಂದು ಹೆಜ್ಜೆ ಹಿಮ್ಮೆಟ್ಟಿದಂತೆ, ಅದರ ಅಗತ್ಯವಿಲ್ಲ ಎಂದು ಈಗ ಅನಿಸಿದಾಗ, ಆತನ ನೆಮ್ಮದಿ ಮರಳಿಬಂತು.

ಪುಟ್ಟಣ್ಣ ಸಾವಧಾನವಾಗಿ ಕೊಠಡಿಗೆ ಹಿಂತಿರುಗಿದ...

ಗಂಡ ಹೊರಹೋದಾಗಿನಿಂದಲೂ ಸುನಂದಾ ಕುಳಿತೇ ಇದ್ದಳು. ಆಕೆಯ ದೃಷ್ಟಿ ಅಲ್ಲಿದ್ದ ಒಂದು ಸಾಮಗ್ರಿಯಿಂದ ಇನ್ನೊಂದಕ್ಕೆ ಅಲೆಯಿತು. ಒಂದೆರಡು ತಾನು ತವರು ಮನೆಗೆ ಹೋದ ಬಳಿಕ ಹೊಸತಾಗಿ ಬಂದಂಥವು. ತಾನು ಬಿಟ್ಟು ಹೋಗಿದ್ದ ಸೀರೆಗಳು ಏನಾದುವೊ? ಅವು ಯಾವ ಸುರಸುಂದರಿಯ ಊಳಿಗದಾಕೆಗೆ ಉಡುಗೊರೆ ಯಾದುವೊ? ಮನೆಯ ಸಾಮಾನುಗಳ ಗತಿ ಏನಾಯಿತೊ? ಎಷ್ಟೊಂದು ಕೊಳಕಾಗಿದೆ ಈ ಕೊಠಡಿ!

—ಇದರ ಹೊರತಾಗಿ ತಾನು ಮುಂದೇನು ಮಾಡಬೇಕೆಂಬ ಯೋಚನೆ ಆಕೆಗೆ

ಹೊಳೆಯಲಿಲ್ಲ. ಗಂಡ ಪುನಃ ಬಂದು ಏನು ಮಾಡಬಹುದೆಂಬುದನ್ನು ಊಹಿಸುವ ಗೊಡವೆಗೂ ಆಕೆ ಹೋಗಲಿಲ್ಲ.

... ಹಿಂತಿರುಗಿದ ಪುಟ್ಟಣ್ಣ ಅಲ್ಲಿ ಇನ್ನೊಂದು ಜೀವ ಇದೆ ಎನ್ನುವುದೇ ತಿಳಿಯದವನಂತೆ ವರ್ತಿಸಿದ.! ಟವೆಲು ಹೆಗಲನ್ನೇರಿತು; ಹಲ್ಲುಜ್ಜುವ ಬ್ರಶ್ಶು ಮತ್ತು ಸಾಬೂನಿನ ಪೆಟ್ಟಿಗೆ ಕೈ ಸೇರಿತು. ಪುಟ್ಟಣ್ಣ ಮತ್ತೆ ಹೊರ ಹೋದ. ಹತ್ತು ನಿಮಿಷಗಳಲ್ಲಿ ಹೋಟೆಲಿನ ಹುಡುಗನೊಬ್ಬ ಬಿಸಿನೀರಿನ ಲೋಟ ತಂದಿರಿಸಿದ. ಅಲ್ಲಿದ್ದ ಹೆಂಗಸನ್ನೂ ಮಗುವನ್ನೂ ಕುತೂಹಲದಿಂದ ಆ ಹುಡುಗ ನೋಡಿದನೇ ಹೊರತು ಏನನ್ನೂ ಮಾತನಾಡಲಿಲ್ಲ. ಬಳಿಕ ಬಂದ ಪುಟ್ಟಣ್ಣ ಮೇಜಿನ ಮೇಲಿದ್ದ ಕನ್ನಡಿಯ ಎದುರು ಕುಳಿತು ಮುಖಕ್ಷೌರ ಮಾಡಿಕೊಂಡ. ಮೂಲೆಯಲ್ಲಿ ಹಾಸಿಗೆಯ ಅಂಚಿನಲ್ಲಿ ಕುಳಿತಿದ್ದ ಸುನಂದೆಗೆ ಗಂಡನ ಮುಖದ ಒಂದು ಭಾಗ ಕಾಣುತ್ತಿತ್ತು. ಕನ್ನಡಿಯಲ್ಲಿ ಅಸ್ಪಷ್ಟವಾಗಿ ಆತನ ಮುಖದ ಪ್ರತಿಬಿಂಬ ಮೂಡಿತ್ತು.

ಒಮ್ಮಿಂದೊಮ್ಮೆಲೆ ಪುಟ್ಟಣ್ಣ ತಣ್ಣಗಾದ ಕಾರಣವೇನೋ ಸುನಂದೆಗೆ ತಿಳಿಯಲಿಲ್ಲ. ಹೊರಗೆ ನೋಡಲು ಆತ ಈಗ ಶಾಂತನಾಗಿಯೆ ತೋರುತ್ತಿದ್ದ. ಆದರೆ ಒಳಗೆ?....ಒಮ್ಮೆಲೆ, ಗಲ್ಲದೊಂದು ಬದಿಯನ್ನು ಆತ ಟವೆಲಿನಿಂದ ಒತ್ತಿಹಿಡಿಯುವುದು ಕಂಡಿತು. ಬ್ಲೇಡು ಗಾಯಗೊಳಿಸಿತ್ತು...ಸಣ್ಣ ಗಾಯ. [ಮದುವೆಯಾದ ಹೊಸತಿನಲ್ಲಿ ತನ್ನ ಅತ್ತೆ ನೋಡದೇ ಇದ್ದಾಗ ಒಂದೆರಡು ಸಾರೆ ಗಂಡ ಗಾಯಗೊಂಡುದನ್ನು ಸುನಂದಾ ಕಂಡಿದ್ದಳು. ಆಗ ಅದಕ್ಕೆ ಒದ್ದೆ ನೀರಿನ ಶೈತ್ಯೋಪಚಾರ ಮಾಡಿದ್ದಳು. ಆದರೆ ಅದು ಈಗಲ್ಲ, ಹಿಂದೆ, ಕಳೆದ ಜನ್ಮದಲ್ಲಿ.] ಈಗ ಆತನ ಮನಸಿನೊಳಗಿನ ದುಗುಡ ಆ ಅಜಾಗರೂಕತೆಗೆ ಕಾರಣವಾಯ್ತೇನೋ? ಆ ರೀತಿ ಗಾಯಗೊಂಡಾಗ ಹಿಂದೆಯೊಮ್ಮೆ ತನ್ನ ಹೆಂಡತಿ ಕಾತರ ವ್ಯಕ್ತಪಡಿಸಿದ್ದಳೆಂಬ ನೆನಪಾದರೂ ಆತನಿಗೆ ಇದೆಯೊ ಇಲ್ಲವೊ.

ಡರ್‍ರೆಂದು ಕುರ್ಚಿಯನ್ನು ಹಿಂದಕ್ಕೆ ಸರಿಸಿದ ಸದ್ದಾಯಿತು.

ಮತ್ತೆ ಸ್ನಾನ........ತಮ್ಮ ಮನೆಯ ಹಿಂಭಾಗದಲ್ಲಿದ್ದ ಪುಟ್ಟ ಅಚ್ಚುಕಟ್ಟಾದ ಬಚ್ಚಲು ಮನೆಯಲ್ಲಲ್ಲ. ಈಗಿನದು ಹೋಟೆಲಿನಲ್ಲಿ ಹಂಡೆಯೋ ಡಬ್ಬವೋ,—ಬಿಸಿಯೋ ತಣುವೋ.

ಬೆಳಗ್ಗೆ ಬೇಗನೆ ಎದ್ದು ತಾಯಿಯ ಸಾಹಸ ಕಾರ್ಯದಲ್ಲಿ ಭಾಗಿಯಾಗಿದ್ದ ಸರಸ್ವತಿಗೆ ನಿದ್ದೆ ಬಂದಿತ್ತು. ಮಗುವನ್ನು ಗಂಡನ ಹಾಸಿಗೆಯ ಮೇಲೆ ಸುನಂದಾ ಮಲಗಿಸಿದಳು.

ಪುಟ್ಟಣ್ಣ ಸ್ನಾನ ಮುಗಿಸಿ ಬಂದ. ಹಿಂದಿನದೇ ಮೈಕಟ್ಟು. ಮರದ ಕೊರಡನ್ನು ದಿಟ್ಟಿಸುವ ಹಾಗೆ ಸುನಂದಾ ಆತನನ್ನು ನೋಡಿದಳು. ಅಲ್ಲಿ ಈಗ ಆಕೆಗೆ ಆಕರ್ಷಣೆ ಇರಲಿಲ್ಲ—ಯಾವ ಆಕರ್ಷಣೆಯೂ ಇರಲಿಲ್ಲ.

ಉಡುಪು, ಕ್ರಾಪು, ಉಡುಪು—ಆ ಸೂಟು ಹೊಸದು. ತಾನು ಈಗ ಬೇರೆಯೇ ವ್ಯಕ್ತಿ ಎಂದು ತೋರಿಸುವುದಕ್ಕೋಸ್ಕರ ಅದನ್ನು ಆ ದಿನ ತೊಡುತ್ತಿದ್ದನೇನೋ. ಟೈ. ['ಹಿಂದೆ ನೀವು ಹೆಚ್ಚಾಗಿ ಟೈ ಉಪಯೋಗಿಸುತ್ತಿರ್ಲಿಲ್ಲ. ಸಂಬಳ ಹೆಚ್ಚು ಮಾಡಿದ್ದಾರೆಯೆ?']

ಗೋಡೆಯಲ್ಲಿದ್ದ ಕಪಾಟು ಖಾಲಿಯಾಯಿತು. ಹಾಗೆಯೇ ಸ್ಟ್ಯಾಂಡು, ಮೇಜು. ಹಾಸಿಗೆಯ ಮೇಲಿದ್ದ ಹೊದಿಕೆ ಕೂಡ. ಎಲ್ಲವನ್ನೂ ಅಲ್ಲಿದ್ದ ಎರಡು ಟ್ರಂಕುಗಳಲ್ಲಿ ಪುಟ್ಟಣ್ಣ ತುಂಬಿದ. ಎರಡು ಟ್ರಂಕುಗಳಿಗೂ ಭದ್ರವಾಗಿ ಬೀಗ ತಗಲಿಸಿದ. ಬಳಿಕ ಬೆತ್ತದ ಕುರ್ಚಿಯ ಮೇಲೆ ಕುಳಿತುಕೊಂಡು ಸುನಂದೆಯನ್ನು ದಿಟ್ಟಿಸಿದ.

ಮಂಕು ಕವಿದ ಹಾಗೆ ಆಗಿತ್ತು ಸುನಂದೆಗೆ. ಮೊದಮೊದಲು ಅಸ್ಪಷ್ಟವಾಗಿದ್ದ ಹೊಸ ಅಭಿಪ್ರಾಯದ ರೂಪುರೇಖೆಗಳು ಈಗ ಸ್ಪಷ್ಟವಾಗುತ್ತ ಬಂದುವು.

ತನ್ನನ್ನೆ ನೋಡುತಿದ್ದ ಗಂಡನಕಡೆಗೆ ತಿರುಗಿ ಕ್ಷೀಣಸ್ವರದಲ್ಲಿ ಆಕೆ ಕೇಳಿದಳು:

"ಆಫೀಸಿಗೆ ಹೊರಟಿರಾ?"

ಉತ್ತರಕ್ಕೆ ಪೀಠಿಕೆಯಾಗಿ ಬಂತು ದ್ವೇಷ ತಿರಸ್ಕಾರ ತುಂಬಿದ ಅಸಹ್ಯವಾದ ನಗೆ.

"ಹೊರಡಬಾರದೇನು? ದರ್ಶನವಾಗದೆ ಎಷ್ಟೋ ಕಾಲವಾಯ್ತು: ಚಕ್ಕಂದ ಆಡ್ತಾ ಕೂತಿದ್ರೆ ಸೊಗಸಾಗಿರುತ್ತೆ, ಅಲ್ಲ?"

ವ್ಯಂಗ್ಯೋಕ್ತಿಯನ್ನು ಗಮನಿಸದೆಯೇ ಸುನಂದಾ ಅಂದಳು:

"ಎಷ್ಟು ಹೊತ್ತಿಗೆ ಬರ್ತೀರಾ ಸಾಯಂಕಾಲ?"

"ನಾನು ಮೂಟೆ ಕಟ್ಟಿದ್ದನ್ನ ನೋಡಿದಿಯೊ ಇಲ್ವೊ?"

"ಅಯ್ಯೋ! ಯಾಕಾಡ್ತೀರಾ ಹೀಗೆ?"

"ನಿನ್ನ ಕೃಪೆಯಿಂದ ಇಷ್ಟು ಸುಖ! ಇನ್ನೇನ್ಮಾಡ್ಲಿ?"

ಸುನಂದಾ ಎದ್ದು, ಒಂದೇ ನೆಗೆತಕ್ಕೆ ಆತನೆಡೆಗೆ ಸರಿದು, ಆ ಕಾಲುಗಳನ್ನು ಬಿಗಿಯಾಗಿ ಹಿಡಿದುಕೊಂಡು, ಮುಖ ಮೇಲಕ್ಕೆತ್ತಿ ಗದ್ಗದ ಕಂಠದಿಂದ ನುಡಿದಳು:

"ನಾನು ಬರಬಾರದಾಗಿತ್ತಾ?"

ಪುಟ್ಟಣ್ಣ ಆಕೆಯ ಕೈಗಳನ್ನು ಬಲವಾಗಿ ಎಳೆದು ಬಿಡಿಸಿದ. ಕಡಿದ ಬಳ್ಳಿಯ ಹಾಗೆ ಸುನಂದಾ ನೆಲದ ಮೇಲೆ ಕುಸಿದು ಕುಳಿತಳು. ಪುಟ್ಟಣ್ಣ ನಿಧಾನವಾಗಿ ಶ್ರದ್ಧೆಯಿಂದ, ಸ್ವಲ್ಪ ಮುದುಡಿದ್ದ ಪ್ಯಾಂಟನ್ನು ಸರಿಪಡಿಸಿದ.

"ಸುನಂದಾ, ಒಂದು ಮಾತು ಕೇಳ್ತೀಯಾ?"

ಏನು ಕೇಳುವುದಕ್ಕೂ ಸಿದ್ಧ ಎನ್ನುವಂತೆ ದೈನ್ಯದಿಂದ ಆತನ ಕಡೆಗೇ ಆಕೆ ನೋಡಿದಳು.

"ಎದ್ದ ತಕ್ಷಣ ನಿನ್ನ ಮುಖ ನೋಡಿ ನನ್ನ ಮೈ ಉರಿದೋಯ್ತು. ಈಗ ಹಾಗಲ್ಲ. ನೋಡು ಎಷ್ಟು ತಣ್ಣಗಿದೀನಿ! ಈಗ ನಾವು ಹೇಳೋ ಮಾತೇ ಕೊನೇದು

ಅಂತ ನಂಬು."

"..........."

"ಹಿಂದೆ ನಮ್ಮಿಬ್ಬರ ಸಂಬಂಧ ಏನೇ ಇದ್ದರೂ ಅದೆಲ್ಲಾ ಯಾವತ್ತೋ ಮುಗಿದ್ಹೋಯ್ತು. ಈಗ ನನ್ನ ಹಾದಿ ನನಗೆ—ನಿನ್ನ ಹಾದಿ ನಿನಗೆ!"

"ಹಾಗೆ ಹೇಳ್ಬೇಡಿ, ದಮ್ಮಯ್ಯ. ನಾನು ಎಷ್ಟೋ ಸಲ ನಿಮಗೆ ಎದುರಾಡಿ ತಪ್ಮಾಡಿದೀನಿ ಕ್ಷಮಿಸಿ."

"ಇಲ್ಲ, ಇಲ್ಲ. ತಪ್ಪಾಗಿರೋದು ಒಂದೇ. ಮದುವೆ ಮಾಡ್ಕೊಂಡ ತಪ್ಪು. ಅದು ಇನ್ನಾದರೂ ಪರಿಹಾರವಾಗ್ಲೀಂತ ನಿರ್ಧಾರ ಮಾಡಿದೀನಿ. ಹೇಳು...ಗಲಾಟೆ ಯಾತಕ್ಕೆ? ನಿನಗೇನಾದರೂ ಹಣ ಬೇಕಾ?"

ಬಾಗಿದ್ದ ಸುನಂದೆಯ ದೇಹ ಮೆಲ್ಲನೆ ನಿಡಿದುಕೊಂಡಿತು. ನೆಲದ ಮೇಲೆಯೆ ಆಕೆ ನೇರವಾಗಿ ಕುಳಿತಳು. ಅಪಹಾಸ್ಯದ ಮುಗುಳು ನಗು ಆಕೆಯ ತುಟಿಗಳ ಮೇಲೆ ಸುಳಿಯಿತು.

"ಎಷ್ಟು ಕೊಡ್ತೀರಾ?"

ಆಕೆಯಲ್ಲಾದ ಬದಲಾವಣೆಯನ್ನು ಗುರುತಿಸದಷ್ಟು ಮೂರ್ಖನಾಗಿರಲಿಲ್ಲ ಪುಟ್ಟಣ್ಣ. ಆತನ ಸ್ವರವೂ ಏರಿತು. ಕುಳಿತಲ್ಲಿಂದ ಎದ್ದು ಹೇಳಿದ:

"ನನಗ್ಗೊತ್ತಿಲ್ವೆ? ನೀನು ಸ್ವಾಭಿಮಾನಿಯಾದ ಸ್ತ್ರೀರತ್ನ. ಅಂಗೈ ಒಡ್ಡಿ ಯಾಕೆ ಹಣ ಕೇಳೀಯೆ?"

ಮಂಚದ ಮೇಲೆ ಮೊಣಕೈ ಊರಿ ಸುನಂದೆಯೂ ಎದ್ದು, ಗೋಡೆಗೆ ಆಧರಿಸಿ ನಿಂತಳು.

"ನೀವು ಏನು ಮಾತಾಡ್ತಿದೀರಿ ಅನ್ನೋದರ ಅರ್ಥವಾದರೂ ಆಗಿದೆಯಾ ನಿಮಗೆ?"

"ಬೆಳಗ್ಗಿನ ಹೊತ್ತು. ಅಮಲೇರಿಲ್ಲ. ಯಾರಾದರೂ ಹೇಳಿಕೊಟ್ಟು ಮಾತನಾಡಿಸ್ತಿದಾರೆಯೇ ಅಂದರೆ ಇರೋದು ನಾನೊಬ್ನೇ. ಹೀಗಿದ್ದೂ ನಾನು ಆಡೋ ಮಾತಿನ ಅರ್ಥ ನನಗಾಗಿಲ್ಲ ಅಂತೀಯಾ?"

ಸುನಂದೆಯ ಮೈ ಬೆಚ್ಚಗಾಯಿತು. ಒಳಗಿನ ಸಂಕಟವನ್ನು ಹತ್ತಿಕ್ಕಲಾರದೆ ಆಕೆ ಏದುಸಿರು ಬಿಟ್ಟಳು. ಪ್ರಯಾಸಪಟ್ಟು ರೂಪುಗೊಳ್ಳುತ್ತಿದ್ದ ಕಂಬನಿಯನ್ನು ಸುಲಭವಾಗಿ ತಡೆಹಿಡಿದಳು. ಹಲ್ಲುಗಳು ಕೆಳತುಟಿಯನ್ನು ಕಚ್ಚಿ ಬಿಗಿದುವು. ಒಡೆದ ಧ್ವನಿಯಲ್ಲಿ ಆಕೆ ಎಂದಳು:

"ಹೀಗೆ ನೀವು ಹಟತೊಡೋದೇ ನಿಜವಾದರೆ ಮಗೂನ ಇಲ್ಲಿ ಬಿಟ್ಟು ಬಾವಿಗೆ ಹಾರಿ ಸಾಯ್ತೀನಿ."

"ಮಗೂನ ಯಾಕ್ಬಿಡ್ತೀಯಾ? ಕರಕೊಂಡು ಹೋಗು."

"ಬಾವಿಗೆ ಹಾರ್ತೀನಿ ಅಂದೆ."

"ತಿಳೀತು. ನಿನ್ನೂರಿನ ಬಾವಿ ಮೇಲು.

"ಥೂ!" ಎಂದಳು ಸುನಂದಾ. ಒಣಗಿದ ಆ ಬಾಯಿಯಲ್ಲಿ ಉಗುಳಿರಲಿಲ್ಲ.

ಪುಟ್ಟಣ್ಣ ನಕ್ಕ.

"ಹಾಗೆ ಬಾ! ನಿನ್ನ ಹಳೇ ಹುರುಪೆಲ್ಲಾ ಎಲ್ಲಿಗ್ಹೋಯ್ತೂಂತ ಆಶ್ಚರ್ಯವಾಗಿತ್ತು."

"ನೀವು ಆಫೀಸಿಗೆ ಇವತ್ತು ಹೋಗಕೂಡದು! ನನ್ನ ಅಪ್ಪನನ್ನು ಕರಕೊಂಡ್ಬನ್ನಿ. ಇವತ್ತೇ ಎಲ್ಲಾ ಇತ್ಯರ್ಥವಾಗ್ಬೇಕು."

"ಇತ್ಯರ್ಥ ಈ ಮೊದಲೇ ಆಗಿದೆ! ಅದಕ್ಕೆ ಅಪೀಲಿಲ್ಲ!"

ಪುಟ್ಟಣ್ಣ ಠೀವಿಯಿಂದ ಬಾಗಿಲು ದಾಟಿದ. ಸುನಂದಾ ಆತನನ್ನು ತಡೆಯ ಬಯಸಿದಳು. ಆದರೆ ಆಕೆಯ ಬಲ ತೋಳು ನಿರ್ಜೀವವಾಗಿದ್ದಂತೆ ಜೋತಾಡುತ್ತಲಿತ್ತು.

ಹೊರಹೋದ ಪುಟ್ಟಣ್ಣ ತಿರುಗಿ ನಿಂತು ನುಡಿದ:

"ಇನ್ನು ನೀನಿಲ್ಲಿಂದ ಗಾಡಿಬಿಡೋದು ಮೇಲು. ಇಲ್ದೇ ಹೋದ್ರೆ ಹೋಟೆಲ್ನೋರು ಹೊರಡಿಸ್ತಾರೆ, ಊರಿಗೆ ಹೋದ್ಮೇಲೆ ಇನ್ನೊಂದ್ಸಲ ಇಂಥ ಪ್ರವಾಸದ ಯೋಚ್ನೆ ಮಾಡ್ಬೇಡ! ನೆನಪಿರ್ಲಿ!"

ಅಷ್ಟು ಹೇಳಿ ಆತ ಹೊರಟೇ ಹೋದ. ಬೂಟಿನ ಟಕ್ ಟಕ್ ಸಪ್ಪಳ ಮಂದವಾಗಿ ಬಂದು ನಿಂತೇ ಹೋಯಿತು.

ಸುನಂದಾ ದಿಗ್ಮೂಢಳಾಗಿ ಕುರ್ಚಿಯಲ್ಲಿ ಧೊಪ್ಪನೆ ಕುಳಿತು ಅಂಗೈ ಮೇಲೆ ತಲೆ ಇರಿಸಿದಳು.

ಒಳಧ್ವನಿ ಬಲು ಕ್ಷೀಣವಾಗಿ ಉಲಿಯಿತು: 'ಇನ್ನೇನೂ ಇಲ್ಲ. ಇಲ್ಲಿಗೆಲ್ಲಾ ಮುಗಿದ ಹಾಗಾಯ್ತು.'

ತಲೆ ಸಿಡಿಯತೊಡಗಿತು. ಮೆದುಳು ಮೆಲ್ಲನೆ ಕೇಳಿತು: 'ಮುಂದೇನಾಗುತ್ತೆ? ಏನಾಗುತ್ತೆ ಮುಂದೆ?'

ಸಂಕಟದಿಂದ ಚೇತರಿಸಿಕೊಳ್ಳಲಾಗದೆ ಸುನಂದಾ ಹಾಗೆಯೇ ಎಷ್ಟೋ ಹೊತ್ತು ಕುಳಿತಳು.

ಹೋಟೆಲಿನ ಹುಡುಗ, ತೆರೆದಿದ್ದ ಬಾಗಿಲಿನೆದುರು ನಿಂತ:

"ನಿಮಗೆ ಕಾಫಿ ಏನಾದರೂ ಬೇಕೆ, ಕೇಳು ಅಂತ ಮ್ಯಾನೇಜರಂದ್ರು."

ಬೇಡವೆಂದು ತಲೆಯಲ್ಲಾಡಿಸಿದಳು ಸುನಂದಾ.

ಅರ್ಧ ಗಂಟೆ ತಡೆದು ಆತ ಮತ್ತೊಮ್ಮೆ ಬಂದ.

"ಮಗೂಗೆ ಏನಾದರೂ ಬೇಕೆ, ಕೇಳು, ಅಂದ್ರು."

ಮಗು ನಿದ್ದೆ ಹೋಗಿತ್ತು. ಎಚ್ಚರವಾದೊಡನೆ ಅಳುವುದು ಖಂಡಿತ. ಮುದುರಿ ಹೋಗಿದ್ದ ಒಂದು ರೂಪಾಯಿಯ ನೋಟೊಂದು ಸುನಂದೆಯ ಸೊಂಟದಲ್ಲಿತ್ತು.

ಅದನ್ನು ಹೊರತೆಗೆದು ಆಕೆ ಹುಡುಗನಿಗೆ ಕೊಟ್ಟಳು.

"ಇದು ಯಾಕಮ್ಮ?"

ಯಾಕೆ ಎಂದು ಹೇಳಿಯೇ ಇರಲಿಲ್ಲ.

"ಒಂದು ನಾಲ್ಕಾಣೆ ಬಿಸ್ಕತ್ತು ತಂದ್ಕೊಡಪ್ಪಾ."

ಬಿಸ್ಕತ್ತು ಬಂತು. ಉಳಿದ ಹಣವನ್ನು ಬಿಡಿ ಬಿಡಿ ಚಿಲ್ಲರೆಯಾಗಿಯೇ ತಂದಿದ್ದ ಹುಡುಗ, ಅಮ್ಮನವರ ಕೈಯಿಂದ ಒಂದಾಣೆ ಸಂಪಾದಿಸಿದ.

ಸುನಂದಾ ಎದ್ದು ಬಾಗಿಲ ಬಳಿಗೆ ಬಂದಳು. ನಡುಹಗಲಿನ ಬೆಳಕು, ಆಕೆಯನ್ನು ಮುಸುಕಿದ್ದ ಮೌಢ್ಯದ ತೆರೆಯನ್ನು ಹರಿಯಿತು. ಆಕೆ ಇದ್ದುದು ಅಪರಿಚಿತ ಜಾಗ. ಒಂಟಿಯಾಗಿಯೆ. ಅದು ಹೋಟೆಲು! ಕೆಳಗೆ ಮೋಟಾರು ರಸ್ತೆ–ಸಾವಿರ ಸಾವಿರ ಜನ. ಆದರೆ ಇಲ್ಲಿ ತಾನೊಬ್ಬಳೇ. ತನಗೆ ಏನೇ ಆದರೂ ಕೇಳುವರಿಲ್ಲ.

ಅವಸರವಾಗಿ ಸುನಂದಾ ಬಾಗಿಲು ಮುಚ್ಚಿ ಅಗಣಿ ಹಾಕಿದಳು.

ಮಗುವಿನ ಜತೆ ತಾನೂ ಮಲಗಿ ಬಿಡಬೇಕೆನ್ನಿಸಿತು. ಆದರೆ ಆ ಹಾಸಿಗೆಯ ಬಳಿಗೆ ಹೋಗಲು ಆಕೆಗೆ ಇಷ್ಟವಾಗಲಿಲ್ಲ. ಸರಸ್ವತಿಯ ತಲೆಗೂದಲನ್ನು ನೇವರಿಸಿ ಎರಡು ನಿಮಿಷ ನೇವರಿಸಿ ಹಾಗೆಯೆ ನಿಂತಳು. ಮತ್ತೆ ಕುರ್ಚಿ ಕರೆಯಿತು.

ಎದ್ದ ಸರಸ್ವತಿಗೆ ಬಿಸ್ಕತ್ತು ಆಹಾರವಾಯಿತು. ಮತ್ತೆ ಅಳು, ಬಿಸ್ಕತ್ತು, ನಿದ್ದೆ.

ಇನ್ನು ಬದುಕಿಗೆ ಯಾವ ಅರ್ಥವೂ ಉಳಿಯಲಿಲ್ಲವೆಂದು, ಪಸಿವು ನೀರಡಿಕೆಗಳ ಪರಿವೆಯೇ ಸುನಂದೆಗಿರಲಿಲ್ಲ.

ಮಧ್ಯಾಹ್ನ ಬಾಗಿಲು ಬಡೆದ ಸದ್ದು ಕೇಳಿ, ಸುನಂದಾ ಹೌಹಾರಿ ಬಿದ್ದು, ಗಟ್ಟಿಯಾದ ಸ್ವರದಲ್ಲಿ ಅಂದಳು:

"ಯಾರು?"

"ನಾನಮ್ಮ,"

ಹೋಟೆಲು ಹುಡುಗನ ಸ್ವರ.

"ಏನಪ್ಪಾ?"

"ಊಟ ಮಾಡ್ತೀರಾ ಕೇಳ್ಕೊಂಡ್ಬಾ ಅಂದ್ರು ಮ್ಯಾನೇಜರು."

"ಏನೂ ಬೇಡ."

ಸ್ವಲ್ಪ ಹೊತ್ತಿನಲ್ಲೆ ಕುಳಿತಲ್ಲೆ ಸುನಂದೆಗೆ ಜೊಂಪು ಹತ್ತಿತು. ಮತ್ತೆ ಆಕೆಯನ್ನು ಅತ್ತು ಎಬ್ಬಿಸಿದವಳು ಸರಸ್ವತಿ. ಆಕೆಗೆ ಇಸ್ಸಿ ಬಂದಿತ್ತು. ಅವಳ ಜತೆ ಸುನಂದೆಯೂ, ಹೊರಗೆ ಕೊಠಡಿಯ ಸಾಲಿನ ಕೊನೆಯಲ್ಲಿದ್ದ ಸ್ನಾನದ ಮನೆಗೆ ಹೋಗಿ ಬಂದಳು.

ಹುಡುಗ ರಾಯಸ ತಂದ:

"ಅಮ್ಮ, ಮ್ಯಾನೇಜರು ನಿಮ್ಮನ್ನ ಕರೀತಾರೆ."

"ಅವರ್ನೇ ಇಲ್ಲಿಗೆ ಬರಹೇಳಪ್ಪ."

ಬಂದವನು, ಆಕೆ ಕಲ್ಪಿಸಿದ್ದ ಬೊಜ್ಜು ದೇಹದ ಕೊಬ್ಬಿದ ಆಸಾಮಿಯಲ್ಲ. ಪಂಚೆ ಜುಬ್ಬಗಳ ತೆಳ್ಳಗಿನ ವ್ಯಕ್ತಿ. ಬಾಗಿಲಲ್ಲೆ ನಿಂತು ಆತ ಹೇಳಿದ:

"ಪುಟ್ಟಣ್ಣ ಅವರು ರೂಮು ಖಾಲಿ ಮಾಡಿದಾರೆ. ಸಾಮಾನು ನಮ್ಮ ವಶಕ್ಕೆ ಕೊಟ್ಟಿದಾರೆ. ಇನ್ನು ನೀವಿಲ್ಲಿ ಇರೋಕಾಗೋದಿಲ್ಲ. ಬೇಕಿದ್ದರೆ ನಿಮಗೆ ಬೇರೆ ರೂಮು ಕೊಡ್ತೀವಿ—ಬಾಡಿಗೆಗೆ."

ಅಷ್ಟು ಹೇಳಿ ಆತ ಆಕೆಯನ್ನೊಮ್ಮೆ ಆಮೂಲಾಗ್ರವಾಗಿ ನೋಡಿದ. ಸುನಂದಾ ಪ್ರತಿಭಟಿಸುವ ಧ್ವನಿಯಲ್ಲಿ ಅಂದಳು:

"ನೀವು ಸುಳ್ಳು ಹೇಳ್ತಿದೀರಾ!"

"ಸುಳ್ಳು ಯಾಕಮ್ಮ ಹೇಳ್ಲಿ? ನಿಮ್ಮಿಂದಾಗಿ ನಮಗೆ ಗಿರಾಕಿ ನಷ್ಟವಾಯಿತು. ಬೇಕಾದರೆ ಬೇರೆ ರೂಮು ಕೊಡ್ತೀನಿ. ಅಲ್ಲಿರಿ. ನನ್ನ ಆಕ್ಷೇಪವಿಲ್ಲ."

ವಿಚಾರ ಮಾಡಲು ಸುನಂದೆಯನ್ನು ಅಲ್ಲೆ ಬಿಟ್ಟು ಆತ ತೆರಳಿದ.

ಅಂತೂ ಕಷ್ಟಕ್ಕಿಟ್ಟುಕೊಂಡಿತ್ತು ಪರಿಸ್ಥಿತಿ. ತಂದೆಯಾದರೂ ಒಮ್ಮೆ ಈ ಕಡೆ ಬರಬಾರದಾಗಿತ್ತೆ...ಎಂದು ಸುನಂದಾ ಮನಸ್ಸಿನಲ್ಲೆ ಹಲುಬಿದಳು.

ಸಂಜೆಯಾಗುತ್ತಿದ್ದಂತೆ ಹೋಟೆಲಿನ ಬೇರೊಬ್ಬ ಆಳು ಬಂದ. ಎಳೆಯ ಹುಡುಗ ನಲ್ಲ. ಆತನ ಬಾಯಲ್ಲಿ ಬೀಡಿ ಉರಿಯುತ್ತಿತ್ತು.

"ಇನ್ನೂ ಅಮ್ಮಾವ್ರು ಹೋಗೇ ಇಲ್ವಾ?" ಎಂದು ಆತ ಕಿಟಿಕಿಯ ಎಡೆಯಿಂದ ನೋಡುತ್ತ ಕೇಳಿದ.

ಸುನಂದಾ ಉತ್ತರ ಕೊಡಲಿಲ್ಲ.

ಆತ ಮತ್ತೂ ಅಂದ:

"ಈ ಹೋಟ್ಲಲ್ಲೇ ಇರಿ ಬೇಕಾದ್ರೆ. ಒಂದ್ನಾಲ್ಕು ದಿವಸ ಇದ್ರೆ ಸಂಪಾದ್ನೆ ಚೆನ್ನಾಗಿ ಆಗ್ಬಹುದು!"

ಸುನಂದಾ ಎದ್ದು ಧಡಾರನೆ ಕಿಟಿಕಿ ಮುಚ್ಚಿದಳು. ಮೈ ಥರಥರನೆ ಕಂಪಿಸಿತು. ಹೊರಗಿದ್ದ ಮಾನವ ಮೃಗ ಖೋ ಖೋ ಎಂದು ನಗುತ್ತಿದ್ದ ಸದ್ದು ಕೇಳಿಸಿತು.

ತಾನು ಓಡಬೇಕು, ಓಡಿಹೋಗಬೇಕು...ಎನಿಸಿತು ಸುನಂದೆಗೆ. ದೂರ.... ಬಲು ದೂರ. ಈ ಸೆರೆಮನೆಯಿಂದ ಹೊರಗೆ. ಈ ಪಿಶಾಚಿಗಳ ನಡುವಿನಿಂದ ಮನುಷ್ಯ ರಿರುವ ಕಡೆಗೆ.

ಹಿಂದಿನ ದಿನ ರಾಧಮ್ಮ-ಕುಸುಮೆಯ ಸಾಮೀಪ್ಯದಲ್ಲಿ, ಮಮತೆಯ ತಂದೆಯ ಬಳಿಯಲ್ಲಿ, ರಾಮಕೃಷ್ಣಯ್ಯನವರ ಮನೆಯಲ್ಲಿ, ಎಷ್ಟೊಂದು ಆತ್ಮವಿಶ್ವಾಸದಿಂದಿದ್ದಳು ಸುನಂದಾ! ಈಗ, ಒಂದೇ ದಿನದೊಳಗೆ, ಈ ಪರಿಸ್ಥಿತಿ!

ಪುಟ್ಟ ಪಾದಗಳನ್ನಿಡುತ್ತ ಮೇಜಿನ ಬಳಿಗೆ ನಡೆದಿದ್ದ ಸರಸ್ವತಿಯನ್ನು ಸುನಂದಾ ಎತ್ತಿ ಎದೆಗವಚಿ ಬಿಗಿಯಾಗಿ ಹಿಡಿದುಕೊಂಡಳು. ಮಗು ತಾಯಿಯ ಮಾಂಗಲ್ಯ ಸೂತ್ರದೊಡನೆ ಆಟವಾಡಿತು.

ಸುನಂದಾ ಬಾಗಿಲು ತೆರೆದು ಹೊರಬಂದಳು. ಆ ಸಾಲಿನ ಕೊನೆಯಲ್ಲಿ ಮತ್ತೆ ಕಾಣಿಸಿದ ಆ ಗಂಡು ಮುಖ. ಒಂದೆರಡು ಕೊಠಡಿಗಳಿಂದ ಹೊರಗಿಣಿಕಿ ನೋಡಿದವರಿಬ್ಬರು. ದೂರದಲ್ಲಿ ಯಾರೊಡನೆಯೊ ಮಾತನಾಡುತ್ತಿದ್ದ ಮ್ಯಾನೇಜರು...

ಸುನಂದಾ ಮಗುವನ್ನೆತ್ತಿಕೊಂಡು, ಕೊಠಡಿಯತ್ತ ಹಿಂತಿರುಗಿ ನೋಡದೆ, ಒಮ್ಮೆಲೆ ಮುಂದೆ ನಡೆದಳು ಕೆಳಕ್ಕಿಳಿದಳು.

ಬೀದಿ ಸೇರಿದರೂ ಕಾಲುಗಳ ಕಂಪನ ನಿಲ್ಲಲಿಲ್ಲ. ತಾನಿನ್ನು ಶೇಷಾದ್ರಿಪುರ ಸೇರಬೇಕು. ಬಸ್ಸೆ? ಜಟಕವೆ? ಯಾರನ್ನು ನಂಬುವುದು ಸಾಧ್ಯ? ದುಡ್ಡೂ ಇಲ್ಲ ತನ್ನಲ್ಲಿ. ಚಿಲ್ಲರೆಯನ್ನೆಲ್ಲ ಮೇಜಿನ ಮೇಲೆಯೆ ಬಿಡಲಿಲ್ಲವೆ ತಾನು?

ಕೂದಲು ಕೆದರಿದ್ದ, ಭೀತಿ ಕಾತರಗಳಿಂದ ಮುಖ ವಿವರ್ಣವಾಗಿದ್ದ, ಆ ತಾಯಿ ಮಗುವನ್ನೆತ್ತಿಕೊಂಡು ವೇಗವಾಗಿ ನಡೆದಳು.

...ಮುಚ್ಚಂಜೆಯ ಹೊತ್ತು ತಮ್ಮ ಸ್ನೇಹಿತರ ಮನೆ ಸೇರಿದ ಸುನಂದೆಯನ್ನು ಕುರಿತು ಕೃಷ್ಣಪ್ಪನವರು ಹೇಳಿದರು:

"ಬಂದೆಯಾ ಮಗಳೆ? ಎಲ್ಲಾ ಮುಗಿಸ್ಕೊಂಡು ಬಂದಿಯಾ ಅಮ್ಮ?"

ಮಗುವನ್ನು ಕೆಳಕ್ಕಿರಿಸಿ, ಕುಳಿತಿದ್ದ ತಂದೆಯ ಮೊಣಕಾಲುಗಳಿಗೆ ಜೋತು ಬಿದ್ದು, ಸುನಂದಾ ಗಟ್ಟಿಯಾಗಿ ಅತ್ತಳು.

## ೧೩

ರಾಧಮ್ಮನ ಮನೆಯ ಚಾಪೆಯ ಮೇಲೆ ಆ ಮೂವರೂ ಕುಳಿತಿದ್ದರು. ಎದುರು ಬಾಗಿಲು ಮುಚ್ಚಿಕೊಂಡಿತ್ತು. ಆ ಒಂದು ಗಂಟೆಯೆಲ್ಲ ಮಾತನಾಡುತ್ತಿದ್ದವಳು ಸುನಂದಾ ಒಬ್ಬಳೇ.

ಆತ್ಮೀಯ ಗೆಳತಿ ವರದಿ ಕೊಟ್ಟುದು ತನಗಾದ ಅನುಭವವನ್ನು ಕುರಿತು ಭಾವೋದ್ವೇಗಕ್ಕೆ ಅವಕಾಶ ಕೊಡದೆಯೇ; ಹಿಂದಿನ ದಿನ ನಡೆದುದೆಲ್ಲವನ್ನೂ ಆಕೆ ಹೇಳಿದಳು. ಆದರೆ ರಾಧಮ್ಮ ಅದನ್ನೆಲ್ಲ ಕೇಳುತ್ತ ಅತ್ತರು. ಕುಸುಮಳ ಕಣ್ಣುಗಳೂ ಕೆಂಪಡರಿದುವು.

ಮುಕ್ತಾಯದ ವಾಕ್ಯವಾಗಿ ಸುನಂದಾ, ನಿಟ್ಟುಸಿರು ಬಿಟ್ಟು ಅಂದಳು:

"ಇಷ್ಟೆಲ್ಲಾ ಆಯ್ತು ನಿನ್ನೆ."

ಅನಂತರ ಅಲ್ಲಿ ನೆಲೆಸಿದ ಮೌನವನ್ನು ಆಗಾಗ್ಗೆ ಮುರಿಯುತ್ತಿದ್ದವಳು ಸರಸ್ವತಿಯೊಬ್ಬಳೇ. ಆಕೆ ಪಕ್ಕದ ಕೊಠಡಿಗೆ ಹೋದಳು ಸುತ್ತಿ ಇಟ್ಟಿದ್ದ ಹಾಸಿಗೆಯನ್ನು ಎಳೆದಳು. ಪೆಟ್ಟಿಗೆಗೆ ಬಡಿದಳು. ಆದರೂ ಯಾರ ಗಮನವನ್ನು ಸೆಳೆಯುವುದಕ್ಕೂ

ಸಮರ್ಥಳಾಗದೆ ಹೊರ ಬಂದು, ಅಮ್ಮನ ಸೆರಗಿನಿಂದ ಮುಖ ಮುಚ್ಚಿಕೊಂಡು, ಕದ್ದು ಕದ್ದು ನೋಡುತ್ತ ಕುಸುಮಳನ್ನು ಕಣ್ಣು ಮುಚ್ಚಾಲೆಯಾಟಕ್ಕೆ ಕರೆದಳು.

ಅಷ್ಟರಲ್ಲಿ ಶ್ಯಾಮು ಬಂದ.

"ಸ್ಕೂಲು ಆಯ್ತೇನೋ?" ಎಂದರು ರಾಧಮ್ಮ.

"ಮೇಷ್ಟ್ರಿಲ್ಲಾಂತ ರಜಾ ಕೊಟ್ರು."

ಸರಸ್ವತಿಯನ್ನು ಕಂಡು ಶ್ಯಾಮು ಮುಗುಳುನಕ್ಕ. ಉಳಿದವರ ಬಾಡಿದ ಮುಖಗಳನ್ನೂ ಗಮನಿಸಿದ.

ರಾಧಮ್ಮ ಒಳಹೋದರು. ಸರಸ್ವತಿಯನ್ನು ಎತ್ತಿಕೊಂಡು ತನ್ನ ಹಿಂದೆಯೆ ಬಂದ ಮಗನಿಗೆ ತಿಂಡಿ ಕೊಟ್ಟರು.

"ಆಟಕ್ಕೆ ಹೋಗ್ತೀಯೇನು ಇನ್ನು?" ಎಂದು ಕೇಳಿದರು.

"ಹೂಂ. ಯಾಕೆ ಹೇಳು?"

"ಮಗೂನ ಆಡಿಸ್ಕೊಂಡು ಬರ್ತೀಯೇನೋಂತ ಕೇಳ್ದೆ."

ಶ್ಯಾಮು ತನ್ನ ಆಟದ ಯೋಚನೆ ಬಿಟ್ಟು "ಹೂಂ" ಎಂದ. ಸ್ವಲ್ಪ ಹೊತ್ತಿನಲ್ಲಿ ಸರಸ್ವತಿಯನ್ನೆತ್ತಿಕೊಂಡು ಹೊರಟು ನಿಂತ ಶ್ಯಾಮನ ಕೈಗೆ, ರಾಧಮ್ಮ ಆರುಕಾಸು ಕೊಟ್ಟರು "ಪೆಪ್ಪರ್‌ಮಿಂಟು ತಗೋ," ಎಂದರು.

ಮತ್ತೆ ಚಾಪೆಯ ಮೇಲೆ ಮೂವರೂ ಕುಳಿತುದಾಯಿತು–

ಆಗ ಮಾತಿಗೆ ಮೊದಲು ಮಾಡಿದವಳು ಕುಸುಮಾ.

"ಈಗೇನ್ಮಾಡ್ತೀರಿ ಸುನಂದಕ್ಕ?"

ಹೆಚ್ಚಿನ ಒಲವನ್ನು ತೋರಿಸಲು ಸಹಾಯಕವಾಗಿತ್ತು 'ಅಕ್ಕ' ವಿಶೇಷಣ.

"ಏನ್ಮಾಡ್ಲಿ? ನನಗೇನೂ ತೋಚ್ತಾ ಇಲ್ಲ. ಊರಿಗೆ ಹೋಗ್ತೀನಿ. ಅಲ್ಲಿ ತಾಯಿ ತಂದೆಯರ ಇಳಿವಯಸ್ಸಿನಲ್ಲಿ ಅವರ ಜತೇಲಿದ್ದು ಸೇವೆ ಮಾಡ್ತೀನಿ."

ರಾಧಮ್ಮ ತಮ್ಮ ಮನಸ್ಸಿನಲ್ಲಿದ್ದುದನ್ನು ಹೇಳ ಹೊರಟರು.

"ನನಗೆ ಭಯವಾಗ್ತಿದೆಯಮ್ಮ ಯಾಕೋ. ಇನ್ನು ಆತ ಹಾದಿಗೆ ಬರೋದೇ ಇಲ್ಲ. ಅನ್ನಿಸುತ್ತೆ."

ಹಾಗೆ ಹೇಳಿ ತಕ್ಷಣವೆ ಮುಖ ತಿರುಗಿಸಿ ಗೊಣಗಿದರು:

"ಅನಿಷ್ಟ ಮಾತು. ಯಾಕಾದರೂ ಆಡ್ತೀನೋ ಹೀಗೆ."

ಎಲ್ಲಿಯೋ ದೂರದಿಂದ ಕೇಳಿಸಿದಂತೆ ಸುನಂದೆಯ ಸ್ವರಬಂತು.

"ನನಗೂ ಹಾಗೇ ಅನಿಸುತ್ತೆ ರಾಧಮ್ಮ. ಅವರ ಗುಣ ನನಗೆ ಚೆನ್ನಾಗಿ ಗೊತ್ತು. ಒಮ್ಮೆ ತೀರ್ಮಾನ ಮಾಡಿದ್ಮೇಲೆ ಅವರು ಮನಸ್ಸು ಬದಲಾಯಿಸೋದೇ ಇಲ್ಲ."

ಕುಸುಮಳ ಧ್ವನಿ ಸಿಡಿಯಿತು.

"ಎಂಥ ತೀರ್ಮಾನ? ಇದೇನು ತಮಾಷೆಯ ವಿಷಯವೆ? ಇವರಲ್ಲಿ ಹಠಮಾರಿತನ ಎಂಬರೇನು?"

ಸುನಂದಾ ಕುಸುಮಳನ್ನು ಮೌನವಾಗಿ ದಿಟ್ಟಿಸಿದಳೇ ಹೊರತು ಏನನ್ನೂ ಹೇಳಲಿಲ್ಲ.

ಕುಸುಮಾ ಬಹಿರಂಗವಾಗಿ ಅಷ್ಟನ್ನೆ ಹೇಳಿದ್ದಳು ನಿಜ. ಆದರೆ ಅಂತರಂಗದೊಳಗೆ ಪ್ರಶ್ನೆಗಳು ಘೋರರೂಪ ತಳೆದು ಕುಣಿಯುತ್ತಿದ್ದವು: ಸುನಂದೆಯ ಗತಿ ಏನು ಇನ್ನು? ಈ ವಿರಸಕ್ಕೆ ಮುಕ್ತಾಯ ಯಾವುದು? ತನ್ನ ಗೆಳತಿಯಾದ ಸುನಂದೆಯ ಬಾಳಿನಲ್ಲಿ ಹೀಗಾಗುವುದು ಅನಿವಾರ್ಯವೆ? ಎಷ್ಟೊಂದು ಹಿಂಸೆ!....

....ಆದರೆ, ಮನಸ್ಸಿನೊಳಗಿನ ಆ ವಿಚಾರಗಳನ್ನೆಲ್ಲ ಕುಸುಮಾ ಅದುಮಿ ಹಿಡಿದಳೇ ಹೊರತು ಹೊರದೂಡಲಿಲ್ಲ—

ರಾಧಮ್ಮನನ್ನು ಯೋಚನೆಗಳು ಕಾಡುತ್ತಿದ್ದುವು. ಅಶುಭವನ್ನು ನೆನೆದು ಆ ಹೃದಯ ಬಡಿದುಕೊಳ್ಳುತ್ತಿತ್ತು. ಆಕೆ ಅಂದರು:

"ಏನೇ ಆಗಲಿ, ದುಡುಕ್ಬೇಡಿ ಸುನಂದಾ."

ಸುನಂದೆಗೆ ನೆನಪಾಯಿತು, ಹಿಂದೆಯೊಮ್ಮೆ ಕೂಲಿ ಹೆಂಗಸನ್ನು ಕುರಿತು ರಾಧಮ್ಮ ಹೇಳಿದ್ದ ಮಾತು:

'ಯೋಚ್ನೆ ಮಾಡಿ ನೋಡು. ಒಮ್ಮೆ ಮುರಿದ್ಮೇಲೆ ಕೂಡ್ಸೋಕಾಗಲ್ಲ. ಕೂಡಿಸಿದರೂ ಅದು ಭದ್ರವಾಗಿರೋಲ್ಲ....ಒಟ್ನಲ್ಲಿ ದುಡುಕ್ಬೇಡ, ಅಷ್ಟೆ.'

ಸುನಂದೆಗೆ ನಗುಬಂತು. ವ್ಯಥೆಯ ಧ್ವನಿಯಿಂದ ರಾಧಮ್ಮ ಅಂದರು:

"ಯಾಕ್ನಗ್ತೀರಾ? ಆಡಬಾರದ್ದು ಏನಾದರೂ ನಾನಂದ್ನೆ?"

"ಇಲ್ಲ. ನನ್ನ ಅವಸ್ಥೆ ಯೋಚಿಸ್ಕೊಂಡು ನಗುಬಂತು. ನೀವು ಹೇಳಿದ್ದನ್ನ ಯಾವಾಗಲೂ ನೆನಪಿಟ್ಟಿರ್ತೀನಿ ರಾಧಮ್ನೋರೆ. ನೀವು ನನ್ನ ಹಿರಿಯಕ್ಕ ಅನ್ನೋದನ್ನ ಯಾವತ್ತೂ ಮರೆಯೋದಿಲ್ಲ."

"ಅದೇನು ಹೇಳೋಕ್ಕೆ ಬರುತ್ತೋ ನಂಗೆ!"

ಅರ್ಧ ತನ್ನಷ್ಟಕ್ಕೆ, ಅರ್ಧ ಉಳಿದವರನ್ನು ಉದ್ದೇಶಿಸಿ, ಕುಸುಮಾ ಅಂದಳು:

"ಮನುಷ್ಯನಲ್ಲ—ಮೃಗ, ಪಿಶಾಚಿ!"

ರಾಧಮ್ಮ ನಿಟ್ಟುಸಿರು ಬಿಟ್ಟರು. ಬಳಿಕ ಏಳುತ್ತ ಹೇಳಿದರು:

"ಕಾಫಿಗೆ ನೀರಿಟ್ಟು ಬರ್ತೀನಿ."

"ಬೇಡಿ ರಾಧಮ್ಮ, ಈಗ ಯಾಕೆ ಕಾಫಿ?"

ಕುಸುಮಾ ಏನೂ ಹೇಳಲಿಲ್ಲ. ಬೇರೆ ದಿನವಾಗಿದ್ದರೆ, 'ನಡೀರಿ, ಎಲ್ಲರೂ ನಮ್ಮನೆಗೇ ಹೋಗೋಣ' ಎನ್ನುತ್ತಿದ್ದಳು. ಈ ಹೊತ್ತು ಅಂತಹ ಶಿಷ್ಟಾಚಾರದ ಯಾವ ವಿವೇಚನೆಯೂ ಆಕೆಯಿಂದ ಸಾಧ್ಯವಿರಲಿಲ್ಲ.

ರಾಧಮ್ಮ ಅಡುಗೆ ಮನೆಗೆ ನಡೆದೊಡನೆ ಕುಸುಮಾ ಕೇಳಿದಳು:

"ಊರಿಗೆ ಇವತ್ತೇ ಹೊರಡ್ತೀರಾ?"

"ಹೂಂ. ರಾತ್ರೆಯ ರೈಲಿಗೆ ಹೋಗ್ತೋಣಾಂತ ನಮ್ಮ ತಂದೆ ಅಂದ್ರು. ತಪ್ಪಿದರೆ ಬೆಳಗ್ಗೆ ಹೋಗ್ತೀವಿ."

ರಾಧಮ್ಮನಿಗೆ ಇವರ ಮಾತು ಕೇಳಿಸುತಿತ್ತು. ಆಕೆ ಒಳಗಿನಿಂದಲೇ ಅಂದರು:

"ಇನ್ನು ಬರೋದು ಯಾವತ್ತೋ ಏನೋ. ಎರಡು ದಿವಸ ಇದ್ಬಿಟ್ಟು ಹೋಗಬಾರದೇ ಸುನಂದಾ?"

"ಇಲ್ರಿ. ನಾನು ಹೋಗ್ಬೇಕು. ವಿಜಯ ಗಂಡನ ಮನೆಗೆ ಹೋದ ದಿವಸ ದಿಂದ ನಮ್ಮಮ್ಮ ಒಂದು ಥರಾ ಇದಾಳೆ. ಒಂದು ದಿನವೂ ಆಕೆಯ ಆರೋಗ್ಯ ಸರಿಯಾಗಿರೋದಿಲ್ಲ."

ಸುನಂದೆಯೇನೋ ಆ ಕಾರಣವನ್ನು ಕೊಟ್ಟಳು. ಆದರೆ ಮರು ಕ್ಷಣದಲ್ಲೆ ಹೃದಯದೊಳಗಿನಿಂದ ಬೇರೊಂದು ಪ್ರಶ್ನೆ ರೂಪುಗೊಂಡು ಆಕೆಯನ್ನು ಕುಟುಕಿತು 'ಹುಚ್ಚಿ! ಅಳಿಯ ಕೈ ಬಿಟ್ಟಿರುವ ಮಗಳು ಮನೆಗೆ ಬರೋದರಿಂದ ಹೆತ್ತವಳ ಕಾಹಿಲೆ ವಾಸಿಯಾಗುತ್ತೇನು?'

ಊರಿಗೆ ಹೋದ ಮೇಲೆ ತಾಯಿಗೆ ಹೇಗೆ ಮುಖ ತೋರಿಸಬೇಕೆಂಬ ಭೀತಿ ಸುನಂದೆಯ ಹೃದಯವನ್ನು ದಹಿಸಿತು.

"ಏನಾದರೂ ಹೇಳ್ಬೇಕು ಅಂತ ಅನಿಸುತ್ತೆ ಸುನಂದಕ್ಕ, ಆದರೆ ಏನು ಅನ್ನೋದೇ ತೋಚೋದಿಲ್ಲ," ಎಂದಳು ಕುಸುಮಾ—

ಹೊರಬರುತ್ತ ರಾಧಮ್ಮನೆಂದರು:

"ನಿರಾಶೆಯಿಂದ ಮನುಷ್ಯ ಕಂಗಾಲಾಗ್ತಾನೆ. ನಾನು ಒಂದು ಹೇಳ್ತೀನಿ ಸುನಂದಾ. ಏನೇ ಆಗಲಿ, ನೀವು ನಿಮ್ಮ ಜೀವಕ್ಕೆ ಅಪಾಯ ತಂದ್ಕೋಕೂಡದು."

ಸುನಂದಾ ನಕ್ಕಳು.

"ಇಲ್ಲ ರಾಧಮ್ಮ. ನನಗೇನು ಹುಚ್ಚೆ?"

"ನಿಮಗೊಂದು ಮಗುವಿದೆ; ಅದರ ಭವಿಷ್ಯತ್ತಿಗೆಲ್ಲ ನೀವೇ ಜವಾಬ್ದಾರರು ಅನ್ನೋದನ್ನ ಮರೀಬಾರದು."

"ಆಗಲಿ."

"ನೀವೇನಾದರೂ ಮಾಡ್ಕೊಂಡು ಹೆತ್ತೋರಿಗೆ ಸಂಕಟ ಕೊಡಬಾರದು."

"ಇಷ್ಟರವರೆಗೆ ಅವರಿಗೆ ಕೊಟ್ಟಿರೋ ಸಂಕಟ ಸಾಲ್ದೆ?"

ಸುನಂದೆಯ ಭರವಸೆಯ ಮಾತುಗಳಿಂದ ರಾಧಮ್ಮನಿಗೆ ತುಸು ಸಮಾಧಾನ ವಾಯಿತು. ಆಕೆ ಕಾಫಿ ಸೋಸಲು ಒಳಹೋದರು.

ತನ್ನ ಗೆಳತಿಯ ಮುಂದಿದ್ದ ಸಮಸ್ಯೆಯನ್ನು ಕುರಿತು ಏನನ್ನು ಯೋಚಿಸುವು ದಕ್ಕೂ ಏನನ್ನು ಹೇಳುವುದಕ್ಕೂ ಕುಸುಮಾ ಧೈರ್ಯಪಡಲಿಲ್ಲ.

ಮುಖ ಬಾಡಿಸಿ ಕುಳಿತಿದ್ದ ಸ್ನೇಹಿತೆಯನ್ನು ನೋಡಿ ಸುನಂದಾ ಕೇಳಿದಳು:

"ನನ್ನ ಕತೆ ಕೇಳಿ ಬೇಜಾರಾಯ್ತೆ ಕುಸುಮಾ?"

"ಇಲ್ಲರೀ. ಹಾಗೆ ತಿಳ್ಕೋಬೇಡಿ. ನೀವು ವ್ಯಥೆ ಪಡೋದರಿಂದ ನನಗೂ ವ್ಯಥೆಯಾಗೋಲ್ವೆ?"

"ಗಂಡ ಹೆಂಡತಿ ಬೇರ್ಪಡೋ ತತ್ವದ ವಿಷಯ ಹಿಂದೆ ನಾವು ಎಷ್ಟೊಂದು ಮಾತನಾಡಿದ್ದೆವು—ನೆನಪೆ?"

"ಅದರ ಪ್ರಸ್ತಾಪ ಈಗ ಯಾತಕ್ಕೆ?"

"ಮಾತಿಗೆ ಹೇಳ್ದೆ..."

"ಏನೋ ಅಂದಿರ್ತೀನಿ. ಮನಸ್ಸಿಗೆ ಹಚ್ಕೋಬೇಡಿ."

"ಛೆ! ಛೆ! ನೀವು ಸರಿಯಾದ್ದನ್ನೇ ಅಂದಿದ್ದಿರಿ. ಅದರಲ್ಲಿ ಯಾವ ತಪ್ಪೂ ಇರ್ಲಿಲ್ಲ. ನನ್ನ ದುರವಸ್ಥೆ ನೋಡ್ತಾ ಅದನ್ನ ನೆನಸ್ಕೊಂಡೆ ಅಷ್ಟೆ."

ಕಾಫಿ ಬಂತು. ಮೂವರೂ ಕುಡಿಯುತ್ತಿದ್ದಂತೆಯೇ ಕುಸುಮಳ ಮನೆಯ 'ಜವಾನಿ' ಬಂದಳು.

"ರಾಯ್ರು ಬಂದವ್ರೆ."

ಬೇರೆ ದಿನವಾಗಿದ್ದರೆ ಹೊರಡಲು ಕುಸುಮಾ ಆತುರಪಡುತ್ತಿದ್ದಳು. ಈ ದಿನ ಹಾಗೆ ಓಡಲು ಮನಸ್ಸಿರಲಿಲ್ಲ.

"ಹೋಗು. ಏನೋ ಮಾತಾಡ್ತಿದಾರೆ, ಎರಡ್ನಿಮಿಷ ಬಿಟ್ಕೊಂಡು ಬರ್ತಾರೇಂತ ಹೇಳು," ಎಂದಳು.

"ಆತ ಆ ಹೋಟ್ಲು ಬಿಟ್ಬಿಟ್ಟಿರಬಹುದೂಂತೀರಾ?" ಎಂದು ರಾಧಮ್ಮ ಕೇಳಿದರು, ಕುಸುಮಳ ಮನೆಯ ಕೆಲಸದಾಕೆ ಹೊರಟುಹೋದೊಡನೆ.

"ಹಾಗೆ ಅನಿಸೋಲ್ಲ. ಅದೆಲ್ಲಾ ನನ್ನನ್ನು ಓಡಿಸೋದಕ್ಕೆ ನಾಟಕ."

ರಾಧಮ್ಮನ ಮನಸ್ಸಿನಲ್ಲಿದ್ದುದನ್ನು ಆ ಕ್ಷಣ ಊಹಿಸಿ ಸುನಂದಾ ಮುಂದುವರಿದಳು:

"ಯಾಕೆ ಕೇಳಿದಿರಿ ರಾಧಮ್ಮ? ಅಲ್ಲಿಗೆ ಹೋಗಿ ಅವರ ಜತೇಲಿ ಮಾತಾಡೋಣ ಅಂತ್ಲೆ?"

"ನಾನೂ ನಮ್ಮ ಯಜಮಾನರೂ ಹೋಗ್ತೀವಿ."

"ಬೇಡಿ ರಾಧಮ್ಮ. ಏನೂ ಪ್ರಯೋಜನವಾಗೋದಿಲ್ಲ. ಇಷ್ಟಿದ್ದೂ ನೋಡಲೇಬೇಕೂಂತಿದ್ರೆ ಆ ಹೋಟ್ಲಿಗೆ ಹೋಗ್ಬೇಡಿ. ಮಾನವಿರೋ ಹೆಂಗಸು ಗಂಡಸು ಆ ಜಾಗಕ್ಕೆ ಕಾಲಿಡಬಾರದು."

ರಾಧಮ್ಮ ಮಾತನಾಡಲಿಲ್ಲ. ಆಕೆ ಇನ್ನೂ ಆಸೆ ಕಟ್ಟಿಕೊಂಡಿದ್ದುದನ್ನು ಕಂಡು ಕುಸುಮಳಿಗೆ ಆಶ್ಚರ್ಯವೆನಿಸಿತು. ಆದರೂ ಅದನ್ನು ವ್ಯಕ್ತಪಡಿಸುವುದು ಅನುಚಿತವೆಂದು ಸುಮ್ಮನಿದ್ದು, ಆಕೆ ಎದ್ದಳು.

"ಮನೆಗಿಷ್ಟು ಹೋಗ್ಬಿಟ್ಟು ಬರ್ತೀನಿ ಸುನಂದಕ್ಕಾ. ನಿಮ್ಮ ತಂದೆಯವರು ಬರೋದು ಇನ್ನೂ ತಡವಾಗುತ್ತೆ ತಾನೆ?"

ಸುನಂದೆಯ ಪರವಾಗಿ ರಾಧಮ್ಮ ಉತ್ತರವಿತ್ತರು:

"ನೀವು ಹೋಗ್ಬನ್ನಿ ಕುಸುಮಾ. ಇನ್ನೂ ಒಂದೆರಡು ಘಂಟೆ ಇಲ್ಲೇ ಇರ್ತಾರೆ."

## ೧೪

ಮಗಳೊಡನೆಯೂ ಮೊಮ್ಮಗಳೊಡನೆಯೂ ಊರಿಗೆ ಮರಳಿದ ಕೃಷ್ಣಪ್ಪನವರು ಸಂತೋಷದ ಸುದ್ದಿಯನ್ನು ಹೊತ್ತು ತಂದಿರಲಿಲ್ಲ.

ಅವರು ಬರುವುದನ್ನೇ ಕಾಯುತಿದ್ದರೇನೋ ಎಂಬಂತೆ, ಸುನಂದೆಯ ತಾಯಿ ಹಾಸಿಗೆ ಹಿಡಿದರು.

ತಮ್ಮ ಮಗಳ ಬಾಳು ಹಾಳಾಯಿತೆಂದು ಉಂಟಾದ ನೋವನ್ನೆಲ್ಲ ನುಂಗಿ, ಆಕೆಯೆಂದರು:

"ನೀನು ಬಂದದ್ದು ಒಳ್ಳೇದಾಯ್ತು ಸುನಂದಾ. ಬರದೇ ಇದ್ದಿದ್ದರೆ ನನ್ನ ಗತಿ ಏನಾಗ್ತಿತ್ತು ಹೇಳು? ಯಾರು ನೋಡ್ಕ್ಯೋತಿದ್ದರು ನನ್ನ? ಕೊನೇ ಘಳಿಗೇಲಿ ಯಾರಿರ್ತಿದ್ದರು ನಮಗೆ?"

"ಹಾಗೆಲ್ಲಾ ಆಡಬಾರದಮ್ಮಾ" ಎಂದು ಸುನಂದಾ ಸಂತೈಸಲು ಯತ್ನಿಸಿದಳು.

"ಕೊನೇ ಘಳಿಗೆ ಅಲ್ದೆ ಇನ್ನೇನೆ? ಈ ಭೂಮಿಲಿ ಹುಟ್ಟಿದ್ದಕ್ಕೆ ಎಲ್ಲಾ ಸೌಭಾಗ್ಯವೂ ಆಯ್ತು. ಇನ್ನೇನು ಉಳಿದಿರೋದು?"

ಬಳಿಕ ನಿಟ್ಟುಸಿರು. ಸಮಾಧಾನದ್ದಲ್ಲ, ಸಂಕಟದ್ದು.

ಐವತ್ತನೆಯ ವಯಸ್ಸಿಗೆಲ್ಲ ಅಂತಹ ಮಾತನ್ನು ಯಾರೂ ಆಡಬೇಕಾದ್ದಿರಲಿಲ್ಲ. ಆದರೂ ಬದುಕಿನ ಬಾಣಲೆಯಲ್ಲಿ ಸಾಕಷ್ಟು ಹುರಿದಿತ್ತು ಆ ಜೀವ. ಸುನಂದಾ ಹುಟ್ಟಿದುದಕ್ಕೆ ಮುಂಚೆ ಮೂರು ಸಾರೆ ಆಕೆಗೆ ಗರ್ಭಸ್ರಾವವಾಗಿತ್ತು. ಬಳಲಿಕೆಗೆ ನಿರಾಸೆಗೆ ಎಡೆಕೊಟ್ಟಿತ್ತು ಆ ಪರಿಸ್ಥಿತಿ. ಅನಂತರ ದೊರೆತುದು ಹೆಣ್ಣುಮಗು. ಒಂದು, ಎರಡು. ಅಲ್ಲಿಗೆ ಸಂತಾನದ ಬಳ್ಳಿ ಕಡಿದಿತ್ತು. ಮೊದಲೇ ಗಂಡು ಹುಟ್ಟಿದ್ದರೆ ಸುನಂದೆಗೆ ಅಣ್ಣಂದಿರಿರುತ್ತಿದ್ದರು. ಅಥವಾ ಅಣ್ಣಂದಿರು–ಅಕ್ಕಂದಿರು......ಅದು ಸುನಂದೆಯ ಪಾಲಿನ ಕೊರತೆ. ಆದರೆ ಆಕೆಯ ತಾಯಿಯನ್ನು ಕೊರೆದುದು ಗಂಡು ಸಂತಾನ ಪ್ರಾಪ್ತಿಯಾಗಲಿಲ್ಲವೆಂಬ ದುಃಖ. ಕೃಷ್ಣಪ್ಪನವರಿಗೂ ಬೇಸರವಿರಲಿಲ್ಲವೆಂದಲ್ಲ. ಆದರೆ ಹೆಂಡತಿಯ ಕೊರಗು ಕಂಡು ತಮ್ಮದನ್ನು ಬೇಗನೆ ಅವರು ಮರೆತರು. ಇಬ್ಬರೂ ಕಾಹಿಲೆಯವರೇ ಆದರೆ ಔಷಧೋಪಚಾರ ನಡೆಸುವವರು ಯಾರು? ದೇವರು ಕೊಟ್ಟುದೇ ವರ ಪ್ರಸಾದವೆಂದು ನೆಮ್ಮದಿಯಿಂದಿರಬೇಕು–ಎಂದು ಹೆಂಡತಿಯನ್ನು ಸಂತೈಸಲು ಅವರು ಯತ್ನಿಸಿದರು.

ಇಷ್ಟು ವರ್ಷಗಳ ಕಾಲ ಸುಖದುಃಖಗಳಲ್ಲಿ ಪಾಲುಗಾರ್ತಿಯಾಗಿದ್ದ ಜೀವ ಬಡಕಲಾಗಿ ಹಾಸಿಗೆ ಹಿಡಿದುದನ್ನು ಕಂಡು ಕೃಷ್ಣಪ್ಪನವರು ಚಿಂತೆಗೊಳಗಾದರು. ಅಕೆಯನ್ನು ಬಾಧಿಸಿದುದು ಕೆಮ್ಮು, ಜ್ವರ. ಡಾಕ್ಟರ ಸುದ್ದಿಯನ್ನೂ ಎತ್ತುವಹಾಗಿರಲಿಲ್ಲ. "ಸಾಯೋ ಕಾಲಕ್ಕೆ ನೀವು ಔಷಧಿ ಕುಡಿಸ್ತೀರಾ?" ಎಂಬ ಆಕ್ಷೇಪ. ಕೃಷ್ಣಪ್ಪನವರು ತಮಗೆ ತಿಳಿದ ಗೃಹವೈದ್ಯವನ್ನೆಲ್ಲ ಮಾಡಿದರು. ಆಯುರ್ವೇದ ಪಂಡಿತರನ್ನು ಕರೆದು ತಂದು ಹೆಂಡತಿಯನ್ನು ತೋರಿಸಿದರು.

ಜ್ವರ ಇನ್ನೇನು ಇಳಿಮುಖವಾಗಬೇಕು ಎನ್ನುವಷ್ಟರಲ್ಲಿ ನಡುಬೆನ್ನಲ್ಲೊಂದು ಕುರವೆದ್ದಿತು. ಏನೋ ಸಣ್ಣ ವಿಷಯ ಎಂದು ಕೃಷ್ಣಪ್ಪನವರು, ಬೇಗನೆ ಹಣ್ಣಾಗಿ ಒಡೆಯಲೆಂದು, ಗಂಧವನ್ನು ತೇದು ಹಚ್ಚಿದರು.

ಆದರೆ ಅದು ಗುಣವಾಗಲಿಲ್ಲ. ವಿಪರೀತಕ್ಕಿಟ್ಟುಕೊಂಡಿತು. ಅಗಲವಾಗುತ್ತ ದೊಡ್ಡದಾಯಿತು. ತಡೆಯಲಾಗದ ಸಿಡಿತ—ನೋವು. ಮಗ್ಗುಲಲ್ಲೇ ಶಯನ. ಎದ್ದು ಕುಳ್ಳಿರಿಸಿದ ಬಳಿಕ, ಇನ್ನೊಂದು ಮಗ್ಗುಲಲ್ಲಿ.

ಅಕ್ಕಪಕ್ಕದ ಮನೆಗಳವರು ಬಂದು ರೋಗಿಯನ್ನು ಕಂಡು "ಅಯ್ಯೋ" ಎಂದರು. ತಂದೆ ಮತ್ತು ಮಗಳ ಬೆಂಗಳೂರು ಪ್ರವಾಸವನ್ನು ಕುರಿತು ಆಗಲೆ ಸಾಕಷ್ಟು ಊಹಾಪೋಹ ಮಾಡಿದ್ದ ಅವರೆಲ್ಲ, ಸದ್ಯಃ ಆ ವಿಚಾರವನ್ನು ಬದಿಗಿರಿಸಿ ಸಂಕಷ್ಟದಲ್ಲಿ ಸಿಲುಕಿದ್ದವರಿಗೆ ಸಹಾನುಭೂತಿ ತೋರಿದರು.

—"ಏನಾದರೂ ಬೇಕಾದರೆ ಹೇಳಿ ಕಳಿಸಮ್ಮ, ಸುನಂದಾ."

—"ಕಷ್ಟದ ಸಮಯದಲ್ಲಿ ನೆರೆಹೊರೆಯವರಲ್ಲದೆ ಬೇರೆ ಯಾರು ಆಗ್ತಾರೆ?"

—"ಸಂಕೋಚ ಪಟ್ಕೋಬೇಡಮ್ಮ. ಸುಶೀಲೇನ ಕಳಿಸ್ಲಾ? ಅಡುಗೆ ಕೆಲಸದಲ್ಲಾದರೂ ಸಹಾಯವಾಗ್ತಾಳೆ."

ಎಲ್ಲರಿಗೂ ಸುನಂದಾ, "ಏನೂ ಬೇಡೀಮ್ಮ. ಬೇಕಾದರೆ ಖಂಡಿತ ಕೇಳ್ತೀನಿ," ಎಂದಳು. ವಿಸ್ಮಯವನ್ನುಂಟುಮಾಡುವ ಹಾಗಿತ್ತು ಆಕೆಯ ದಿಟ್ಟತನ.

ಆದರೆ ಒಂದರ ಅಗತ್ಯ ಮಾತ್ರ ಆಕೆಗಿತ್ತು. ಅದು ಒಡಹುಟ್ಟಿದವಳ ಸಾಮಿಪ್ಯ. ಬೆಂಗಳೂರಿಂದ ಬಂದ ಮೇಲೆ ತಂಗಿಗೆ ದೀರ್ಘವಾಗಿ ಬರೆಯಬೇಕೆಂದುಕೊಂಡಿದ್ದಳು ಸುನಂದಾ. ಆದರೆ ಬರೆಯಲು ಹೊರಟಾಗ ಬೇಸರ ಬರುತ್ತಿತ್ತು. ಸುಖಿಯಾಗಿದ್ದ ತಂಗಿಗೆ ತನ್ನ ದುಃಖದ ವಿಷಯ ತಿಳಿಸುವುದಾದರೂ ಯಾಕೆ? ಆಕೆಗೂ ಬೇಸರ ಉಂಟು ಮಾಡುವುದರಿಂದ ಏನು ಪ್ರಯೋಜನ? ಇನ್ನೂ ಸ್ವಲ್ಪದಿನ ಬಿಟ್ಟು ಬರೆದರಾಯ್ತು; ಈಗಲೇ ಏನು ಅವಸರ?....

ಅಕ್ಕನ ಮೌನ ವಿಜಯಾಗೆ ಅರ್ಥವಾಗಿರಲಿಲ್ಲ. ಆಕೆ ರೇಗಿ ಒಂದರಮೇಲೊಂದು ಎರಡು ಕಾಗದ ಬರೆದಿದ್ದಳು.

"ಇನ್ನು ನಾನು ಬರೆಯೋದಿಲ್ಲ. ನಿನ್ನ ಉತ್ತರ ಬರದೆ ನಾನು ಬರೆಯೋದಿಲ್ಲ. ಯಾಕೆ ಹೀಗೆ ಮಾಡ್ತಿದೀಯಾ? ನೀವೆಲ್ಲ ನನ್ನನ್ನು ಮರೆತೇ ಬಿಟ್ಟಿರೇನು? ನಾನು

ನಿಮಗಿನ್ನು ಬೇಡವೇನು? ನಿನಗೆ ಅಮ್ಮನಿಗೆ ಅಪ್ಪನಿಗೆ ಯಾರಿಗೂ ನನ್ನ ನೆನಪೇ ಆಗೋದಿಲ್ಲವೇನು?"–ಹೀಗಿದ್ದುವು ಎರಡನೆಯ ಕಾಗದದ ಕೊನೆಯ ಸಾಲುಗಳು.

ಅದನ್ನೋದಿದ ಕೃಷ್ಣಪ್ಪನವರು ಕೇಳಿದರು:

"ಕಾಗದ ಬರೀಬಾರ್ದ ಸುಂದಾ?"

"ಬರೀತೀನಪ್ಪಾ."

ಸುನಂದೆ ತೋರುತ್ತಿದ್ದುದು ಅಲಕ್ಷ್ಯವಲ್ಲವೆಂದು ಕೃಷ್ಣಪ್ಪನವರಿಗೆ ಅರ್ಥವಾಗಿತ್ತು, ಆ ಮೌನದ ಕಾರಣವನ್ನು ಊಹಿಸಿಕೊಳ್ಳುವುದು ಕಷ್ಟವಾಗಿರಲಿಲ್ಲ. ಆದರೂ ಎಷ್ಟು ದಿನ ಅಂತ ಕಾಗದ ಬರೆಯದೇ ಇರುವುದು ಸಾಧ್ಯ?

ತಂದೆಯಷ್ಟೇ ಅಲ್ಲ, ಸುನಂದೆಯ ತಾಯಿಯೂ ಕೇಳುತ್ತಿದ್ದರು:

"ವಿಜೀ ಕಾಗದ ಬಂತೇನೇ?"

"ಬಂತು."

"ಚೆನ್ನಾಗಿದ್ದಾಳಂತಾ?"

"ಹ್ಞೂ."

ಅಥವಾ ಮತ್ತೊಮ್ಮೆ—

"ವಿಜಯಾ ಗಂಡನ ಮನೆಗೆ ಹೋಗಿ ಮೂರು ತಿಂಗಳಾಗ್ತಾ ಬಂತು, ಅಲ್ವಾ?"

"ಹ್ಞೂ."

"ನೋಡಬೇಕೂಂತ ಆಸೆಯಾಗುತ್ತೆ."

"ದೀಪಾವಳಿಗೆ ಕರೆಸಿದರಾಯ್ತು."

"ದೀಪಾವಳೀನ! ಯಾರು ಬದುಕಿರ್ತಾರೆ ಅಷ್ಟು ದಿವಸ?"

"ಸುಮ್ನಿರಮ್ಮ. ಸಂಜೆ ಹೊತ್ತು. ಇಲ್ಲದ್ದೆಲ್ಲ ಆಡ್ಬೇಡ."

"ಅಯ್ಯೋ ಒಮ್ಮೆ ಬಂದು ಹೋಗೀಂತ ಅವರ ಕೈಲಿ ಅಳಿಯನಿಗೆ ಕಾಗದ ಬರೆಸೇ."

"ಆಗಲಿ, ಆಗಲಿ. ನಿಂಗೆ ಆಯಾಸವಾಗುತ್ತೆ. ಮಾತನಾಡದೆ ಮಲಕೋಮ್ಮಾ."

ಒಂದು ದಿನವಾದ ಮೇಲೆ—

"ವಿಜೀಗೆ ಕಾಗದ ಬರೆದಿಯಾ ಸುನಂದಾ?"

"ಹೂನಮ್ಮಾ."

ಸುಳ್ಳು. ಆದರೂ ಕಾಹಿಲೆ ಮಲಗಿದ್ದವರ ಹಿತದ ದೃಷ್ಟಿಯಿಂದ ಅಗತ್ಯವಾಗಿದ್ದ ಸುಳ್ಳು.

ಆ ಮೇಲೂ ಎರಡು ದಿನ ಕಳೆದಾಗ ಸುನಂದೆಗೆ ಅನಿಸಿತು: ಬರೆಯದೇ ಇರುವುದರಲ್ಲಿ ಅರ್ಥವಿಲ್ಲ. ಬರೆಯಬೇಕಾದುದು ತನ್ನ ಕರ್ತವ್ಯ. ವಿಜಯಾ ಬಂದರೆ ತಾಯಿಗೆ ಸಂತೋಷವಾಗುವುದು. ತನಗೂ. ತಾಯಿಯ ಕಾಹಿಲೆ ಹೇಗಾಗುವುದೋ ಯಾರಿಗೆ ಗೊತ್ತು? ಒಡಹುಟ್ಟಿದವಳು ಈಗ ಬಳಿಯಲ್ಲಿರುವುದೇ ಹಿತಕರ. ನಿಜ

ವಾಗಿಯೂ–ಆಕೆಯನ್ನು ಕಾಣದೆ ಎಷ್ಟೋ ವರ್ಷಗಳಾದ. ಹಾಗೆ ಅನಿಸುತ್ತಿದೆಯಲ್ಲ!

ಅಂತೂ ಕೊನೆಗೊಮ್ಮೆ ಸುನಂದಾ ತಂಗಿಗೆ ಬರೆಯಲು ಕುಳಿತಳು. ರಾತ್ರಿ ಹೊತ್ತು. ತಂದೆ ಕೊಂಡು ತಂದಿದ್ದ ಸುಲಭ ಬೆಲೆಯ ಪೆನ್ನು. ನಿದ್ದೆಯ ಸುಳಿವೇ ಇಲ್ಲವೆಂದು ನರಳುತ್ತಿದ್ದ ತಾಯಿ. ಬೆಳಕು ಬೀಳದಂತೆ ಬಾಗಿಲು ಮರೆ ಮಾಡಿ ಕೊಠಡಿಯ ಹೊರಗೆ ಕುಳಿತು ಬರೆಯುತ್ತಿದ್ದ ಸುನಂದಾ.

ಬರೆಯುವ ಆಯಾಸದಿಂದ ಕೈ ಬೆರಳುಗಳು ಆಗಾಗ್ಗೆ ಸುಮ್ಮನಾದುವು. ಕಣ್ಣುಗಳು ಚಲಿಸದೆ ಜಡವಾಗಿ ಬರೆದ ಸಾಲುಗಳ ಮೇಲೆಯೇ ಮಂದ ನೋಟ ಬೀರಿದುವು. ಕಪೋಲಗಳು ತೊಯ್ದುವು.

ಬರೆದು ಮುಗಿದ ಬಳಿಕ ಮನಸ್ಸಿನಲ್ಲೆ ಸುನಂದಾ ಅದನ್ನೋದಿದಳು.

"ಪ್ರೀತಿಯ ವಿಜೀ"ಗೆ ಬರೆದ ಕಾಗದ ಹೀಗೆ ಆರಂಭವಾಗಿತ್ತು:

"ನನ್ನ ಮೇಲೆ ನೀನು ತುಂಬಾ ರೇಗಿರಬೇಕು ಅಲ್ಲವೇನೆ? ಬೆಂಗಳೂರಿನಿಂದ ನಾವು ಅವತ್ತೆ ವಾಪಸು ಬಂದೆವು. ಬಂದ ಕೂಡಲೆ, ಬರೆಯಬೇಕು ಅನಿಸಿತ್ತು. ಆದರೆ ಆಗಲಿಲ್ಲ. ಕಾರಣ ಏನೆಂದು ಹೇಳಬೇಕೋ ತಿಳಿಯದು. ನಿನಗೆ ಬೆಂಗಳೂರು ಯಾತ್ರೆಯ ಫಲಿತಾಂಶ ತಿಳಿಯುವ ಆತುರವೆಂದು ಬಲ್ಲೆ. ಬಹುಶಃ ಇಷ್ಟರಲ್ಲೆ, ನೀನು ಊಹಿಸಿರಬಹುದು ಅಲ್ಲವೆ? ಶುಭ ಸಮಾಚಾರ ಒಂದೂ ಇಲ್ಲವೆಂದು ಲೆಕ್ಕ ಹಾಕಿರಬಹುದು, ಅಲ್ಲವೆ?

"ನನ್ನ ಸಹನಶಕ್ತಿಯನ್ನು ಕಂಡು ಒಮ್ಮೊಮ್ಮೆ ನನಗೆ ಆಶ್ಚರ್ಯವೆನಿಸ್ತಿದೆ. ನನ್ನ ಈ ನರಕ ಜೀವನ ಆರಂಭವಾಗಿ ಆಗಲೆ ಒಂದು ವರ್ಷಕ್ಕೂ ಮೇಲಾಯಿತಲ್ಲ! ಇಷ್ಟೆಲ್ಲಾ ಆದಮೇಲೂ ನಾನು ಬದುಕಿಯೇ ಇದ್ದೇನೆ ಎನ್ನುವುದು ಸಾಮಾನ್ಯ ವಿಷಯವೆ? ನಿನ್ನ ಮದುವೆಗೆ ಮುಂಚೆ, ಸರಸ್ವತಿಯ ಮೊದಲ ಹುಟ್ಟು ಹಬ್ಬದ ದಿವಸ ನೀನು ಉಡುಗೊರೆ ಕಳಿಸಿದ್ದು ನೆನಪಿದೆಯಾ ವಿಜೀ? ಕಣ್ಣೀರಲ್ಲಿ ನಾನು ಕೈ ತೊಳೆಯೋದು ಶುರುವಾಗಿ ಆಗಲೆ ಏಳು ತಿಂಗಳಾಗಿತ್ತು. ನಿಮಗೆ ಯಾರಿಗೂ ಹೇಳಿಯೇ ಇರಲಿಲ್ಲ. ಆಗ ನನ್ನ ಮನಸ್ಸಿನಲ್ಲಿ ಏನಿತ್ತು ಗೊತ್ತೆ?—ಇಷ್ಟೊಂದು ಓದಿರುವ ತಿಳಿದಿರುವ ನಾನು, ಹೋರಾಟವನ್ನು ಬಿಟ್ಟುಕೊಡಬಾರದು; ಸೋಲನ್ನೊಪ್ಪಿಕೊಳ್ಳಬಾರದು; ನನ್ನ ಸಂಸಾರ ಛಿದ್ರವಾಗದಂತೆ ನಾನು ನೋಡಿಕೊಳ್ಳಬೇಕು; ಗಂಡನನ್ನು ಸರಿಹಾದಿಗೆ ತರಬೇಕು; ನಾನು ಜಯಿಸಬೇಕು; ಜಯಿಸಲೇಬೇಕು–ಅಂತ. ಈಗ ಅಂಥ ಯಾವ ಆಸೆಯೂ ನನಗೆ ಉಳಿದಿಲ್ಲ. ನಾಳೆ ಏನಾಗುತ್ತೋ ಮುಂದಿನ ವರ್ಷ ಏನಾಗುತ್ತೊ ನನಗೆ ತಿಳಿಯದು.

"ಬೆಂಗಳೂರಿನಲ್ಲಿ ಏನಾಯಿತೆಂದು ಬರೆಯಬೇಕೇನು? ಬರೆಯುವ ಇಚ್ಛೆಯೇ ನನಗಿಲ್ಲ. ಆದರೆ, ಇಚ್ಛೆಯಿಲ್ಲವೆಂದು ಸುಮ್ಮನಿರುವುದು ಸರಿಯೇ? ಬರೆಯುತ್ತೇನೆ. ಸಾವಧಾನವಾಗಿ ಓದು..."

ಬಳಿಕ ಬೆಂಗಳೂರು ಪ್ರವಾಸದ ಕಥನ. ಮುಂದಕ್ಕೆ—

"ಓದಿದೆಯಾ ವಿಜಯಾ? ಆ ದಿನ ನಡೆದದ್ದೆಲ್ಲ ನನ್ನ ಕಣ್ಣ ಮುಂದೆ ಕಟ್ಟಿದೆ. ಯೋಚಿಸುತ್ತಾ ಇದ್ದರೆ, ಹೀಗೆಲ್ಲಾ ಆಯಿತು ಅಂತ ನಂಬೋಕೆ ಆಗೋದಿಲ್ಲ. ಅಬ್ಬಾ! ಮನುಷ್ಯ ಇಂಥ ಮಟ್ಟಕ್ಕೂ ಇಳೀಬಹುದೂಂತ ಆ ದಿವಸ ನನಗೆ ತಿಳೀತು.

"ನನ್ನ ವಿಜಯಾ,–ಬೀದಿಯ ಪಾಲು, ನದಿಯ ಪಾಲು, ಎರಡೂ ಸರಿಯಲ್ಲ ವೆಂದು ಹೆತ್ತವರ ಮಡಿಲಿಗೆ ವಾಪಸು ಬಂದಿದ್ದೇನೆ. ಚಂಪಾ ನಮ್ಮನೆಗೆ ಬಂದಿದ್ದ ವಿಷಯ ಹೋದ ಸಲ ತಿಳಿಸಿದ್ದೆ. ಅವಳಿಗೆ ನನ್ನನ್ನು ಹೋಲಿಸಿನೋಡಿದರೆ ಆಕೆಯ ಬದುಕೇ ಸಾವಿರ ಪಾಲು ಉತ್ತಮ ಅನಿಸುತ್ತೆ. ಬೇಸಗೆ ರಜಾ ಮುಗಿಯುತ್ತ ಬಂತು. ಆಕೆ ಇನ್ನು ಕಾಲೇಜಿಗೆ ಹೋಗಬಹುದು. ತನ್ನ ಜೀವನವನ್ನು ತಾನೇ ರೂಪಿಸ ಬಹುದು. ನಾನು? ನನಗೆ ಆ ಭಾಗ್ಯವಿಲ್ಲ.

"...ಇಷ್ಟು ನನ್ನ ಗೋಳಿನ ಕತೆ. ಆದರೆ, ನಿನಗೆ ಕಾತರ ಹುಟ್ಟಿಸುವ ವಿಷಯ ಇನ್ನೂ ಇದೆ; ನಮ್ಮಮ್ಮ ಕಾಹಿಲೆ ಬಿದ್ದಿದ್ದಾಳೆ. ನಾನು ಈ ಮೊದಲೇ ಬರೆಯ ಬೇಕಾಗಿತ್ತು. ಆದರೆ ಅದೊಂದೇ ವಿಷಯ ಬರೆಯುವ ಹಾಗಿರಲಿಲ್ಲ. ಎಂಥ ಕಾಹಿಲೇಂತ ಹೇಳಲಿ? ಏನೂಂತ ಬರೆಯಲಿ? ನಿನ್ನ ಮದುವೆಗೇಂತ ನಾನು ಇಲ್ಲಿಗೆ ಬಂದಾಗಿನಿಂದಲೂ ಆಕೆ ಸುಖವಾಗಿರಲಿಲ್ಲ. ಮದುವೆಯ ಸಮಯದಲ್ಲಿ ಆಕೆ ಓಡಾಡಿದ್ದು ಎಷ್ಟೋ ಅಷ್ಟೇ. ಆಮೇಲೆ ನೀನೇ ನಾಲ್ಕೈದು ಸಲ ಕೇಳಿರ್ಲಿಲ್ಲವಾ–ಅಮ್ಮ ಯಾಕೆ ಹೀಗಿದಾಳೆ; ಅಂತ? ನೀನು ಹೊರಟುಹೋದ ಮೇಲಂತೂ ಕೇಳಲೇ ಬೇಡ, ಈಗ..."

ಅಮ್ಮನನ್ನು ಪೀಡಿಸುತ್ತಿದ್ದ ಜಾಡ್ಯದ ವಿವರ.

"ನಿನ್ನ ವಿಷಯಾ ಕೇಳ್ತಾನೇ ಇರ್ತಾಳೆ. ಕುರ ಒಮ್ಮೆ ಒಡೆದರೆ ನೋವು ವಾಸಿ ಯಾಗಬಹುದೂಂತಿದ್ದೇನೆ. ಅಪ್ಪನೂ ಹಾಗೇ ಹೇಳ್ತಾನೆ. ದೀಪಾವಳಿಗೆ ನಿಮ್ಮಿಬ್ಬ ರನ್ನೂ ಕರೆಸಬೇಕೂಂತಿತ್ತು. ಆದರೆ ಅಮ್ಮ ಈಗ ಒತ್ತಾಯಿಸ್ತಾ ಇದಾಳೆ–ಈಗ್ಲೇ ಕರೆಸೀಂತ. ಬರೋಕಾಗುತ್ತಾ? ನಿಮ್ಮವರಿಗೆ ರಜಾ ಸಿಗಬಹುದಾ? ನಿನ್ನನ್ನು ತಂದು ಬಿಟ್ಟು ಹೋಗಲಿ. ನೀನು ಆಮೇಲೆ ಹೋದರಾಯ್ತು. ಬರ್ತೀಯಾ? ಬಾ. ಅಮ್ಮ, ಅಪ್ಪ, ಎಲ್ಲರೂ ಹೇಳಿದ್ದಾರೆ. ಬಾ."

ಕೊನೆಯಲ್ಲಿ ಕೋರಿಕೆ.

"ನಿಮ್ಮವರು ಆಫೀಸಿಗೆ ಹೋಗಿರುವಾಗಲೇ ಈ ಕಾಗದ ಮನೆಗೆ ಬರುತ್ತೆ, ಅಲ್ಲವಾ? ದಯವಿಟ್ಟು ಇದನ್ನು ಅವರಿಗೆ ತೋರಿಸ್ಬೇಡ. ನಾದಿನಿಯ ವಿಷಯ ತಿಳಿದು ಅವರಿಗೆ ಬೇಸರವಾದೀತು. ಕಾಗದ ತಲಪಿದ ಕೂಡಲೆ ಉತ್ತರ ಬರಿ. ಆದಷ್ಟು ಬೇಗನೆ ಬಾ. ಈ ವಾರದ ಕೊನೇಲಂತೂ ಖಂಡಿತವಾಗಿ ಬಂದು ತಲಪುತ್ತೀ ಅಂತ ನಂಬಿದ್ದೇನೆ.

ಮರೆತದ್ದು—ಸರಸ್ವತಿ ಚೆನ್ನಾಗಿದ್ದಾಳೆ. ಅನಾಥ ಹುಡುಗಿ. ತಂದೆ ಇಲ್ಲದ ಮಗಳು.

ಎಂದು, ಪ್ರೀತಿಯ ಅಕ್ಕ,

ಸುನಂದಾ–"

ಕಾಗದವನ್ನು ಮಡಚಿ, ದೀಪವಾರಿಸಿ, ಸುನಂದಾ ನಿದ್ದೆಗೆ ಶರಣು ಹೋದಳು: ಮಾರನೆಯ ದಿನ ಆ ಕಾಗದ ಅಂಚೆ ಸೇರಿತು.

ಅದು ಶಿವಮೊಗ್ಗೆಯ ಹಾದಿಯಲ್ಲಿದ್ದಾಗ ಸುನಂದೆಯ ತಾಯಿಯ ಪರಿಸ್ಥಿತಿ ಉಲ್ಬಣಗೊಂಡಿತು.ಕರ್ಣ ಭೇದಕವೂ ಹೃದಯ ಭೇದಕವೂ ಆಯಿತು ಅವರ ರೋದನ.

ಅಷ್ಟು ಕಾದಿದ್ದ ಮೇಲೆ ಡಾಕ್ಟರನ್ನು ಕರೆತಂದರು. ಅಂಗಾಂಗಗಳಿಗೆಲ್ಲ ನಂಜು ಹಬ್ಬುತ್ತಿತ್ತೆಂದು ತಿಳಿಯುವುದು ಕಷ್ಟವಾಗಲಿಲ್ಲ. ಸಾಧ್ಯವಿದ್ದ ಚಿಕಿತ್ಸೆಯಲ್ಲಿ ಅವರು ತೊಡಗಿದರು. "ಭಯವೇನಿಲ್ಲ." ಎಂಬುದೇ ಅವರು ನೀಡಿದ ಆಶ್ವಾಸನೆ.

ಅಳತೊಡಗಿದ್ದ ತಂದೆಯನ್ನು ಸಮಾಧಾನಪಡಿಸುತ್ತ ಸುನಂದಾ ಆ ರಾತ್ರೆಯನ್ನು ಕಳೆದಳು. ತಾಯಿಯ ಪರಿಸ್ಥಿತಿ ಸುಧಾರಿಸಿದ ಚಿಹ್ನೆ ತೋರಲಿಲ್ಲ. ಬೆಳಗಾದೊಡನೆ ಆಕೆ ಶಿವಮೊಗ್ಗೆಗೆ ಮೈದುನನಿಗೆ ತಂತಿ ಕೊಟ್ಟಳು:

"ವಿಜಯಳ ತಾಯಿಗೆ ಸಕತ್ ಕಾಹಿಲೆ ತಕ್ಷಣ ಬನ್ನಿ."

...ಆಫೀಸಿನಲ್ಲಿದ್ದ ವೆಂಕಟರಾಮಯ್ಯ ಆ ತಂತಿ ಬಂದು ಸ್ವಲ್ಪ ಹೊತ್ತಾದೊಡನೆಯೆ ಮನೆಯ ಕಡೆಗೆ ಧಾವಿಸಿದ.

ಮನೆಯಲ್ಲಿ ಅದೇ ಆಗ ಕೈ ಸೇರಿದ್ದ ಅಕ್ಕನ ಕಾಗದವನ್ನು ವಿಜಯಾ ಮುಖ ಮುದುಡಿಕೊಂಡು ಓದುತ್ತಿದ್ದಳು.

## ೧೫

ಬೆಳಗ್ಗೆ ವಿಜಯಾ ಬರುವಷ್ಟರಲ್ಲೆ ಮನೆಯ ಮುಂದೆ ಜನ ನೆರೆದಿದ್ದರು. "ಅಮ್ಮಾ! ಅಮ್ಮಾ!" ಎಂದು ಕೂಗುತ್ತ ವಿಜಯಾ, ಜನರು ಬಿಟ್ಟುಕೊಟ್ಟ ದಾರಿಯಲ್ಲಿ ಮನೆಯೊಳಕ್ಕೆ ಧಾವಿಸಿದಳು.

ಆಕೆಯೊಡನೆ ಬಂದ ವೆಂಕಟರಾಮಯ್ಯ ಕೈ ಚೀಲವನ್ನು ಜಗಲಿಯಲ್ಲಿರಿಸಿ, ಜನರ ಗುಂಪಿನಲ್ಲಿ ತಾನೂ ಒಬ್ಬನಾಗಿ ನಿಂತ.

ವಿಜಯಾ–ಸುನಂದೆಯರ ತಾಯಿಯನ್ನು ನಡುಮನೆಯಲ್ಲಿ ಮಲಗಿಸಿದ್ದರು. ಮಗ್ಗುಲು ಮಲಗಿಯೇ ಇರುವ ಅಗತ್ಯವಿರಲಿಲ್ಲ ಈಗ. ಅದು, ಯಾವ ನೋವಿನ ಅನುಭವವೂ ಇಲ್ಲದ ನಿದ್ದೆ. ಬದುಕಿನ ಕೊನೆ ಘಳಿಗೆಯಲ್ಲಿ ಆ ಜೀವ ಅಷ್ಟೊಂದು ಚಡಪಡಿಸಿದ್ದರೂ ಕೊನೆಯುಸಿರಿನೊಡನೆ ಆ ಬೇಗುದಿಯೂ ಮಾಯವಾಗಿ, ಶವದ ಮುಖಮುದ್ರೆ ಶಾಂತವಾಗಿಯೇ ಇತ್ತು.

ಹೆಂಡತಿ ಸತ್ತುಹೋದಳೆಂಬುದನ್ನು ನಂಬಲಾರದೆ, ಮಂತ್ರಮುಗ್ಧರಾದವರಂತೆ

ಅರಳು ಕಂಗಳಿಂದ ಛಾವಣಿಯನ್ನು ದಿಟ್ಟಿಸುತ್ತ ಕೃಷ್ಣಪ್ಪ ಕುಳಿತಿದ್ದರು.

ಆ ಸ್ಥಿತಿಯಿಂದ ಅವರನ್ನು ಎಚ್ಚರಗೊಳಿಸಿದುದು, ವಿಜಯಳ "ಅಮ್ಮಾ! ಅಮ್ಮಾ!" ಎನ್ನುವ ಕರೆ.

ವಿಜಯಳತ್ತ ದೃಷ್ಟಿ ತಿರುಗಿಸಿ ಕೃಷ್ಣಪ್ಪ ಅಂದರು:

"ಬಂದೆಯಾ ಮಗಳೇ!"

ವಿಜಯಾ, ತಾಯಿಯಿನ್ನೂ ಉಸಿರಾಡುತ್ತಲೆ ಇರಬಹುದೆಂದು ನಂಬಿ ಶವದ ಬಳಿ ಮೊಣಕಾಲೂರಿ ಕುಳಿತು, ಮಲಗಿದ್ದ ತಾಯಿಯ ಎರಡೂ ಭುಜಗಳನ್ನು ಹಿಡಿದು ಅಲುಗಿಸುತ್ತ ಕರೆದಳು:

"ಅಮ್ಮಾ! ಅಮ್ಮಾ! ನಾನು ಬಂದಿದೀನಿ! ನಾನು–ವಿಜೀ–ಬಂದಿದೀನಿ! ಅಮ್ಮಾ! ಅಮ್ಮಾ!"

ಸಮೀಪದಲ್ಲೆ ನಿಂತಿದ್ದ ಯಾರೋ ಅಂದರು:

"ಅಳಬೇಡ. ಅಳಬೇಡ ಮಗೂ. ಸತ್ತವರು ಅತ್ತರೆ ಬರುತ್ತಾರೆಯೇ?"

ಅಳಲಿನ ಬುಗ್ಗೆಯ ಗುಂಡಿಯೊತ್ತಿತು ಆ ಮಾತು. ಮೊದಲು "ಹ್ಹಾ!" ಎಂಬ ಆಕ್ರೋಶ. ಬಳಿಕ "ಅಯ್ಯೋ!" ಅದಾದ ಮೇಲೆ "ಅಮ್ಮಾ!"

ಮಗಳ ಅಳು ಕಂಡು ಸಹಿಸಲಾರದೆ ಕೃಷ್ಣಪ್ಪನವರೂ ಈಗ ಅತ್ತರು.

ಹತ್ತಿರ ಬಂದಿದ್ದವರು ಯಾರೋ ಹೇಳಿದರು:

"ನೀವೇ ಅತ್ತರೆ ಹ್ಯಾಗೆ ಕೃಷ್ಣಪ್ಪನವರೆ! ಏಳಿ! ಏಳಿ!"

ಹತ್ತಿರ ಬರಬೇಡಿ, ಮುಟ್ಟಬೇಡಿ, ಏಳಲಾರೆ–ಎನ್ನುವ ಅರ್ಥದಲ್ಲಿ ಕೃಷ್ಣಪ್ಪ ಕೈಗಳನ್ನಾಡಿಸುತ್ತಿದ್ದರು. ಗಂಟಲಿನಿಂದ ನೋವಿನ ಧ್ವನಿ ಹೊರಡುತಿತ್ತು:

"ಊಹೂಂ. ಊಹೂಂ."

ಕೆದರಿದ್ದ ತಲೆಕೂದಲಿನ, ಅತ್ತು ಊದಿಕೊಂಡಿದ್ದ ಕಣ್ಣುಗಳ, ಸುನಂದಾ ಕುಳಿತಲ್ಲಿಂದೆದ್ದು ಬಾಗಿಲ ಕಡೆಗೆ ನಡೆದಳು.

ಅಲ್ಲಿ, ವೆಂಕಟರಾಮಯ್ಯನ ಪಕ್ಕದಲ್ಲಿದ್ದವರೊಬ್ಬರು ಆತನನ್ನು ಗುರುತಿಸಿ, ಕೇಳುತ್ತಿದ್ದರು:

"ಈಗ ಬಂದಿರಾ?"

"ಹೂಂ...ಎಷ್ಟು ಹೊತ್ತಿಗಾಯ್ತು?"

"ಬೆಳಗಿನ ಜಾವ ಐದು ಘಂಟೆಗೇಂತ ತೋರುತ್ತೆ."

ಸುನಂದಾ ಬಾಗಿಲ ಬಳಿ ನಿಂತು ಆ ಗಂಡಸರನ್ನು ನೋಡಿದಳು; ಒಳಗೆ ಬರಲೆಂದು ಗುಂಪು ಸೇರಿ ನಿಂತಿದ್ದ ಹೆಂಗಸರನ್ನು ನೋಡಿದಳು. ಕ್ಷೀಣವಾಗಿದ್ದ ಆಕೆಯ ದೃಷ್ಟಿ ವೆಂಕಟರಾಮಯ್ಯನನ್ನು ಹುಡುಕಿತು. ಮೈದುನನ್ನು ಕಂಡೊಡನೆ ಆಕೆ ಸನ್ನೆ ಮಾಡಿದಳು-ಬನ್ನಿ ಎಂದು.

ವೆಂಕಟರಾಮಯ್ಯ ಬೂಟುಗಳನ್ನು ಬಿಚ್ಚಿ ಬದಿಗೆ ತಳ್ಳಿ ಒಳಕ್ಕೆ ನಡೆದ. ಕೃಷ್ಣಪ್ಪ

ನವರ ಹಿಂಬದಿಯಲ್ಲಿ ನಿಂತ. ಕೋಟಿನ ಜೇಬಿನಿಂದ ಕರವಸ್ತ್ರವನ್ನು ಹೊರತೆಗೆದು, ಒತ್ತರಿಸಿ ಬಂದ ಕಂಬನಿಯನ್ನೊರೆಸಿದ.

ಸುನಂದಾ, ಅಮ್ಮನ ಎದೆಯನ್ನು ಆತುಕೊಂಡಿದ್ದ ವಿಜಯಳ ಬಳಿಗೆ ಹೋದಳು. ಅಕ್ಕ, ತಂಗಿಯ ಕೈಗಳನ್ನು ಹಿಡಿದು ಮೃದುವಾಗಿ ಹಿಂದಕ್ಕೆಳೆದಳು.

"ವಿಜೀ, ವಿಜೀ...."

ಅಮ್ಮನ ಬದಲು ನನಗಿನ್ನು ನೀನೇ ಎನ್ನುವಂತೆ ವಿಜಯಾ ಸುನಂದೆಯ ಕತ್ತಿಗೆ ಜೋತು ಬಿದ್ದು ರೋದಿಸಿದಳು:

"ಅಕ್ಕಾ! ಅಕ್ಕಾ!"

"ಅಳಬೇಡ ವಿಜೀ..."

"ನಾನು ಪಾಪಿ ಅಕ್ಕಾ! ಅಮ್ಮನನ್ನು ನೋಡೋ ಭಾಗ್ಯ ನನಗಿಲ್ದೆ ಹೋಯ್ತು!"

ಆಗ ಸುನಂದೆಯೂ ಅತ್ತಳು.

"ಅದು ನನ್ನ ತಪ್ಪು ವಿಜೀ. ಮೊದಲೇ ನಿಂಗೆ ಬರೀದೆ ನಾನು ತಪ್ಪು ಮಾಡ್ದೆ!"

ವಿಜಯಾ ಒಪ್ಪಲಿಲ್ಲ.

"ಇಲ್ಲ ಅಕ್ಕಾ. ನಾನು ಪಾಪಿ!"

ನೆರೆಹೊರೆಯ ಹೆಂಗಸರು ಒಳಕ್ಕೆ ಬಂದು, ವಿಜಯಾ–ಸುನಂದೆಯರ ಹಿಂದೆ ನಿಂತರು. ಅಷ್ಟು ವರ್ಷ ಪಕ್ಕದ ಮನೆಯವಳಾಗಿದ್ದು ತಮ್ಮನ್ನು ಬಿಟ್ಟು ಹೋದ ಜೀವವನ್ನು ನೋಡುತ್ತ ಒಬ್ಬೊಬ್ಬರೂ ಸ್ವಲ್ಪ ಸ್ವಲ್ಪ ಅತ್ತರು.

ನಿಂತವರೆಡೆಯಿಂದ ಮಾತುಗಳು ಕೇಳಿಸುತಿದ್ದುವು:

"ಆಗಲೆ ಒಂಭತ್ತು ದಾಟಿ ಹೋಯ್ತು."

"ಇನ್ನು ಯಾರೂ ಬರಬೇಕಾದ್ದಿಲ್ಲ ತಾನೆ?"

"ಮತ್ಯಾಕೆ ತಡ? ಶಾಸ್ತ್ರಿಗಳೇ, ಎಲ್ಲಿ ಶಾಸ್ತ್ರಿಗಳು?"

ಗಂಟೆ ಒಂಭತ್ತು ದಾಟಿತ್ತು. ಪ್ರತಿಯೊಬ್ಬರಿಗೂ ಒಂದಲ್ಲ ಒಂದು ಕೆಲಸ. ದಿನವೆಲ್ಲ ಅಲ್ಲೇ ನಿಂತು ಶೋಕ ಪ್ರದರ್ಶನ ಮಾಡುತ್ತ ಇರುವುದಕ್ಕಾಗುತ್ತದೆಯೆ? ಅತ್ತವರು ಅಳು ನಿಲ್ಲಿಸಬೇಕು. ಸತ್ತವರನ್ನು ಕಳುಹಿಸಿಕೊಡಬೇಕು.

"ಕೃಷ್ಣಪ್ಪನವರೇ. ಇದೇನಿದು? ನೀವೂ ಸರಿ. ಏಳಿ!"

...ಅವರು ಎದ್ದ ಬಳಿಕ ಮುಂದಿನ ಸಿದ್ಧತೆ ತಡವಾಗಲಿಲ್ಲ. ಮೂರು–ನಾಲ್ಕು ಜನ ಆ ಏರ್ಪಾಟಿಗೋಸ್ಕರವೇ ಓಡಾಡಿದರು.

ಸ್ವಲ್ಪ ಹೊತ್ತಿನಲ್ಲೆ ಶವ ಸುಡುಗಾಡಿಗೆ ಹೋಯಿತು.

...ಮನೆ ಬರಿದಾದಾಗ ಒಂದೇ ಸಮನೆ ರೋದಿಸತೊಡಗಿದ ವಿಜಯಳ ಬಳಿ ನಾಲ್ಕು ಜನ ಹೆಂಗಸರು ನಿಂತಿದ್ದರು. ತಾಯಿಯನ್ನು ಕಳೆದುಕೊಂಡ ಆ ಎಳೆಯ ಮಕ್ಕಳನ್ನು ಅವರು ಸಮಾಧಾನ ಪಡಿಸಿದರು.

ಬೆಳಗಿನಿಂದಲೆ ಸರಸ್ವತಿಯನ್ನು ಕರೆದೊಯ್ದಿದ್ದ ನೆರೆಮನೆಯ ಸುಶೀಲಾ ಈಗ

ಒಳ ಬಂದಳು. ದಿನದ ಕ್ರಮ ತಪ್ಪಿಸಿ ಹಾಗೆ ತನ್ನನ್ನೊಯ್ದುದನ್ನು ಒಪ್ಪದೇ ಇದ್ದ ಸರಸ್ವತಿ, ಸುಶೀಲಾ ಮನೆಗೆ ವಾಪಸು ಕರೆದು ತಂದಳೆಂದು ಮೊದಲು ಸಂತೋಷ ಪಟ್ಟರೂ ಮನೆಯೊಳಗಿನ ಅಳುಮೋರೆಯ ಹೆಂಗಸರನ್ನು ಕಂಡು ವ್ಯಾಕುಲಗೊಂಡಳು. ತನ್ನ ಸ್ವರವೂ ಕೇಳಿಸಲೆಂದು ಆಕೆಯೂ ತಡ ಮಾಡದೆ ಅತ್ತಳು.

ನಿಂತಿದ್ದವರಲ್ಲಿ ವಯೋವೃದ್ಧೆಯಾಗಿದ್ದ ಒಬ್ಬರೆಂದರು:

"ಯಾಕಳ್ತೀರೇ? ಅತ್ತರೆ ಸತ್ತವರ ಆತ್ಮಕ್ಕೆ ನೋವಾಗುತ್ತೆ. ಅಳಬೇಡಿ: ಆಕೆ ಪುಣ್ಯವಂತೆ, ಮುತ್ತೈದೆ ಸಾವಿನ ಭಾಗ್ಯ ಸಾಮಾನ್ಯವೇ?"

...ಬಳಿಕ ಬಿಸಿಲೇರಿದಂತೆ, ಮನೆಗೆಲಸಗಳ ನೆನಪಾಗುತ್ತ, ನೆರೆದಿದ್ದವರು ಚೆದರಿದರು.

ಕೊನೆಯಲ್ಲಿ, ಕೃಷ್ಣಪ್ಪನವರೂ ವೆಂಕಟರಾಮಯ್ಯನೂ ಮನೆಗೆ ಹಿಂದಿರುಗಿದ ಹೊತ್ತಿಗೆ, ಅಲ್ಲಿ ಉಳಿದಿದ್ದವರು ಮೂವರು ಮಾತ್ರ: ಅಕ್ಕನ ತೊಡೆಯ ಮೇಲೆ ತಲೆ ಇರಿಸಿ ಮಲಗಿದ್ದ ವಿಜಯಾ, ಗೋಡೆಗೊರಗಿ ಕುಳಿತಿದ್ದ ಸುನಂದಾ ಮತ್ತು ಪಕ್ಕ ದಲ್ಲೆ ತನ್ನ ಪುಟ್ಟ ಹಾಸಿಗೆಯಲ್ಲಿ ನಿದ್ದೆ ಹೋಗಿದ್ದ ಸರಸ್ವತಿ.

ಅರ್ಧಾಂಗಿಯನ್ನು ಕಳೆದುಕೊಂಡ ಕ್ಷಣದಿಂದಲೆ ಕೃಷ್ಣಪ್ಪನವರು ಕ್ಷೀಣಿಸಿ ಕಡ್ಡಿ ಯಾಗಿದ್ದರು. ಗಾಳಿ ಬೀಸಿದರೆ ಹಾರಿಹೋಗುವಂತಿತ್ತು ದೇಹ, ಪ್ರಯಾಸದಿಂದ ನಡೆದು ಹಿಂತಿರುಗಿ ಬಂದವರು ಜಗಲಿಯ ಮೇಲಿದ್ದ ಆರಾಮ ಕುರ್ಚಿಯ ಮೇಲೆ ಕುಳಿತರು.

ವೆಂಕಟರಾಮಯ್ಯ ನಡುಮನೆಗೆ ಹೋದ. ವಿಜಯಾ ಮೈಮುದುಡಿಕೊಂಡು ಮಲಗಿಯೇ ಇದ್ದುದನ್ನು ಕಂಡು ಆತನಿಗೆ ಗಾಬರಿಯಾಯಿತು. ಮೈದುನನನ್ನು ಕಂಡು ಸುನಂದಾ ಅಂದಳು:

"ಇದೇ ಈಗ ಜೊಂಪು ಹತ್ತಿದೆ, ಬನ್ನಿ. ಸ್ವಲ್ಪ ಹೊತ್ತು ಕೂತಿರ್ತೀರಾ?"

"ಹ್ಞೂ," ಎಂದ ವೆಂಕಟರಾಮಯ್ಯ.

ಸುನಂದಾ, ತನ್ನ ಬದಲು ಗೋಡೆಗೊರಗಿ ಕುಳಿತ ಮೈದುನನ ತೊಡೆಯ ಮೇಲೆ ತಂಗಿಯ ತಲೆಯನ್ನಿರಿಸಿದಳು. ತಾನು ನಿಧಾನವಾಗಿ ತಂದೆಯ ಬಳಿಗೆ ನಡೆದಳು.

"ಅಪ್ಪಾ."

ಕೃಷ್ಣಪ್ಪನವರು ಮಗಳ ಕಡೆಗೆ ಮುಖ ತಿರುಗಿಸಿದರು.

"ಏನು ಸುನಂದಾ?"

"ನೀವೆಲ್ಲ ಸ್ನಾನ ಮುಗಿಸ್ಕೊಂಡ್ಬಿಡಿ, ಆಗದಾ?"

"ಆಗಲಮ್ಮ"

"ಬಾ, ಏಳು ಹಾಗಾದರೆ."

ಕೃಷ್ಣಪ್ಪನವರೆದ್ದು ಮಗಳನ್ನು ಹಿಂಬಾಲಿಸಿದರು.

...ಸಾವಿನ ಮನೆ ಮೆಲ್ಲನೆ ಮೈಲಿಗೆ ಕಳೆಯಿತು.

...ಮಧ್ಯಾಹ್ನ ಕಳೆದು ಬಹಳ ಹೊತ್ತಾದ ಮೇಲೆ ಸುನಂದೆಯು ಅವಸರದ ಅಡುಗೆಯನ್ನು ಉಣ್ಣಲು ಅವರೆಲ್ಲ ಕುಳಿತರು.

ಇತರರು ಯಾರೂ ನೋಡದೇ ಇದ್ದ ಕೊಠಡಿಯತ್ತ ಮಗು ಸರಸ್ವತಿ ದಿಟ್ಟಿಸುತ್ತಿದ್ದಳು. ಅದು ಎಷ್ಟೋ ದಿನಗಳಿಂದ ಅಜ್ಜಿ ಮಲಗಿರುತ್ತಿದ್ದ ಜಾಗ. ಅಲ್ಲಿ ಹಾಸಿಗೆ ಇರಲಿಲ್ಲ. ಅಜ್ಜಿ ಇರಲಿಲ್ಲ. ಅಲ್ಲಿಂದ ಯಾವ ನರಳಾಟವೂ ಕೇಳಿಬರುತ್ತಿರಲಿಲ್ಲ. ಸರಸ್ವತಿಗೆ ಇದು ವಿಚಿತ್ರವೆನಿಸಿತು; ಬಹಳ ಭಯವಾಯಿತು.

ಇದನ್ನು ಗಮನಿಸಿದ ಸುನಂದಾ ಮಗಳ ಲಕ್ಷ್ಯವನ್ನು ಏನೇನೋ ಮಾತುಗಳನ್ನಾಡಿ ತನ್ನೆಡೆಗೆ ಸೆಳೆಯಲು ಯತ್ನಿಸಿದಳು.

ಆ ಯತ್ನವೊಂದಕ್ಕೂ ಮರುಳಾಗದೆ ಸರಸ್ವತಿ ಅಂದಳು:

"ಅಜ್ಜಿ! ಅಜ್ಜಿ ಇಲ್ಲ!"

ಉಣ್ಣುತ್ತಿದ್ದವರಿಗೆ ಗಂಟಲಲ್ಲೇ ಸಿಲುಕಿತು ಅನ್ನದ ಅಗುಳು.

...ಊಟವಾದೊಡನೆಯೇ ನಿದ್ದೆ ಕೃಷ್ಣಪ್ಪನವರ ಮೇಲೆ ಬಲೆ ಬೀಸಿತು. ಎಷ್ಟೋ ರಾತ್ರಿಗಳಿಂದ ಹೆಚ್ಚು ಕಡಮೆ ಎಚ್ಚರವಾಗಿಯೇ ಇರುತ್ತಿದ್ದ ಅವರು, ಬರಿಯ ಚಾಪೆಯ ಮೇಲೆ ತೋಳನ್ನೆ ದಿಂಬಾಗಿ ಮಾಡಿಕೊಂಡು ನಿದ್ದೆ ಹೋದರು. ರಾತ್ರೆಯೆಲ್ಲ ರೈಲು ಪ್ರಯಾಣ ಮಾಡಿದ್ದ ವೆಂಕಟರಾಮಯ್ಯನಿಗೂ ವಿಜಯಳಿಗೂ ಲಘು ನಿದ್ದೆ ಬಂತು. ಸುನಂದೆ ಮಾತ್ರ ಎಚ್ಚರವಾಗಿಯೇ ಇದ್ದು ಆದಷ್ಟು ಸದ್ದಿಲ್ಲದೆ, ಅಡುಗೆ ಮನೆಯನ್ನು ಸ್ವಚ್ಛಗೊಳಿಸುವ ಮುಸುರೆ ಬೆಳಗುವ ಕೆಲಸ ನಡೆಸಿದಳು.

ಬಹಳ ದಿನಗಳನಂತರ ಮನೆಗೆ ಬಂದಿದ್ದ ಚಿಕ್ಕಮ್ಮ ತನ್ನನ್ನು ಎತ್ತಿಕೊಂಡು ಮುದ್ದಿಡಲಿಲ್ಲವೆಂದು ಸರಸ್ವತಿಗೆ ಸಿಟ್ಟು ಬಂದಿತ್ತು. ಬಾ ಎಂದಿದ್ದರೆ ಸಂತೋಷವಾಗಿ ತಾನೂ ಚಿಕ್ಕಮ್ಮನ ಜತೆ ಮಲಗಿಕೊಳ್ಳುತ್ತಿದ್ದಳು. ಆದರೆ ಚಿಕ್ಕಮ್ಮ ಕರೆದಿರಲಿಲ್ಲ. ಹೀಗಾಗಿ ಸರಸ್ವತಿ ಅಮ್ಮನ ಜತೆಯಲ್ಲೇ ಇದ್ದು, ಆಕೆಯ ಕೆಲಸ ಕಾರ್ಯಗಳಿಗೆ ತನ್ನಿಂದಾದಷ್ಟು ಅಡ್ಡಿಪಡಿಸಿದಳು.

...ಸಂಜೆ ಮೊದಲು ಎದ್ದು ಗಡಿಯಾರ ನೋಡಿದವನು ವೆಂಕಟರಾಮಯ್ಯ.

"ಆರು ಘಂಟೆ ಆಗ್ತೊಯ್ತು ನಾನಿನ್ನು ಹೊರಡ್ಬೇಕು."

"ಇವತ್ತೇ ಹೋಗ್ತೀರಾ?" ಎಂದಳು ಸುನಂದಾ.

ಸಂವಾದದ ಸದ್ದು ಕೇಳಿಸಿದಂತಾಗಿ ವಿಜಯಳೂ ಬೆಚ್ಚಿಬೀಳುತ್ತ ಎದ್ದಳು.

"ಯಾರು? ಏನಾಯ್ತು?" ಎಂದಳಾಕೆ.

ಯಾರೂ ಉತ್ತರ ಕೊಡಲಿಲ್ಲ. ಮತ್ತೊಂದು ಕ್ಷಣದಲ್ಲಿ ವಿಜಯಳಿಗೆ ಪೂರ್ಣ ಅರಿವು ಬಂತು.

ಅಕ್ಕತಂಗಿಯರಿಬ್ಬರನ್ನೂ ಉದ್ದೇಶಿಸಿ ಹೇಳಿದಂತೆ ವೆಂಕಟರಾಮಯ್ಯನೆಂದ:

"ನಾನು ಒಂದೇ ದಿವಸದ ರಜಾ ತಗೊಂಡಿರೋದು. ವಿಜಯಾನ ಇಲ್ಲಿ ಬಿಟ್ಟು ಹೋಗೋಕೇಂತ ನಾನು ಬಂದೆ. ಸಾಯಂಕಾಲದ ರೈಲ್ನಲ್ಲಿ ಹೊರಡ್ತೀನಿ."

ವಿಜಯಾ ಮಾತನಾಡಲಿಲ್ಲ. ಸುನಂದಾ ತಂದೆಯನ್ನೆಬ್ಬಿಸಿದಳು.

ಅಳಿಯ ಹೊರಟು ನಿಂತುದನ್ನು ಕಂಡು ಕೃಷ್ಣಪ್ಪನೆಂದರು;

"ನಿಮ್ಮಿಷ್ಟ. ನನಗೆ ಗಂಡು ಮಕ್ಕಳಿಲ್ಲ ವೆಂಕಟರಾಮಯ್ಯ. ಆ ಕಾರಣದಿಂದ ನೀವು ನನ್ನ ಪಾಲಿಗೆ ಅಳಿಯನಿಗಿಂತಲೂ ಜಾಸ್ತಿ. ನಾನು ನಿಮ್ಮ ಹತ್ತಿರ ಎಷ್ಟೋ ವಿಷಯ ಮಾತನಾಡ್ಬೇಕು. ನನಗೂ ವಯಸ್ಸಾಯ್ತು. ಇನ್ಯಾರಿದಾರೆ ಹೇಳಿ?"

ಕೃಷ್ಣಪ್ಪನವರು ತೋರುತ್ತಿದ್ದ ವಿಶ್ವಾಸವನ್ನು ಕಂಡು ಮೂಕನಾಗಿ ವೆಂಕಟ ರಾಮಯ್ಯ ಉತ್ತರವಿತ್ತ:

"ಏನು ಹೇಳ್ಬೇಕೋ ತೋಚ್ತಾ ಇಲ್ಲ, ಮಾವ. ಇನ್ನೆರಡು ವಾರ ಬಿಟ್ಕೊಂಡು ಪುನಃ ಬರ್ತೀನಿ."

"ಹಾಗೇ ಮಾಡಿ– ಏಳೆಂಟು ದಿವಸದ ರಜಾ ಪಡಕೊಂಡು ಬನ್ನಿ."

...ಹೊರಡುವುದಕ್ಕೆ ಮುಂಚೆ ವೆಂಕಟರಾಮಯ್ಯ ತನ್ನ ಹೆಂಡತಿಯನ್ನು ಪಕ್ಕಕ್ಕೆ ಕರೆದ. ಕೋಟಿನ ಒಳಜೇಬಿನೊಳಗಿದ್ದ ನೋಟುಗಳನ್ನು ಎಣಿಸಿ, ತನ್ನ ರೈಲು ಖರ್ಚಿಗೆ ಬೇಕಾದುದನ್ನು ತೆಗೆದಿರಿಸಿದ. ಅನಂತರ ಇಪ್ಪತ್ತು ರೂಪಾಯಿ ಉಳಿಯಿತು. ಅಷ್ಟು ಹಣವನ್ನೂ ಆತ ವಿಜಯಳ ಕೈಯಲ್ಲಿಟ್ಟ.

"ಇಷ್ಟು ಯಾಕೆ?" ಎಂದು ಕೇಳಿದಳು ವಿಜಯಾ.

"ಇಟ್ಕೊಂಡಿರು. ಇಲ್ಲಿ ಮನೆ ಖರ್ಚಿಗೆ ಬೇಕಾಗ್ಬಹುದು," ಎಂದ ವೆಂಕಟ ರಾಮಯ್ಯ.

...ಆತ ಹೋದ ಬಳಿಕ ವಿಜಯಾ ಸುನಂದೆಯ ಬಳಿಗೆ ಬಂದು, ನೋಟುಗಳಿದ್ದ ಕೈಯನ್ನು ಮುಂದಕ್ಕೆ ಚಾಚುತ್ತ ಅಂದಳು:

"ಅಕ್ಕಾ. ಇಗೋ. ಖರ್ಚಿಗೇಂತ ಅವರು ದುಡ್ಡು ಕೊಟ್ಟು ಹೋದ್ರು. ಇಟ್ಕೊ."

ಕೈಲಿದ್ದ ಪಾತ್ರೆಯನ್ನು ಕೆಳಕ್ಕಿಡಲೆಂದು ಸುನಂದಾ ಸರಕ್ಕನೆ ಬಾಗಿದಳು. ಮತ್ತೆ ತಲೆ ಎತ್ತಿದಾಗ ಕಣ್ಣುಗಳಲ್ಲೇನೂ ಇರಲಿಲ್ಲ. ಹೊಂಚುಹಾಕುತ್ತಲಿದ್ದ ಕಂಬನಿಗಳೆರಡು ತಂಗಿಗೆ ತಿಳಿಯದಂತೆ ಕೆಳಕ್ಕೆ ಧುಮುಕಿದ್ದುವು.

## ೧೬

ಒಂದು ಸಂಜೆ ಚಂಪಾ ಸುನಂದೆಯನ್ನು ಕಾಣಲು ಬಂದಳು. ಬಾಗಿಲಲ್ಲಿ ನಿಂತಿದ್ದ ಸುನಂದಾ ಗೆಳತಿಯನ್ನು ಒಳಕ್ಕೆ ಕರೆದಳು.

"ಬಾರೇ, ಬಾ. ವಿಜಯಾ ಬಂದಿದಾಳೆ. [ಕೂಗಿಡುತ್ತ ತಿರುಗಿ] ವಿಜೀ,

ಬಾ ಇಲ್ಲಿ. ಯಾರು ಬಂದಿದಾರೆ ನೋಡು."

ಮುಖ ಬಾಡಿದ್ದರೂ ಮೈ ಹೃಷ್ಟಪುಷ್ಟವಾಗಿದ್ದ ವಿಜಯಳನ್ನು ನೋಡುತ್ತ ಚಂಪಾ ಅಂದಳು:

"ಚೆನ್ನಾಗಿದೀಯಾ ವಿಜಯಾ?"

"ಇದೀನಿ ಇಷ್ಟರವಟ್ಟಿಗೆ."

ಚಂಪಾ ಅಕ್ಕನಿಗೆ ಸಹಾಧ್ಯಾಯಿನಿ, ತನಗಲ್ಲ. ಆದರೂ, ಹಿಂದೆ ಅಕ್ಕನನ್ನು ಹುಡುಕಿಕೊಂಡು ಆಕೆ ಮನೆಗೆ ಬರುತ್ತಿದ್ದುದರಿಂದ ತನಗೆ ಪರಿಚಿತಳು. ಮನೆಯು ಬೇಸರ ತುಂಬಿದ ಆಗಿನ ವಾತಾವರಣದಲ್ಲಿ ಅಂತಹ ಪರಿಚಿತೆಯ ಆಗಮನ ಸ್ವಾಗತಾರ್ಹವೇ ಆಗಿತ್ತು.

ಬಂದವಳನ್ನೂ ಸುನಂದೆಯನ್ನೂ ನಡುಮನೆಯಲ್ಲಿ ಬಿಟ್ಟು, ವಿಜಯಾ ಕಾಫಿ ಮಾಡಲು ಒಳಕ್ಕೆ ತೆರಳಿದಳು.

ಯಾರು ಬಂದರೆಂದು ಕೊಠಡಿಯ ಬಾಗಿಲ ಮರೆಯಿಂದ ಇಣಿಕಿ ನೋಡಿದ ಸರಸ್ವತಿಯನ್ನು ಸುನಂದಾ ಕರೆದಳು:

"ಬಾರೇ. ನಿಮ್ಮತ್ತೆ ಬಂದಿದಾಳೆ. ಅಷ್ಟರಲ್ಲೇ ಮರೆತ್ಬಿಟ್ಟಿಯಾ?"

ಒಂದು ನಿಮಿಷದ ಅಳುಕು. ಬಳಿಕ ಗೆಳೆತನ.

ಚಂಪಾ ಹೇಳಿದಳು:

"ಮೊನ್ನೆಯೇ ಬರಬೇಕೂಂತಿದ್ದೆ, ಸುನಂದಾ. ತಿಂಗಳ ಸಂಕಟ. ಹೊರಡೋ ಕಾಗಲಿಲ್ಲ...ನಾನು ಹಿಂದೆ ಬರ್ತಿದ್ದಾಗಲೆಲ್ಲ ನಿಮ್ಮಮ್ಮ ನನಗೆ ಎಷ್ಟೊಂದು ಸಲ ತಿಂಡಿ ಕೊಟ್ಟಿದ್ರು, ಗೊತ್ತೆ?"

ತಡವಾದರೇನಂತೆ? ಸಹಾನುಭೂತಿಯ ಕಂಬನಿ ಮಿಡಿಯಲು ಈಗಲೂ ಚಂಪಾ ಸಿದ್ಧವಾಗಿಯೇ ಇದ್ದಳು.

ಆದರೆ ಸುನಂದೆಯ ಮಾತು ಆಕೆಯನ್ನು ಆಶ್ಚರ್ಯಪಡಿಸಿತು.

"ಇರಲಿ ಬಿಡು, ಚಂಪಾ. ಸದ್ಯಃ ನೀನೂ ಅಳಬೇಡ. ನನಗಂತೂ ಕಣ್ಣೀರು ಸುರಿಸಿ ಸಾಕಾಗಿದೆ."

ಹಾಗೆ ಆಶ್ಚರ್ಯವೆನಿಸಿದುದು ಕ್ಷಣ ಕಾಲ ಮಾತ್ರ. ಅದರ ಬದಲು, ಸುನಂದೆಯ ಮಾತಿನ ಹಿಂದಿನ ನೋವು ಆಕೆಗೆ ಮನವರಿಕೆಯಾಯಿತು; ಮರುಕ ಹುಟ್ಟಿತು.

ಚಂಪಾ ಮೌನ ತಳೆದುದನ್ನು ಕಂಡು, ತಾನು ಒರಟಾಗಿ ಆಡಿದೆನೇನೋ ಎಂದು ಸಂಶಯಪಟ್ಟು, ಸುನಂದಾ ಬೇಗನೆ ಬೇರೆ ಮಾತು ತೆಗೆದಳು:

"ಕಾಲೇಜಿಗೆ ಸೇರ್ಕೊಂಡಿಯಾ?"

"ಹೂಂ ಕಣೇ."

"ಅಂತೂ ಮನೇಲಿ ಒಪ್ಪಿದ್ರು, ಅಲ್ವೆ?"

"ಒಪ್ಪಿಸೋದು ಬಹಳ ಕಷ್ಟವಾಯ್ತು. ಅಂತೂ ಸೇರ್ಕೊಂಡೆ."

ಅತ್ತೆಯ ಬಳಿ ನಿಂತು ತನ್ನನ್ನೇ ನೋಡುತಿದ್ದ ಸರಸ್ವತಿಯನ್ನು ಸುನಂದಾ ಕರೆದುಕೊಂಡಳು. ಮಗುವಿನ ಬೆನ್ನ ಹಿಂದಿನಿಂದ ತಾಯಿಯ ನಿಟ್ಟುಸಿರು ಸದ್ದಿಲ್ಲದೆ ಹೊರಟಿತು.

"ನನಗೂ ಓದಬೇಕೂಂತ ಆಸೆ. ಆದರೆ ಅದಕ್ಕೂ ಪುಣ್ಯ ಮಾಡಿರ್ಬೇಕು, ಅಲ್ವೆ?"

ಬೆಂಗಳೂರಿಗೆ ಹೊರಟುದಕ್ಕೆ ಮುಂಚೆ ಸುನಂದೆಯನ್ನು ಚಂಪಾ ಕಂಡಿರಲಿಲ್ಲ. ಅನಂತರ ಒಮ್ಮೆ ಬಂದಿದ್ದಳಾದರೂ ಸುನಂದೆ ತಾಯಿಯ ಆರೈಕೆಯಲ್ಲಿ ನಿರತಳಾಗಿದ್ದುದರಿಂದ ಹೆಚ್ಚು ಮಾತನಾಡುವುದು ಸಾಧ್ಯವಾಗಿರಲಿಲ್ಲ. ಈಗ ಸುನಂದೆ ಆಡಿದ ಮಾತು, ನೇರವಾಗಿ ಆಕೆಯ ಸುಖದುಃಖದ ಪ್ರಶ್ನೆಗೇ ಗೆಳತಿಯನ್ನು ಒಯ್ದಿತು.

"ಯಾಕೆ ಸುನಂದಾ, ಎಲ್ಲಾ ರೀತೀಲೂ ಪ್ರಯತ್ನ ಮಾಡಿದ್ದಾಯ್ತೆ?"

"ಆಯ್ತಮ್ಮಾ ಆಯ್ತು."

"ಏನ್ಹೇಳ್ತಾರೆ?"

"ಬಾವಿಗೆ ಬಿದ್ದು ಸತ್ಹೋಗು, ಅಂತ."

ಚಂಪಾ, ತಾನು ಕೇಳಿದ್ದೊಂದು ಕಿಂವದಂತಿಯ ವಿಷಯ ಪ್ರಸ್ತಾಪಿಸಿದಳು.

"ಆತ ಎರಡ್ನೆ ಮದುವೆ ಮಾಡ್ಕೋತಾರಂತೆ, ಹೌದೆ?"

"ಹಾಗೂ ಸುದ್ದಿ ಹಬ್ಬಿದೆಯೇನು?"

"ಹಾಗೇಂತ ನಮ್ಮಪ್ಪನಿಗೆ ಯಾರೋ ಹೇಳಿದರಂತೆ."

ಸುನಂದೆ ನಕ್ಕಳು.

"ಇಲ್ಲ ಚಂಪಾ, ಹೊಸ ಕಾನೂನು ಬಂದ್ಬಿಟ್ಟಿದೆ. ನಾನು ಹೀಗೇ ಇರೋವರೆಗೂ ಎರಡ್ನೇ ಮದುವೆ ಆತ ಮಾಡ್ಕೊಳ್ಳೋ ಹಾಗಿಲ್ಲ, ಕಾನೂನು ವಿಷಯ ಹಾಗಿರ್ಲಿ. ಆತ ಇನ್ನು ಯಾವತ್ತೂ ಮದುವೆ ಮಾಡ್ಕೊಳ್ಳೋದೇ ಇಲ್ಲ ಅನಿಸುತ್ತೆ."

"ಯಾವ ಆಧಾರದ ಮೇಲೆ ಹೇಳ್ತೀಯಾ ಹಾಗೆ?"

"ಆತನ ಮನಸ್ನಲ್ಲಿರೋದು ನನಗೆ ಗೊತ್ತು ಚಂಪಾ. ಹೆಂಗಸು ತನ್ನ ಸೂಳೆಯಾಗಿರೋದು ಆತನಿಗೆ ಒಪ್ಪಿಗೆ. ಹೆಂಡತಿಯಾಗಿ ಮಾತ್ರ ಯಾರೂ ಇರಕೂಡದು, ಅಷ್ಟೆ."

ಆ ಮಾತನ್ನು ಕೇಳಿ ಗೆಳತಿಯ ಮೈ ಜುಮ್ಮೆಂದಿತು.

"ಇರಬಹುದಮ್ಮಾ. ನನಗೆ ಅದೆಲ್ಲಾ ಹ್ಯಾಗೆ ತಿಳೀಬೇಕು?"

ಸುನಂದಾ ಸ್ನೇಹಿತೆಯನ್ನೆ ದಿಟ್ಟಿಸಿದಳು, ತನಗಿಂತ ವಯಸ್ಸಿನಲ್ಲಿ ಒಂದೇ ವರ್ಷ ಚಿಕ್ಕವಳು. ಆದರೂ ಇನ್ನೂ ಎಳೇ ಹುಡುಗಿಯ ಹಾಗಿದ್ದಾಳೆ. ಈಕೆಗೂ ಮದುವೆಯಾಗಿದೆ ಎಂದು ಯಾರಾದರೂ ಹೇಳಬೇಕೇ ಹೊರತು—

ಸುನಂದೆ ಸುಮ್ಮನಾದಳೆಂದು ಚಂಪಾ ತಾನಾಗಿಯೇ ಕೇಳಿದಳು:

"ಇನ್ನೇನು ಮಾಡ್ಬೇಕು ಅಂತಾರೆ, ನಿಮ್ಮಪ್ಪ?"

"ಪಾಪ! ಅವರೇನು ಹೇಳ್ತಾರೆ? ಯಾರು ಏನು ಹೇಳೋದು ಸಾಧ್ಯ?"

ವಿಜಯಾ ಕಾಫಿಯ ಲೋಟಗಳೊಡನೆ ಬಂದಳು. ಬರಿಯ ಕಾಫಿ ಕುಡಿದು ಅಭ್ಯಾಸವಿಲ್ಲದ ಸರಸ್ವತಿ "ಬಿಸ್ಕತ್ತು" ಎಂದಳು. ಒಳಗಿನ ಡಬ್ಬದಿಂದ ಮೂರು ಬಿಸ್ಕತ್ತುಗಳು ಹೊರಬಂದವು. ವಿಜಯಾ ಒಂದನ್ನು ಸರಸ್ವತಿಗೆ ಕೊಟ್ಟು, ಉಳಿದೆರಡನ್ನು ಚಂಪಾಳ ಮುಂದೆ ತಟ್ಟೆಯಲ್ಲಿರಿಸಿದಳು.

"ನನಗ್ಯಾತಕ್ಕೆ? ನಾನೇನು ಮಗುವೆ?" ಎಂದು ಚಂಪಾ ಆಕ್ಷೇಪಿಸಿದಳು. ಆಕೆ ಬಿಸ್ಕತ್ತು ಮುಟ್ಟಲಿಲ್ಲ.

ವಿಜಯಳ ಕಡೆ ತಿರುಗಿ ಚಂಪಾ ಕೇಳಿದಳು:

"ಇನ್ನೆಷ್ಟು ದಿನ ಇರ್ತೀಯೆ?"

"ಗೊತ್ತಿಲ್ಲಮ್ಮ."

"ಕರಕೊಂಡು ಹೋಗೋಕೆ ಬರ್ತಾರಾ?"

ಲಜ್ಜೆಯ ನಸುಗೆಂಪು ಬೇಡ ಬೇಡವೆಂದರೂ ವಿಜಯಾಳ ಮುಖವನ್ನು ಅಲಂಕರಿಸಿತು.

"ಬರಬಹುದೂಂತ ತೋರುತ್ತೆ."

"ವಿಜಯಾ ವಾಪಸು ಹೋಗೋಕ್ಮುಂಚೆ ಇಬ್ಬರೂ ನಮ್ಮ ಮನೆಗೆ ಬರ್ತೀರಾ ಸುನಂದಾ?"

ಬರಲೇಬೇಕು—ಎಂದು ಆಗ್ರಹದಿಂದ ಸೂಚಿಸುವ ಧ್ವನಿ ಇತ್ತು ಆ ಪ್ರಶ್ನೆಯಲ್ಲಿ.

ತಂಗಿಯ ಮುಖ ನೋಡಿ ಸುನಂದಾ ಉತ್ತರವಿತ್ತಳು:

"ಆಗಲಿ."

ಆಮೇಲೆಯೂ ಮಾತನಾಡುತ್ತ ಸ್ವಲ್ಪ ಹೊತ್ತಿದ್ದು ಚಂಪಾ ಹೊರಟು ಹೋದಳು.

...ಮಾರನೆಯ ದಿನ ತಂಗಿ ಅಕ್ಕನನ್ನು ಕೇಳಿದಳು:

"ರಾಧಮ್ಮನಿಗೆ ಕಾಗದ ಬರೆಯಲ್ವಾ ಅಕ್ಕಾ?"

"ಬರೀತೀನಿ."

"ಬರೀತೀನಿ ಅಂತ ಮೊನ್ನೆಯಿಂದಲೂ ಹೇಳ್ತಾನೇ ಇದೀಯ. ಮನೆ ವಿಷಯ ಅವರಿಗೆಲ್ಲ ತಿಳಿಸೋದು ಬೇಡ್ವೆ? ಏನು ಅಂದ್ಕೋತಾರೆ?"

"ಇವತ್ತು ಯಾಕೋ ಮನಸ್ಸು ಸರಿಯಾಗಿಲ್ಲ ವಿಜಯಾ. ನಾಳೆ ಬರೀತೀನಿ."

"ನಿನ್ನೆಯೂ ಹೀಗೇ ಹೇಳಿದ್ದೆ."

"ಹೌದೇನು?"

"ಇದೆಂಥಾ ಸೋಮಾರಿತನ? ನನಗೂ ಕೂಡಾ ಇದೇ ರೀತಿ ಇವತ್ತು ನಾಳೆ

ಅಂತ ಕಾಗದ ಬರೀದೆ ದಿನ ತಳ್ಳಿದೆ–ಅಲ್ಲ?"

"ಅಪ್ಪ ಪೆನ್ನು ಬಿಟ್ಟುಹೋಗಿದಾರೋ ಇಲ್ವೋ, ನೋಡು ವಿಜೀ–ಈಗಲೇ ಬರೆದ್ಬಿಡೋಣ."

ಪೆನ್ನಿತ್ತು.

"ಕಾಗದಾನೂ ತರಲಾ?" ಎಂದು ವಿಜಯಾ ಕೇಳಿದಳು.

"ಹೂಂ."

ಅದು ರಾಧಮ್ಮ–ಕುಸುಮೆಯರಿಗೆ ಜಂಟಿ ಕಾಗದ. ಸುನಂದೆಯಿಂದ ತಾಯಿಯ ಮರಣವನ್ನು ಕುರಿತು ಚುಟುಕು ವಾರ್ತೆ.

"ಆಗೋಯ್ತೆ ಅಕ್ಕ?"

"ಹೂಂ."

"ಇಬ್ಬರಿಗೂ ನನ್ನ ನಮಸ್ಕಾರ ತಿಳಿಸು."

ಆ ಒಂದು ಗೆರೆಯನ್ನೂ ಸುನಂದಾ ಬರೆದಳು.

"ಇಷ್ಟಕ್ಕೆ ಕಾರ್ಡೇ ಸಾಕಾಗಿತ್ತು," ಎಂದು ವಿಜಯಾ ನಕ್ಕಳು.

"ಆಗ್಩ೇ ಮಿತವ್ಯಯ ಕಲಿತ್ಕೊಂಡಿದೀಯಾ! ಹುಂ! ಪೋಸ್ಟಾಫೀಸಿಗೆ ಹೋದಾಗ ಒಂದು ನಾಲ್ಕು ಇನ್‌ಲೆಂಡ್ ಲೆಟರಾದರೂ ತಗೊಂಡು ಬಾ."

ವಿಜಯಳ ಮುಖವನ್ನು ನೋಡುತ್ತ ಥಟ್ಟನೆ ಏನೋ ಹೊಳೆದವಳಂತೆ, ಸುನಂದಾ ಮತ್ತೂ ಅಂದಳು:

"ನೀನು ಶಿವಮೊಗ್ಗೆಗೆ ಬರೆಯಲ್ವಾ? ಇನ್ನೂ ಬೇಕಾದಷ್ಟು ಹೊತ್ತಿದೆ. ಬರೆದ್ಬಿಡು."

ವಿಜಯಾ ಒಲ್ಲೆ ಎನ್ನಲಿಲ್ಲ. ಗಂಡನಿಗೆ ಬರೆಯುವುದು ಮನಸ್ಸಿನಲ್ಲಿದ್ದೇ, ಈ ದಿನ ತಂಗಿ ಕಾಗದ ಬರೆಯುವ ಪ್ರಸ್ತಾಪ ಮಾಡಿದಳೆಂದು ಸುನಂದೆಗೆ ಈಗ ಅನಿಸಿತು. ಎಂಥ ಬೆಪ್ಪು ತಾನು! ತನಗಿದು ಮೊದಲೇ ಹೊಳೆಯಬಾರದಾಗಿತ್ತೆ?—ಎಂದು ತನ್ನನ್ನು ತಾನೇ ಸುನಂದಾ ಟೀಕಿಸಿಕೊಂಡಳು.

ವಿಜಯಾ ಕಾಗದ ಬರೆಯುತ್ತಿದ್ದಂತೆ ಸುನಂದೆ ಮನಸ್ಸಿನಲ್ಲೆ ಎಣಿಸಿಕೊಂಡಳು: ತಾಯಿಯ ಮರಣದ ದುಃಖವನ್ನು ವಿಜಯಾ ಬೇಗನೆ ಮರೆತು ಬಿಡುತ್ತಾಳೆ. ಗಂಡನ ಸಾನ್ನಿಧ್ಯದಲ್ಲಿ ಹಾಗೆ ಮರೆಯುವುದು ಸಾಧ್ಯ. ಪ್ರೀತಿಯ ತಾಯಿಯೊಬ್ಬಳು ಇದ್ದಳೆಂಬ ನೆನಪು ಆಗಾಗ್ಗೆ ಆಗುವುದೇ ಹೊರತು ಆಕೆಗೆ ಹೆಚ್ಚು ವ್ಯಥೆಯಾಗದು....

ಸುನಂದಾ ಕೊಠಡಿಗೆ ಹೋಗಿ, ಕನ್ನಡಿಯನ್ನು ಕಿಟಕಿಯ ದಂಡೆಗೆ ಸಿಲುಕಿಸಿ, ಹೆರಳು ಹಾಕಿಕೊಳ್ಳತೊಡಗಿದಳು. ಕಪೋಲಗಳು ಬತ್ತಿದ್ದುವು. ಕಣ್ಣುಗಳ ಕೆಳಗೆ ಅರ್ಧ ವೃತ್ತದಲ್ಲಿ ಕರಿದಾಗಿದ್ದ ಭಾಗ. ಸೊರಗಿ ನೀಳವಾಗಿದ್ದ ಕೊರಳು.

ಇತ್ತೀಚೆಗೆ ಎಡ ಕಿವಿಯ ಮೇಲ್ಗಡೆ ಬಿಳಿಯ ಕೂದಲೊಂದು ಕಾಣಲು ಸಿಕ್ಕಿತು. ಆವರೆಗೆ, ಬಾಚಿಕೊಂಡಾಗಲೆಲ್ಲ ಕರಿ ಕೂದಲುಗಳ ನಡುವೆ ಮರೆಯಾಗುತ್ತಿತ್ತು. ಅದು

ಅಲ್ಲೇ ಇದೆಯೇ ಏನೆಂದು ಈ ದಿನವೂ ಸುನಂದಾ ನೋಡಿದಳು. ಇತ್ತು. ಆದರೆ ಅದನ್ನು ಹುಡುಕಿದಾಗ, ನರೆತಿದ್ದ ಇನ್ನೊಂದು ಕೂದಲು ಕಾಣಲು ದೊರಕಿತು. ಸುನಂದಾ ಅದನ್ನು ಬೇರ್ಪಡಿಸಿ ಮುಖದೆದುರು ತಂದು ಹಿಡಿದಳು. ತನ್ನದೇ ಇನ್ನೊಂದು ನರೆಗೂದಲು! ವಯಸ್ಸು ಇಪ್ಪತ್ತ ನಾಲ್ಕೂ ಇಲ್ಲ ಇನ್ನೂ—ಅಷ್ಟರಲ್ಲೇ ಬಿಳಿ ಕೂದಲು!

ಸುನಂದೆಗೆ ನಗು ಬಂತು. ಆ ಎರಡು ಕೂದಲುಗಳನ್ನೂ ಆಕೆ ಹಾಗೆಯೇ ಇರ ಗೊಟ್ಟಳು. ಹೀಗೆಯೇ ಬೆಳ್ಳಗಾಗುತ್ತ ಬಂದರೆ ಇನ್ನು ಒಂದೆರಡು ವರ್ಷಗಳಲ್ಲೇ ಬೆಳ್ಳಿ ಕೂದಲಿನ ವಯೋವೃದ್ಧೆಯಾಗಬಹುದು ತಾನು! ಈ ಸಾರೆ ತನ್ನ ಹೆರಳು ಹಾಕಲು ವಿಜಯಳಿಗೆ ಆಸ್ಪದ ಕೊಡದಿದ್ದುದೇ ಮೇಲಾಯಿತು. ನರೆಗೂದಲನ್ನು ಆಕೆ ನೋಡಿದಳೆಂದರೆ ಕಿತ್ತು ತೆಗೆಯುವುದು ಖಂಡಿತ...

ಕನ್ನಡಿಯಲ್ಲಿ ಮೂಡಿದ್ದ ತನ್ನ ಮುಖದ ಪ್ರತಿಬಿಂಬ....ಅದು ಹಿಂದಿನ ಸೌಂದ ರ್ಯದ ಛಾಯೆ ಮಾತ್ರ. ಈ ರೀತಿಯೇ ಇದ್ದರಾಯಿತು; ಕೊಳ್ಳೆ ಹೋದುದೇನು?—ಎಂದುಕೊಂಡಳು ಸುನಂದಾ. ತನ್ನ ಸೌಂದರ್ಯವನ್ನು ನೋಡಿ ಯಾರು ಮೆಚ್ಚ ಬೇಕಾಗಿದೆ ಇನ್ನು? ಯಾರಿಗೋಸ್ಕರ ಸುಂದರಿಯಾಗಿರಬೇಕು ತಾನು?....

ತಂಗಿಯತ್ತ ನೋಡಿ, ಬರೆಯುವುದು ಮುಗಿಯುತ್ತ ಬಂತೆಂಬುದನ್ನು ಗಮನಿಸಿ, ಸುನಂದಾ ಅಂದಳು:

"ನನ್ನ ನಮಸ್ಕಾರ ತಿಳಿಸೇ."

"ಹೂಂ!"

ಬಳಿಕ ಸರಸ್ವತಿಯನ್ನು ನಡೆಸಿಕೊಂಡು ವಿಜಯಾ ಅಂಚೆಯ ಮನೆಗೆ ಹೋದಳು.

ಕೃಷ್ಣಪ್ಪನವರು ಮನೆಗೆ ಮರಳಿದುದು ತಡವಾಗಿ.

"ಎಲ್ಲಿಗೆ ಹೋಗಿದ್ದೆ ಅಪ್ಪ?" ಎಂದು ಸುನಂದಾ ಕೇಳಿದಳು.

"ಎಲ್ಲಿಗೂ ಇಲ್ಲಮ್ಮ. ಯಾರೋ ಸ್ನೇಹಿತರು ಸಿಕ್ಕಿದ್ದರು. ಹರಟೆ ಹೊಡೀತಾ ನಿಂತ್ಬಿಟ್ಟೆ."

ಹಿಂದೆ ಒಂದೆರಡು ಗಂಟೆಗಳ ಕಾಲ ಎಲ್ಲಿಯಾದರೂ ಕೆಲಸ ನೋಡಬೇಕು ಎಂದಿ ದ್ದರು ತಂದೆ. ಸುನಂದೆಗೆ ಅದು ನೆನಪಿತ್ತು. ಆದರೆ ಅನಂತರದ ಘಟನೆಗಳು, ತಾಯಿಯ ಕಾಹಿಲೆ, ಅದಕ್ಕೆಲ್ಲ ಆಸ್ಪದ ಕೊಟ್ಟಿರಲಿಲ್ಲ. ಪುನಃ ಆಲೋಚನೆ ತಂದೆಯನ್ನು ಕಾಡಬಹುದು ಎಂಬ ಶಂಕೆ ಹುಟ್ಟಿತ್ತು ಸುನಂದೆಗೆ.

ಕೃಷ್ಣಪ್ಪನವರು ಕೇಳಿದರು:

"ವಿಜಯಾ ಎಲ್ಲಿ?"

"ಅಡುಗೆ ಮನೇಲಿದಾಳೆ."

"ವೆಂಕಟರಾಮಯ್ಯನಿಂದೇನಾದರೂ ಕಾಗದ ಬಂತೆ?"

"ಇಲ್ಲ. ಇವತ್ತಷ್ಟೇ ವಿಜಯಾ ಬರೆದ್ಲು."

"ಎರಡು ವಾರ ಬಿಟ್ಕೊಂಡು ಬರ್ತೀನಿ ಅಂದಿದ್ದ, ಅಲ್ವೆ?"

"ಹೂಂ."

## ೧೭

ಮುಂದೆಯೊಂದು ದಿನ ಮಧ್ಯಾಹ್ನ ಊಟವಾದ ಬಳಿಕ, ಆಚೆಯ ಬೀದಿಯಲ್ಲಿದ್ದ ಗೆಳತಿಯೊಬ್ಬಳನ್ನು ನೋಡಿಬರಲು ವಿಜಯಾ ಹೋದಳು.

"ಬಿಸಿಲಿಗೆ ಎಲ್ಲೂ ಹೋಗ್ಬೇಡ. ಸ್ವಲ್ಪ ಹೊತ್ತು ಮಲಕೋ ಅಪ್ಪಾ", ಎಂದು ಸುನಂದಾ ತಂದೆಯ ಹಾಸಿಗೆ ಹಾಸಿದಳು.

ಮಲಗಿಕೊಂಡರೂ ಕೃಷ್ಣಪ್ಪನವರಿಗೆ ನಿದ್ದೆ ಬರಲಿಲ್ಲ. ಮೈಯ ಬೆವರೊರೆಸುತ್ತಾ ಅವರೆಂದರು:

"ವಿಪರೀತ ಸೆಖೆ! ಸರಿಯಾಗಿ ಮಳೆ ಬರದೆ ಇದ್ದರೆ ಹೀಗೆಯೇ. ಸಾಯಂಕಾಲ ಜಡಿ ಮಳೆ ಸುರಿಯೋ ಹಾಗಿದೆ."

ಸುನಂದಾ ಬೀಸಣಿಕೆ ತಂದುಕೊಟ್ಟಳು. ತಂದೆ ಕೇಳಿದರು:

"ಒಳಗಿನ ಕೆಲಸವೆಲ್ಲಾ ಆಯ್ತಾ?"

"ಹೂಂ."

"ಸರಸ್ವತಿ?"

"ಇನ್ನೂ ಎದ್ದಿಲ್ಲ."

"ಸ್ವಲ್ಪ ಬಾಮ್ಮ ಇಲ್ಲಿಗೆ. ನಿನ್ನ ಹತ್ತಿರ ಮಾತಾಡ್ಬೇಕು."

ಬಹಳ ದಿನಗಳಿಂದ ಒಂಟಿಯಾಗಿ ತಂದೆಯೊಡನೆ ಮಾತನಾಡುವ ಅವಕಾಶ ಸುನಂದೆಗೆ ದೊರೆತಿರಲಿಲ್ಲ. ಈಗ ಅದು ದೊರೆತು, ತಂದೆಯೇ ಕರೆದರೆಂದು ಆಕೆಗೆ ಸಮಾಧಾನವೆನಿಸಿತು. ಆದರೆ, ಮಾತುಕತೆಯ ವಿಷಯ ಏನಿರಬಹುದೆಂದು ಊಹಿಸಿದಾಗ, ಹೃದಯದ ಬಡಿತ ತೀವ್ರವಾಯಿತು.

ತಮ್ಮ ಹಾಸಿಗೆಯ ಪಕ್ಕದಲ್ಲೆ ಗೋಡೆಗೊರಗಿ ಕುಳಿತ ಮಗಳನ್ನು ದಿಟ್ಟಿಸುತ್ತ ಕೃಷ್ಣಪ್ಪನವರೆಂದರು:

"ತುಂಬಾ ಸೊರಗಿದೀಯಲ್ಲೇ."

"ಇಲ್ಲವಪ್ಪ, ನಿನಗೆ ಹಾಗೆ ತೋರುತ್ತೆ, ಅಷ್ಟೆ."

"ಅಲ್ವೆ ಪಾಪ! ವಯಸ್ಸಾಯ್ತು—ನನ್ನ ದೃಷ್ಟಿ ಹ್ಯಾಗೆ ಸರಿಯಾಗಿರುತ್ತೆ ಹೇಳು?"

"ಇನ್ನೇನು ನೀನು ಹೇಳಿದ್ದೆಲ್ಲ ಸರೀಂತ ಒಪ್ಕೋಬೇಕೇನೊ?"

ಕೃಷ್ಣಪ್ಪನವರು ಮುಗುಳು ನಕ್ಕು ಸುಮ್ಮನಾದರು. ಪ್ರಸ್ತಾಪಿಸಬೇಕೆಂದಿದ್ದ ವಿಷಯದ ವಿಮರ್ಶೆ ಅವರೊಳಗೇ ಕೊನೆಯ ಬಾರಿಗೆ ನಡೆಯಿತು. ದಿಂಬನ್ನು ಆಧಾರವಾಗಿಟ್ಟು ಅವರು ಒರಗಿ ಕುಳಿತರು. ಹೇಗಾದರೂ ಸರಿ ಅಂತೂ ಮಾತು ಶುರು ಮಾಡಿದರಾಯ್ತು–ಎಂದು ಅವರೆಂದರು:

"ಆಮೇಲೆ ಬೆಂಗಳೂರಿನಿಂದೇನೂ ಸಮಾಚಾರ ಬರಲಿಲ್ಲ ಅಲ್ವಾ?"

ಇಲ್ಲ–ಎನ್ನುವಂತೆ ಸುನಂದಾ ತಲೆಯಾಡಿಸಿದಳು. ಆಕೆಯ ದೃಷ್ಟಿ ತಂದೆಯ ಮುಖದ ಮೇಲೆಯೇ ನೆಟ್ಟು, ಹೃದಯವನ್ನು ಹೊಕ್ಕು ಅಲ್ಲೇನಿದೆ–ಎಂದು ನೋಡ ಬಯಸಿತು.

"ಏನಾದರೂ ವಿಶೇಷ ಇದ್ದಿದ್ದರೆ ರಾಮಕೃಷ್ಣಯ್ಯ ಬರೀತಾ ಇದ್ರು."

"ಹೂಂ. ಏನೂ ಇಲ್ಲಾಂತಲೇ ಕಾಣುತ್ತೆ."

"ನಿನ್ನ ಮನಸ್ಸು ಏನು ಹೇಳುತ್ತೆ?"

"ಯಾವ ವಿಷಯದಲ್ಲಿ ಅಪ್ಪಾ?"

"ನಿನ್ನ ಗಂಡ ಸರಿಹೋಗ್ಬಹುದೂಂತ ನೀನು ಇನ್ನೂ ಏನಾದರೂ ಆಸೆ ಇಟ್ಕೊಂಡಿದೀಯಾ?"

ನಿಟ್ಟುಸಿರು ಬಿಡುತ್ತಾ ಸುನಂದಾ ಅಂದಳು:

"ನಂಗೊಂದೂ ತಿಳೀದು ಅಪ್ಪಾ. ಏನೂಂತ ಆಸೆ ಇಟ್ಕೊಳ್ಲಿ? ಯಾವ ಆಧಾರದ ಮೇಲೆ? ಅದೆಲ್ಲಾ ಯೋಚ್ನೆ ಮಾಡದೆ ಇದ್ದರೇ ಮೇಲು, ಅಲ್ವಾ?"

"ಹಾಗಲ್ಲ ಸುನಂದಾ. ಮಾಡೋ ಪ್ರಯತ್ನ ನಾವು ಕೊನೆಯವರೆಗೂ ಮಾಡ್ಬೇಡ್ವೆ?"

ತಂದೆಯ ಮನಸ್ಸಿನಲ್ಲೇನಿತ್ತೆಂಬುದು ಈಗಲೂ ಸುನಂದೆಗೆ ಗೊತ್ತಾಗಲಿಲ್ಲ.

"ಇನ್ನೂ ಮಾಡಬೇಕಾದ ಪ್ರಯತ್ನ ಯಾವುದಾದರೂ ಉಳಿದಿದೆಯೇನು?"

"ನಾಳೆ ಅವನಿಗೆ ಏನಾದರೂ ಆದರೆ ಯಾರು ಜವಾಬ್ದಾರರು?"

"ನಮಗಿಲ್ಲಿ ಏನಾದರೂ ಆದರೆ ಅದಕ್ಕೆ ಅವರ ಜವಾಬ್ದಾರಿ ಉಂಟೇನು?"

"ನಾನು ಹೇಳಿದ್ದು ನಿನಗರ್ಥವಾಗ್ಲಿಲ್ಲ ಸುನಂದಾ– ಕಾರ್ಯ ತೀರಾ ಕೆಟ್ಟು ಹೋದ್ಮೇಲೆ ಯಾವ ಪ್ರಯೋಜನವೂ ಇಲ್ಲ. ಕೆಟ್ಟ ಹವ್ಯಾಸಕ್ಕೆ ಬಿದ್ದು ಹಾಳಾದ ಮನುಷ್ಯನಿಂದ ಯಾವ ಸುಖವೂ ಇರದು."

"ಈಗ ಅವರಿನ್ನೂ ಒಳ್ಳೆಯವರಾಗೇ ಇದಾರೆ ಅಂದ್ಕೊಂಡಿಯಾ?"

"ಹಾಗಲ್ಲ. ಗಂಡಸು ಸ್ವಲ್ಪ ಕೆಟ್ಟಿದ್ದರೆ ಆತನನ್ನು ಸರಿಪಡಿಸೋದು ಸಾಧ್ಯ."

"ಏನೋಪ್ಪ, ನನಗೊಂದೂ ಅರ್ಥವಾಗೋಲ್ಲ."

ಕೃಷ್ಣಪ್ಪನವರು ಒಂದು ನಿಮಿಷ ಸುಮ್ಮನಿದ್ದು, ಬಳಿಕ ಇನ್ನೊಂದು ಎಳೆಯನ್ನು ಎತ್ತಿಕೊಂಡರು.

"ನಿನ್ನ ತಾಯಿ ತೀರಿಕೊಂಡ್ಮೇಲೆ ಈ ಮನೆ ನನಗೆ ಬೇಜಾರಾಗಿದೆ ಸುಂದಾ."

"ಸ್ವಂತದ ಮನೆ ಬಿಟ್ಟು ಹೋಗೋಕೆ ಆಗುತ್ತಾ?"

"ಇದನ್ನ ಬಾಡಿಗೆಗೆ ಕೊಟ್ಟು ನಾವು ಬೇರೆ ಮನೇಲಿರಬಹುದು."

"ಅದೇನೋ ನಿಜವೆ. ಬೇಕಾದರೆ ಹಾಗೆ ಮಾಡಿದರಾಯ್ತು."

ಅವರೆಗೂ ಸರಿಯಾಗಿಯೇ ನೆಯ್ದಿದ್ದರು. ಮುಂದೆ......ಮುಂದಿನದೇ ಸಿಕ್ಕು ಗಂಟು. ಅದನ್ನು ಸರಿಪಡಿಸಿದ ಮೇಲೆಯೇ ಅನಂತರದ ನೆಯ್ಗೆ.

"ಈ ಊರಿನಲ್ಲಿರೋ ಬದಲು ಬೆಂಗಳೂರಲ್ಲೆ ನಾವು ಯಾಕಿರಬಾರದು ಸುಂದಾ?"

ಹಾಗೆ ಕೇಳಿ, ಪ್ರತಿಕ್ರಿಯೆಗಾಗಿ ಮಗಳ ಮುಖವನ್ನು ಅವರು ಈಕ್ಷಿಸಿದರು.

ಸುನಂದೆಯು ಪಾಲಿಗೆ ಅನಿರೀಕ್ಷಿತವಾಗಿ ಬಂದಿತ್ತು ಆ ಪ್ರಶ್ನೆ. ಅವರೆಗೂ ಬೆಂಗಳೂರನ್ನು ತನ್ನ ಗಂಡನ ಊರಾಗಿ, ತನ್ನ ದಾಂಪತ್ಯ ಜೀವನ ಮಣ್ಣು ಗೂಡಿದ ಬೆಂಗಾಡಾಗಿ, ಆಕೆ ಪರಿಗಣಿಸಿದ್ದಳು. ಈಗ ಅದೇ ಊರನ್ನು ತನ್ನದಾಗಿಯೂ ಕಲ್ಪಿಸಿಕೊಳ್ಳುವುದು ವಿರೋಧಾಭಾಸವಾಗಿತ್ತು. ಇದು ಸಾಧ್ಯವೇ ಇಲ್ಲ–ಎಂಬ ಉತ್ತರ ಮನಸ್ಸಿನೊಳಗೆ ರೂಪುಗೊಂಡಿತು. ಆದರೆ ಮರು ಕ್ಷಣದಲ್ಲೆ ಬೇರೆ ವಿಚಾರಗಳು ಬಂದುವು. ಉಸಿರಾಡುವುದೇ ಕಷ್ಟವಾಗಿದ್ದ ಈಗಿನ ವಾತಾವರಣವನ್ನು ಬಿಟ್ಟು ಹೋಗುವ ಯೋಚನೆ ಅಷ್ಟೇನೂ ಅಪ್ರಿಯವಾಗಿರಲಿಲ್ಲ. ನೆರೆಹೊರೆಯವ ಕುಟುಕು ಮಾತುಗಳಿಗೆ ಕಡಿವಾಣವಾಗಿದ್ದುದು ತಾಯಿಯ ಮರಣ ಮಾತ್ರ. ಮುಂದೆ ಆ ನಾಲಿಗೆಗಳು ಮತ್ತೆ ಚುರುಕಾಗುವುದು ಖಂಡಿತ. ಈವರೆಗೂ ಕೇಳಿರುವ ಮಾತುಗಳೇನಾದರೂ ಕಡಮೆಯೆ? ಆ ಮಹಿಳಾಮಣಿಗಳ ಲೋಕಸಭೆಯಲ್ಲಿ, ಸಹಾನುಭೂತಿ ತೋರುವ ಮಹಿಳೆಯರಿಗೆ ಪ್ರಾತಿನಿಧ್ಯವಿರಲಿಲ್ಲ. ಅಲ್ಲಿದ್ದವರೆಲ್ಲ ಕುಚೋದ್ಯ ಶಿಖಾಮಣಿಗಳು ಮಾತ್ರ. ಅವರ ಚರ್ಚೆಗೆ ವಸ್ತುವಾಗದೆ ಉಳಿಯುವುದು ಎಷ್ಟೊಂದು ಸಮಾಧಾನದ ವಿಷಯ! ಗಂಡ ಎನಿಸಿಕೊಳ್ಳುವ ಮನುಷ್ಯ ಬೆಂಗಳೂರಲ್ಲಿರುವುದು ನಿಜ. ಆ ವೇದನೆ ಆಕೆಗೆ ನಿತ್ಯ ಹಸುರಾದ ಗಾಯವಾಗಬಹುದು. ಆದರೆ, ಆ ಗಾಯಕ್ಕೆ ಚಿಕಿತ್ಸೆ ಸಾಧ್ಯವಿದ್ದರೆ ಅದು ಆಗಬೇಕಾದುದು ಬೆಂಗಳೂರಲ್ಲೇ. ತಮ್ಮ ಹಿತಚಿಂತಕರಾದ ರಾಮಕೃಷ್ಣಯ್ಯನವರು, ಅವರ ಸಂಸಾರ...ತನಗೆ ಆತ್ಮೀಯರಾದ ರಾಧಮ್ಮ, ಕುಸುಮಾ...

"ಯಾಕಮ್ಮ ಸುಮ್ನಿದೀಯಾ? ನಿನಗೆ ಇಷ್ಟ ಇಲ್ವಾ?"

ಯೋಚಿಸುತ್ತ ಕುಳಿತಿದ್ದ ಸುನಂದಾ ಎಚ್ಚರಗೊಂಡಳು. ಸುಮ್ಮನಿರುವುದು ಸಾಧ್ಯವಿರಲಿಲ್ಲ. ತಂದೆಯ ಪ್ರಶ್ನೆಗೆ ಆಕೆ ಉತ್ತರ ಕೊಡಬೇಕು.

"ಅದೇ ವಿಷಯ ಯೋಚಿಸ್ತಿದ್ದೆ–ಹೋಗೋದರಲ್ಲಿ ತಪ್ಪೇನು, ಅಂತ?"

ಸಂತೃಪ್ತಿಯ ಮುಗುಳು ನಗೆಯೊಂದು ಕೃಷ್ಣಪ್ಪನವರ ಮುಖದ ಮೇಲೆ ಮೂಡಿತು.

"ನಾವು ಬೆಂಗಳೂರಲ್ಲಿರೋದೇ ಎಲ್ಲಾ ರೀತಿಯಿಂದಲೂ ಒಳ್ಳೇದು ಸುಂದಾ.

ಕಷ್ಟ ಕಾಲದಲ್ಲಿ ಸಹಾಯವಾಗುವಂಥ ನಾಲ್ಕು ಜನ ಇರೋ ಊರು. ನಮಗೆ ಬೇರೆ ಯಾರಿದಾರೆ ಹೇಳು? ಈ ಇಳಿ ವಯಸ್ಸಿನಲ್ಲಿ ನಾನು ಯಾವ ದೇಶದಲ್ಲೋ ಎಲ್ಲೋ ಇರೋ ನನ್ನ ಅಣ್ಣತಮ್ಮಂದಿರನ್ನು ಹುಡುಕಿಕೊಂಡು ಹೋಗ್ಲೆ? ನನಗೆ ನೀನೇ ಊರು ಗೋಲು,–ಹೀಗೆಲ್ಲಾ ಆಗಿ ನೀನು ನನ್ನ ಸಮೀಪದಲ್ಲೇ ಇರಬೇಕು ಅನ್ನೋದು ದೇವರ ಇಚ್ಛೆಯಾಗಿತ್ತೋ ಏನೋ. ಗಂಡು ಮಕ್ಕಳಿಲ್ಲದ ನಷ್ಟವನ್ನು ನಿನ್ನನ್ನು ಕೊಡೋದರ ಮೂಲಕ ಆ ಭಗವಂತ ಭರ್ತಿ ಮಾಡಿದಾನೋ ಏನೋ."

ಕೃಷ್ಣಪ್ಪನವರ ಕಂಠದ ನರಗಳು ಬಿಗಿದುಕೊಂಡುವು. ಸ್ವರ ತತ್ತರಿಸಿತು.

"ಅಳಬೇಡ ಅಪ್ಪಾ."

"ಇಲ್ಲ ಮಗು. ಯಾಕಳ್ಲಿ? ನೀನು ಇಷ್ಟು ಧೈರ್ಯವಾಗಿರುವಾಗ ನಿನಗಿಂತ ಕಡೆಯಾದೆನೆ ನಾನು? ಇಲ್ಲ. ಅಳೋದಿಲ್ಲ. ಅತ್ತು ಆಗೋ ಲಾಭವಾದರೂ ಏನು ಹೇಳು?...ಈ ವಿಷಯ ನಿನ್ನ ಹತ್ತಿರ ಪ್ರಸ್ತಾಪಿಸಬೇಕೂಂತ ಆಕೆ ತೀರ್ಕೊಂಡ ದಿನ ದಿಂದಲೂ ನನ್ನ ಮನಸ್ನಲ್ಲಿತ್ತು. ನೀನೆಲ್ಲಿ ಒಪ್ಪದೇ ಹೋಗ್ತಿಯೋ ಅಂತ ಇಷ್ಟು ದಿವಸ ತಡೆದೆ...ಈಗ ಸಮಾಧಾನವಾಯ್ತು."

"ವಿಜೀನ ಒಂದು ಮಾತು ಕೇಳೋದು ಬೇಡವಾ?"

"ಕೇಳ್ಬೇಕಮ್ಮ. ಈ ಮನೇನ ಬಾಡಿಗೆಗೆ ಕೊಟ್ಟು ಬೇರೆ ಊರಿಗೆ ಹೋಗೋದು ಸುಲಭವೂ ಅಲ್ಲ. ನೀನು ಯೋಚ್ನೆ ಮಾಡಿದೀಯೋ ಇಲ್ಲವೊ, ಮನೇನ ಮಾರ ಬೇಕಾಗುತ್ತೆ."

ಆ ಮಾತು ನಿಜವಾಗಿತ್ತು....

ಸುಮ್ಮನಿದ್ದ ಮಗಳನ್ನು ನೋಡಿ ಕೃಷ್ಣಪ್ಪನವರೇ ಮುಂದುವರಿದರು:

"ಮನೆ ನಿಮಗಿಬ್ಬರಿಗೂ ಸೇರಿದ್ದು. ನೀವಿಬ್ಬರೂ ಒಪ್ಪಿದರೆ ಅದನ್ನ ಮಾರ ಬಹುದು. ಇರೋ ಸಾಲವನ್ನು ತೀರಿಸಿ ಉಳಿದ ಹಣ ನಿಮ್ಮಿಬ್ಬರಿಗೂ ಹಂಚ್ತೀನಿ. ನಿನ್ನ ಸಂಸಾರದ ವಿರಸವೂ ಸರಿಹೋದ್ಮೇಲೆ, ತೀರ್ಥಯಾತ್ರೆ ಹೊರಟ್ಬಿಡ್ತೀನಿ. ಯಾವು ದಾರೊಂದು ಪುಣ್ಯ ಸ್ಥಳದಲ್ಲಿ—"

"ಅಪ್ಪಾ!"

ಸಾಕು ನಿಲ್ಲಿಸೆಂದು ಸೂಚಿಸುವ ಸ್ವರ. ಮಗಳ ಧ್ವನಿ. ಕೃಷ್ಣಪ್ಪನವರು ಮಾತನ್ನು ಅಲ್ಲಿಗೇ ತಡೆಹಿಡಿದರು.

ಸುನಂದಾ ಕುಳಿತಲ್ಲಿಂದೆದ್ದು ಅಂದಳು:

"ಇನ್ನು ಸ್ವಲ್ಪ ದಿವಸದಲ್ಲೇ ವಿಜೀ ಗಂಡ ಬರ್ತಾರೆ. ಆಗ ಎಲ್ಲರೂ ಮಾತ ನಾಡಿ ಯಾವುದಾದರೂ ತೀರ್ಮಾನಕ್ಕೆ ಬಂದರಾಯ್ತು. ಇನ್ನು ನೀನು ಮಲಕೊ..."

ಆ ಅಧಿಕಾರವಾಣಿ ಕೃಷ್ಣಪ್ಪನವರಿಗೆ ತುಂಬಾ ಇಷ್ಟವಾಯಿತು. ಅಂತೂ ಬಹಳ ದಿನದ ಎದೆ ಭಾರ ಸ್ವಲ್ಪ ಮಟ್ಟಿಗೆ ಇಳಿದಿತ್ತು. ನಿದ್ದೆ ಬರಲಿಲ್ಲವಾದರೂ ಮೈ ಕೈ ನೀಡಿಕೊಂಡು ಕಣ್ಣು ಮುಚ್ಚಿ ಸ್ವಲ್ಪ ಹೊತ್ತು ಅವರು ವಿಶ್ರಾಂತಿ ಪಡೆದರು.

ಬಿಸಿಲು ಕಳೆದು ತಂಗಾಳಿ ಬೀಸಲು, ಕೃಷ್ಣಪ್ಪನವರೆದ್ದು ಕೋಟು ತೊಟ್ಟು ಕೊಂಡು, ಜೇಬಿನಲ್ಲಿ ಕನ್ನಡಕವಿದೆಯೇ ಎಂದು ಮುಟ್ಟಿನೋಡಿ, ಅಂಗಡಿ ಬೀದಿ ಯಲ್ಲಿದ್ದ ವಾಚನಾಲಯದ ಕಡೆಗೆ ಹೊರಟರು. ಅಂಗಳಕ್ಕಿಳಿಯುತ್ತಿದ್ದಂತೆ ಅವರು ಕೇಳಿದರು:

"ವಿಜಯಾ ಬರ್ಲಿಲ್ವಾ ಇನ್ನೂ?"

"ಇಲ್ಲ...ಮೋಡ ಕವಿದಿದೆ. ಮಳೆ ಬರೋ ಹಾಗಿದೆ. ನೀನು ಸ್ವಲ್ಪ ಬೇಗ್ನೆ ಮನೆಗೆ ಬಂದ್ಬಿಡಪ್ಪ," ಎಂದಳು ಸುನಂದಾ.

—ಆದರೆ, ಮಳೆ ಹನಿ ಬೀಳುತ್ತಿದ್ದಂತೆ ಮನೆಗೆ ಬಂದವಳು ವಿಜಯಾ ಮಾತ್ರ.

"ಹರಟೆ ಜೋರಾಗಿತ್ತೂಂತ ಕಾಣುತ್ತೆ!" ಎಂದಳು ಅಕ್ಕ, ತಂಗಿಯನ್ನು ನೋಡಿ ಮುಗುಳು ನಗುತ್ತ.

"ಬೇಜಾರು. ಥೂ! ಇಲ್ಲಿ ಹೊತ್ತು ಹೋಗಲ್ಲ ಅಂತ ಅಲ್ಲಿಗೆ ಹೋದ್ರೆ-ಥೂ! ಥೂ! ಒಬ್ಬರಿಗಿಂತ ಒಬ್ಬರು. ಅದೇನ್ಮಾತೊ!"

ವಸ್ತುವೊಂದು ಮಳೆಯ ರಕ್ಷಣೆಗಾಗಿ ತಂಗಿಯ ಕಂಕುಳು ಸೇರಿದ್ದಂತೆ ಕಂಡಿತು.

"ಏನು ತಂದಿದೀಯಾ?"

"ಯಾವುದೋ ಒಂದೆರಡು ಕಥೆ ಪುಸ್ತಕ ಅಕ್ಕ. ಊರೆಲ್ಲಾ ಓದ್ಬಿಟ್ಟಿದಾರೆ, ಚೆನ್ನಾಗಿದೆ-ಅಂದ್ರು."

ತಂಗಿ ಕೊಟ್ಟ ಪುಸ್ತಕಗಳನ್ನು ಸುನಂದೆಯೂ ನೋಡಿದಳು.

ಸರಸ್ವತಿ ಒಳಗಿಂದ ಬಂದು, ತಾನು ಬೊಂಬೆ ನೋಡಬೇಕೆಂದು ಹಟ ಹಿಡಿದಳು.

"ಹರಿದೀಯೇ ಎಲ್ಲಾದರೂ. ಆ ಮನೆಯೋರು ತಿಥಿ ಮಾಡ್ಬಿಡ್ತಾರೆ ಆಮೇಲೆ!" ಎಂದಳು ವಿಜಯಾ.

....ಗುಡುಗು ಗುಡುಗಿತು. ಮಿಂಚು ಮಿಂಚಿತು. ಧಾರಾಕಾರವಾಗಿ ಮಳೆ ಸುರಿಯಿತು.

"ಮಲೆನಾಡಿನ ಮಳೆ ಹ್ಯಾಗಿರುತ್ತೇಂತ! ನಾವು ಹೊರಡೋಕ್ಮುಂಚೆ ಒಂದು ಮಳೆಯಷ್ಟೆ ಬಂದಿತ್ತು. ಅಬ್ಬ ನೆನೆಸಿಕೊಂಡರೆ ಭಯವಾಗುತ್ತೆ. ಇನ್ನೂ ಸರಿಯಾದ ಮಳೆ ಶುರುವಾಗೇ ಇಲ್ಲ ಅಂತಾ ಇದ್ರು."

ಸುನಂದಾ ಏನನ್ನೂ ಹೇಳಲಿಲ್ಲ. ಮುಗುಳುನಗೆಯೊಂದೆ ಆಕೆಯ ಉತ್ತರ ವಾಯಿತು... ಆಕೆಯನ್ನು ಬಾಧಿಸುತಿದ್ದುದು, ತಂದೆ ಮಳೆಯಲ್ಲಿ ನೆನೆಯುವನೆಂಬ ಕಾತರ.

ಗಂಡನ ಊರಿನ ಬಳಿಕ ತಂದೆಯ ಯೋಚನೆ ಬಂದು ವಿಜಯಾ ಅಂದಳು:

"ಅಪ್ಪಾ ಆಗ್ಲೇ ಹೋದನಾ?"

"ನೀನು ಬರೋಕೆ ಸ್ವಲ್ಪ ಮುಂಚೆ ಹೋದ."

"ಕೊಡೆ ತಗೊಂಡು ಹೋಗಿದಾನ?"

"ಅದೆಲ್ಲಾ ಹರಿದಿದೆ. ರಿಪೇರಿ ಮಾಡಿಸೇ ಇಲ್ಲ."

"ಹಾಗಾದರೆ ಅಪ್ಪ ಮಳೇಲಿ ಸಿಕ್ಹಾಕ್ಕೊಳ್ತಾನೆ."

ಸುನಂದೆಗೆ ಅದು ಗೊತ್ತಿತ್ತು.

ಬೇಸರದಿಂದ ವಿಜಯಾ ರಾಗವೆಳೆದಳು:

"ಎಷ್ಟು ಹೊತ್ತಿಗೋ ಈ ಮಳೆ ಇನ್ನು ನಿಲ್ಲೋದು?"

ಮಳೆಯ ದೆಸೆಯಿಂದ ಬೇಗನೆ ಕತ್ತಲಾಗಿತ್ತು. ಸುನಂದಾ ನಡುಮನೆಯ ದೀಪ ಹಾಕಿದಳು.

ಹೊರಗಿನ ಜಿರೋ ಮಳೆಯ ಸದ್ದನ್ನು ಮೀರಿಸಿ ಮಾತು ಕೇಳಿಸುವಂತೆ, ಸ್ವಲ್ಪ ಗಟ್ಟಿಯಾಗಿ ಒಮ್ಮೆಲೆ ಸುನಂದಾ ಹೇಳಿದಳು:

"ಈ ಊರು ಬಿಟ್ಬಿಟ್ಟು ನಾವು ಬೆಂಗಳೂರಿಗೇ ಹೋಗೋದು ವಾಸೀಂತ ಅಪ್ಪ ಹೇಳ್ತಿದ್ದ."

ಒಂದು ಕ್ಷಣ ವಿಜಯಾ ಏನನ್ನೂ ಹೇಳಲಿಲ್ಲ. ಆ ಬಳಿಕ ಆಕೆ ಅಂದಳು:

"ಇಲ್ಲಿಗಿಂತ ಬೆಂಗಳೂರೇ ಶಿವಮೊಗ್ಗೆಗೆ ಸಮೀಪ, ಅಲ್ವಾ?"

"ಹೆಚ್ಚು ಕಡಮೆ ಎರಡೂ ಒಂದೇ ದೂರ."

ವಿಜಯಾ ಮತ್ತೊಮ್ಮೆ ಸುಮ್ಮನಿದ್ದು ಕೇಳಿದಳು:

"ಯಾವತ್ತು ಹೊರಡೋದು?"

ಅಕ್ಕನಿಗೆ ನಗು ಬಂತು.

"ಹುಚ್ಚಿ! ನಿನ್ನ ಕೇಳದೇನೇ ಅದೆಲ್ಲಾ ತೀರ್ಮಾನವಾಗುತ್ತಾ? ನಿನ್ನ ಗಂಡ ಬರಲೀಂತ ಅಪ್ಪ ಕಾದಿದಾರೆ. ಅವರ ಒಪ್ಪಿಗೇನೂ ಪಡೆಯೋದು ಬೇಡ್ವಾ?"

ತನ್ನ ಗಂಡನ ವಿಷಯದಲ್ಲಿ ತಂದೆಯೂ ಅಕ್ಕನೂ ತೋರಿಸುತ್ತಿದ್ದ ಗೌರವವನ್ನು ಕಂಡು ಹೆಮ್ಮೆ ಎನಿಸಿತು.

...ಅದಾದ ಕೆಲವು ದಿನಗಳಲ್ಲಿ ವೆಂಕಟರಾಮಯ್ಯ ಬಂದ.

"ಎಷ್ಟು ದಿವಸದ ರಜಾ?" ಎಂದು ವಿಜಯಳೇ ಮೊದಲು ವಿಚಾರಿಸಿದಳು.

"ಒಂದು ವಾರ," ಎಂದ ವೆಂಕಟರಾಮಯ್ಯ ಗಟ್ಟಿಯಾಗಿ. ಬಳಿಕ "ಸಾಕೆ?" ಎಂದು ಮೆಲ್ಲನೆ ಕೇಳಿದ, ಪ್ರಶ್ನೆ ತನ್ನ ಹೆಂಡತಿಯ ಕಿವಿಗೆ ಮಾತ್ರ ಬೀಳುವಂತೆ.

ವಿಜಯಾ ಶಿವಮೊಗ್ಗಾದ ವಿಷಯ ಕೇಳುವುದರಲ್ಲೆ ಆಸಕ್ತಳಾದಳು. ತಾನು ಇಲ್ಲದೇ ಇದ್ದಾಗ ಆತ ಒಂಟಿಯಾಗಿ—ಅಂದರೆ, ಬಳಿಯಲ್ಲಿ ತಾನಿಲ್ಲದೆ—ಹೇಗೆ ದಿನ ಕಳೆದನೆಂದು ತಿಳಿಯುವ ಆತುರ ಅವಳಿಗೆ.

ಕೊಠಡಿಯಲ್ಲಿ ಒಬ್ಬನನ್ನೇ ನೋಡುತ್ತಾ ಆಕೆ ಕೇಳಿದಳು:

"ನಿಮಗೆ ನನ್ನ ನೆನಪಾಗ್ತಿತ್ತಾ?"

ತನ್ನ ವಳ ತುಟಿಗಳು ಬೇರ್ಪಟ್ಟು ಮಾತು ಹೊರಡುತ್ತಿದ್ದ ಸೊಬಗನ್ನೆ ದಿಟ್ಟಿಸು

ತ್ತಿದ್ದ, ವೆಂಕಟರಾಮಯ್ಯ. ಆ ಪ್ರಶ್ನೆಯ ಅರ್ಥ ಆತನಿಗಾಗಲಿಲ್ಲ. ಅದೇನನ್ನೋ ತುಟಿಗಳನ್ನು ತುಟಿಗಳು ಕೇಳಿದಂತಾಯಿತು. ಇಂಥದನ್ನೇ ಎಂದು ಪ್ರಯಾಸವಿಲ್ಲದೆ ಊಹಿಸಿ, ಕೇಳಿದುದನ್ನು ಆತ ಕೊಟ್ಟ.

ಗಂಡನನ್ನು ಬಹಳ ದಿನಗಳ ಬಳಿಕ ಕಂಡ ಮೊದಲ ಸಂಭ್ರಮದಲ್ಲಿ ತಂದೆ ಆತನೊಡನೆ ಮುಖ್ಯವಾದುದೊಂದು ವಿಷಯ ಚರ್ಚಿಸಲು ಇಚ್ಛಿಸಿರುವನೆಂದು ಹೇಳುವುದನ್ನೂ ವಿಜಯಾ ಮರೆತಳು.

....ಆದರೆ ಕೃಷ್ಣಪ್ಪನವರು, ಆ ಸಂಜೆಯು ಅಳಿಯನ ಜತೆಯಲ್ಲಿ ದೂರ ನಡೆದು, ಊರ ಕೆರೆಯ ಏರಿಯ ಮೇಲೆ ಕುಳಿತು, ತನ್ನ ಹಿರಿಯ ಮಗಳಿಗೆ ಒದಗಿದ ದುರ್ಗತಿಯ ಕಥೆ ಹೇಳಿದಳು.

"ನನಗೆ ಗೊತ್ತಿದೆ. ವಿಜಯಾ ಹೇಳಿದಾಳೆ," ಎಂದ ವೆಂಕಟರಾಮಯ್ಯ.

"ಸುನಂದೆಯ ತಂದೆಯಾಗಿ ನಾನು ಅಳಿಯನಾದ ನಿಮಗೆ ಹೇಳಬೇಕಾದ್ದು ಕರ್ತವ್ಯ," ಎಂದು ಕೃಷ್ಣಪ್ಪನವರು, ಒಂದನ್ನೂ ಬಿಡಲಿಲ್ಲ.

ಮನೆ ಮಾರುವ ಮಾತು ಬಂದಾಗ ವೆಂಕಟರಾಮಯ್ಯನೆಂದ:

"ನಿಮಗೆ ಹ್ಯಾಗೆ ತೋಚುತ್ತೋ ಹಾಗ್ಮಾಡಿ."

"ಹಾಗಲ್ಲಪ್ಪ. ಇದು ನನಗಿರೋ ಒಂದೇ ಆಸ್ತಿ. ನನ್ನ ಇಬ್ಬರು ಹೆಣ್ಣು ಮಕ್ಕಳಿಗೆ ಸೇರಿದ್ದು. ಮಾರಾಟವಾದ್ಮೇಲೆ—"

"ವಿಜಯಾ ಕೈಲಿ ಈ ವಿಷಯ ಪ್ರಸ್ತಾಪಿಸಿದೀರೇನು?"

"ಇಲ್ಲ. ವಿವರ ಒಂದೂ ಆಕೆಗೆ ತಿಳೀದು."

"ಆಗಲಿ. ನಾನು ಅವಳಿಗೆ ಹೇಳ್ತೀನಿ. ಮನೆ ಮಾರಾಟಮಾಡಿ. ಆದರೆ ಹಣ ಮಾತ್ರ ನಮಗೆ ಕೊಡೋದಕ್ಕೆ ಬರಬೇಡಿ. ಅದು ಎಷ್ಟಾದರೂ ಇರಲಿ, ಅತ್ತಿಗೆಗೇ ಕೊಟ್ಬಿಡಿ."

ತಾವು ಊಹಿಸಿದ್ದುದಕ್ಕಿಂತಲೂ ಒಂದು ತೂಕ ಹೆಚ್ಚಾಗಿತ್ತು ಅಳಿಯನ ಹಿರಿಮೆ. ವೆಂಕಟರಾಮಯ್ಯನ ಮಾತು ಕೇಳಿ ಕೃಷ್ಣಪ್ಪನವರ ಗಂಟಲು ಕಟ್ಟಿತು.

"ನನಗೆ ಗಂಡು ಮಕ್ಕಳಿಲ್ಲ ವೆಂಕಟರಾಮಯ್ಯ..."

"ಒಪ್ಪೋದಾದರೆ ಮಗನ ಮೇಲಿಡಬೇಕಾದ ಪ್ರೀತಿ ವಿಶ್ವಾಸಾನ ನನ್ನ ಮೇಲಿಡಿ, ಅಳಿಯದೇವರು–ಅವರು–ಇವರು ಅಂತ ಗಾವುದ ಆಚೆಗೆ ಇಡಬೇಡಿ."

"ಅಪ್ಪಾ! ನಿನಗೆ ಮಗಳನ್ನು ಕೊಟ್ಟು ನಾನು ಧನ್ಯನಾದೆ. ಯಾವ ಘಳಿಗೇಲಿ ಭಗವಂತ ಈ ಸಂಬಂಧ ಕುದುರಿಸಿದ್ನೋ!"

"ಹಣದ ವಿಷಯ ಮಾತ್ರ ಇನ್ನು ಪ್ರಸ್ತಾಪ ಮಾಡ್ಬೇಡಿ."

"ಆಗಲಿ. ಪ್ರಸ್ತಾಪ ಮಾಡೋದಿಲ್ಲ. ಆದರೆ ಕೊನೇ ಇತ್ಯರ್ಥವನ್ನೂ ಮಾಡೋದಿಲ್ಲ. ದೇವರು ಆ ಹೊತ್ತಿನಲ್ಲಿ ಹ್ಯಾಗೆ ಬುದ್ಧಿ ಕೊಡ್ತಾನೋ ಹಾಗ್ಮಾಡ್ತೀನಿ."

ಬೆಂಗಳೂರಿಗೆ ಅತ್ತಿಗೆಯೊಡನೆ ಮಾವ ಹೊರಟು ಹೋಗುವ ವಿಷಯ ವೆಂಕಟರಾಮಯ್ಯನಿಗೆ ಒಪ್ಪಿಗೆಯಾಗಿತ್ತು. ಯಾವ ಪ್ರಯತ್ನವಿದ್ದರೂ ಅಲ್ಲಿಯೇ ಇದ್ದು

ಮಾಡುವುದು ಶ್ರೇಯಸ್ಕರ–ಎನ್ನುವುದು ಆತ ವ್ಯಕ್ತಪಡಿಸಿದ ಅಭಿಪ್ರಾಯ.

"ನಿಮಗೆ ಗೊತ್ತಿದೆಯೋ ಇಲ್ಲವೋ. ಬೆಂಗಳೂರು ನನಗೆ ಪರಿಚಯದ ಊರೇ. ನಮ್ಮ ಸೊಸೈಟಿಗೆ ಸಾಮಾನು ಕೊಂಡುಕೊಳ್ಳೋದಕ್ಕೇಂತ ಹಿಂದೆ ತಿಂಗಳಿಗೊಮ್ಮೆಯಾದರೂ ನಾನಲ್ಲಿಗೆ ಹೋಗ್ತಿದ್ದೆ."

"ಹಾಗೇನು? ಬೆಂಗಳೂರಲ್ಲಿ ಎಲ್ಲಿರ್ತಿದ್ರಿ?"

"ಸೋಮಶೇಖರ ಅಂತ ನನ್ನ ಬಾಲ್ಯ ಸ್ನೇಹಿತ ಒಬ್ಬ ಅಲ್ಲಿದಾನೆ. ಅವನ ಹುಟ್ಟೂರು ಶಿವಮೊಗ್ಗೆ. ಹೋದಾಗಲೆಲ್ಲ ಅವನಲ್ಲಿರೋದು ಪದ್ಧತಿ."

ಆ ಗೆಳೆಯನ ಉದ್ಯೋಗವೇನೆಂದು ಹೇಳಲಿಲ್ಲವೆಂದು ವೆಂಕಟರಾಮಯ್ಯ ಮುಂದುವರಿದ:

"ಆತ ಅಡ್ವೋಕೇಟು. ಒಳ್ಳೇ ಪ್ರಾಕ್ಟೀಸಿದೆ."

"ಹೌದೆ?" ಎಂದರು ಕೃಷ್ಣಪ್ಪನವರು. "ಸರಿ. ಇನ್ನು ಈ ಊರಿಗೆ ಬರೋ ಬದಲು ನೀವು ಬೆಂಗಳೂರಿಗೆ ಬಂದರಾಯ್ತು. ಇನ್ನೊಬ್ಬರ ಮನೇಲಿ ಯಾಕೆ? ನಿಮ್ಮ ಮನೇಲೇ ನೀವು ಉಳಕೋಬಹುದು," ಎಂದೂ ಹೇಳಿದರು.

ಮೊದಲ ಮಳೆಗೆ ಹಸುರು ಮೊಳೆತು ಕೆರೆಯ ಏರಿಯೆಲ್ಲ ಸುಂದರವಾಗಿ ತೋರುತ್ತಿತ್ತು. ದೂರದಲ್ಲಿದ್ದ ಬೆಟ್ಟದಾಚೆಗೆ, ನೋಡುತ್ತಿದ್ದವರ ಕಣ್ಣು ತಪ್ಪಿಸಿ ಧುಮುಕಲು, ಸೂರ್ಯ ಸನ್ನದ್ಧನಾಗುತ್ತಿದ್ದ. ಕೆಂಪನೆಯ ಕಿರಣಗಳು ಮೇಲೆ ಬಿದ್ದು ಕೆರೆಯ ನೀರು ರಕ್ತರಂಜಿತವಾಗಿತ್ತು.

ಆ ದೃಶ್ಯವನ್ನು ಶಾಂತನಾಗಿ ದಿಟ್ಟಿಸುತ್ತ ಕುಳಿತಿದ್ದ ಅಳಿಯನ ಮುಖವನ್ನು ಕೃಷ್ಣಪ್ಪನವರು ನೋಡಿದರು. ಸ್ವಲ್ಪ ಕಾಲದ ಹಿಂದೆ ಆಟದ ಬಯಲೊಂದರ ಅಂಚಿನಲ್ಲಿ ಬೇರೊಬ್ಬ ಅಳಿಯನ ಜೊತೆಗೆ ಕುಳಿತಿದ್ದುದು ನೆನಪಾಗಿ, ಅವರ ಕಣ್ಣು ಮಂಜಾಯಿತು.

## ೧೮

ಮನೆಯ ಮಾರಾಟ ಸುಲಭವಾಗಿರಲಿಲ್ಲ. ದುಡ್ಡು ಎಲ್ಲರ ಕೈಯಲ್ಲೂ ಬಿಗಿಯಾಗಿತ್ತು. ಆಸಕ್ತಿ ತೋರಿಸಿದ ಒಬ್ಬಿಬ್ಬರು ಬಲು ಕಡಮೆಗೆ ಕೇಳಿದರು.

ವಿಜಯಾ ಗಂಡನ ಮನೆಗೆ ಹಿಂತಿರುಗಿ ಆಗಲೆ ಮೂರು ವಾರಗಳಾಗಿದ್ದುವು. ಆದರೂ ಬೆಂಗಳೂರಿಗೆ ಮನೆ ಬದಲಾಯಿಸುವ ಯೋಜನೆ ಕೈಗೂಡಲಿಲ್ಲ.

ಒಬ್ಬಿಬ್ಬರು ಹಿತಚಿಂತಕರು ಹೇಳಿದರು:

"ಆತುರ ಪಡ್ಬೇಡಿ. ನೀವು ಆತುರ ತೋರಿಸಿದರೆ ಇನ್ನೂ ಕಡಮೆಗೆ ಕೇಳ್ತಾರೆ."

ಮಾರಾಟದ ಯತ್ನವನ್ನು ದಳ್ಳಾಳಿಗಳಿಗೆ ಒಪ್ಪಿಸಲು ಕೃಷ್ಣಪ್ಪನವರು ಮೊದಲು ಸಿದ್ಧರಿರಲಿಲ್ಲ. ಕೊನೆಗೆ ಅವರಿಗೆ ತೋರಿದ ಹಾದಿ ಅದೊಂದೇ.

ಈ ನಡುವೆ ಕೃಷ್ಣಪ್ಪನವರೊಮ್ಮೆ ಬೆಂಗಳೂರಿಗೆ ಹೋಗಿಬಂದರು. ಅವರು ಹೋದುದು, ತಮ್ಮ ತೀರ್ಮಾನವನ್ನು ಕುರಿತು ರಾಮಕೃಷ್ಣಯ್ಯನೊಡನೆ ಮಾತನಾಡಲು, ಸಣ್ಣದೊಂದು ಮನೆ ಹುಡುಕಿ ಇಡೆಂದು ಹೇಳಲು.

ಹಿಂತಿರುಗಿದ ತಂದೆಯನ್ನು ಸುನಂದಾ ಕೇಳಿದಳು:

"ರಾಧಮ್ಮನವರನ್ನು ಕಂಡಿದ್ದಿಯಾ ಅಪ್ಪ?"

"ಇಲ್ಲ ಸುನಂದಾ. ಪುರಸೊತ್ತಾಗಲಿಲ್ಲ. ಇನ್ನು ಹ್ಯಾಗೂ ಅದೇ ಊರಿಗೆ ಹೋಗ್ತೇವಲ್ಲ ನಾವು."

ಅವರು ಮತ್ತೂ ಒಂದು ಮಾತು ಸೇರಿಸಿದರು.

"ಆತ ಇನ್ನೂ ಅದೇ ಹೋಟ್ಲಲ್ಲಿದಾನೆ."

ಸುನಂದಾ ಮಾತನಾಡಲಿಲ್ಲ. ಅದು ಆವಳಿಗೆ ಮುಖ್ಯ ವಿಷಯವಾಗಿರಲಿಲ್ಲ.

"ನೀನು ಬೆಂಗಳೂರಿಗೆ ಹೋಗಿದ್ದ ಸಮಯದಲ್ಲೇ ಅಲ್ಲಿಂದ ನನಗೆ ರಾಧಮ್ಮನ ಕಾಗದ ಬಂತು. ಓದ್ತೀಯಾ?"

ಕೃಷ್ಣಪ್ಪನವರ ಹಣೆಯ ಮೇಲೆ ಮುಖದ ಮೇಲೆ ನೆರಿಗೆಗಳು ಮೂಡಿದುವು.

"ಏನು ಬರೆದಿದ್ದಾರೆ?"

"ನೀನೇ ಓದಿ ನೋಡು."

ಸುನಂದಾ ಎರಡು ಕಾಗದಗಳನ್ನು ತಂದು ತಂದೆಯ ಕೈಗೆ ಕೊಟ್ಟು ಹೇಳಿದಳು:

"ಒಂದು ರಾಧಮ್ಮನದು. ಇನ್ನೊಂದು ಕುಸುಮಾ ಬರೆದದ್ದು."

ರಾಧಮ್ಮ ಬರೆದಿದ್ದುದು, ಅವರಿಗಾದ ವಿಚಿತ್ರ ಅನುಭವದ ಕಥೆ. ಅವರು ತಮ್ಮ ಗಂಡನೊಡನೆ ಒಂದು ಸಂಜೆ, ಪುಟ್ಟಣ್ಣನನ್ನು ಕಾಣಲು ಆತನ ಆಫೀಸಿಗೆ ಹೋಗಿದ್ದರು. ಹೊರಗೆ ಕಾಯುತ್ತ ನಿಂತಿದ್ದರು. 'ಆತನನ್ನು ಕಂಡಾಗ ನನ್ನ ಹೊಟ್ಟೆಯಲ್ಲಿ ಕಿಚ್ಚಿಟ್ಟ ಹಾಗಾಯ್ತು. ನೀವು ಇಷ್ಟೊಂದು ಸೊರಗಿದೀರಿ. ಆತನೋ, ಕೊಬ್ಬಿ ಹ್ಯಾಗಿದಾರೇಂತ! ಮುಂದೆ ನಡೆದ ವಿಷಯ ಕೇಳಿ. ಆತ ಗೇಟು ದಾಟಿದ ಕೂಡಲೆ ಅಲ್ಲೆ ಇದ್ದ ನಮ್ಮ ಯಜಮಾನರು ನಮಸ್ಕಾರ ಅಂದರು: ಯಾರು ಎನ್ನುವುದು ಆತನಿಗೆ ಮೊದಲು ಗೊತ್ತಾಗಲಿಲ್ಲವೋ ಏನೋ. ಪ್ರತಿಯಾಗಿ ನಮಸ್ಕಾರ ಅಂದರು: ಅಷ್ಟರಲ್ಲಿ ಅವರ ದೃಷ್ಟಿ ಅಲ್ಲೆ ನಿಂತಿದ್ದ ನನ್ನ ಮೇಲೆ ಬಿತ್ತು ನಾನು ನಮಸ್ಕಾರ ಅಂದೆ. ಆತ ಉತ್ತರ ಕೊಡಲಿಲ್ಲ. ನನ್ನನ್ನೆ ದುರುಗುಟ್ಟಿ ನೋಡಿದ. ನಮ್ಮ ಯಜಮಾನರು, ನಿಮ್ಮ ಹತ್ತಿರ ಸ್ವಲ್ಪ ಮಾತಾಡ್ಬೇಕಾಗಿದೆ—ಎಂದರು. ಆತ ಏನು ಹೇಳಿದರು ಗೊತ್ತೆ? ನೀವು ಯಾರೋ ನನಗೆ ಗೊತ್ತಿಲ್ಲ. ನನಗೆ ನಿಮ್ಮ ಪರಿಚಯವಿಲ್ಲ. ಮಾತನಾಡೋದಕ್ಕೆ ಪುರಸೊತ್ತೂ ಇಲ್ಲ, ಹೋಗಿ—ಅಂತ ಅಷ್ಟು ಹೇಳಿ ಆತ ಹೊರಟೇ ಬಿಟ್ಟರು. ನಮಗೆ ಬಹಳ ಅವಮಾನವಾಯ್ತು. ಕೊನೆಗೆ ಮಾರ್ಕೆಟು ವರೆಗೂ ಹೋಗಿ ಸುತ್ತಾಡ್ಕೊಂಡು

ಮನೆಗೆ ಬಂದೆವು...."

ತಂದೆ ಅದನ್ನೋದಿ ಮುಗಿಸಿದುದನ್ನು ಗಮನಿಸಿದ ಸುನಂದಾ ಅಂದಳು:

"ಇನ್ನೊಂದು ಓದಿ ನೋಡಪ್ಪ. ಅದಕ್ಕಿಂತಲೂ ಸ್ವಾರಸ್ಯವಾಗಿದೆ."

ಕೃಷ್ಣಪ್ಪನವರು ನಿಟ್ಟುಸಿರು ಬಿಟ್ಟರು. ಮನಸ್ಸಿಲ್ಲದ ಮನಸ್ಸಿನಿಂದ ಇನ್ನೊಂದನ್ನು ಎತ್ತಿಕೊಂಡರು. ಇಂಗ್ಲಿಷಿನಲ್ಲಿದ್ದ ಕಾಗದ.

ಅಕ್ಕರೆಯ ಸಂಬೋಧನೆಯ ಬಳಿಕ, ಇಷ್ಟು ದಿನ ಯಾಕೆ ಬರೆಯಲಿಲ್ಲವೆಂದು ಆಕ್ಷೇಪಣೆ. ಇನ್ನು ಮುಂದೆ ಹದಿನೈದು ದಿನಗಳಿಗೊಮ್ಮೆಯಾದರೂ ಕಾಗದ ಹಾಕ ದಿದ್ದರೆ ತಾನು ಬರೆಯುವುದನ್ನೇ ನಿಲ್ಲಿಸುವುದಾಗಿ ಬೆದರಿಕೆ. ಅದಾದ ಮೇಲೆ— 'ಬರೆಯಬೇಕೋ ಬರೆಯಬಾರದೋ ನನಗೆ ತಿಳಿಯದು. ಆದರೂ ತಿಳಿಸದೆ ಇರುವುದ ರಲ್ಲಿ ಯಾವ ಅರ್ಥವೂ ಇಲ್ಲವೆಂದು ಬರೆಯಲು ನಿರ್ಧರಿಸಿದ್ದೇನೆ. ಮೊನ್ನೆ ರಾತ್ರೆ ಇದ್ದ ಕ್ಕಿದ್ದ ಹಾಗೆ ನಮ್ಮವರೂ ನಾನೂ 'ನಾಗಿನ್' ನೋಡಬೇಕೆಂದು ಹೊರಟೆವು. ಅಲ್ಲಿ ನಾವು ಕುಳಿತ ಜಾಗಕ್ಕಿಂತ ಮೂರು ಸಾಲುಗಳ ಕೆಳಗಡೆ ನಿಮ್ಮ ಗಂಡನನ್ನು ನೋಡಿದೆ. ಆತನ ಜತೆಯಲ್ಲಿ ಯಾರೋ ಒಬ್ಬಳಿದ್ದಳು. ನಮ್ಮವರಿಗೆ ಈ ವಿಷಯ ತಿಳಿಸಿದೆ. ಅವರು ನೋಡುವಷ್ಟರಲ್ಲೆ ದೀಪ ಆರಿಹೋಯ್ತು. ಇಂಟರ್ವಲ್ ಆದಾಗ ಪುನಃ ನೋಡಿದೆವು. ಆತ ಎದ್ದು ಹೊರಹೋದರು. ಒಬ್ಬಳೇ ಉಳಿದಾಗ ಆಕೆ ಬೇರೆ ಗಂಡಸರನ್ನು ನೋಡುತ್ತಿದ್ದ ರೀತಿಯೊ! ಆ ವೇಷ ಭೂಷಣಗಳೊ! ಆ ಒನಪು ವಯ್ಯಾರವೊ! ಪುನಃ ದೀಪ ಆರುವ ಹೊತ್ತಿಗೆ ಆತ ಒಳಬಂದರು. ನನ್ನನ್ನೇನೂ ಅವರು ನೋಡಲಿಲ್ಲ. ನೋಡಿದ್ದರೂ ನನ್ನ ಗುರುತು ಸಿಗುತ್ತಿರಲಿಲ್ಲ ಅಂತ ಇಟ್ಕೊ ಳ್ಳೋಣ. ಇದು ಆ ರಾತ್ರೆಯ ಅನುಭವ. ಇದನ್ನೋದಿ ನಿಮಗೆ ವ್ಯಥೆಯಾಗ ಬಹುದು. ನನ್ನಾಣೆ, ನೀವು ಬೇಸರಪಟ್ಟುಕೊಳ್ಳಬಾರದು. ಈ ವಿಷಯವನ್ನು ನಿಮಗೆ ತಿಳಿಸದೆಯೇ ಬಚ್ಚಿಡುವುದು ಸಾಧ್ಯವಿತ್ತು. ಆದರೆ ಹಾಗೆ ಮಾಡುವುದು ಸರಿ ಯೆಂದು ನಾನು ಹೇಳಲಾರೆ. ಈಗ ಬರೆದಾಯಿತಲ್ಲಾ ಎಂದು ಒಂದು ರೀತಿಯ ಸಮಾಧಾನವೇ ಆಗಿದೆ. ಇದನ್ನೆಲ್ಲ ತಿಳಿದ ಮೇಲೂ ನೀವು ಧೈರ್ಯವಾಗಿದ್ದರೆ ನನಗೆ ಹೆಮ್ಮೆ ಎನಿಸೀತು. ನೀವು ಧೈರ್ಯವಾಗಿರುತ್ತೀರೆಂಬ ನಂಬಿಕೆ ನನಗಿದೆ. ಎಲ್ಲಿ, ನನ್ನ ಕಡೆಗೆ ನೋಡಿ ಸ್ವಲ್ಪ ನಕ್ಕುಬಿಡಿ. ಹಾಗೆ..."

ಮುಂದಿನ ಸಾಲುಗಳ ಮೇಲೆ ಕೃಷ್ಣಪ್ಪನವರು ಸುಮ್ಮನೆ ದೃಷ್ಟಿ ಹಾಯಿಸಿದರು, ಅಷ್ಟೆ. ಓದಲು ಅವರಿಗೆ ಮನಸ್ಸಾಗಲಿಲ್ಲ. ಓದಿದ ಅಂಶದಿಂದಲೆ ತಿಳಿದ ವಿಷಯ ಗಳು ಸಾಕಷ್ಟಿದ್ದುವು. ಕಾಗದಗಳನ್ನು ಅವರು ಮಗಳಿಗೆ ವಾಪಸು ಕೊಟ್ಟರು. ಕನ್ನಡಕ ವನ್ನು ಕೆಳಕ್ಕಿರಿಸುವುದನ್ನು ಮರೆತು ಹಾಗೆಯೇ ಛಾವಣಿ ನೋಡುತ್ತ ಆರಾಮ ಕುರ್ಚಿ ಯಲ್ಲೇ ಒರಗಿ ಕುಳಿತರು.

ಏನನ್ನಾದರೂ ಮಾತನಾಡುವುದು ವಿಹಿತವೆಂದು ಸುನಂದಾ ಅಂದಳು:

"ತಿಳಿಯಿತಲ್ಲಪ್ಪ ಬೆಂಗಳೂರು ಸಮಾಚಾರ?"

ಕೃಷ್ಣಪ್ಪನವರು ಮಗಳನ್ನೇ ನೋಡಿದರು. ಅವರ ಅಂತರ್ಯದೊಳಗೆ ಆಸೆ ನಿರಾಸೆಗಳ ನಡುವೆ ಹೋರಾಟವಾಗುತ್ತಿತ್ತು. ಸುಮ್ಮನಿರದೆ ಅವರೆಂದರು:

"ಆತ ಎರಡನೇ ಮದುವೆಯಂತೂ ಮಾಡ್ಕೊಂಡಿಲ್ಲ. ನನಗೆ ಗೊತ್ತು. ಹಾಗೇನಾದರೂ ಇದ್ದಿದ್ದರೆ ರಾಮಕೃಷ್ಣಯ್ಯನಿಗೆ ಖಂಡಿತ ತಿಳೀತಿತ್ತು."

ಸುನಂದೆಗೆ ನಗು ಬಂತು.

"ನಾನು ಹಾಗಂದ್ನೆ? ಇನ್ನೂ ಪ್ರಯತ್ನ ಮಾಡ್ಬೇಕು ಅಂತಲೇ ಹೇಳ್ತಾ ಇದ್ದೆಯಲ್ಲ ಅದಕ್ಕಂದೆ."

ಕೃಷ್ಣಪ್ಪನವರಿಗೆ ತಮ್ಮ ಅಸಹಾಯತೆಯನ್ನು ಕಂಡು ರೇಗಿತು.

"ಸಾಕು. ತಿಳಿದೋಳಹಾಗೆ ಜಾಸ್ತಿ ಮಾತಾಡ್ಬೇಡ!"

ಸುನಂದಾ ಸರಕ್ಕನೆ ತಿರುಗಿ ಒಳಕ್ಕೆ ಹೊರಟುಹೋದಳು. ತಂದೆ ತನ್ನ ಮೇಲೆ ರೇಗಿ ನುಡಿದಿದ್ದ. ಆತನ ಮನಸ್ಸಿನೊಳಗೆ ಸಂಕಟವೇ ಆ ರೀತಿ ಮಾತನಾಡಿಸಿತ್ತೆಂಬುದು ನಿಜ. ಆದರೂ ಆತ ತನ್ನ ಮೇಲೆ ರೇಗಿದ್ದ. ಆ ತಿಳಿವಳಿಕೆ ಬಲು ಕ್ರೂರವಾಗಿ ಕಂಡು ಸುನಂದೆಯ ಕಣ್ಣುಗಳು ಹನಿಗೂಡಿದುವು. ಆಕೆ ಬೆಂಕಿ ಸರಿಮಾಡಲೆಂದು ಒಲೆಯ ಮುಂದೆ ಕುಳಿತಳು. ಕಂಬನಿಗಳು ಕಾಡಿದುವು.

ಅಷ್ಟರಲ್ಲೆ ಹಿಂಭಾಗದಿಂದ ತಂದೆಯ ಸ್ವರ ಕೇಳಿಸಿತು. ಕ್ಷೀಣವಾಗಿದ್ದರೂ ಒಲವು ತುಂಬಿದ್ದ ಸ್ವರ.

"ಸುಂದಾ, ಏನೋ ಮನಸ್ಸು ತಡೀಲಾರದೆ ಅಂದೆ, ಕೋಪಿಸ್ಕೋಬೇಡಮ್ಮ."

ಕ್ಷಮಿಸು—ಎಂಬ ಅರ್ಥವೇ ಆ ಮಾತಿಗೆ. ಅದು ಪಶ್ಚಾತ್ತಾಪದ ಧ್ವನಿ.

ಸುನಂದೆಯ ಗಂಟಲು ಒತ್ತರಿಸಿ ಬಂತು. ಆಕೆ ತಿರುಗಿ ನೋಡದೆಯೇ ಅಂದಳು:

"ಇರಲಿ ಬಿಡಪ್ಪ. ನನ್ನ ಹಣೇಲಿ ಬರೆದದ್ದು. ಯಾರೇನು ಮಾಡೋಕಾಗುತ್ತೆ?"

ಹಣೇಬರೆಹ ಎನ್ನುವ ಪದವನ್ನು ವಿಜಯಳೆದುರು ಕುಸುಮಳೆದುರು ಅದೆಷ್ಟು ಬಾರಿ ಟೀಕಿಸಿದ್ದಳೋ ಆಕೆ. ಆದರೂ ಈಗ, ಕೊನೆಗಾಣಿಸಲಾಗದ ಸಂಕಟಕ್ಕೆ ಆ ಪದವೇ ವಿವರಣೆಯಾಗಿತ್ತು.

ಮಗಳ ಮಾತಿನ ಧ್ವನಿಯಿಂದ ಆಕೆ ಅಳುತ್ತಿದ್ದಳೆಂಬುದನ್ನು ತಿಳಿದು ಕೃಷ್ಣಪ್ಪನವರೆಂದರು:

"ಅಳಬೇಡ ಸುಂದಾ."

ಸುನಂದಾ ಸೆರಗಿನಿಂದ ಕಣ್ಣೊರೆಸಿಕೊಂಡಳು.

"ಇಲ್ಲವಪ್ಪಾ."

ಒಂದು ನಿಮಿಷ ಮತ್ತೂ ಬಾಗಿಲಲ್ಲೇ ನಿಂತಿದ್ದು ಅವರು ಕೇಳಿದರು:

"ಸರಸ್ವತಿ ಎಲ್ಲಿ?"

"ಪಕ್ಕದ್ಮನೆಗೆ ಹೋಗಿದಾಳೇಂತ ತೋರುತ್ತೆ. ಒಬ್ಬಳೇ ಓಡಾಡೋಕೆ ಶುರು ಮಾಡ್ಬಿಟ್ಟಿದಾಳೆ."

ಹಾಗೆ ಒಬ್ಬಳನ್ನೇ ಬಿಡಬಾರದು-ಎನ್ನುವ ಮಾತು ನಾಲಗೆ ತುದಿಯವರೆಗೆ ಬಂದರೂ ಅದನ್ನು ಉಚ್ಚರಿಸದೆ, "ನಾನು ಹೋಗಿ ಕರಕೊಂಡ್ಬರ್ತಿನಿ" ಎಂದು, ಮೊಮ್ಮಗಳನ್ನು ಹುಡುಕುತ್ತ ಕೃಷ್ಣಪ್ಪನವರು ಹೊರನಡೆದರು.

....ದಿನಕಳೆದಂತೆ, ಪುಟ್ಟಣ್ಣನೊಡನೆ ಇನ್ನೊಮ್ಮೆ ಬದುಕು ಸಾಧ್ಯ ಎನ್ನುವ ಭರವಸೆ ಸುನಂದೆಗೆ ಕಡಮೆಯಾಗುತ್ತ ಬಂತು. ಕಗ್ಗಲ್ಲಿನಲ್ಲಿ ಕೊರೆದಹಾಗಿತ್ತು ಪ್ರತಿಯೊಂದು ನೆನಪೂ. ಆಕೆಗೆ ಅನಿಸುತ್ತಿತ್ತು-ಆ ವ್ಯಕ್ತಿಯ ಮನಸ್ಸನ್ನು ಒಲಿಸಿಕೊಳ್ಳಲು ಯತ್ನಿಸುವುದೂ ಒಂದೇ, ಮರಳು ಹಿಂಡಿ, ಎಣ್ಣೆ ತೆಗೆಯುವುದೂ ಒಂದೇ.

ಹಾಗೆ ಬಲಗೊಳ್ಳುತ್ತಿದ್ದ ಅಭಿಪ್ರಾಯದ ಹಿನ್ನೆಲೆಯಲ್ಲಿ,.ಬೆಂಗಳೂರಿಗೆ ಹೋಗುವುದರಿಂದ ಆಗುವ ಪ್ರಯೋಜನವೇನು?-ಎಂಬ ಪ್ರಶ್ನೆ ಎದ್ದು ನಿಂತಿತು.

ಆದರೆ ಕೃಷ್ಣಪ್ಪನವರು ಪರಿಸ್ಥಿತಿಯನ್ನು ನೋಡುತ್ತಿದ್ದ ರೀತಿಯೇ ಬೇರೆ. ಅವರ ಅಭಿಪ್ರಾಯದಲ್ಲಿ ಪುಟ್ಟಣ್ಣ, ಮತ್ತು ಸುನಂದಾ ಜತೆಯಾಗಿ ಬಾಳ್ವೆ ಮಾಡಲು ತೊಡಗುವುದು ಮುಖ್ಯ: ಮನಸ್ಸುಗಳ ಮಿಲನ ಆ ಬಳಿಕ. ತಮ್ಮ ಮಗಳನ್ನು ಪರಿತ್ಯಕ್ತ ಪತ್ನಿಯಾಗಿ ಕಲ್ಪಿಸಿಕೊಳ್ಳುವುದು ಅವರಿಂದ ಸರ್ವಥಾ ಸಾಧ್ಯವಿರಲಿಲ್ಲ, ಹೀಗಾಗಿ, ಪ್ರತಿಕೂಲವಾಗಿಯೇ ಸಾವಿರ ಸಾಕ್ಷ್ಯಗಳು ಕಂಡರೂ ಅಳಿಯನೂ ಮಗಳೂ ಒಂದಾಗಬೇಕೆಂಬ ಆಸೆಯನ್ನು ಅವರು ಬಿಟ್ಟುಕೊಡಲಿಲ್ಲ.

ಆ ಆಸೆ ಫಲಿಸುವುದು ಸಾಧ್ಯವಿದ್ದರೆ, ಅದು ಬೆಂಗಳೂರಲ್ಲೇ. ಆ ಊರಲ್ಲಿ ವಾಸವಾಗಿದ್ದರೆ ಮಾತ್ರ ನಿರಂತರ ಯತ್ನ ನಡೆಸಬಹುದು.

ತಂದೆಯ ಯೋಚನೆಗಿಂತ ಮಗಳದು ಭಿನ್ನವಾಗಿತ್ತು. ಬೆಂಗಳೂರು ದೊಡ್ಡ ಊರು, ಪ್ರಾಯಶಃ ಸ್ವಚ್ಛಂದವಾಗಿ ಉಸಿರಾಡುವುದಾದರೂ ಅಲ್ಲಿ ಸಾಧ್ಯವಾಗಬಹುದು. ಸರಸ್ವತಿಯ ಬೆಳವಣಿಗೆಗೆ ಆ ವಾತಾವರಣವೇ ಮೇಲು. ಏನಿದ್ದರೂ ಈಗಿರುವ ಗವಿಯನ್ನು ಬಿಟ್ಟು ಹೊರಹೋಗುವುದಗತ್ಯ. ಅಲ್ಲಿ ಕಾದಿರುವುದೂ ಆಪತ್ತೇ ಎನ್ನೋಣ. ಆಗಲಿ, ಆದರೆ ಈಗಾಗಲೇ ಒದಗಿರುವುದಕ್ಕಿಂತ ಅದು ಹೆಚ್ಚು ಕಠಿಣವೆದ್ದೆನಿಸುವುದು ಸಾಧ್ಯವೆ?

....ಕೃಷ್ಣಪ್ಪನವರು ಸೋತಿದ್ದ ಕಡೆ ದಳ್ಳಾಳಿ ಯಶಸ್ವಿಯಾದರು. ಮನೆಕೊಂಡವರ ಕೈಬಿಟ್ಟುದು ನಾಲ್ಕು ಸಾವಿರದ ಐನೂರು. ಕೃಷ್ಣಪ್ಪನವರ ಕೈ ಸೇರಿದುದು ಮೂರು ಸಾವಿರದ ಐನೂರು.

ಕೊಂಡುಕೊಂಡ ಗುಣಪಾಲಯ್ಯ ಶೆಟ್ಟರು ಮನೆಯ ಮುಂದೆ ನಿಂತು ಹೇಳಿದರು:

"ಈ ರೂಪಾನೇ ಬದಲಾಯಿಸ್ಬೇಕು. ಎದುರಿಗೆಲ್ಲ ತಾರಸಿ ಕಟ್ಟಿಸಿ ದೊಡ್ಡದ್ಮಾಡ್ಬೇಕು. ಒಳ್ಳೇ ಗೂಡು ಇದ್ದ ಹಾಗಿದೆ!"

ಆ ಮಾತನ್ನು ಕೇಳಿದ ಕೃಷ್ಣಪ್ಪನವರು ಉಗುಳುನುಂಗಿ ನಗಲೆತ್ನಿಸಿದರು. ಈಗ

ಆ ಮನೆ ತಮ್ಮದಲ್ಲವಲ್ಲ! ಪರಕೀಯನಾಗಿ ಅದನ್ನು ನೋಡುತ್ತ ನಿಜವಾಗಿಯೂ ಕಟ್ಟಡ ಪುಟ್ಟದಾಗಿಯೇ ಇದೆ, ತಮಾಷೆಯಾಗಿಯೇ ಇದೆ—ಎಂದು ಅವರು ಸ್ವತಃ ನಂಬಿದರು.

....ಮುಂದೆ ಒಂದು ವಾರದೊಳಗೇ ರಾಮಕೃಷ್ಣಯ್ಯನವರ ಕಾಗದ ಬಂತು. ಹದಿನಾರು ರೂಪಾಯಿ ಬಾಡಿಗೆಗೆ ಪುಟ್ಟದೊಂದು ಔಟ್ ಹೌಸನ್ನು ಶೇಷಾದ್ರಿಪುರದಲ್ಲಿ ಗೊತ್ತುಮಾಡಿದ್ದರು. 'ಒಳ್ಳೇ ಮುಹೂರ್ತ ನೋಡಿ ಹೊರಟುಬನ್ನಿ' ಎಂದು ಕೊನೆಯಲ್ಲಿ ಬರೆದಿದ್ದರು.

ಆ ವಾಕ್ಯವನ್ನೋದಿ ಸುನಂದೆ, "ಅಯ್ಯೋ!" ಎಂದು ನಕ್ಕಳು.

"ಹುಟ್ಟಿದ ಕ್ಷಣದಿಂದ ಸಾಯೋವರೆಗೂ ಮುಹೂರ್ತ ನೋಡೋದೇ ಆಯ್ತು, ಅಲ್ವೆ ಅಪ್ಪಾ?" ಎಂದಳು.

"ಹಾಗೆಲ್ಲಾ ಮಾತಾಡ್಻ಾರದಮ್ಮ," ಎಂದರು ಕೃಷ್ಣಪ್ಪನವರು.

## ೧೯

ಸುನಂದಾ ಬೆಂಗಳೂರಲ್ಲೇ ನೆಲೆಸುವಳೆಂಬ ಸುದ್ದಿ ತಿಳಿದು, ರಾಧಮ್ಮ–ಕುಸುಮೆಯರಿಗೆ ಸಂತೋಷವಾಯಿತು. ಆದರೆ, ಯಾವತ್ತು—ಏನು ಎಂದೆಲ್ಲ ಸುನಂದಾ ಬರೆದಿರಲಿಲ್ಲ.

ಒಂದು ಮಧ್ಯಾಹ್ನ, ಸ್ವತಃ ಸುನಂದೆಯೇ ಮಗಳ ಜತೆಯಲ್ಲಿ ತಮ್ಮನ್ನು ಕಾಣಲು ಬಂದಾಗ, ಅವರಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ.

—"ಇದೇನ್ರಿ ಇದು? ಯಾವತ್ತು ಬಂದಿರಿ?"

—"ಮನೆ ನೋಡ್ಕೊಂಡು ಹೋಗೋಕೆ ಬಂದಿದೀರಾ?"

ಸುನಂದಾ ಹೇಳುತ್ತಿದ್ದುದು ನಿಜವೇ ಎಂದು ನಂಬಲು ಅವರಿಬ್ಬರಿಗೂ ಸ್ವಲ್ಪ ಹೊತ್ತು ಹಿಡಿಯಿತು.

"ಅಬ್ಬ! ಏನೋಂತಿದ್ವಿ. ಪರವಾಗಿಲ್ಲ ನೀವು," ಎಂದು ಕುಸುಮಾ ರಾಗ ಎಳೆದಳು.

ಮನೆ ಮಾಡಿರುವುದು ದೂರದ ಶೇಷಾದ್ರಿಪುರದಲ್ಲಿ ಎಂದು ತಿಳಿದಾಗ ರಾಧಮ್ಮ ರೇಗಿದರು:

"ಎಷ್ಟೊಂದು ಸಮೀಪ! ಯಾಕೆ, ಕೆಂಗೇರೀಲೋ ಯಶವಂತಪುರದಲ್ಲೋ ಮನೆ ಸಿಗಲಿಲ್ವೇನು?"

ರಾಧಮ್ಮ ರೇಗಿದಾಗಲೂ ನೋಡಲು ಸೊಗಸಾಗಿರುತ್ತಿತ್ತು.

"ಮನೆ ಗೊತ್ಮಾಡ್ಕೊಡ್ತೋರು ನಮ್ಮ ತಂದೆ ಸ್ನೇಹಿತರು. ಸದ್ಯಃ ಅಲ್ಲಿದ್ದರಾಯ್ತು. ಮುಂದೆ ಏನೇನಾಗುತ್ತೋ ಯಾರಿಗೆ ಗೊತ್ತು?"

ಕೊನೆಯ ಮಾತಿನ ಧ್ವನಿಯಲ್ಲಿ ಯಾವ ಭಾವವಿತ್ತೆಂದು ಊಹಿಸಲು ಕುಸುಮಾ ಯತ್ನಿಸಿದಳು. ಆದರೆ ಸಫಲಳಾಗಲಿಲ್ಲ.

ಬಹಳ ಕಾಲ ಯೋಚಿಸಿ ನುಡಿದ ಮಾತು ಎಂಬಂತೆ ಕುಸುಮಾ ಹೇಳಿದಳು:

"ಅಂತೂ ನೀವು ಬೆಂಗಳೂರಿಗೇ ಬಂದದ್ದು ಒಳ್ಳೇದಾಯ್ತು."

ಅದು ಆರಂಭ. ಒಂದು ವಾರ ಸುನಂದಾ ಬಂದರೆ, ಅನಂತರದ ವಾರ ರಾಧಮ್ಮ-ಕುಸುಮೆಯರು ಶೇಷಾದ್ರಿಪುರಕ್ಕೆ ಬರಬೇಕು—ಎಂದು ಗೊತ್ತಾಯಿತು.

....ಗಂಡನ ಜತೆಯಲ್ಲಿ ಹಿಂದೆ ವಾಸಿಸುತ್ತಿದ್ದ ಮನೆ ಈಗಿನದಕ್ಕಿಂತ ಹೆಚ್ಚು ಅನುಕೂಲವಾಗಿತ್ತು. ಅದು ಪುಟ್ಟದಾಗಿದ್ದರೂ ಅಚ್ಚುಕಟ್ಟಾದುದು. ತಾರಸಿ ಕಟ್ಟಡ. ಈಗ ದೊರೆತಿದ್ದುದು ಮಂಗಳೂರು ಹೆಂಚಿನ ಹಳೆಯ ಕಾಲದ ಮನೆ.

"ಈ ಮನೆ ಸಾಕು ಅಲ್ವೆ?" ಎಂದು ಕೃಷ್ಣಪ್ಪನವರು ಮಗಳನ್ನು ಕೇಳಿದರು.

"ಧಾರಾಳವಾಯ್ತು. ಇನ್ನೆಷ್ಟು ಬೇಕು?" ಎಂದಳು ಸುನಂದಾ.

ರಾಮಕೃಷ್ಣಯ್ಯನ ಮನೆ ಸಮೀಪವಾಗಿಯೆ ಇದ್ದುದರಿಂದ ಸುನಂದೆಗೆ ಬೇಸರವಾಗಲಿಲ್ಲ. ಕೃಷ್ಣಪ್ಪನವರಿಗೂ ಅಷ್ಟೆ. ಬೆಂಗಳೂರಿನ ನಿವಾಸಿಯಾಗಿ ಹೊಸ ವಾತಾವರಣಕ್ಕೆ ಹೊಂದಿಕೊಳ್ಳಲು ಅವರು ಯತ್ನಿಸಿದರು. ಬೇಗನೆ ಆ ಯತ್ನದಲ್ಲಿ ಜಯಶೀಲರಾದರು.

ಒಂದು ದಿನ ವೆಂಕಟರಾಮಯ್ಯ ಬಂದಿಳಿದ. "ಏನೋ ಕೆಲಸವಿತ್ತು, ಬಂದೆ," ಎಂದ.

ಆದರೆ ವಿಜಯ ತನ್ನ ಅಕ್ಕನಿಗೆ ಬರೆದ ಕಾಗದದಲ್ಲಿ ನಿಜ ಸಂಗತಿ ಇತ್ತು. 'ಹೊಸ ಮನೆಯಲ್ಲಿ ಹೇಗಿದೀರೋ ನೋಡಿಕೊಂಡು ಬರಲು ಕಳಿಸಿದ್ದೇನೆ....'

ವೆಂಕಟರಾಮಯ್ಯ, "ತಿರುಗಾಡ್ಕೊಂಡು ಬರ್ತೀನಿ" ಎಂದಾಗ, ಕೃಷ್ಣಪ್ಪನವರು ಕೇಳಿದರು:

"ಆ ದಿನ ಹೇಳಿದ್ರಿರಲ್ಲ. ನಿಮ್ಮ ಸ್ನೇಹಿತರು ಯಾರೋ ವಕೀಲರೂಂತ. ಅಲ್ಲಿಗೇನಾದರೂ ಹೋಗ್ತೀರಾ?"

"ಹೌದು," ಎಂದ ವೆಂಕಟರಾಮಯ್ಯ, ಮಾವನ ಮನಸ್ಸಿನಲ್ಲೇನಿತ್ತೆಂದು ತಿಳಿಯಲು ಯತ್ನಿಸುತ್ತಾ.

"ನಾವೂ ಬರಲಾ? ಪರಿಚಯ ಮಾಡ್ಕೊಡಿ. ನಮ್ಮವರೇ ಅಂದ್ಮೇಲೆ—"

"ಬನ್ನಿ ಬನ್ನಿ...."

ಬಸವನಗುಡಿಯಲ್ಲಿತ್ತು ವಕೀಲ ಸೋಮಶೇಖರನ ಮನೆ. ತೀಕ್ಷ್ಣ ನೋಟದ, ಹಸನ್ಮುಖಿಯಾದ, ಮನುಷ್ಯ. ವೆಂಕಟರಾಮಯ್ಯನ ವಯಸ್ಸೇ. ಅದೇ ತಾನೆ

ಕೋರ್ಟಿನಿಂದ ಬಂದು ಉಡುಪು ಬದಲಾಯಿಸಿದ್ದ ಆತ. ಒಳಕ್ಕೆ ಬಂದ ಗೆಳೆಯನನ್ನು ನೋಡಿದ. ಮಲೆನಾಡಿನಿಂದ ಯಾರೋ ಕಕ್ಷಿಗಾರರನ್ನೂ ಕರಕೊಂಡು ಬಂದ ಹಾಗಿತ್ತು.

"ಬಾರೋ. ಯಾವಾಗ್ಬಂದೆ?"

ಉತ್ತರದ ನಿರೀಕ್ಷೆ ಮಾಡದೆಯೇ ಒಳ ಬಾಗಿಲ ಕಡೆ ನೋಡಿ ಸೋಮ ಶೇಖರನೆಂದ:

"ಸೀತಾ, ವೆಂಕ್ಟು ಬಂದಿದಾನೆ."

ವೆಂಕಟರಾಮಯ್ಯನೂ ಕೃಷ್ಣಪ್ಪನವರೂ ಕುಳಿತುಕೊಳ್ಳುವ ಹೊತ್ತಿಗೆ ಬಳೆಗಳ ಸದ್ದಾಯಿತು—

"ಇದೇನ್ರೀ? ಈ ಸಲವೂ ಒಬ್ಬರೇ ಬಂದಿದೀರಾ? ಹೀಗೇನಾ ನೀವು ಪ್ರಾಮಿಸ್ ನಡೆಸ್ಕೊಡೋದು?" ಎಂದಿತು ಹೆಣ್ಣು ಧ್ವನಿ.

ವೆಂಕಟರಾಮಯ್ಯ ನಕ್ಕು, "ಇವರೇ ನನ್ನ ಮಾವ," ಎಂದು ಕೃಷ್ಣಪ್ಪನವರ ಪರಿಚಯ ಮಾಡಿಕೊಟ್ಟ.

ಸೋಮಶೇಖರ-ಸೀತಾ ಇಬ್ಬರೂ, "ನಮಸ್ತೇ" ಎಂದರು. ಯಾರೋ ಕಕ್ಷಿ ಗಾರರೂಂತಿದ್ದೆ-ಎಂಬ ಮಾತು ಸೋಮಶೇಖರನ ಬಾಯಿಗೆ ಬಂತಾದರೂ ಆಭಾಸ ವಾಗುವುದೆಂದು ಆತ ಅದನ್ನು ಆಡಲಿಲ್ಲ.

ಒಳಗಿನಿಂದ ಮುದ್ದಾದ ಪುಟ್ಟ ಹುಡುಗನೊಬ್ಬ ಓಡುತ್ತ ಬಂದು, "ಮಾಮು!" ಎಂದ.

"ಬಾ," ಎಂದು ವೆಂಕಟರಾಮಯ್ಯ ಹುಡುಗನನ್ನು ಕರೆದ.

ತನ್ನ ಮಾವನ ಮನೆ ಈಗ ಬೆಂಗಳೂರಲ್ಲೆ ಇರುವ ವಿಷಯ ಆತ ತಿಳಿಸಿದ.

ಸೀತಮ್ಮ ಹೇಳಿದಳು:

"ಇನ್ನು ನಮ್ಮನೇ ಆತಿಥ್ಯಕ್ಕೆ ಕೈ ಮುಗೀತೀರಾ!"

"ಹಾಗೇನೂ ಇಲ್ರೀ."

"ಏನಿಲ್ಲ? ನನಗ್ಗೊತ್ತಿಲ್ವೆ? ಹೋಗಲಿ ಬಿಡಿ. ಇನ್ನು ನಿಮ್ಮ ಹೆಂಡತಿ ತವರ್ಮನೆಗೆ ಬಂದಾಗಲಾದರೂ ನೋಡೋ ಅವಕಾಶ ನಮಗೆ ಸಿಗುತ್ತೆ."

ತಾಯಿಯಿಲ್ಲದ ತವರು ಮನೆ. ಆ ವಿಷಯ ಅವರಿಗೆ ಗೊತ್ತಿರಲಿಲ್ಲ....

ಅಳಿಯನತ್ತ ತಿರುಗಿ ಇಳಿ ಸ್ವರದಲ್ಲಿ ಕೃಷ್ಣಪ್ಪನೆಂದರು:

"ನಾನಿನ್ನು ಹೊರಡ್ತೀನಿ, ಆಗದಾ?"

ಆ ಮಾತು ಕೇಳಿಸಿದ ಸೋಮಶೇಖರ ಅವರತ್ತ ನೋಡಿದ.

"ಯಾಕೆ? ಏನವಸರ?"

"ನೀವು ಬಾಲ್ಯ ಸ್ನೇಹಿತರೂಂತ ವೆಂಕಟರಾಮಯ್ಯ ಹೇಳಿದ್ರು. ಹ್ಯಾಗೂ ಈ ಊರಲ್ಲೇ ಇದೀನಲ್ಲ. ಪರಿಚಯ ಮಾಡ್ಕೊಳ್ಳೋಣಾಂತ ಬಂದೆ....ನೀವು ಮಾತಾಡ್ತಾ

ಇರಿ. ಇಲ್ಲೇ ಸ್ವಲ್ಪ ಕೆಲಸವಿದೆ, ಹೋಗ್ತೀನಿ."

"ಕಾಫೀನಾದರೂ ತಗೊಂಡು ಹೋಗಿ," ಎಂದಳು ಸೀತಮ್ಮ.

"ಇಲ್ಲ ತಾಯಿೂ. ಇಷ್ಟು ಹೊತ್ತಿಗೆ ನಾನೇನೂ ತಗೊಳೊಲ್ಲ."

"ಕಾಫಿ ಬೇಡ ಸೀತಾ. ಬೇರೇನಾದರೂ ತಂದ್ಕೊಡು," ಎಂದ ಸೋಮಶೇಖರ.

ಮನೆ ಎಲ್ಲಿ ಮಾಡಿದೀರಾ? ಅನುಕೂಲವಾಗಿದೆಯೆ? ನಿವೃತ್ತಿಯಾಗಿ ಎಷ್ಟು ವರ್ಷವಾಯ್ತು? ಎಂದು ವಕೀಲರು ಕೇಳಿದ ಸವಾಲುಗಳಿಗೆಲ್ಲ ಕೃಷ್ಣಪ್ಪನವರು ಸಮರ್ಪಕವಾದ ಉತ್ತರ ಕೊಟ್ಟರು. ಸೀತಮ್ಮ ತಂದಿರಿಸಿದ ಹಾಲನ್ನು ನಿರಾಕರಿಸ ಲಾಗದೆ ಕುಡಿದರು. ತಟ್ಟೆಯಲ್ಲಿದ್ದ ಬಾದಾಮಿ ಮಾವಿನಹಣ್ಣಿನ ಹೋಳುಗಳಿಂದ ನಾಲ್ಕನ್ನು ಆಯ್ದು ತಿಂದರು.

ಮಾವ ಹೊರಟಾಗ, "ಏಳು ಘಂಟೆಯೊಳಗೆ ನಾನೂ ಬಂದ್ಬಿಡ್ತೀನಿ," ಎಂದ ವೆಂಕಟರಾಮಯ್ಯ.

"ಸಜ್ಜನ! ಮಾತಿನಲ್ಲೆಷ್ಟು ವಿನಯ!" ಎಂದು ಸೀತಮ್ಮ, ಕೃಷ್ಣಪ್ಪನವರನ್ನು ಹೊಗಳಿದಳು.

"ನನ್ನತ್ತೆ ತೀರ್ಕೊಂಡು ಆಗಲೆ ಎರಡು ತಿಂಗಳಾಯ್ತು" ಎಂದ ವೆಂಕಟ ರಾಮಯ್ಯ.

"ಹೌದೆ? ಅಯ್ಯೋ!" ಎಂದಳು ಸೀತಾ.

ಸೋಮಶೇಖರ ಸ್ನೇಹಿತನನ್ನೆ ನೋಡುತ್ತಾ, "ಹಾಗಾದರೆ ಇಲ್ಲೇನು ಇವರು ಒಬ್ಬರೇ ಇದಾರಾ? ಗಂಡು ಮಕ್ಕಳು ಯಾರೂ ಇಲ್ಲಾಂತ ನೀನು ಹೇಳಿದ್ದೆ,ಅಲ್ಲವಾ?" ಎಂದ.

ಆಗ ವೆಂಕಟರಾಮಯ್ಯ ತನ್ನ ಅತ್ತಿಗೆಯ ಕತೆ ಹೇಳಿದ.

"ಅಯ್ಯೋ ಪಾಪ!" ಎಂದಳು ಸೀತಮ್ಮ.

"ಕಷ್ಟ. ಹೂಂ"...ಎಂದು ಸೋಮಶೇಖರ ನಿಟ್ಟುಸಿರು ಬಿಟ್ಟ.

"ನೀವು ಹೋಗೋಕ್ಮುಂಚೆ ಆಕೇನ ಒಮ್ಮೆ ಕರಕೊಂಡ್ಬಂದು ಪರಿಚಯ ಮಾಡ್ಸಿ," ಎಂದು ಸೀತಮ್ಮ ಹೇಳಿದಳು.

"ಅವಳಿಗೀಗ ಯಾವುದರಲ್ಲೂ ಇಷ್ಟವಿಲ್ಲ. ಸ್ವಲ್ಪ ದಿವಸ ಹೋಗ್ಲಿ...ಆಕೇನ ನೋಡಿದರೆ ಸಂಕಟವಾಗುತ್ತೆ,"

"ಸಹಜ," ಎಂದ ಸೋಮಶೇಖರ.

ಸೀತಮ್ಮ ಒಳಹೋದಮೇಲೆ ವೆಂಕಟರಾಮಯ್ಯ ಕೇಳಿದ.

"ಏನಪ್ಪಾ, ಕಾನೂನು ಏನು ಹೇಳುತ್ತೆ ಇಂಥಾ ವಿಷಯದಲ್ಲಿ?"

ಸೋಮಶೇಖರ ಉತ್ತರ ಕೊಡದೆ ಗೆಳೆಯನ ಮುಖವನ್ನೆ ನೋಡಿದ.

ತನ್ನ ಪ್ರಶ್ನೆಯನ್ನು ವಿವರಿಸುವುದು ಅಗತ್ಯವೆಂದು ವೆಂಕಟರಾಮಯ್ಯನೆಂದ:

"ನಾನು ತಿಳಿದಿರೋ ಹಾಗೆ ಆತ ಮಹಾ ಖದೀಮ. ಏನು ಮಾಡೋದಕ್ಕೂ

ಹೇಸೋ ಮನುಷ್ಯನಲ್ಲ. ಕಾನೂನಿನ ಬೆದರಿಕೆ ಹಾಕಿ ಏನಾದರೂ ಮಾಡೋಕ್ಕೆ ಆಗಲ್ವೆ?"

ನಿಧಾನವಾಗಿ ಸೋಮಶೇಖರನೆಂದ:

"ಇದು ಬಹಳ ಕಷ್ಟದ ಕೆಲಸ. ಆಸ್ತಿ ಲೇವಾದೇವಿ ವಿಷಯವಾದರೆ ಬೇರೆ. ಇಲ್ಲಿರೋದೆಲ್ಲಾ ಇದಕ್ಕೆ (ಎದೆ ಗುಂಡಿಗೆ ಮುಟ್ಟಿ ತೋರಿಸುತ್ತಾ) ಸಂಬಂಧಪಟ್ಟದ್ದು. ಜಾಸ್ತಿ ನೋವಾದರೆ ಇದು (ತಲೆಯುತ್ತ ಬೊಟ್ಟು ಮಾಡುತ್ತಾ) ಕೆಟ್ಟು ಹೋಗುತ್ತೆ."

"ನಿಜ. ಸುಮ್ನೆ ಹೇಳ್ದೆ, ಅಷ್ಟೆ."

........ವೆಂಕಟರಾಮಯ್ಯ ಊರಿಗೆ ಹೊರಟು ಹೋದ ಎರಡು ದಿನಗಳಲ್ಲಿ ಕೃಷ್ಣಪ್ಪನವರು ಸೋಮಶೇಖರನಲ್ಲಿಗೆ ಬಂದರು. ಹಿಂದಿನ ಸಾರೆ ಬಂದಿದ್ದ ಸಮಯವೇ.

"ಸಾಯಂಕಾಲ ತಡವಾದರೆ ಸಿಗ್ತೀರೋ, ಇಲ್ಲವೊ ಅಂತ, ಕೋರ್ಟಿನಿಂದ ನೀವು ಬರೋ ಹೊತ್ತು ನೋಡ್ಕೊಂಡೇ ಬಂದೆ," ಎಂದರು.

"ಬನ್ನಿ. ಏನ್ಸಮಾಚಾರ?"

ಏನು ಸಮಾಚಾರವೆನ್ನುವುದು ಕೇಳಿ ಕೇಳಿ ರೂಢಿಯಾಗಿದ್ದ ಕುಶಲ ಪ್ರಶ್ನೆ.

ತಮ್ಮ ಹಿರಿಯ ಮಗಳ ವಿಷಯ ಮಾತನಾಡುವುದಕ್ಕೇ ಅವರು ಬಂದಿದ್ದರೆಂದು ಸೋಮಶೇಖರ ಊಹಿಸಿದ.

"ನಮ್ಮದೊಂದು ಸ್ವಂತದ ಮನೇನ ಮಾರಿದ ವಿಷಯ ನಮ್ಮಳಿಯ ನಿಮಗೆ ಹೇಳಿದಾರೋ ಏನೋ."

ಸೋಮಶೇಖರ ಇಲ್ಲವೆನ್ನಲೂ ಇಲ್ಲ, ಹೌದೆನ್ನಲೂ ಇಲ್ಲ. ಕೃಷ್ಣಪ್ಪನವರೇ ಮುಂದೆ ಅಂದರು:

"ಸ್ವಲ್ಪ ಸಾಲವಿತ್ತು. ಅದನ್ನು ಸಂದಾಯಮಾಡಿ ಎರಡು ಸಾವಿರದ ಆರು ನೂರು ಉಳೀತು. ಎರಡು ಸಾವಿರಾನ ಫಿಕ್ಸೆಡ್ ಡಿಪಾಜಿಟಾಗಿ ಬ್ಯಾಂಕಿನಲ್ಲಿಟ್ಟಿದೀನಿ."

ಸಾವಿರಕ್ಕೆ ಲಕ್ಷದ ಬೆಲೆಯನ್ನು ಕೊಟ್ಟು ಅವರು ಮಾತನಾಡುತ್ತಿದ್ದ ರೀತಿ ವಿಸ್ಮಯಕರವಾಗಿತ್ತು.

ಮುಂದೆ?—ಎಂದು ಬರಿಯ ನೋಟದಿಂದಲೆ ಸೋಮಶೇಖರ ಪ್ರಶ್ನಿಸಿದ.

"ಆ ಹಣವನ್ನ ನನ್ನ ಇಬ್ಬರು ಮಕ್ಕಳಿಗೂ ಸಮನಾಗಿ ಹಂಚಿ ಒಂದು ಉಯಿಲು ಸಿದ್ಧಪಡಿಸ್ಬೇಕು."

ಕೃಷ್ಣಪ್ಪನವರ ಆತುರ ಕಂಡು ಸೋಮಶೇಖರ ಮನಸಿನಲ್ಲೆ ನಕ್ಕ. ದೊಡ್ಡ ಮಗಳ ಪ್ರಶ್ನೆಯನ್ನು ಅವರೆತ್ತಲಿಲ್ಲವಲ್ಲ—ಎಂದು ಅವನಿಗೆ ಸ್ವಲ್ಪ ನಿರಾಸೆಯಾಯಿತು. ಆದರೆ ಆ ಕ್ಷಣವೇ, ಸದ್ಯಃ ಎತ್ತದೆ ಇದ್ದುದೇ ಮೇಲಾಯಿತೆಂದು ಸಮಾಧಾನವೂ ಆಯಿತು.

"ಅದಕ್ಕೇನು? ಮಾಡಿದರಾಯ್ತು."

"ಆದರೆ ನಮ್ಮ ಅಳಿಯನಿಗೆ, ಅಂದರೆ ವೆಂಕಟರಾಮಯ್ಯನಿಗೆ, ಇದು ಇಷ್ಟವಿಲ್ಲ."

"ಹಾಗೇನು? ಯಾಕಂತೆ?"

ವೆಂಕಟರಾಮಯ್ಯ ತನ್ನ ಹೆಂಡತಿಗೋಸ್ಕರ ದೊಡ್ಡ ಪಾಲು ಕೇಳಿರಬಹುದೆಂಬುದು ಸೋಮಶೇಖರನ ಊಹೆಗೂ ಬರದ ವಿಷಯ.

"ಹಣವನ್ನೆಲ್ಲ ಅತ್ತಿಗೆಗೇ ಕೊಟ್ಬಿಡ್ಬೇಕೂಂತ ಅವರ ಅಪೇಕ್ಷೆ."

"ಹಾಗೋ!"

ಅದು, ತನ್ನ ಗೆಳೆಯನ ಬಗೆಗೆ ಅಭಿಮಾನವನ್ನೂ ಸೂಚಿಸಿದ ಉದ್ಗಾರ.

"ನೀವು ಆತನ ಸ್ನೇಹಿತರು. ಹೇಗಿದ್ದರೂ ಈ ವಿಷಯದಲ್ಲಿ ನನ್ನ ಮಾತನ್ನೆ ನೀವು ನಡೆಸಿಕೊಡ್ಬೇಕು!"

ಸೋಮಶೇಖರ ನಕ್ಕ.

"ವಕೀಲರು ಯಾವಾಗಲೂ ಕಕ್ಷಿದಾರರ ಕಡೆ. ಆದರೆ ಭಾರಿ ಫೀಜು ಕೊಡ್ಬೇಕಾಗುತ್ತೆ."

ಸೋಮಶೇಖರನ ಮುಖವನ್ನು ಸೂಕ್ಷ್ಮವಾಗಿ ನೋಡುತ್ತ ಕೃಷ್ಣಪ್ಪನವರೆಂದರು:

"ಓಹೋ! ಅಗತ್ಯವಾಗಿ!"

ಒಂದು ನಿಮಿಷ ಸುಮ್ಮನಿದ್ದು ಸೋಮಶೇಖರ ಹೇಳಿದ:

"ನಾನೊಂದು ಕೇಳ್ತೀನಿ, ನಡೆಸ್ಕೊಡ್ತೀರಾ?"

ಹಿಂಜರಿಯದೆ ಕೃಷ್ಣಪ್ಪನವರು ಉತ್ತರವಿತ್ತರು.

"ಅಪ್ಪಣೆಯಾಗಲಿ."

"ವೆಂಕಟರಾಮಯ್ಯನಿಗೆ ನೀವು ಮಾವ ಎಂದಾದಮೇಲೆ ನಮಗೆ ಸಮೀಪದವರೇ ಆದಿರಿ. ನಿಮ್ಮ ವಿಷಯವೆಲ್ಲ ಸ್ವಲ್ಪ ಮಟ್ಟಿಗೆ ನಿಮ್ಮ ಅಳಿಯನಿಂದ ಗೊತ್ತಾಗಿದೆ. ನಮ್ಮ ಮನೆಯೊಳಗೆ ಕೇಳ್ತಾ ಇದ್ರು—"

ಅಷ್ಟಕ್ಕೆ ತಡೆದು ಆತ "ಸೀತಾ," ಎಂದು ಕರೆದರು.

ಸೀತಮ್ಮ ಮುಖ ತೋರಿಸಿದಾಗ, "ನೋಡು ಬಂದಿದಾರೆ. ನೀನೇ ಹೇಳು," ಎಂದ.

ಆಕೆ ಮುಗುಳು ನಕ್ಕಳು ತುಟಿಗಳೆಡೆಯಿಂದ ಸೊಗಸಾದ ದಂತಪಂಗ್ತಿ ಕಾಣಿಸಿತು. ಆಕೆ ಎಂದಳು:

"ಬೆಂಗಳೂರಲ್ಲೇ ಇದ್ದೂ ಯಾಕೆ ಅಪರಿಚಿತರ ಹಾಗಿರ್ಬೇಕು? ನಾಡದು ಭಾನುವಾರ ನಿಮ್ಮ ದೊಡ್ಡ ಮಗಳನ್ನೂ ಮೊಮ್ಮಗಳನ್ನೂ ಕರಕೊಂಡು ನಮ್ಮ ಮನೆಗೆ ಸಾಯಂಕಾಲ ಟೀಗೆ ಬನ್ನಿ. ಬರ್ತೀರಾ? ಆಗೊಲ್ಲ ಅನ್ಬೇಡಿ."

ಏನು ಹೇಳಬೇಕೆಂಬುದು ಕೃಷ್ಣಪ್ಪನವರಿಗೆ ತೋಚಲಿಲ್ಲ. ಸುನಂದೆಯ ದಾಂಪತ್ಯ ಜೀವನ ಸುಖಕರವಾಗಿ ಇದ್ದಿದ್ದರೆ, ಆಹ್ವಾನವನ್ನು ಸ್ವೀಕರಿಸುವುದು ಸುಲಭವ ಸಂತೋಷದ ಕೆಲಸವಾಗುತ್ತಿತ್ತು. ಆದರೆ ಈಗ—?

"ಆಗಲಿ ತಾಯಿೞ, ಸುನಂದಾಗೆ ಹೇಳ್ತೀನಿ. ಆಕೆ ಒಪ್ಪಿದರೆ—"

"ಒಪ್ಪದೆ ಏನ್ಮಾಡ್ತಾರೆ? ನಿಮಗೆ ಇಷ್ಟವಿಲ್ಲ. ಅದಕ್ಕೋಸ್ಕರ—."

ಸೋಮಶೇಖರ ನಡುವೆ ಬಾಯಿ ಹಾಕಿದ:

"ಸೀತೆಯ ಮಾತು ಕೇಳಿ ಗಾಬರಿಯಾಗ್ಬೇಡಿ. ಒರಟಾಗಿ ಮಾತಾಡೋದು ಅವಳಿಗೆ ರೂಢಿಯಾಗ್ಬಿಟ್ಟಿದೆ!"

ಸೀತಮ್ಮ ಗಂಡನನ್ನು ದುರುಗುಟ್ಟಿ ನೋಡಿದಳು.

"ಆಗಲಿ. ಭಾನುವಾರ ಮೂರು ಗಂಟೆಗೆ ಬರ್ತೀವಿ. ಸರಿಯಾ?"

## ೨೦

ಸುನಂದಾ ಮೊದಲು ಒಪ್ಪಲಿಲ್ಲ. ಹೊಸದಾಗಿ ಯಾರ ಸ್ನೇಹ ಮಾಡಿಕೊಳ್ಳು ವುದೂ ಆಕೆಗೆ ಇಷ್ಟವಿರಲಿಲ್ಲ.

ಆದರೆ, "ಒತ್ತಾಯ ಮಾಡಿದ್ರು. ಕರಕೊಂಡ್ಬರ್ತೀನೀಂತ ಒಪ್ಪಿ ಬಂದೆ," ಎಂದು ತಂದೆ ಹೇಳಿದ ಮಾತು ಮಗಳ ಬಾಯಿ ಕಟ್ಟಿಸಿತು. ಭಾವನ ಬಾಲ್ಯ ಸ್ನೇಹಿತ ಎನ್ನುವ ಮಾಹಿತಿ, ಪ್ರತಿಭಟನೆಯನ್ನು ಕುಗ್ಗಿಸಿತು. ವಕೀಲ ಎನ್ನುವ ಪದ, ಕುತೂಹಲವನ್ನು ಕೆರಳಿಸಿತು.

ಹೀಗೆ ಆ ಭಾನುವಾರ ಕೃಷ್ಣಪ್ಪನವರು, ಮಗಳು–ಮೊಮ್ಮಗಳೊಡನೆ ಸೋಮ ಶೇಖರನ ಮನೆಗೆ ಹೋದರು.

ವಕೀಲರ ಹೆಂಡತಿ ಎಂತೋ ಏನೋ ಎಂದಿದ್ದ ಸುನಂದೆಗೆ, ಹಾಸ್ಯ ಪ್ರವೃತ್ತಿಯ ಮಾತಿನ ಮಲ್ಲಿ ಸೀತಮ್ಮನನ್ನು ಕಂಡು ಮನಸ್ಸು ಹಗುರವಾಯಿತು.

"ನಿಮಗೆ ಹಿಂದಿ ಬರುತ್ತಾ?" ಎಂದು ಸೀತಮ್ಮ ಕೇಳಿದಳು.

"ಇಲ್ಲಮ್ಮ."

"ನನಗೂ ಬರಲ್ಲ. ಆದರೆ ನನ್ನ ತಂಗಿ, ರತ್ನ ಮಾಡ್ಕೊಂಡಿದಾಳೆ."

ಮಾತು ಸ್ಪಷ್ಟವಾಗಲಿಲ್ಲವೆಂದು ಸುನಂದಾ ಕೇಳಿದಳು:

"ರತ್ನಾ ಅಂತಲೆ ನಿಮ್ಮ ತಂಗಿ ಹೆಸರು?"

"ರತ್ನ ಅನ್ನೋದು ಹಿಂದೀ ಪರೀಕ್ಷೆಯ ಹೆಸರು ಕಣ್ರೀ, ತಂಗೀ ಹೆಸರು ವಿಶಾಲಾಕ್ಷೀಂತ."

"ಓ! ಎಲ್ಲಿಗೆ ಕೊಟ್ಟಿದೆ?"

"ಈಗ್ಲೇ ಎಲ್ಲಿಗೂ ಹೋಗಲ್ವಂತೆ!"

ಸೀತಮ್ಮ ಇನ್ನೂರಕ್ಕೂ ಮಿಕ್ಕಿ ಕನ್ನಡ ಇಂಗ್ಲಿಷ್ ಕಥೆ ಪುಸ್ತಕಗಳನ್ನು ಶೇಖರಿ

ಸಿದ್ದಳು.

"ಕನ್ನಡಿ ಬೀರುಗಳೆಲ್ಲ ಅವರಿಗೇ ಆಗ್ಹೋಯ್ತು, ಲಾ ಜರ್ನಲ್ ತುಂಬಿಸೋಕೆ. ನಾನು, ಗತಿ ಇಲ್ದೋಳು, ನನ್ನ ಐಶ್ವರ್ಯಾನ ಮರದ ಪೆಟ್ಟಿಗೇಲಿಟ್ಟೀದೀನಿ."

ಸುನಂದೆಯ ಆಸೆಯ ಕಣ್ಣುಗಳು ಪುಸ್ತಕಗಳನ್ನು ದೂರದಿಂದಲೆ ಮುದ್ದಿಸಿದು ದನ್ನು ಸೀತಮ್ಮ ಊಹಿಸಿದಳು.

"ಓದೋಕೆ ಬೇಕಾದರೆ ತಗೊಂಡು ಹೋಗಿ. ನೀವೇ ಬಂದು ವಾಪಸು ತಂದ್ಕೊಡದೇ ಇದ್ರೆ, ಲಾಯರ್ ನೋಟೀಸು ಬರುತ್ತೆ!"

ಸೀತಮ್ಮನ ಮಗನ ಹೆಸರು ಗಿರೀಶ.

"ಮೊನ್ನೆ ಜೂನ್‌ಗೆ ಮೂರು ತುಂಬಿತು," ಎಂದಳು ಆತನ ತಾಯಿ.

ಆತನಿಗಿಂತ ವಯಸ್ಸಿನಲ್ಲಿ ಕೆಲ ತಿಂಗಳು ಚಿಕ್ಕವಳಾಗಿದ್ದ ಸರಸ್ವತಿಯನ್ನು ತೋರಿ ಸುತ್ತ ಸೀತಮ್ಮನೆಂದಳು:

"ಪಾಪನನ್ನ ಇಲ್ಲೇ ಇಟ್ಕೊಳ್ಳೋಣ್ವೇನೊ?"

"ಹೂಂ!"

ಆತ ಸಿದ್ಧನಾಗಿದ್ದ.

"ಪುಟ್ಟ ತಂಗಿ ಮನೆಗೆ ಬಂದ್ಮೇಲೆ ಈ ಪಾಪನ್ನ ಯಾರು ಕೇಳ್ತಾರೆ?" ಎಂದಳು ಸುನಂದಾ.

"ಆಗ ಇವಳನ್ನು ಮಾಡ್ಕೊಂಡ್ಬಿಡ್ತಾನೆ! ಅಲ್ವೇನೊ?"

ಗಿರೀಶನಿಗೆ ತಾಯಿಯ ಮಾತೂ ಅರ್ಥವಾಗಲಿಲ್ಲ. ಹೊಸಬಳ ಮಾತೂ ಅರ್ಥ ವಾಗಲಿಲ್ಲ. ಆತ ಪ್ರಾಯಸ್ಥರಾದವರನ್ನು ಅವರ ಪಾಡಿಗೇ ಬಿಟ್ಟು, ಸರಸ್ವತಿಯ ಕೈ ಹಿಡಿದು, ತನ್ನ ಆಟದ ಸಾಮಾನುಗಳನ್ನು ಆಕೆಗೆ ತೋರಿಸಲೆಂದು ಕೊಠಡಿಗೆ ಕರೆದೊಯ್ದ.

ಗೋಡೆ ಗಡಿಯಾರದಿಂದ ಒಂದು ಸದ್ದು ಕೇಳಿಸಿತು. ನಾಲ್ಕೂವರೆ.

"ಹೊತ್ತಾಗ್ಹೋಯ್ತು. ಇನ್ನೂ ಒಂದ್ಕಡೆ ಹೋಗ್ಬೇಕು," ಎಂದು ಸುನಂದಾ ಚಡಪಡಿಸಿದಳು.

ಎಲ್ಲಿ? ಯಾರು?—ಎಂದು ಸೀತಮ್ಮ ಕೇಳಿದಳು.

"ಅವರು ನಿಮಗೆ ಹ್ಯಾಗೆ ಪರಿಚಯ?" ಎಂದಳು.

ಉತ್ತರ ಹೊರಡುವುದು ತಡವಾಯಿತು,—ಪ್ರಯಾಸವಾಯಿತು.

"ಹಿಂದೆ ನಾನು ಈ ಊರಲ್ಲೇ ಇದ್ದೆ ಕಣ್ರೀ. ಆಗ ನಾನೂ ರಾಧಮ್ಮನೂ ನೆರೆಹೊರೆಯವರಾಗಿದ್ವಿ."

ಆ ಸ್ವರದಲ್ಲಿ ಬೇಸರದ ಅವಸರದ ಅಂಶ ಹೇರಳವಾಗಿತ್ತು. ತಾನು ಹಾಗೆ ಆಗ್ರಹ ತೊಟ್ಟು ಕೇಳಿದುದು ಸರಿಯಾಗಿಲ್ಲವೇನೋ ಎಂದು ಸೀತಮ್ಮನಿಗೆ ಕಸಿವಿಸಿ ಯಾಯಿತು.

ಹೊರಗೆ ಕೃಷ್ಣಪ್ಪನವರೂ ವಕೀಲರೂ ತಾಮ್ರದ ತಂತಿ ಪ್ರಕರಣದಿಂದ ಹಿಡಿದು ರೇಡಿಯೋ ಆಕ್ಟಿವ್ ಕಣಗಳವರೆಗೆ ಹರಟೆ ನಡೆಸಿದ್ದರು.

ಸುನಂದಾ ಎದ್ದುದನ್ನು ಕಂಡು, ಕೃಷ್ಣಪ್ಪನವರು ಹೇಳಿದರು:

"ರಾಧಮ್ಮನವರ ಮನೆಗೆ ಹೋಗ್ತೀಯೇನು? ಗಾಂಧಿ ಬಜಾರಿನಿಂದ ಬಸ್ ಸಿಕ್ಕುತ್ತೆ. ನಡಿ, ಬಸ್ ಹತ್ತಿಸಿ ಬರ್ತೀನಿ."

"ನೀವು ಹೋಗಲ್ವೆ?" ಎಂದು ಸೋಮಶೇಖರ ಕೇಳಿದ.

"ಇಲ್ಲ. ಅಲ್ಲಿಂದ ಸುನಂದೆಗೆ ಹಾದಿ ಗೊತ್ತಿದೆ."

"ಹಾಗಾದ್ರೆ ಕೂತ್ಕೊಳ್ಳಿ. ಸೀತಾ ಹೋಗಿ ಬಸ್ ಹತ್ತಿಸಿ ಬರ್ತಾಳೆ."

ಪುಸ್ತಕಗಳಿಗೋಸ್ಕರ ಇನ್ನೊಮ್ಮೆ ಬರುವೆನೆಂದಳು ಸುನಂದಾ. ಸೋಮಶೇಖರನಿಗೆ ನಮಸ್ಕರಿಸಿದಳು. ಸರಸ್ವತಿಗೆ 'ಟಾ ಟಾ' ಹೇಳಿ ಅಭ್ಯಾಸವಿರಲಿಲ್ಲ. ಬದಲು ಅಜ್ಜನನ್ನು ನೋಡುತ್ತ "ತಾತ ಬರೋದಿಲ್ವಾ" ಎಂದು ರಾಗವೆಳೆದಳು.

ಸೀತಮ್ಮನ ಜತೆಯಲ್ಲಿ ಗಿರೀಶನೂ ಪಾಪನನ್ನು ಬೀಳ್ಕೊಡಲೆಂದು ಗಾಂಧಿ ಬಜಾರಿನವರೆಗೂ ಬಂದ.

ಬಸ್ ಬಂದಿರಲಿಲ್ಲ. ಕಾಯುತ್ತಾ ನಿಂತಾಗ, ಮಾತಿನೆಡೆಯಲ್ಲಿ, ಸುನಂದೆಯ ದೃಷ್ಟಿ ಚಲಿಸುತ್ತಿದ್ದ ಜನಸಂದಣಿಯನ್ನೆ ದಿಟ್ಟಿಸುತ್ತಿತ್ತು...ಇವತ್ತು ಭಾನುವಾರ. ಎಲ್ಲಿರಬಹುದು ಆತ? ಅಕಸ್ಮಾತ್ ಇಲ್ಲಿಗೆ ಬಂದಿದ್ದರೆ? ತನ್ನನ್ನು ಹೀಗೆ ಕಂಡಾಗ ಆತ ಏನು ಮಾಡಬಹುದು? ಏನು ಹೇಳಬಹುದು?

ಬಸ್ ಬಂತು. ಮತ್ತೊಮ್ಮೆ ಬರುವ ಆಶ್ವಾಸನೆ ಕೊಟ್ಟು ಸುನಂದಾ ಮಗುವಿನೊಡನೆ ಬಸ್ಸನ್ನೇರಿ ಕುಳಿತಳು...ಸೀತಮ್ಮನದು ಸುಖಮಯ ಸಂಸಾರ. ತನ್ನ ವಿಷಯ ಅವರಿಗೆ ಗೊತ್ತಿಲ್ಲವೆಂದೆ? ಆತ್ಮೀಯರು ಎಂದ ಮೇಲೆ ಭಾವ ಹೇಳಿಯೇ ಇರುತ್ತಾನೆ. ಹೀಗಿದ್ದರೂ ಅವರು ತಾತ್ಸಾರದಿಂದ ಕಾಣಲಿಲ್ಲ. ನಡತೆಕೆಟ್ಟವಳಿರಬಹುದೆಂದು ದುರದುರನೆ ನೋಡಲಿಲ್ಲ. ತಾನು ತಬ್ಬಿಬ್ಬಾಗುವಂತಹ ಪ್ರಶ್ನೆ ಕೇಳಲಿಲ್ಲ...ಈಗ ಬಸ್ಸಿನಲ್ಲಿ ತಾನೊಬ್ಬಳೇ ಹೋಗುತ್ತಿರುವುದನ್ನು ಆತನೆಲ್ಲಾದರೂ ಕಂಡನೆಂದರೆ?...ಕಣ್ಣುಗಳು ಆಸೆಯಿಂದ ಪಕ್ಕದ ಸಾಲಿನಲ್ಲಿದ್ದ ಗಂಡಸರನ್ನು ನೋಡಿದುವು. ಹಿಂದಕ್ಕೂ ಒಮ್ಮೆ ತಿರುಗಿದುವು. ...ತಾನು ಸಂಕಟದಿಂದ ವಿಲಿವಿಲಿ ಒದ್ದಾಡುತ್ತಿದ್ದರೆ ಸಂತೋಷ ಆತನಿಗೆ. ತನ್ನ ಅಸಹಾಯಕತೆಯನ್ನು ಕಂಡಾಗ ಸಂತೃಪ್ತಿ...ಆದರೆ, ತಾನು ಸೋತಿಲ್ಲ, ಇನ್ನೂ ತಲೆ ಎತ್ತಿ ನಿಂತೇ ಇದೇನೆ–ಎಂಬುದನ್ನು ಆತ ಕಂಡಾಗ? ಕಂಡಿದ್ದರೆ ಚೆನ್ನಾಗಿತ್ತು...

'ನೆನಪು ಕಹಿಯಲ್ಲ,' ಯಾವ ಪುಸ್ತಕ ಅದು? ಯಾರಿಗೊ? ತನಗೆ ಮಾತ್ರ ನೆನಪು ಕಹಿಯೇ. ಅದೂ ಎಷ್ಟು? ಒಂದೆ, ಎರಡೆ!

ತನ್ನ ತಂದೆಗೊಂದು ಹುಚ್ಚು. ವಿರಸ ಇನ್ನು ಮೇಲೂ ಸರಿಹೋಗಬಹುದೆಂಬ ಆಸೆ ಆತನಿಗೆ. ಹಗಲುಗನಸು!

–ಬಸ್ಸು ನಿಂತು ನಿಂತು ನಿಂತು ಮುಂದೆ ಹೋಯಿತು. ಜನ ಇಳಿದರು, ಹತ್ತಿದರು–

ತಂದೆ ಇನ್ನೂ ಆಸೆ ಇಟ್ಟುಕೊಳ್ಳುವುದರಲ್ಲಿ ಅರ್ಥವಿಲ್ಲ. ಆತನಿಗೆ ತಾನೇ ಈಗ ಮಗ–ಮಗಳು, ಪ್ರತಿಯೊಂದೂ. ಗಂಡ ಬಿಟ್ಟವಳೆಂದು ತನ್ನ ಮೇಲೆ ಅಪವಾದ ಇದೆ, ಎಂದು ತಾನೆ ವ್ಯಥೆ? ಅದನ್ನು ಲೆಕ್ಕಿಸದಿದ್ದರಾಯ್ತು.

ಚಂಪಾ ಓದು ಮುಗಿಸಿದ ಮೇಲೆ ಉಪಾಧ್ಯಾಯಿನಿಯಾಗುವಳು. ತಾನು?

ಮಿಡಲ್ ಸ್ಕೂಲಿನಲ್ಲಿ ತಾನೂ ಉಪಾಧ್ಯಾಯಿನಿಯಾಗಬಹುದು ಅಲ್ಪ ಸಂಬಳ.

ಸಂಬಳವಲ್ಲ ಮುಖ್ಯ. ಸ್ವಾವಲಂಬಿಯಾಗಬೇಕು. ಆಗ ಮಾತ್ರ ಮನಸ್ಸಿನ ಬೇಸರ ನೀಗುವುದು ಸಾಧ್ಯ.

—ತಾನು ಇಳಿಯಬೇಕಾದ ಸ್ಥಳ ಬಂತೆಂದು ಸುನಂದಾ ಬೆನ್ನು ನಿಡಿದು ಕುಳಿತಳು ಅಲ್ಲಿಯೇ. ಮತ್ತೆ ನಾಲ್ಕು ಹೆಜ್ಜೆಗಳ ಕಾಲ್ನಡಿಗೆ—

...ರಾಧಮ್ಮ ಕಾದಿದ್ದರು.

"ನೀವು ಬರೋದಿಲ್ವೇನೋ ಅಂತ ಬೇಸರವಾಗಿತ್ತು," ಎಂದಳು ಕುಸುಮಾ.

ಹೊಸ ಪರಿಚಯದ ಸೀತಮ್ಮನ ಮನೆಗೆ ಹೋದ ವಿಷಯ ಸುನಂದಾ ಹೇಳಿದಳು.

"ಆಕೆ ಗಂಡ ವಕೀಲರು," ಎಂದಳು. ಹಾಗೆ ಹೇಳಿದಾಗ ವಿನಾ ಕಾರಣವಾಗಿ ಮನಸ್ಸಿನೊಳಗೆ ಗೊಂದಲವಾಯಿತು. ರಾಧಮ್ಮನ ದೃಷ್ಟಿಯಲ್ಲಿ ಆ ಮಾತಿಗೆ ಮಹತ್ವವಿರಲಿಲ್ಲ. ಒಬ್ಬೊಬ್ಬ ಗಂಡನಿಗೆ ಒಂದೊಂದು ಕೆಲಸ. ಆದರೆ ಕುಸುಮಾ ಮಾತ್ರ ಸುನಂದೆಯ ಮುಖವನ್ನು ಚಕಿತಳಾಗಿ ನೋಡಿದಳು.

ಅಷ್ಟರಲ್ಲೆ ಸುನಂದೆಯ ಮನಸ್ಸು ಅಸ್ತವ್ಯಸ್ತವಾಗಿತ್ತು. ಹೆಚ್ಚು ಹೊತ್ತು ಅಲ್ಲಿರಲಾರದೆ ಆಕೆ ತನ್ನ ಮನೆಯ ಕಡೆ ಹೊರಟಳು.

## ೨೧

ರಾಧಮ್ಮ–ಕುಸುಮೆಯರನ್ನು ಸುನಂದಾ ಇದಿರು ನೋಡುತ್ತಿದ್ದ ದಿನ ಅವರು ಬರಲಿಲ್ಲ. ಬಳಿಕ, ಆರು ಕಾಸಿನ ಅಂಚೆಯ ಕಾರ್ಡು ವಿವರಣೆಯೊಡನೆ ಬಂತು. ಕುಸುಮೆಯ ಮನೆಗೆ ನೆಂಟರದೊಂದು ತಂಡವೇ ಬಂದಿಳಿದಿತ್ತು. ಅದು ಕಾರಣ.

ಸ್ವಲ್ಪ ಹೊತ್ತು ಎಲ್ಲಾದರೂ ದುಡಿದು ಸಂಪಾದಿಸಬೇಕೆಂಬ ಕೃಷ್ಣಪ್ಪನವರ ಯೋಜನೆ ಕಾರ್ಯಗತವಾಗದೆ ಹಾಗೆಯೆ ಉಳಿದಿತ್ತು. ಸುನಂದಾ ನಿರೀಕ್ಷಿಸಿದ್ದಂತೆಯೇ

ಅವರ ಪ್ರಸ್ತಾಪವನ್ನೊಂದು ದಿನ ಅವರು ಮಾಡಿದರು.

ತನ್ನ ಒಪ್ಪಿಗೆ ಕೇಳಿದ ತಂದೆಯನ್ನು ಕುರಿತು ಮಗಳೆಂದಳು:

"ನಿನಗೆ ಮಗ-ಮಗಳು ಎಲ್ಲಾ ನಾನೇ ಅಂತ ಹೇಳಿದ್ದೆ, ಅಲ್ವಾ ಅಪ್ಪಾ?"

ಉತ್ತರಕೊಡದೆ ಕೃಷ್ಣಪ್ಪನವರು ಸುನಂದೆಯನ್ನೇ ನೋಡಿದರು. ತಂದೆ ಸುಮ್ಮ ನಿದ್ದನೆಂದು ಅಧೀರಳಾಗದೆ ಸುನಂದಾ ಮುಂದುವರಿದಳು:

"ನಿನ್ನನ್ನು ಸಾಕೋ ಜವಾಬ್ದಾರಿ ನನಗೆ ಬಿಟ್ಬಿಡು."

"ಹ್ಯಾಗೆ ಸಾಕ್ತೀಯಮ್ಮ?"

"ದುಡಿದು ಸಂಪಾದಿಸ್ತೀನಿ."

"ದುಡಿಯೋದು ಅಂದರೆ?"

"ಏನಾದರೂ ಕೆಲಸ ಮಾಡ್ತೀನಿ. ನಿನಗೆ ಯಾಕೆ?"

"ಸಾಕು ಸುಮ್ನಿರು!"

ಹಾಗೆ ರೋಸಿದ ಮನಸ್ಸಿನಿಂದಲೆ ಕೋಟು ತೊಟ್ಟು, ಟೊಪ್ಪಿಗೆ ಇಟ್ಟು, ಚಪ್ಪಲಿ ಮೆಟ್ಟಿ ಕೃಷ್ಣಪ್ಪನವರು ಹೊರಬಿದ್ದರು. ಮುಖ ಗಂಟಿಕ್ಕಿಕೊಂಡೇ ಇತ್ತು. ವಯಸ್ಸಿಗೆ ಮೀರಿದ ವೇಗದಿಂದ ಅವರು ನಡೆದರು. ಎತ್ತ ಹೋಗುತಿದ್ದೇನೆ—ಎಂದು ಸರಿಯಾಗಿ ವಿವೇಚಿಸುವಷ್ಟರಲ್ಲೆ ಮೆಜೆಸ್ಟಿಕ್ ತಲಪಿದರು. ಹೋಗುವುದು ಸರಿಯೆ? ತಪ್ಪೆ?— ಎಂಬ ಯೋಚನೆಯನ್ನೂ ಮಾಡದೆ ಮುಂದೆ ಸಾಗಿ ಪುಟ್ಟಣ್ಣ ಕೆಲಸ ಮಾಡುವ ಆಫೀಸಿನೆದುರು ನಿಂತರು.

ಬೀದಿಯಲ್ಲಿ ಜನ ಸಂಚಾರ ಹೆಚ್ಚುತ್ತಲೇ ಇತ್ತು. ಎದುರುಬದುರಾಗಿದ್ದ ಕಟ್ಟಡ ಗಳು ಖಾಲಿಯಾಗಿ, ಹೆಚ್ಚು ಜನ ಸಾಲು ಕಟ್ಟಿ ಬೀದಿಯ ಪ್ರವಾಹವನ್ನು ಸೇರು ತಿದ್ದರು.

ಅದೇ ಬಾಗಿಲು. ಅದೇ ಹೊರ ಗೇಟು. ಎಂದಿನ ಠೀವಿಯೇ. ರುದ್ರವಾದ ಮುಖಮುದ್ರೆ. ಒಂಟಿಯಾದ ತೋಳ ಪುಟ್ಟಣ್ಣ.

ಆತನನ್ನು ನೋಡಿದೊಡನೆಯೆ ಅಧೈರ್ಯ ಕೃಷ್ಣಪ್ಪನವರನ್ನು ಕಾಡಿತು. ಆತನ ಕಣ್ಣಿಗೆ ಇಲ್ಲಿ ತಾನು ಬೀಳುವುದು ಎಂತಹ ಅವಮಾನ! ಯಾಕಾದರೂ ಬಂದೆ ಇಲ್ಲಿಗೆ? ಈಗ ತಪ್ಪಿಸಿಕೊಳ್ಳುವ ಬಗೆಯಾದರೂ ಯಾವುದು? ಆತ ನೋಡಿದರೆ—

ಪುಟ್ಟಣ್ಣನ ಕಣ್ಣುಗಳು ಮಾವನನ್ನು ಕಂಡುವು.

ಅನಿವಾರ್ಯವಾಗಿ ಕೃಷ್ಣಪ್ಪನವರು, "ಅಪ್ಪಾ" ಎಂದರು—ಮಮತೆಯ ಎಳೆಯ ನನ್ನು ಕುರಿತು ಹಿರಿಯರು ಸಂಬೋಧಿಸುವ ಹಾಗೆ.

ಪುಟ್ಟಣ್ಣ ಸರಕ್ಕನೆ ತಿರುಗಿ ನುಡಿದ:

"ಸುವ್ವರ್! ಇಷ್ಟು ವಯಸ್ಸಾದರೂ ಬೇಡೋಕೆ ನಾಚ್ಗೆ ಆಗಲ್ಲ ನಿಂಗೆ?"

ಕೃಷ್ಣಪ್ಪನವರು ಗಾಬರಿಯಾದರು. ಅಳಿಯನಿಗೆ ತನ್ನ ಪರಿಚಯ ಆಗಲೇ ಇಲ್ಲವೆಂದುಕೊಂಡರು.

"ನಾನು!"

"ನೀನೋ ನಿನ್ನಪ್ಪನೋ. ಕದಿಯೋಕೆ ನೋಡ್ತೀಯಾ? ಮುಚ್ಚು ಬಾಯಿ. ಹಿಡಿದು ಪೋಲೀಸರಿಗೆ ಕೊಡ್ತೀನಿ!"

ಕಾಲು ಹಾದಿಯ ಮೇಲೆ ಅತ್ತಿತ್ತ ನಡೆಯುತ್ತಿದ್ದ ಜನ ಅಲ್ಲೆ ನಿಂತರು. ಗುಂಪು ಸೇರಿತು.

"ನನ್ನ ಗುರುತು ಸಿಗಲಿಲ್ವೆ ಪುಟ್ಟಣ್ಣ? ನನ್ನ ಮಗಳನ್ನ–"

"ನೋಡ್ರಿ ಈ ಮನುಷ್ಯನನ್ನ [ಅಷ್ಟು ಇಂಗ್ಲಿಷಿನಲ್ಲಿ, ಉಳಿಕ ಕನ್ನಡ] ತನ್ನ ಮಗಳನ್ನ ಮಾರ್‍ತಾನಂತೆ. ತಲೆ ಹಿಡುಕ ಬಡ್ಡೀಮಗ!"

ಉದ್ದೇಶಪೂರ್ವಕವಾಗಿಯೇ ಈತ ತಮ್ಮನ್ನು ಅವಮಾನಿಸುತ್ತಿರುವನೆಂದು ಕೃಷ್ಣಪ್ಪನವರಿಗೆ ಹೊಳೆಯಿತು. ಅವರ ಮೈ ಕಂಪನ ಬಲವಾಯಿತು. ಬಡಕಲು ಮುಖವೂ ಕೆಂಪೇರಿ ಬೆವರೊಡೆಯಿತು. ಉಸಿರು ಕಟ್ಟಿದಂತಾಯಿತು ಅವರಿಗೆ. ಅವರು ಕೂಗಾಡಿದರು:

"ಪಾಪಿ, ಚಂಡಾಲ! ಏನಂದೆ?"

ಪುಟ್ಟಣ್ಣನನ್ನು ಹೊಡೆಯಲೆಂದು ಮೇಲೆತ್ತಿದ ಅವರ ಕೈಯನ್ನು ಯಾರೊ ತಡೆದರು. ಆದರೆ ಅವರ ಸ್ವರ ನಿಲ್ಲಲಿಲ್ಲ.

"ಕೈ ಹಿಡಿದ ಹೆಂಡತೀನ ಭಿಕಾರಿಯಾಗಿ ಮಾಡಿ–"

ಯಾರೋ ನಕ್ಕರು.

"ಇಷ್ಟು ವಯಸ್ಸಾದ್ಮೇಲೂ ಇಂಥ ನೀಚ ಕೆಲಸಕ್ಕಿಳಿದಿದಾನಲ್ಲಾ!" ಎಂದಿತೊಂದು ಮೂದಲಿಕೆಯ ಸ್ವರ.

"ಎಲ್ಲಿ ಮಡಗಿದಿಯೋ ನಿನ್ನ ಮಗಳನ್ನ? ಹೆಂಗೆ ರೇಟು?"

ಕೃಷ್ಣಪ್ಪನವರು ಕಿರಿಚಿಕೊಂಡರು:

"ಮುಚ್ಚಿರಿ ಬಾಯಿ! ಬಾಯ್ಮುಚ್ಚಿರಿ!"

ಅವರು ಪುಟ್ಟಣ್ಣನಿಗಾಗಿ ಹುಡುಕಿದರು. ಭುಜ ಕುಪ್ಪಳಿಸಿ ನಸುನಕ್ಕು ಹೊರಟು ಹೋಗಿದ್ದ ಆತ ಕೃಷ್ಣಪ್ಪನವರ ಕಣ್ಣಿಗೆ ಬೀಳುವುದಾದರೂ ಹೇಗೆ?

"ತಪ್ಪಿಸ್ಕೊಂಡ! ತಪ್ಪಿಸ್ಕೊಂಡ!"

ಮುದುಕ ಹಾಗೆ ಕೂಗಿದುದನ್ನು ಕಂಡು ಒಬ್ಬನೆಂದ:

"ಇದು ತಮಾಷೆಯಾಗಿದೆ. ಸಿಕ್ಕಿ ಹಾಕ್ಕೊಂಡ್ಮೇಲೆ ಸ್ವತಃ ತಾನೇ ಕೂಗೋದು–ತಪ್ಪಿಸ್ಕೊಂಡ, ಅಂತ, ಹ್ಞ?"

ಬೆನ್ನ ಹಿಂದಿನಿಂದೊಬ್ಬ ಕೃಷ್ಣಪ್ಪನವರ ಟೋಪಿಯನ್ನು ಮುಂದಕ್ಕೆ ತಳ್ಳಿದ. ಅವರು ಕೆಣಕಿದ ಹುಲಿಯಂತೆ ಗುರುಗುಟ್ಟಿದರು.

"ಮೈ ಮುಟ್ಟಿದರೆ ಹುಷಾರ್!"

"ಯಾವನೋ ಹುಚ್ಚ ಅಂತ ತೋರುತ್ತೆ."

"ಹೌದು, ನಾನು ಹುಚ್ಚ!"

ಯಾರೋ ಸಾಧು ಪ್ರಾಣಿಗೆ ಅವಮಾನವಾಗುತ್ತಿದೆ–ಎಂದು ಭಾವಿಸಿದವರೂ ಆ ಗುಂಪಿನಲ್ಲಿ ಇಲ್ಲದಿರಲಿಲ್ಲ. ಆದರೆ ಯಾರಿಗೆ ಬೇಕು ಜಗಳ? ಅಂಥವರು ಮುಂದೆ ಹೋದರು. ಉಳಿದವರೂ ಅಷ್ಟೆ. ಬಿಟ್ಟಿ ಮನೋರಂಜನೆ ಮುಗಿಸುತ್ತಾ ಚೆದರಿದರು.

ಸದ್ಯಃ ಅನುಮಾನಾಸ್ಪದವಾದ ವ್ಯಕ್ತಿಯಾಗಿ ಪೋಲೀಸರ ಕೈಗೆ ಕೃಷ್ಣಪ್ಪನವರು ಬೀಳಲಿಲ್ಲ.

ಅವರು ಮಂಕು ಹಿಡಿದವರಂತೆ ಮೆಲ್ಲನೆ ನಡೆಯುತ್ತ ಧರ್ಮಾಂಬುಧಿಕೆರೆ ಬಯಲಿನ ಬಳಿಗೆ ಬಂದರು. ಆ ವಾರ ಒಂದೆರಡು ಮಳೆ ಬಿದ್ದಿದ್ದರೂ ನೆಲ ತೇವವಾಗಿರಲಿಲ್ಲ. ಹಸಿರು ಹುಲ್ಲಿನ ಮೇಲೆ ಜನರಿಲ್ಲದ ಕಡೆ ಅವರು ಕುಳಿತರು. ಬತ್ತಿಹೋಗಿದ್ದ ಬಾವಿಗಳಂತಹ ಕಣ್ಣುಗಳಿಂದ ಕಂಬನಿಯು ಒರತೆಗಳು ಒಸರಿ ಹೊರಕ್ಕೆ ಹರಿದುವು.

...ಅಲ್ಲಿಂದ ಅವರು ಎದ್ದಾಗ ಮುಚ್ಚಂಜೆಯಾಗಿತ್ತು. ಮೈ ಜುಮ್ಮೆನ್ನುತ್ತಿತ್ತು ನಡೆದುದನ್ನು ಸ್ಮರಿಸಿಕೊಂಡಾಗ. ನಿಜವಾಗಿಯೂ ಹೀಗೆ ಸಂಭವಿಸಿತೆ? ಇದು ಭ್ರಮೆಯಲ್ಲವೆ?–ಎಂದು ಯೋಚಿಸುವ ಹಾಗಾಯಿತು. ತಮ್ಮೊಂದಿಗೆ ಹಾಗೆ ವರ್ತಿಸಿದ್ದ ಆ ಪಶು, ಆತನೇ ಅಲ್ಲವೇ ಪುಟ್ಟಣ್ಣ? ತನ್ನ ಅಳಿಯ? ಹೆಂಡತಿಯನ್ನು ಗಂಡ ಬಯ್ಯುವುದು ಹೊಡೆಯುವುದು ಅಸಾಮಾನ್ಯವಾಗಿರಲಿಲ್ಲ. ಆದರೆ ಈ ರೀತಿಯ ನಡವಳಿಕೆ–

ಆ ಗುಂಪಿನಲ್ಲಿ ಅವರನ್ನು ಗುರುತು ಹಿಡಿದವರು ಯಾರೂ ಇದ್ದಂತೆ ಕಾಣಲಿಲ್ಲ. ಅದೊಂದು ರೀತಿಯಲ್ಲಿ ಸಮಾಧಾನದ ವಿಷಯವೇ. ಅಥವಾ, ಗುರುತಿನವರು ಒಬ್ಬರಾದರೂ ಇರುತ್ತಿದ್ದರೆ ಮೇಲಾಗುತ್ತಿತ್ತೋ ಏನೋ. ನಡೆದುದಕ್ಕೆ ಸಾಕ್ಷ್ಯವಾದರೂ–

ಯಾವ ಸುಡುಗಾಡಿಗೋಸ್ಕರ ಸಾಕ್ಷ್ಯ? ಈ ಮನುಷ್ಯನ ಜತೆಯಲ್ಲಿ ಮಗಳು ಬದುಕಬೇಕೆಂದು ಇನ್ನೂ ಆಸೆ ಇಟ್ಟುಕೊಂಡೇ ಇದ್ದೆನಲ್ಲ!

ಥೂ!

—ರಾಮಕೃಷ್ಣಯ್ಯನ ಮನೆಗೆ ಹೋಗಿ ಆತನಿಗೆ ಈ ವಿಷಯ ತಿಳಿಸಬೇಕೆಂದು ಕೃಷ್ಣಪ್ಪನವರಿಗೆ ಒಮ್ಮೆ ತೋರಿತು. ಬಳಿಕ. 'ಅವಸರವೇನು? ನಾಳೆ ಹೇಳಿದರಾಯ್ತು. ಅಥವಾ ನಾಡದು ಹೇಳಿದರಾಯ್ತು...' ಎಂದೂ ಅನಿಸಿತು.

ಮಗಳಿಗೆ ಹೇಳುವ ಅಗತ್ಯವಿಲ್ಲ; ಆಕೆಗೆ ತಿಳಿಯದಿರುವುದೇ ಮೇಲು–ಎಂದು ಮನಸ್ಸು ಬಿಗಿ ಹಿಡಿದೇ ಕೃಷ್ಣಪ್ಪನವರು ಮನೆಸೇರಿದರು.

ಕಾಲಿಗಿಷ್ಟು ನೀರು ಹನಿಸಿ ಒಳಬಂದೊಡನೆ ಅವರಿಗೆ ತುಂಬಾ ನಿತ್ರಾಣವೆನಿಸಿತು.

"ಯಾಕೋ ಆಯಾಸವಾಗ್ತಾ ಇದೆ. ಹಾಸಿಗೆ ಹಾಸ್ತೀಯಾ?" ಎಂದು ಮಗಳಿಗೆ ಅಂದರು.

ಸುನಂದಾಗೆ ಗಾಬರಿಯಾಯಿತು; ಆದರೆ ಅದನ್ನು ತೋರಿಸಿಕೊಳ್ಳದೆ, ತಂದೆಯ ಹಾಸಿಗೆಯನ್ನು ಸಿದ್ಧಪಡಿಸಿದಳು.

ಆತ ಸಂಧ್ಯಾವಂದನೆ ಮಾಡಿರಲಿಲ್ಲ.

"ಊಟ ಸ್ವಲ್ಪ ಹೊತ್ತು ಬಿಟ್ಕೊಂಡು ಮಾಡ್ತೀಯಾ?" ಎಂದು ಸುನಂದಾ ಕೇಳಿದಳು.

"ನನಗೆ ಹಸಿವಿಲ್ಲ. ಏನೋ ಪಟ್ಟಾಗಿ ತಿಂದು ಬಂದೆ. ನೀನು ಊಟಮಾಡಿ ಮಲಕೋ."

"ರಾಮಕೃಷ್ಣಯ್ಯನವರ ಮನೆಗೆ ಹೋಗಿದ್ಯಾ?"

"ಹೂಂ."

ಸುನಂದೆಯ ಮನಸ್ಸನ್ನು ಕೊರೆಯುತ್ತಿದ್ದುದು, ತಂದೆ ಮನೆಬಿಟ್ಟಾಗ ತಾನು ಆತನನ್ನು ವ್ಯಥೆಗೆ ಗುರಿಮಾಡಿದ್ದೆ—ಎಂಬ ಅಂಶ.

ಭಾರವಾದ ಹೃದಯದಿಂದ ಆಕೆ, ಸರಸ್ವತಿಗೆ ಉಣಿಸಿದಳು. ಹಾಸಿಗೆಯ ಮೇಲೆ ಮಲಗಿಸಿದಳು.

ತಂದೆಗೆ ನಿದ್ದೆ ಬಂದಿರಲಿಲ್ಲ.

"ಅಪ್ಪಾ..."

"ಏನು ಸುಂದಾ?"

ಸ್ವರದ ಕಂಪನವನ್ನು ಗುರುತಿಸಿ ಸುನಂದಾ ಬೇಗನೆ ತಂದೆಯ ಬಳಿಗೆ ಹೋದಳು. ಆತನ ಕಣ್ಣುಗಳು ದಿಂಬನ್ನು ತೋಯಿಸುತ್ತಿದ್ದುವು.

"ಯಾಕಪ್ಪ ಅಳ್ತಿದೀಯಾ?"

"ಯಾಕೂ ಇಲ್ಲಮ್ಮ...."

"ನಾನು ಒರಟಾಗಿ ಏನೋ ಅಂದ್ಬಿಟ್ಟೆ. ತಪ್ಪಾಯ್ತು ಅಪ್ಪಾ...."

ಕೃಷ್ಣಪ್ಪನವರು ಸ್ವಲ್ಪ ಗಟ್ಟಿಯಾಗಿಯೇ ಅತ್ತರು.

ಸಂಜೆಯ ಘಟನೆಯನ್ನು ಕುರಿತು ಮಗಳಿಗೆ ಹೇಳಬಾರದೆಂದು ಅವರು ಮಾಡಿದ್ದ ನಿರ್ಧಾರ, ಆ ಕಂಬನಿಯೊಡನೆ ಬೆರೆತು ಕರಗಿ ಹೋಯಿತು.

ಮಗಳನ್ನು ಬಳಿಯಲ್ಲಿ ಕೂಡಿಸಿಕೊಂಡು, ನಿಧಾನವಾಗಿ ತಡೆತಡೆದು, ನಡೆದುದೆಲ್ಲ ವನ್ನೂ ಅವರು ಹೇಳಿದರು.

ಸುನಂದಾ ಚುಟಿಪಿಟಕ್ಕೆನ್ನದೆ ತಂದೆ ಹೇಳಿದುದೆಲ್ಲವನ್ನೂ ಕೇಳಿದಳು. ಒಮ್ಮೆಯೂ ಕಂಬನಿ ಮಿಡಿಯಲಿಲ್ಲ.

ಸ್ವಲ್ಪ ಹೊತ್ತು ಮೌನವಾಗಿದ್ದು ಆಕೆಯೆಂದಳು:

"ಏಳಪ್ಪಾ. ಆ ಪುರಾಣ ಇಷ್ಟು ಸಾಕು. ಇನ್ನು ಏಳು. ಇಬ್ಬರೂ ಒಂದೊಂದು ತುತ್ತು ಊಟ ಮಾಡೋಣ."

## ೨೨

ಇದ್ದಕ್ಕಿದ್ದಂತೆ ಒಂದು ಮಧ್ಯಾಹ್ನ ಸುನಂದಾ ಒಬ್ಬಳೇ ಬಂದಾಗ, ಕುಸುಮೆಗೆ ಆಶ್ಚರ್ಯವಾಯಿತು.

"ಸರಸ್ವತಿ ಎಲ್ಲಿ?" ಎಂದು ಕುಸುಮಾ ಕೇಳಿದಳು.

"ಅವಳ ತಾತನ ಜತೆಯಲ್ಲಿ ಬಿಟ್ಟು ಬಂದೆ."

"ತಾಯಿನ ಬಿಟ್ಟಿರೋದು ಅಭ್ಯಾಸವಾಗ್ಲಿ ಅಂತಲೋ?"

ಸುನಂದಾ ನಕ್ಕಳು ಮಾತ್ರ.

"ಇಷ್ಟು ಬೇಗ್ನೆ ಬಂದಿದೀರಲ್ಲ. ಊಟವಾಗಿಲ್ಲಾಂತ ತೋರುತ್ತೆ."

"ಇವತ್ತು ದ್ವಾದಶಿ ಅಲ್ವೆ? ತಂದೆಗೆ ಬೆಳಗ್ಗೆನೇ ಊಟ."

"ಮೇಲಕ್ಬನ್ನಿ," ಎಂದಳು ಕುಸುಮಾ,

ಮಹಡಿಯ ಮೆಟ್ಟಲುಗಳನ್ನೇರುತ್ತ ಸುನಂದಾ ಕೇಳಿದಳು:

"ಪುರಸೊತ್ತಾಗಿದೀರಾ? ನಿಮ್ಮ ಕೈಲಿ ಸ್ವಲ್ಪ ಮಾತಾಡ್ಬೇಕು."

ಏನೋ ವಿಶೇಷವಿರಬೇಕೆಂದು ಕುಸುಮಾ ಆಗಲೆ ಊಹಿಸಿದ್ದುದು ಸರಿಯಾಗಿತ್ತು.

"ಕೂಡಿರಿ. ಬಂದ್ಬಿಟ್ಟೆ," ಎಂದು ಹೇಳಿ ಆಕೆ ಕೆಳಗೆ ಹೋದಳು.

ಕೊಠಡಿಯ ಮಧ್ಯದಲ್ಲಿ ಪುಟ್ಟಗಿನ ದುಂಡು ಮೇಜಿನ ಮೇಲೆ 'ಇಲ್ಲಸ್ಟ್ರೇಟೆಡ್ ವೀಕ್ಲಿ' ಇತ್ತು. ಅದನ್ನೆತ್ತಿಕೊಂಡು ಸುನಂದಾ ಪುಟ ತಿರುವಿದಳು. ಬಣ್ಣ–ಚಿತ್ರ... ಬಣ್ಣಗಳು–ಚಿತ್ರಗಳು...ಮತ್ತೆ ಹತ್ತಾರು ನೂತನ ದಂಪತಿ ಭಾವಚಿತ್ರಗಳಿದ್ದ ಒಂದು ಪುಟ. ಹಲವು ಹೊಸ ಜೋಡಿಗಳು! ಸುನಂದಾ ಅದನ್ನು ನೋಡಲಾಗದೆ ಹಿಂಬದಿಯ ಹೊದಿಕೆ ಮುಚ್ಚಿ, 'ವೀಕ್ಲಿ'ಯನ್ನು ದುಂಡು ಮೇಜಿನ ಮೇಲೆ ಇರಿಸಿದಳು.

ಕುಸುಮಾ ಬಂದಳು. ಸುನಂದೆಗಿದುರಾಗಿಯೇ ಬೆತ್ತದ ಕುರ್ಚಿಯ ಮೇಲೆ ಕುಳಿತು ಅಂದಳು.

"ಹೇಳಿ ಸುನಂದಕ್ಕ. [ಇಂಗ್ಲಿಷಿನಲ್ಲಿ—] ತಯಾರಾಗಿದೀನಿ."

ಎಷ್ಟೋ ಕಾಲದಿಂದ ಮನಸ್ಸಿನೊಳಗೇ ಕುದಿಯುತ್ತಿದ್ದ ವಿಚಾರ. ಮೂರು ದಿನಗಳ ಹಿಂದೆ ತನ್ನ ತಂದೆಗಾದ ಅನುಭವದ ಬಳಿಕಲಂತೂ ನಿರ್ದಿಷ್ಟ ರೂಪು ತಳೆಯ ತೊಡಗಿದ್ದ ಅಂಶ. ರಾಧಮ್ಮನೊಡನೆ ಆ ಪ್ರಸ್ತಾಪ ಸಾಧ್ಯವಿರಲಿಲ್ಲ. ಕುಸುಮೆಯೊಂದಿಗಾದರೆ ಸಂಕೋಚವಿಲ್ಲದೆ ಮಾತನಾಡಬಹುದು...

ಮಾತನಾಡಲೆಂದೇ ಸುನಂದಾ ಬಂದಿದ್ದಳು. ಆದರೆ ಕುಸುಮಾ "ಹೇಳಿ" ಎಂದಾಗ ಮಾತ್ರ, ತಲೆಯೆಲ್ಲ ಒಮ್ಮೆಲೆ ಬರಿದಾಗಿ ಸುನಂದೆಗೆ ಕಂಡಿತು.

ಗೆಳತಿಯ ಮೌನ ಕುಸುಮಾಗೆ ಅರ್ಥವಾಗದಿರಲಿಲ್ಲ. ವಿಷಯ ಗಹನವಾಗಿರುವುದರಿಂದಲೇ ಈ ಅಳುಕು. ಆ ವಿಷಯವೇ.

'ಹೇಳಿ'—ಎಂದು ಮತ್ತೊಮ್ಮೆ ಆಕೆ ಸೂಚಿಸಲಿಲ್ಲ. ನೆಲವನ್ನು ದಿಟ್ಟಿಸುತ್ತಿದ್ದ

ಸುನಂದೆಯ ಮುಖವನ್ನೆ ನೋಡುತ್ತ ಸಹನೆಯಿಂದ ಕುಸುಮಾ ಕಾದುಕುಳಿತಳು.

ಬಂದುದಾಗಿತ್ತು. ಈಗ ಮಾತನಾಡದೆಯೆ ಹಿಂತಿರುಗುವುದು ಸಾಧ್ಯವಿರಲಿಲ್ಲ. ಒಳ್ಳೆಯ ಸಂದಿಗ್ಧ ಎಂದುಕೊಂಡು ಸುನಂದಾ ಕಾಲ ಬೆರಳನ್ನು ನೆಲಕ್ಕೆ ತೀಡಿದಳು. [ಉಗುರು ಬೆಳೆದಿತ್ತು. ತೆಗೆದೇ ಇರಲಿಲ್ಲ.]

ಇನ್ನೂ ಸುಮ್ಮನಿದ್ದು ನಗೆಗೀಡಾಗುವುದರಲ್ಲಿ ಅರ್ಥವಿಲ್ಲವೆಂದು ಸುನಂದಾ ಬಾಯಿ ತೆರೆದಳು.

"ನನಗೆ ಜೀವನ ಬೇಸರವಾಗಿದೆ ಕುಸುಮಾ."

ಅದನ್ನು ಕೇಳಿ ಕುಸುಮಳಿಗೆ ಸಂಕಟವಾಯಿತು.

"ಇದೇನು ಸುನಂದಕ್ಕ ನೀವು ಹೇಳ್ತಿರೋದು? ಯಾಕೆ ಈ ಮಾತು?"

"ನನ್ನಿಂದಾಗೊಲ್ಲ ಕುಸುಮಾ. ನಾನು ಇದ್ದು ಯಾರಿಗೂ ಪ್ರಯೋಜನವಿಲ್ಲ. ಎಲ್ಲರಿಗೂ ತೊಂದರೆಯೇ."

"ಯಾರು ಹಾಗಂದೋರು? ಏನಾಗಿದೆ ನಿಮಗೆ?"

ಸುನಂದೆಯ ಕಣ್ಣುಗಳು ತೇವಗೊಂಡುವು. ಗೆಳತಿ ಇನ್ನು ಅಳುತ್ತಾಳೆ; ಆಕೆ ಅಳುವುದೇ ಮೇಲು,—ಎನಿಸಿತು ಕುಸುಮೆಗೆ.

ಆದರೆ ಆ ತೇವ ಆರಿತು. ಅಳಲಿಲ್ಲ ಸುನಂದಾ.

"ನನಗಿಲ್ಲದೆ ಹೋದರೂ ನನ್ನ ತಂದೆಗೆ ಆಸೆ ಇತ್ತು—ಆತ ಬದಲಾಯಿಸ್ತಾನೆ ಅಂತ. ಈಗ ಆ ತಂದೆಗೇ ಎಂಥ ಅನುಭವವಾಯ್ತು ಗೊತ್ತೆ? ನೀವು ಕನಸಿನಲ್ಲೂ ಊಹಿಸೋಕೆ ಆಗದಂಥ ಕಥೆ– ಹೇಳ್ಲೆ?"

...ಕುಸುಮಾ ಕೇಳಿದಳು. ಕೇಳುತ್ತ ಆಕೆಯ ಮೈ ಮುಳ್ಳಾಯಿತು.

ಆ ಕತೆ ಮುಗಿದಾಗ ಸುನಂದೆಯ ದೇಹ ಕುಗ್ಗಿತು— ಮಾತನಾಡುವ ಶಕ್ತಿಯೇ ತನಗೆ ಉಡುಗಿ ಹೋದಂತೆ ಅನಿಸಿತು ಕುಸುಮೆಗೆ.

ದೀರ್ಘವಾಗಿ ಉಸಿರೆಳೆದು ಬಿಡುತ್ತ, ಸುನಂದಾ ಮೆಲ್ಲನೆ ಚೇತರಿಸಿಕೊಂಡಳು.

"ಕುಸುಮಾ. ಈಗ ಉತ್ತರ ಹೇಳಿ. ಇಂಥ ಮನುಷ್ಯ ನನ್ನ ಗಂಡ ಅಂತ ಯಾಕಾದರೂ ಅನಿಸ್ಕೊಳ್ಲಿ? ಹೀಗಿರೋದಕ್ಕೆ ಏನಾದರೂ ಅರ್ಥ ಉಂಟೆ? ಯಾವಾ ಗಲೂ ಎದೆ ಮೇಲಿನ ಈ ಕುರ ಇಟ್ಕೊಂಡೇ ಬದುಕೋಕಾಗುತ್ತಾ?"

ಏನಾದರೂ ಹೇಳಬೇಕೆಂದು ಕುಸುಮಾ ಚಡಪಡಿಸಿದಳು. ಆದರೆ ಹೇಳಲು ಏನೂ ತೋಚಲಿಲ್ಲ.

"ಯಾಕೆ ಸುಮ್ಮನಿದೀರಿ ಕುಸುಮಾ. ವಿಚಿತ್ರವಾಗಿ ಮಾತಾಡ್ತಿದೀನಾ ನಾನು? ನನಗೆ ಹುಚ್ಚು ಹಿಡಿದಿದೇಂತ ನೀವು ಭಾವಿಸೋದಿಲ್ಲ ತಾನೆ?"

"ಯಾಕಕ್ಕ ಹಾಗೆ ಹೇಳ್ತೀರಾ? ನೀವು ಅನುಭವಿಸ್ತಿರೋದು ಹೆಣ್ಣಾದ ನನಗೆ ಅರ್ಥವಾಗೋದಿಲ್ಲಾಂತಲೆ?"

"ಮತ್ತೆ? ಮಾತನಾಡಿ ಹಾಗಾದರೆ. ಸುಮ್ನಿರಬೇಡಿ, ದಮ್ಮಯ್ಯ. ನೀವು

ನನ್ನನ್ನು ಬಯ್ದರೂ ಸರಿಯೆ. ಆದರೆ ಸುಮ್ನೆ ಮಾತ್ರ ಇರ್ಬೇಡಿ."

"ಇಂಥ ದುರವಸ್ಥೆ ಪರಮ ಶತ್ರುವಿಗೂ ಬರಬಾರದು!"

"ನೀವು ಮರೆತಿರಾ ಕುಸುಮಾ? ಹಿಂದೆ ನಾನಿಲ್ಲೇ ಇದ್ದಾಗ ನಾವಿಬ್ಬರೂ ಗಂಭೀರ ಚರ್ಚೆ ನಡೆಸ್ತಿದ್ವಿ. 'ಮಾಡೋಕೆ ಏನೂ ಇಲ್ದೇ ಹೋದ್ರೂ ಮಾತಾಡೋಕೆ ಏನಂತೆ?' ಎಂದಿದ್ರಿ ನೀವು. ಆದರೆ ಆಗಲೇ ನನ್ನ ಪಾಲಿಗೆ ಅದು ಬರಿ ಮಾತು ಮಾತ್ರ ಆಗಿರ್ಲಿಲ್ಲ."

"ಆಗ ನನಗೆ ನಿಮ್ಮ ವಿಷಯ ತಿಳಿದಿರ್ಲಿಲ್ಲ ಸುನಂದಕ್ಕ."

"ನನ್ನ ಮದುವೆ ಯಾವತ್ತೋ ಹಾಸ್ಯಾಸ್ಪದವಾಯ್ತು ಕುಸುಮಾ. ಆಗಲೇ ಅದನ್ನು ಮುಕ್ತಾಯಗೊಳಿಸ್ಬೇಕೂಂತಿದ್ದೆ. ಆದರೆ ಧೈರ್ಯವಿರಲಿಲ್ಲ. ತಂಗಿಯ ಯೋಚ್ನೆ, ಮಗುವಿನ ಯೋಚ್ನೆ, ಸಮಾಜದ ನಿಂದೆ...."

"ಸಮಾಜಕ್ಕೆ ಕಣ್ಣಿಲ್ಲ."

"ಈಗ ಹೀಗಿದೀನಿ. ನನ್ನನ್ನೇನೂ ಪರಮ ಸಾತ್ವಿಕಳು ಅಂತ ಜನ ಹೇಳ್ತಾರೇನು? ಕೆಟ್ಟ ನಡತೆಗಾಗಿ ಗಂಡ ಬಿಟ್ಟಿದಾನೆ ಅಂತಾರೆ. ಗಂಡನನ್ನು ಮಾತ್ರ ಆ ಜನ ಏನೂ ಅನ್ನೋದಿಲ್ಲ."

"ಅದು ಲೋಕ ನಿಯಮ."

"ಗಂಡನ ನಡತೆ ಕೆಟ್ಟಿದೇಂತ ಹೆಂಡತಿ ಬಿಡೋಕಾಗಲ್ವ?"

"ಅದು ಅವರ ದೃಷ್ಟೀಲಿ ಧರ್ಮವಲ್ಲ."

ಮಾತು ನಿಲ್ಲಿಸಿದ ಸುನಂದಾ ಅಲ್ಲೇ ಬಾಗಿಲ ಮೇಲ್ಗಡೆ ಇದ್ದ ವರ್ಣಚಿತ್ರವನ್ನು ದಿಟ್ಟಿಸಿ ನೋಡಿದಳು. ಕಂದಮ್ಮನನ್ನು ಮಡಿಲಿಗೆ ಬರಸೆಳೆದು ಮೈ ಮರೆತ ತಾಯಿ. ಹಿಂದೆಯೊಮ್ಮೆ ಕುಸುಮಾ ಹೇಳಿದ್ದಳು: 'ನನ್ನ ತಮ್ಮ ಮಾಡಿದ್ದು. ಚೆನ್ನಾಗಿ ಚಿತ್ರ ತೆಗೀತಾನೆ.'

ಆ ಚಿತ್ರದಿಂದ ಸುನಂದಾ ದೃಷ್ಟಿ ಕದಲಿಸಿದಳು.

"ನಾನು ತಂತಿ ಮೇಲೆ ನಡೀತಿದೀನಿ ಅನ್ನೋದು ನನಗೆ ಗೊತ್ತಿದೆ, ಕುಸುಮಾ. ಈಗ ನಾನೇನಾದರೂ ಮಾಡಲೇ ಬೇಕು. ನನ್ನ ಮೇಲೆ ಇನ್ನು ಆತನಿಗೆ ಅಧಿಕಾರವಿದೆ ಅನ್ನೋದರಲ್ಲಿ ಅರ್ಥವಿಲ್ಲ. ತನ್ನ ಮೇಲಂತೂ ನನಗೆ ಯಾವ ಹಕ್ಕೂ ಇಲ್ಲಾಂತ ಆಗಲೆ ಹೇಳಿದಾನೆ."

'ಪತಿಯೇ ಪರದೈವ' ಎನ್ನುವ ಮನೋವೃತ್ತಿಯಿಂದ, ಆ ಕೆಟ್ಟ ಮನುಷ್ಯನನ್ನು ಏಕವಚನದಲ್ಲಿ ಸಂಬೋಧಿಸುವ ಪರಿಸ್ಥಿತಿಯವರೆಗೆ. ಎಷ್ಟೊಂದು ದೂರ, ಎಷ್ಟೊಂದು ಅಂತರ! ಆತ ಮನುಷ್ಯ ಸ್ವರೂಪದ ರಾಕ್ಷಸ. ಸಂದೇಹವಿರಲಿಲ್ಲ. ಅಂತಹವನನ್ನು ಏಕವಚನದಿಂದಲ್ಲದೆ ಬೇರೆ ಹೇಗೆ ಕರೆಯಬೇಕು?

ಈಗ ಸುನಂದೆಯ ಮಾತುಗಳು ನಿಧಾನವಾಗಿ ಬರತೊಡಗಿದುವು.

"ನಾನು ಹಿಂದೂ ಸ್ತ್ರೀ. ಪ್ರತಿಯೊಬ್ಬರೂ ನನಗದನ್ನು ನೆನಪು ಹುಟ್ಟಿಸ್ತಾನೇ

ಇರ್ತಾರೆ. ನನ್ನನ್ನು ಬೆನ್ನ ಹಿಂದೆ ಲೇವಡಿ ಮಾಡೋ ಜನರೇ ಎದುರಿಗೆ ನೀತಿಪಾಠದ ಮಂತ್ರ ಜಪಿಸ್ತಾರೆ. ಗೃಹ ದೇವತೆ–ಆದರ್ಶ–ಸತಿ! ಎಂಥೆಂಥ ಕಲ್ಪನೆಗಳು. ಆದರೆ ನಾನು ದೇವತೆಯಲ್ಲ, ಕುಸುಮಾ. ದೇವತೆಯಾಗುವುದು ನನಗೆ ಬೇಕಾಗಿಲ್ಲ. ನಾನು ಮನುಷ್ಯಳಾದರೆ ಸಾಕು–ಒಳ್ಳೇ ಮನುಷ್ಯಳಾದರೆ ಸಾಕು..."

ಕುಸುಮಾ ಕಿವಿಕೊಡುತ್ತಿದ್ದಳೆಂಬುದನ್ನು ಖಚಿತ ಮಾಡಿಕೊಂಡು ಸುನಂದಾ ಮುಂದುವರಿದಳು:

"ನಾನು ಸ್ವತಂತ್ರಳಾದರೆ ಮಾತ್ರ ಬದುಕಿರೋದು ಸಾಧ್ಯ."

ಹೌದೆಂದು ಕುಸುಮಾ ತಲೆದೂಗಿದಳು.

"ನಿಮಗೂ ನಿಮ್ಮವರಿಗೂ ಎಷ್ಟೋ ಜನ ಗುರುತಿದಾರೆ. ನನಗೊಂದು ಕೆಲಸ ಕೊಡಿಸ್ತೀರಾ?"

"ಎಂಥ ಕೆಲಸ?"

"ಎಂಥದಾದರೂ. ಇಷ್ಟೊಂದು ಓದಿದೀನಲ್ಲ. ಅದರ ಪ್ರಯೋಜನವಾಗುವಂಥ ಕೆಲಸ."

"ಆಗಲಿ ಸುನಂದಕ್ಕ. ವಿಚಾರಿಸಿ ಹೇಳ್ತೀನಿ. ನಿರಾಸೆಗಿಂತ ಹೀಗೆ ಧೈರ್ಯವಾಗಿರೋದೇ ಮೇಲು."

"ಹೇಳಿದೆನಲ್ಲ ಕುಸುಮಾ? ಈಗಿರೋ ಹಾಗೆ ನನಗೆ ಬದುಕೋದು ಇಷ್ಟವಿಲ್ಲ. ಈ ಪರಿಸ್ಥಿತೀನ ಕೊನೆಗಾಣಿಸಿದರೇನೇ ಮುಂದಿನ ಯೋಚನೆ ಸಾಧ್ಯ. ನಾನು ದುಡುಕಿ ಮಾತಾಡ್ತಿದೀನಿಂತ ಭಾವಿಸ್ಬೇಡಿ. ಎಷ್ಟೋ ಕಾಲ ಯೋಚಿಸಿ ಯೋಚಿಸಿ ಈ ಮಾತನ್ನ ಹೇಳ್ತಿದೀನಿ."

"ಗೊತ್ತು ಅಕ್ಕ."

"ಇವತ್ತು ಮನೆ ಬಿಟ್ಟದ್ದು ಎರಡು ಕೆಲಸಕ್ಕಾಗಿ. ಒಂದು, ನಿಮ್ಜತೇಲಿ ಮಾತನಾಡಿ ನಿಮ್ಮ ಅಭಿಪ್ರಾಯ ತಿಳಿಯೋದು; ಎಲ್ಲಾದರೂ ಕೆಲಸ ಕೊಡಿಸೀಂತ ಕೇಳೋದು. ಆಮೇಲೆ, ಹೋದ ಸಾರೆ ಹೋಗಿದ್ದೆನಲ್ಲ, ಸೋಮಶೇಖರ ಅಂತ? ಅವರನ್ನೊಮ್ಮೆ ಹೋಗಿ ನೋಡೋದು. ಕಾನೂನು ಈ ವಿಷಯದಲ್ಲಿ ಏನು ಹೇಳುತ್ತೇಂತ ತಿಳಕೋಬೇಕು."

ಮಾತುಕತೆ ಒಂದು ಹದಕ್ಕೆ ಬಂತೆಂದು ಕುಸುಮೆ ತಿಳಿದು, "ರಾಧಮ್ಮನಲ್ಲಿಗೆ ಹೋಗೋಣವೆ?" ಎಂದು ಕೇಳಿದಳು.

"ಹೂಂ. ಅವರಿಗೆ ನಾನೇನೂ ಹೇಳೋದಿಲ್ಲ ಕುಸುಮಾ, ನಿಧಾನವಾಗಿ ನೀವೇ ಅವರಿಗೆ ತಿಳಿಸಿ. ನನ್ನ ಅಭಿಪ್ರಾಯ ಅವರಿಗೆಷ್ಟು ಇಷ್ಟವಾಗುತ್ತೋ..."

ಕುಸುಮಾ, ಕಾಫಿ ತಿಂಡಿ ತರಲೆಂದು ಏಳುತ್ತ ಅಂದಳು:

"ನಿಮ್ಮ ತಂದೆಯವರಿಗೆ ಹೇಳಿದೀರಾ?"

"ಇಲ್ಲ, ಕುಸುಮಾ. ಅವರು ಒಪ್ಪೋದು ಕಷ್ಟ. ಆದರೂ ಒಪ್ಪಿಸಬಲ್ಲೆ ಅನ್ನೋ ವಿಶ್ವಾಸ ಇದೆ. ನಾನೇನೂ ನೀತಿಗೆಟ್ಟವಳಲ್ಲವಲ್ಲ!"

ನಿದ್ದೆಯಿಂದ ಎಚ್ಚರಗೊಂಡು ಅಳುತ್ತಲಿದ್ದ ಸೋಮನಾಥನನ್ನು ಕೆಲಸದ ಹುಡುಗಿ ಎತ್ತಿಕೊಂಡು ಮೇಲಕ್ಕೆ ಬಂದಳು.

ಆ ಮಗುವನ್ನು ತನ್ನೆದೆಗೆ ಕರೆದು ಕುಸುಮಾ ಸಂತೈಸಿದಳು.

ಕುಳಿತೇ ಇದ್ದ ಸುನಂದೆಗೆ ತಾನು ತುಂಬಾ ಆಯಾಸಗೊಂಡಿದ್ದಂತೆ ಭಾಸವಾಯಿತು.

## ೨೩

'ಪಾಪ'ನಿಲ್ಲದೆ ಒಂಟಿಯಾಗಿಯೆ ಬಂದ ಸುನಂದೆಯನ್ನು ಗಿರೀಶ ಗುರುತಿಸಿದ. ಸೀತಮ್ಮ ನಡುಮನೆಗೆ ಕರೆದೊಯ್ದು, ಹಾಸಿದ್ದ ಜಮಖಾನದ ಮೇಲೆ ಆಕೆಯನ್ನು ಕುಳ್ಳಿರಿಸಿದಳು.

ಅನಂತರ ಅರ್ಧ ಘಂಟೆಯಲ್ಲಿ ಸೋಮಶೇಖರ ಮನೆಗೆ ಬಂದ.

ಆತ ಮುಖ ತೊಳೆಯಲೆಂದು ಸ್ನಾನದ ಮನೆಗೆ ಹೋದಾಗ, ಸೀತಮ್ಮ ಟವೆಲಿನೊಡನೆ ಹಿಂಬಾಲಿಸಿ ಬಂದು ಅಂದಳು:

"ಯಾಕೋ ಒಂದು ಥರಾ ಇದಾಳೆ. ನೋಡಿದರೆ ಅಯ್ಯೋ ಅನಿಸುತ್ತೆ. ಏನು ಕಷ್ಟವೋ ಏನೋ."

ಸೋಮಶೇಖರ ಸುಮ್ಮನಿದ್ದ.

ನಡುಮನೆಗೆ ಕಾಫಿ ತಂದಿರಿಸಿ, "ನೀವೂ ಇಲ್ಲಿಗೇ ಬನ್ನಿ," ಎಂದು ಗಂಡನನ್ನು ಸೀತಮ್ಮ ಕರೆದಳು.

ಕಾಫಿ ಕುಡಿಯುತ್ತಿದ್ದಂತೆ ಸುನಂದಾ ಹೇಳಿದಳು:

"ವಕೀಲರಿಗೆ ಪುರಸೊತ್ತಿದೆಯಾ?"

"ಕಕ್ಷಿಗಾರರು ಬರೋದು ಏಳು ಗಂಟೆ ನಂತರ. ಅಷ್ಟರವರೆಗೂ ಪುರಸೊತ್ತೇ."

"ನಾನೂ ಒಬ್ಬಳು ಕಕ್ಷಿಗಾರಳಾಗಿ ಬಂದಿದೀನಿ."

"ಕೇಳಿದೆಯಾ ಸೀತಾ? ಬಡ ವಕೀಲರನ್ನ ಹ್ಯಾಗೆ ಹಂಗಿಸ್ತಿದಾರೆ!" ಎಂದ ಸೋಮಶೇಖರ.

"ಹಾಗಲ್ಲ. ಸಹಜವಾಗಿಯೇ ಹೇಳ್ದೆ. ನಿಮ್ಮ ಜತೇಲಿ ಮಾತಾಡ್ಬೇಕಾಗಿತ್ತು," ಎಂದಳು ಸುನಂದಾ.

ಸೀತಮ್ಮ ಆಕೆಯ ಕೆಂಪಡರಿದ ಮುಖವನ್ನು ನೋಡಿದಳು.

"ಆಗಲಿ, ಏನು ಬೇಕೋ ಕೇಳಿ."

"ಇಲ್ಲೇ ಕೂತಿರೋಣವೇ?"

"ಅದಕ್ಕೇನಂತೆ?"

ಸೀತಮ್ಮ ಎದ್ದಳು.

"ನೀವೂ ಕೂತ್ಕೊಳ್ಳಿ" ಎಂದಳು ಸುನಂದಾ.

"ಬಂದೆ," ಎನ್ನುತ್ತ, ಕಾಫಿಯ ಲೋಟಗಳನ್ನು ಒಳಗಿರಿಸಿ, ಗಿರೀಶನನ್ನು ಪಕ್ಕದ ಮನೆಗೆ ದಾಟಿಸಿ, ಸೀತಮ್ಮ ಬಂದಳು.

ಸುನಂದಾ ಆರಂಭಿಸಿದಾಗಲೇ ಸೋಮಶೇಖರನೆಂದ:

"ನಿಮ್ಮ ಭಾವ ಈ ವಿಷಯವೆಲ್ಲ ಆಗಲೆ ಹೇಳಿದಾರೆ."

"ಅವರು ಹೇಳಿದ್ದು ಒಂದು ರೀತೀಲಿ ಒಳ್ಳೇದೇ ಆಯ್ತು. ಆದರೆ ಅದೇ ಪೂರ್ಣ ಕಥೆಯಲ್ಲ."

"ಅದೂ ನಿಜ, ಅನ್ನಿ."

ಸುನಂದಾ ಮಾತನಾಡುತ್ತಿದ್ದಂತೆ ವಿವಿಧ ಭಾವನೆಗಳು ಸೀತಮ್ಮನನ್ನು ಕಾಡಿದುವು. 'ಇಷ್ಟು ಓದಿ ತಿಳಕೊಂಡಿರೋ ಹೆಣ್ಣು ಇಷ್ಟೊಂದು ಕಷ್ಟ ಅನುಭವಿಸ್ಬೇಕಾಯ್ತೆ?' 'ಈಕೆ ಧೈರ್ಯವಂತೆ' 'ಅಬ್ಬ! ನನಗೆಲ್ಲಾದರೂ ಪುಟ್ಟಣ್ಣನಂಥ ಗಂಡ ದೊರೆತಿದ್ದರೆ ನಾನು ಸತ್ತೇಹೋಗ್ತಿದ್ದೆ.' 'ಈಕೆ ಈಗ ಯಾವ ಪರಿಹಾರ ಯೋಚಿಸ್ತಿದಾಳೆ?' 'ನನ್ನ ಗಂಡನಿಂದಾಗೋ ಸಹಾಯ ಎಂಥದು?....'

ಸೋಮಶೇಖರನಿಗೂ ಉಸಿರು ಕಟ್ಟುವ ಹಾಗಾಯಿತು.

ಆಕೆ ಬರಿಯ ಸಹಾನುಭೂತಿಯ ಮಾತಿಗಾಗಿ ಬಂದಿರಲಿಲ್ಲ.

"ನೀವು ನನ್ನ ಒಡಹುಟ್ಟಿದವರೂಂತ್ಲೆ ಇಟ್ಕೊಳ್ಳಿ. ಆಗ ಏನು ಸಲಹೆ ಕೊಡ್ತಿದ್ರಿ?"

ಕಕ್ಷಿಗಾರರೆದುರು ಮಾತಿನ ಮಹಾ ನಿಪುಣನಾಗುವ ವಕೀಲರು ಈ ದಿನ ತಡವರಿಸಬೇಕಾಯಿತು. ಆದರೂ ಸೋಮಶೇಖರನೆಂದ:

"ಅದು ಒಡಹುಟ್ಟಿದವನ ದೃಷ್ಟಿಕೋನದ ಮೇಲೆ ಹೊಂದಿಕೊಂಡಿದೆ."

"ಅಂದರೆ?"

"ಆತ ಸಂಪ್ರದಾಯವಂತನಾದರೆ, ನಿಮ್ಮ ಹಣೇ ಬರಹ—ಎನ್ನಬಹುದು. ನಿಮ್ಮನ್ನು ತುಂಬಾ ಪ್ರೀತಿಸಿದರೂ ಪ್ರವಾಹಕ್ಕೆ ಎದುರು ಹೋಗೋ ಶಕ್ತಿ ಇಲ್ಲದೆ ಇದ್ದರೆ, ಮೌನವಾಗಿ ಮರುಗಬಹುದು. ಬದಲು, ಬಹಳ ಧೈರ್ಯವಂತನಾದರೆ ಆ ಸಂಬಂಧವನ್ನು ಕಡಿದುಕೋ—ಅಂತ ಹೇಳಬಹುದು."

ಸೀತಮ್ಮ ಗಂಡನ ಮುಖ ನೋಡಿದಳು. ಅವರಿಬ್ಬರನ್ನೂ ಸುನಂದಾ ದಿಟ್ಟಿಸಿದಳು.

"ನಾನು ಯಾವುದೋ ನಿರ್ಧಾರ ಮಾಡೋ ಧೈರ್ಯ ಇದೆಯೇ ಅಂತ ನನ್ನನ್ನು

ನಾನೇ ಪರೀಕ್ಷೆ ಮಾಡ್ಕೊಳ್ತಾ ಇದೀನಿ."

"ನಿಮ್ಮ ಸಂಕಟದ ಎದುರಿಗೆ ಮಾತೇ ಹೊರಡೋದಿಲ್ಲ."

"ವಕೀಲರು ತುಂಬಾ ತಣ್ಣಗಿರಬೇಕಲ್ಲವೆ—ಡಾಕ್ಟರ ಹಾಗೆ? ಇಬ್ಬರಲ್ಲೂ ಭಾವೋದ್ವೇಗ ಸಲ್ಲದು ಅಂತ ಎಲ್ಲಿಯೋ ಓದಿದ್ದೆ."

ಸೋಮಶೇಖರ ನಗಲು ಯತ್ನಿಸಿದ.

"ಎಷ್ಟಾದರೂ ಮನುಷ್ಯ ಮನುಷ್ಯನೇ."

"ಧೈರ್ಯವಂತನಾದ ಅಣ್ಣನೇ ಇದ್ದು ಧೈರ್ಯದ ಸಲಹೆಯನ್ನು ಕೊಟ್ಟ ಅಂತಿಟ್ಕೊಳ್ಳೋಣ. ಅಂಥ ಸಂದರ್ಭದಲ್ಲಿ ಕಾನೂನು ಏನು ಹೇಳುತ್ತೆ ತಿಳಿಸ್ತೀರಾ?"

ಸೋಮಶೇಖರ ಎದ್ದುಹೋಗಿ ಸರ್ಕಾರಿ ಗೆಜೆಟ್ಟನ್ನು ಎತ್ತಿಕೊಂಡು ಬಂದ. ಹಾಳೆಗಳನ್ನು ತೋರಿಸುತ್ತ, "ಇದು ಹೊಸತಾಗಿ ಜಾರಿಗೆ ಬಂದಿರೋ ಹಿಂದೂ ವಿವಾಹ ಶಾಸನ," ಎಂದ.

ಸುನಂದಾ ಶಿಲಾಪ್ರತಿಮೆಯಂತೆ ಕುಳಿತಳು, ಸೀತಮ್ಮ ಗೋಡೆಗೊರಗಿದಳು. ಸೋಮಶೇಖರ ಆರಂಭಿಸಿದ.

"ಗಂಡ ಹೆಂಡಿರ ನಡುವೆ ವಿರಸ ಏರ್ಪಟ್ಟು ಅದನ್ನು ಪರಿಹರಿಸೋಕೆ ಸಾಮಾನ್ಯ ಪ್ರಯತ್ನಗಳೆಲ್ಲ ವಿಫಲವಾದಾಗ ಕಾನೂನು ಮೂರು ಮಾರ್ಗ ತೋರಿಸುತ್ತೆ. ಗಂಡನೋ, ಹೆಂಡತಿಯೋ ಜತೆಯಾಗಿ ವಾಸಮಾಡೋಕೆ ಇಷ್ಟವಿಲ್ಲದೆ ಬೇರೆಯಾಗಿದ್ದರೆ, ವ್ಯಥೆಗೆ ಗುರಿಯಾಗುವ ವ್ಯಕ್ತಿ, ದಾಂಪತ್ಯ ಹಕ್ಕುಗಳನ್ನು ದೊರಕಿಸಿಕೊಡ್ಬೇಕೂಂತ ನ್ಯಾಯಾಧೀಶರಿಗೆ ಅರ್ಜಿ ಹಾಕ್ಬಹುದು. ಅರ್ಜೀನ ಎತ್ತಿ ಹಿಡಿದು ನ್ಯಾಯಸ್ಥಾನ ತೀರ್ಪು ಕೊಡುತ್ತೆ ಅಂತಿಟ್ಕೊಳ್ಳೋಣ. ಆಮೇಲೂ ವಿರಸ ಸರಿಹೋಗದಿದ್ದರೆ, ವಿಚ್ಛೇದನಕ್ಕೆ ಅದು ಕಾರಣವಾಗುತ್ತೆ. ಈ ಹೆಜ್ಜೆಯೇ Restitution of Conjugal Rights. ಇನ್ನೊಂದು Judicial Separation ಅಂತ. ಗಂಡನೋ ಹೆಂಡತಿಯೋ ಒಬ್ಬರನ್ನೊಬ್ಬರು ಬಿಟ್ಟುಬಿಟ್ಟಿದ್ದರೆ, ಕ್ರೂರವಾಗಿ ವರ್ತಿಸಿದರೆ, ಅವಿಧೇಯತೆಯಿಂದಿದ್ದರೆ, ಕೆಟ್ಟರೋಗಗಳಿದ್ದರೆ, ಇಬ್ಬರೂ ಬೇರೆಬೇರೆಯಾಗಿ ಇರೋದಕ್ಕೆ ಅವಕಾಶ ಕೊಡೀಂತ ನ್ಯಾಯಸ್ಥಾನಕ್ಕೆ ವ್ಯಥೆಗೆ ಗುರಿಯಾದೋರು ಅರ್ಜಿ ಹಾಕ್ಬಹುದು. ಇನ್ನೊಂದು Divorce—ಹದಿಮೂರನೆ ಸೆಕ್ಷನ್. ವಿವರ ಓದ್ಲಾ?"

ಅರ್ಧ ಮುಚ್ಚಿಕೊಂಡಿದ್ದ ಕಣ್ಣುಗಳನ್ನು ತೆರೆದು ಸುನಂದಾ ಅಂದಳು:

"ಓದಿ."

"ಈ ಶಾಸನ ಜಾರಿಗೆ ಬಂದ ಅನಂತರ ಅಥವಾ ಬರುವುದಕ್ಕೆ ಮುಂಚೆ ಆದ ಯಾವುದೇ ಮದುವೆಯನ್ನು, ಗಂಡ ಅಥವಾ ಹೆಂಡತಿಯ ಅರ್ಜಿ ಪ್ರಕಾರ, ವಿಚ್ಛೇದನದ ತೀರ್ಪು ಕೊಟ್ಟು ವಿಸರ್ಜಿಸಬಹುದು. ಆ ತೀರ್ಪಿಗೆ ಇರಬೇಕಾದ ಆಧಾರಗಳೇನೆಂದರೆ—

೧. ಆ ವ್ಯಕ್ತಿ [ಗಂಡ ಅಥವಾ ಹೆಂಡತಿ] ಬೇರೆಯವರ ಜತೆ ದೈಹಿಕ ಸಂಬಂಧ ಬೆಳೆಸಿರಬೇಕು; ಅಥವಾ

೨. ಮತಾಂತರ ಹೊಂದಿರಬೇಕು; ಅಥವಾ

೩. ಅರ್ಜಿಕೊಡೋದಕ್ಕೆ ಹಿಂದಿನ ಮೂರು ವರ್ಷಗಳಿಂದ ಬುದ್ಧಿಭ್ರಮಣೆಯಾಗಿರಬೇಕು; ಅಥವಾ

೪. ಅರ್ಜಿಕೊಡೋದಕ್ಕೆ ಹಿಂದಿನ ಮೂರು ವರ್ಷಗಳಿಂದ ತೀವ್ರವಾದ ಗುಣವಾಗದಂಥ ಕುಷ್ಠರೋಗಕ್ಕೆ ಗುರಿಯಾಗಿರಬೇಕು; ಅಥವಾ

೫. ಅದೇ ರೀತಿಯ ಅವಧಿಯಲ್ಲಿ, ಕೆಟ್ಟರೋಗದಿಂದ ನರಳುತ್ತಿರಬೇಕು. ಅಥವಾ

೬. ಸನ್ಯಾಸಿಯಾಗಿರಬೇಕು; ಅಥವಾ

೭. ಏಳು ವರ್ಷಗಳ ಅವಧಿಯಲ್ಲಿ ನಾಪತ್ತೆಯಾಗಿರಬೇಕು; ಅಥವಾ

೮. ಕಾನೂನು ಬದ್ಧವಾಗಿ ಬೇರ್ಪಟ್ಟು ಎರಡು ವರ್ಷಗಳಾದರೂ ಜತೆ ಜೀವನ ಆರಂಭಿಸದೇ ಇರಬೇಕು; ಅಥವಾ

೯. ದಾಂಪತ್ಯ ಹಕ್ಕು ದೊರಕಿಸಿಕೊಟ್ಟು ಎರಡು ವರ್ಷಗಳಾದರೂ ಆ ಪ್ರಕಾರ ನಡೆಯದೇ ಇರಬೇಕು.

—ಮದುವೆಯಾಗಿ ಮೂರು ವರ್ಷಗಳಾಗುವ ತನಕ ವಿಚ್ಛೇದನಕ್ಕೆ ಅರ್ಜಿಯನ್ನು ಸ್ವೀಕರಿಸುವುದಿಲ್ಲ..."

ಸುನಂದೆಯ ಮೈ ಬೆವತಿತ್ತು. ಹಾಳೆಗಳಿಂದ ತಲೆಯೆತ್ತಿ ಕಪ್ಪಗಾಗಿದ್ದ ಆ ಮುಖವನ್ನು ಸೋಮಶೇಖರ ನೋಡಿದ. ಸೀತಮ್ಮ ಎದ್ದು ಒಳಹೋದಳು.

"ಇಷ್ಟೆ," ಎಂದ ಸೋಮಶೇಖರ.

ಒಂದು ನಿಮಿಷ ಸುಮ್ಮನಿದ್ದು ಸುನಂದಾ ಕೇಳಿದಳು:

"ಮಗೂಗೆ ಏನಾಗುತ್ತೆ?"

"ಮಗು ಇದ್ದರೆ, ಯಾರ ಜತೇಲಿ ಇರಬೇಕೂಂತ ನ್ಯಾಯಸ್ಥಾನ ತೀರ್ಪುಕೊಡುತ್ತೆ."

"ಈ ವಿಚಾರಣೆಯೆಲ್ಲ ನಾಟಕದ ಹಾಗೆ ಬಹಿರಂಗವಾಗಿಯೇ ಆಗುತ್ತೇನು?"

ಆ ಪ್ರಶ್ನೆ ಕೇಳುತ್ತಿದ್ದಂತೆ, ಈವರೆಗಿನ ಜೀವನ ನಾಟಕವೆಲ್ಲ ಯಾರಿಗೂ ತಿಳಿಯದಂತೆ ಆಗಿತ್ತಲ್ಲವೆ? ಎಂಬ ಅಣಕದ ನುಡಿಯೊಂದು ಆಕೆಯ ಹೃದಯದೊಳಗೆ ರೂಪುಗೊಂಡಿತು.

"ಹಾಗೇನಿಲ್ಲ. ಖಾಸಗಿಯಾಗಿಯೇ ವಿಚಾರಣೆ ಆಗ್ಬೇಕೂಂತ ತಿಳಿಸಿದರೆ ಹಾಗೇ ಮಾಡ್ತಾರೆ. ನ್ಯಾಯಸ್ಥಾನ ವಿಚ್ಛೇದನಕ್ಕೆ ಆಜ್ಞೆ ಕೊಟ್ಟರೆ ಜೀವನಾಂಶವನ್ನೂ ಕೊಡಿಸುತ್ತೆ."

ಕೊನೆಯ ವಾಕ್ಯ ಸುನಂದೆಗೆ ಕೇಳಿಸಿದಂತೆಯೇ ತೋರಲಿಲ್ಲ.

ಆಕೆಗೆ ಅಶಕ್ತಿ ಎನಿಸಿ ಸಂಕಟವಾಯಿತು. ತಲೆ ಸಿಡಿಯತೊಡಗಿತು. ಜವಳಿ ಬರುತ್ತಿದೆ, ತಾನಿನ್ನು ಬಿದ್ದುಬಿಡುವುದು ಖಂಡಿತ—ಎಂದುಕೊಂಡಳು. ಆಧಾರವಾಗಿರ

ಲೆಂದು ಗೋಡೆಗೆ ಒರಗಿದಳು.

"ಸಾಕು! ಸಾಕು!" ಎಂದಳು ಸುನಂದಾ.

ಸೋಮಶೇಖರ ಗಾಬರಿಯಾಗಿ ಆಕೆಯತ್ತ ನೋಡಿದ. "ಸೀತಾ, ಸೀತಾ," ಎಂದು ಕರೆದ.

ಆ ಸ್ವರದಲ್ಲಿದ್ದ ಉದ್ವಿಗ್ನತೆಯನ್ನು ಗಮನಿಸಿ ಸೀತಮ್ಮ ಓಡಿಬಂದಳು.

"ಏನಾಯ್ತು?"

"ನೀರು ತಗೊಂಡು ಬಾ."

ಸುನಂದೆಯತ್ತ ನೋಡಿದ ಸೀತಮ್ಮ ಒಳಕ್ಕೆ ಧಾವಿಸಿದಳು.

ಒರಗಿ ಕುಳಿತಿದ್ದ ಸುನಂದೆ ಬೀಳಲಿಲ್ಲ. ಒಂದು ಗುಟುಕು ನೀರನ್ನಷ್ಟೆ ಕುಡಿದಳು.

"ಇಲ್ಲ. ಏನೂ ಇಲ್ಲ. ನಾನು ಸರಿಯಾಗಿದೀನಿ. ಸುಮ್ಮನೆ ನಿಮ್ಮನ್ನ ಗಾಬರಿ ಪಡಿಸಿದೆ. ನನ್ನಿಂದಾಗಿ ಎಲ್ಲರಿಗೂ ತೊಂದರೆ!"

"ಹಾಗೆಲ್ಲ ಮಾತಾಡ್ಬೇಡಿ. ಅನ್ಯಾಯ ಮಾಡೋರ್ದೇ ರಾಜ್ಯ ಯಾವಾಗಲೂ ಇರೋದು ಸಾಧ್ಯವಾ?"

ಅದು ಸೀತಮ್ಮನ ಧ್ವನಿ.

ಸುನಂದೆಗೆ ನಾಚಿಕೆ ಎನಿಸಿತು.

ಸುಂಟರಗಾಳಿ ಎದ್ದ ಹಾಗೆ ಮಧ್ಯಾಹ್ನ ಮನೆಯಿಂದ ಹೊರಟು ಈ ಸ್ಥಿತಿಗೆ ಬಂದೆ–ಎಂದು ಮನಸ್ಸಿನಲ್ಲೆ ಅಂದುಕೊಂಡಳು. ಸರಸ್ವತಿಯ ನೆನಪಾಯಿತು.

"ನಾನಿನ್ನು ಹೊರಡ್ತೀನಿ. ಸುಮ್ಮನೆ ನಿಮ್ಮ ಸಮಯ ಹಾಳು ಮಾಡ್ದೆ."

ಸಮ್ಮತಿಯನ್ನು ಇದಿರು ನೋಡದೆಯೇ ಆಕೆ ಎದ್ದಳು.

"ಬಸ್ ಹತ್ತಿಸಿ ಬರೋಣ?" ಎಂದು ಸೋಮಶೇಖರ ಹೆಂಡತಿಯನ್ನು ಕೇಳಿದ.

"ಬೇಡಿ. ನಾನೊಬ್ಬಳೇ ಹೋಗ್ತೀನಿ. ದಯವಿಟ್ಟು ಬರಬೇಡಿ," ಎಂದಳು ಸುನಂದಾ.

ತನ್ನ ವಿಷಯದಲ್ಲಿ ಸೀತಮ್ಮನಿಗೆ ಬೇಸರವಾಗಿರಬಹುದೆಂಬುದು ಆಕೆಯ ಅಭಿಪ್ರಾಯವಾಗಿತ್ತು.

"ಬೇಸರವಾದಾಗಲೆಲ್ಲಾ ಬರ್ತಾ ಇರಿ. ಮಗುವನ್ನೂ ಎತ್ಕೊಂಡ್ಬನ್ನಿ," ಎಂದು ಸೀತಮ್ಮ ಹೇಳಿದಾಗ ಸುನಂದೆಗೆ ತುಸು ಆಶ್ಚರ್ಯವಾಗದಿರಲಿಲ್ಲ.

ಆಕೆ ಹೊರಟು ಹೋದ ಮೇಲೆ ಸೀತಮ್ಮ ಅಂದಳು:

"ಪಾಪ! ನೆನಸ್ಕೊಂಡರೆ ಹಿಂಸೆಯಾಗುತ್ತೆ. ಹೆಣ್ಣು ಜನ್ಮಕ್ಕೆ ಇಂಥ ಕಷ್ಟ ಬರಬಾರದು."

"ಬಸ್ ಹತ್ತಿಸ್ಬೇಕಾಗಿತ್ತು," ಎಂದು ವಿಷಾದದ ಧ್ವನಿಯಲ್ಲಿ ಸೋಮಶೇಖರನೆಂದ.

೨೪

ವಕೀಲರ ಮನೆಯಿಂದ ಶೇಷಾದ್ರಿಪುರದವರೆಗಿನ ಪ್ರಯಾಣ ದುಸ್ಸಹವಾಗಿತ್ತು. ಬಸ್ಸಿನೊಳಗೇನೋ ನೂಕುನುಗ್ಗಲು ಇರಲಿಲ್ಲ. ಆದರೆ ಹೃದಯದೊಳಗಿತ್ತು. ಮನಸಿನ ಪಾತ್ರೆಯಲ್ಲಿ ಎಲ್ಲ ಭಾವನೆಗಳನ್ನೂ ಒಟ್ಟಿಗೆ ಸೇರಿಸಿ ಬೇಯಿಸುತ್ತಿದ್ದ ಹಾಗೆ. ಉರಿಯುತ್ತಿದ್ದ ಮೈಯೇ ಕೊಳ್ಳಿ.

ಸುನಂದೆಗೆ ಅನಿಸಿತು: ಸಾಧ್ಯವಿಲ್ಲ, ತನ್ನಿಂದ ಖಂಡಿತ ಸಾಧ್ಯವಿಲ್ಲ. ಕಾನೂನಿನ ಮೊರೆ ಹೊಕ್ಕು ವೈಯಕ್ತಿಕ ಸ್ವಾತಂತ್ರ್ಯವನ್ನು ಗಳಿಸುವುದು ತನ್ನಿಂದಾಗದ ಮಾತು. ಆ ವಿಚಾರಣೆಯ ಚಿತ್ರಹಿಂಸೆಯಿಂದ ಬದುಕಿ ಪಾರಾಗುವುದು ದುಸ್ತರ...

ಮನೆತಲಪಿದೊಡನೆಯೇ ಸುನಂದಾ, ಸರಸ್ವತಿಯನ್ನೆತ್ತಿಕೊಂಡು, ದೀರ್ಘಕಾಲ ಅಗಲಿದ್ದವಳ ಹಾಗೆ ಆ ಮುದ್ದು ಮುಖಕ್ಕೆ ಮುತ್ತಿನ ಮಳೆಗರೆದಳು.

ಎಷ್ಟು ಹೊತ್ತಾದರೂ ಮಗಳು ಕಾಣಿಸಲಿಲ್ಲವೆಂದು ಚಿಂತೆಗೊಳಗಾಗಿದ್ದ ಕೃಷ್ಣಪ್ಪನವರು ಕೇಳಿದರು:

"ರಾಧಮ್ಮನವರು ಸಿಕ್ಕಿದ್ದರಾ?"

"ಹೂಂ. ಅಲ್ಲಿಂದ ಸೀತಮ್ಮನ ಮನೆಗೆ ಹೋದೆ–ಬಸವನಗುಡಿಗೆ."

"ಆದಕ್ಕೇ ತಡವಾಯ್ತು ಅನ್ನು."

ಮನೆಯ ಭಾವಣೆಯ ಆಶ್ರಯದಲ್ಲಿ ಸುನಂದೆಯ ಮನಸ್ಸಿನ ನೆಮ್ಮದಿ ಸ್ವಲ್ಪಮಟ್ಟಿಗೆ ಮರಳಿ ಬಂತು. ಮೊದಲ ಬಾರಿಗೆ ಗೂಡು ಬಿಟ್ಟು ಸುತ್ತುಮುತ್ತಲಲ್ಲೇ ಹಾರಾಡಲೆತ್ನಿಸಿ, ಗಾಬರಿಗೊಂಡು ಹಿಂತಿರುಗಿದ ಪುಟ್ಟಹಕ್ಕಿಯ ಹಾಗಿತ್ತು ಆಕೆಯ ಮನೋಸ್ಥಿತಿ.

ಅಡುಗೆ ಊಟಗಳಾದುವು. ನಿದ್ದೆಯ ರಕ್ಷಣೆಯಲ್ಲಿ ಯೋಚನೆಗಳನ್ನೆಲ್ಲ ದೂರ ವಿಡಲು ಸುನಂದಾ ಯತ್ನಿಸಿದಳು.

...ಕತ್ತಲು ಕಳೆಯಿತು. ಯೋಚನೆಗಳು ಮತ್ತೆ 'ಸುಪ್ರಭಾತ!' ಎಂದುವು.

ಈಗ, ಹಿಂದಿನ ದಿನದ ತನ್ನ ಸಾಹಸ ಪ್ರವಾಸ 'ಭೀಕರ'ವಾಗಿ ಸುನಂದೆಗೆ ತೋರಲಿಲ್ಲ. ಸೋಮಶೇಖರ ಕೊಟ್ಟಿದ್ದ ಕಾನೂನಿನ ವಿವರಣೆಯ ನೆನಪು 'ಭಯ'ವನ್ನುಂಟುಮಾಡಲಿಲ್ಲ. ತಾನು ಮಾಡಿದುದು, ಹಿಂದಿನ ದಿನ ಹಾಗೆ ಮಾತನಾಡಿದುದು, ಸರಿಯಾಗಿಯೇ ಇತ್ತು ಎಂಬ ಭಾವನೆ ಮೊಳೆತು ಬಲಿಯಿತು. ಮಾಡಬೇಕೆಂದಿದ್ದ ಕೊನೆಯ ನಿರ್ಧಾರ ಮೆಲ್ಲಮೆಲ್ಲನೆ ಸ್ಪಷ್ಟವಾಗತೊಡಗಿತು.

ತಂದೆಯೊಡನೆ ಆ ವಿಷಯ ಸುನಂದಾ ಪ್ರಸ್ತಾಪಿಸಿರಲಿಲ್ಲ. ಆ ಮಾತುಕತೆಗಿಂತ ಮುಂಚೆ ತಂದೆಯನ್ನು ಸಿದ್ಧಗೊಳಿಸುವುದು ಅಗತ್ಯವೆಂದು ಆಕೆಗೆ ತೋರಿತು. ಅಂತಹದೊಂದು ಯತ್ನವೆಂದು ಸುನಂದಾ ಕೇಳಿದಳು:

"ರಾಮಕೃಷ್ಣಯ್ಯನೋರು ಸಿಕ್ಕಿದ್ದರಾ?"

"ಹೂಂ ಸುಂದಾ. ಯಾಕೆ?"

"ಮೊನ್ನೆ ನಡೆದದ್ದು ಹೇಳಿದಿಯಾ ಅವರಿಗೆ?"

ಆ ರಾತ್ರೆಯಿಂದ ಇಷ್ಟರತನಕ ಮಗಳು ಆ ವಿಷಯವೆತ್ತಿರಲಿಲ್ಲ. ಮರೆತು ಬಿಟ್ಟಳೇನೋ ಎಂದಿದ್ದರು ಕೃಷ್ಣಪ್ಪನವರು. ಈಗ ಈ ಪ್ರಶ್ನೆಯಿಂದ ಅವರಿಗೆ ಆಶ್ಚರ್ಯವೇ ಆಯಿತು.

"ಹೇಳ್ದೆ."

"ಏನಂದರು?"

"ಏನನ್ನೋದು? ಬೈದು ಶಾಪ ಹಾಕಿದ."

ಈಗ ಯಾಕೆ ಆ ವಿಷಯ?–ಎಂದು ಕೇಳೋಣವೆನ್ನಿಸಿತು. ಆದರೆ ಅದರ ಚರ್ಚೆಯಿಂದ ಮಗಳೆಲ್ಲಿ ನೊಂದುಕೊಳ್ಳುವಳೋ ಎಂದು ಅವರು ಸುಮ್ಮನಾದರು.

ಅದಾದ ಎರಡು ದಿನಗಳಲ್ಲಿ ಕುಸುಮಾ ಬಂದಳು. ಆಕೆ ತಂದುದು ಒಳ್ಳೆಯ ಸುದ್ದಿ.

"ಸಂಪಿಗೆ ರಸ್ತೇಲಿ ನಮ್ಮವರ ಸ್ನೇಹಿತರು ಕೆಲವರು ಶಿಶುವಿಹಾರ ನಡೆಸ್ತಿದಾರೆ. ಅಲ್ಲೊಂದು ಕೆಲಸ ಸಿಗುತ್ತೆ."

"ಪಾಠ ಹೇಳ್ಕೊಡೋದೆ?"

"ಅಲ್ಲ. ಅದಕ್ಕೆಲ್ಲ ಮೂರು ಜನ ಟೀಚರುಗಳೇ ಇದಾರೆ. ನೀವು ಆ ಸಂಸ್ಥೆಗೆ ವೇತನದ ಕಾರ್ಯದರ್ಶಿನಿ. ಗೌರವ ಕಾರ್ಯದರ್ಶಿನಿ ಬೇರೆ ಇದಾರೆ. ಏನ್ಹೇಳ್ತೀರಾ?"

"ಒಪ್ಪಿದೆ. ಸಂಬಳ ಎಷ್ಟು ಇಪ್ಪತ್ತೈದಾ?!"

"ಯಾಕ್ರಿ? ಐವತ್ತು ಕೊಡ್ತಾರೆ, ದಿನಾ ಹನ್ನೊಂದರಿಂದ ನಾಲ್ಕರವರೆಗೊ ಐದರ ವರೆಗೊ ಕೆಲಸ."

"ಆಗಲಮ್ಮ. ಯಾವುದಕ್ಕೂ ಸಿದ್ಧ ನಾನು."

"ಶನಿವಾರ ಬೆಳಗ್ಗೆ ಸಮಿತಿ ಅಧ್ಯಕ್ಷರನ್ನು ನೀವು ನೋಡ್ಬೇಕು. ವಿಳಾಸಕೊಡ್ತೀನಿ. ಒಬ್ಬರೇ ಹೋಗೋಕೆ ಆಗುತ್ತಾ? ಅಥವಾ ನಾನೂ ಜತೇಲೆ ಬರ್ಲಾ?"

"ಬೇಡ ಕುಸುಮಾ. ಇಷ್ಟು ಸಣ್ಣ ಕೆಲಸ ನಾನೊಬ್ಬಳೇ ಮಾಡಲಾರೆನಾ?"

ಹೀಗೆ ಮುಖ್ಯ ವಿಷಯಕ್ಕೆ ಸಂಬಂಧಿಸಿದ ಸಂಭಾಷಣೆಯಾದ ಮೇಲೂ ಕುಸುಮಾ ಸ್ವಲ್ಪ ಹೊತ್ತಿದ್ದಳು.

"ಮೊನ್ನೆ ವಕೀಲರ ಮನೆಗೆ ಹೋಗಿದ್ದಿರಾ?" ಎಂದು ಆಕೆ ಕೇಳಿದಳು.

"ಹೂಂ. ಹೋಗಿದ್ದೆ."

ಬಂದ ಉತ್ತರ ಅಷ್ಟೆ. ಸುನಂದಾ ಬೇರೇನನ್ನೂ ಹೇಳಲಿಲ್ಲವೆಂದು ಕುಸುಮಾ ಬೇಸರಗೊಳ್ಳಲಿಲ್ಲ. ಅಚಾತುರ್ಯದಿಂದ ಕೇಳಬಾರದ ಪ್ರಶ್ನೆ ಕೇಳಿ ಗೆಳತಿಯ ಮನಸ್ಸನ್ನು ನೋಯಿಸಬಾರದೆಂದು ಆಕೆ ಸುಮ್ಮನಾದಳು.

ಮತ್ತೊಮ್ಮೆ ಶನಿವಾರದ ಔಪಚಾರಿಕ ಭೇಟಿಯ ವಿಷಯ ತಿಳಿಸಿ ಕುಸುಮಾ

ಹೊರಟಳು.

"ಹ್ಯಾಗೆ ಹೋಗ್ತೀರಾ ಈಗ?" ಎಂದಳು ಸುನಂದಾ ಬೀದಿಯುವರೆಗೆ ಬರುತ್ತಾ.

"ಬರ‍್ತಾ ಸರ್ಕಲಿನವರೆಗೂ ನಮ್ಮವರಿದ್ದರು. ಕಾರ‍್ನಲ್ಲಿ ತಂದ್ಬಿಟ್ಟು ಹಾಗೇ ಷಾಪಿಗೆ ಹೋದರು. ಈಗ ಬಸ್ನಲ್ಲಿ ಹೋಗ್ತೀನಿ."

ಸುನಂದಾ ಮಾತುಗಳನ್ನು ಒಂದೊಂದಾಗಿಯೇ ತೂಗುತ್ತ ಅಂದಳು:

"ಏನು ಹೇಳ್ಬೇಕೋ ನನಗೆ ತೋಚ್ತಾ ಇಲ್ಲ, ಕುಸುಮಾ. ಈ ಋಣ ಯಾವತ್ತಾದರೂ ನಾನು ತೀರಿಸೋಕೆ ಸಾಧ್ಯವಾಗುತ್ತೋ ಇಲ್ವೋ. ಕಾನೂನು ತಿಳಿಯೋಕೆ ಅವತ್ತು ಹೋಗಿದ್ದೆ. ತಿಳಿದಾಗ ಭಯವಾಯ್ತು, ಈಗ ಸುಧಾರಿಸಿದೀನಿ."

"ಧೈರ್ಯವಾಗಿರಿ ಸುನಂದಕ್ಕ. ಕಷ್ಟವಾಗೊಲ್ಲ."

"ರಾಧಮ್ಮನಿಗೆ ಹೇಳಿದಿರಾ?"

"ಅವರು ಅತ್ತುಬಿಟ್ರು ಕಣ್ರೀ."

ಸುನಂದಾ ಉಗುಳು ನುಂಗಿ ಸುಮ್ಮನಾದಳು.

"ಆಗಲಿ ಮುಂದೆ ನೋಡೋಣ," ಎಂದಳು.

...ಊಟದ ಹೊತ್ತಿಗೆ ಬಂದ ಕೃಷ್ಣಪ್ಪನವರು ಮಗಳ ಮಾತು ಕೇಳಿ ಮೂಕನಂತಾದರು. ಏನು ಹೇಳಬೇಕೆಂದೇ ಅವರಿಗೆ ತೋಚಲಿಲ್ಲ. ಹೆಣ್ಣುಮಕ್ಕಳು ಕೆಲಸ ಮಾಡುವುದು ಅವರಿಗೆ ಇಷ್ಟವಾಗಿರಲಿಲ್ಲವೆಂದಲ್ಲ. ಹಾಗೆ ತಿಳಿಯುವ ಸಂಕುಚಿತ ಭಾವನೆ ಅವರಿಗಿರಲಿಲ್ಲ. ಎಷ್ಟಾದರೂ ಇಷ್ಟು ದುಡಿದು ಸಂಪಾದಿಸುವೆನೆಂದು ತಾವು ಹೇಳಿದುದಕ್ಕೆ ಮಗಳೊಪ್ಪದೆ, ಸ್ವತಃ ತಾನೇ ದುಡಿಯಲು ಹೊರಟಳಲ್ಲಾ—ಎಂಬ ಅಂಶ ಅವರ ಮನಸ್ಸನ್ನು ಸ್ವಲ್ಪ ಕುಟುಕಿತು. ಬಳಿಕ, ಮಗಳ ಕೆಚ್ಚೆದೆಯನ್ನು ಕಂಡು ಹೆಮ್ಮೆ ಎನಿಸಿತು. ಆಕೆಯ ಗೆಳತಿ ಪ್ರಯತ್ನಪಟ್ಟು ದೊರಕಿಸಿದ್ದ ಕೆಲಸದ ವಿಷಯದಲ್ಲೂ ಬೇಸರಪಡುವಂತಿರಲಿಲ್ಲ. ತಿಂಗಳಿಗೆ ಐವತ್ತು ರೂಪಾಯಿ ಕಡಮೆ ಏನಲ್ಲ. ತಮ್ಮ ನಿವೃತ್ತಿ ವೇತನದೊಡನೆ ಅದೂ ಸೇರಿದಾಗ, ಅಚ್ಚುಕಟ್ಟಾದ ಸಂಸಾರವನ್ನೆ ನಡೆಸಬಹುದು. ಒಂದು ತಿಂಗಳ ಹಿಂದೆಯಾಗಿದ್ದರೆ ಮಗಳ ಯೋಜನೆಗೆ ಸಮ್ಮತಿಕೊಡುವುದು ಸಾಧ್ಯವಾಗುತ್ತಿರಲಿಲ್ಲ. ಸುನಂದಾ ದುಡಿಯುತ್ತಿರುವಳೆಂದು ಪುಟ್ಟಣ್ಣನಿಗೆ ತಿಳಿದಾಗ ವಿರಸ ಹೆಚ್ಚಬಹುದೆಂಬ ಭಯ ಆಗ ಅವರನ್ನು ಕಾಡುತ್ತಿತ್ತು. ಈಗ ಅದಿಲ್ಲ. ಆತನ ಪ್ರತಿಕ್ರಿಯೆ ಏನಿದ್ದೀತೆಂದು ತಿಳಿಯುವ ಅಗತ್ಯವಿಲ್ಲ. ಅಂತಹ ಆಸಕ್ತಿಯೇ ಇರಲಿಲ್ಲ ಅವರಿಗೆ. ಅಲ್ಲದೆ, ಒಂದು ರೀತಿಯಿಂದ, ಸುನಂದಾ ಹೀಗೆ ಕೆಲಸಕ್ಕೆ ಹೋಗುವುದೇ ಮೇಲು. ಆತನ ಪೊಂಡುತನಕ್ಕೆ ಸರಿಯಾದ ಉತ್ತರ. ದುಂಡಾವೃತ್ತಿಯಿಂದ, ಒಂದು ಹೆಣ್ಣಿನ ಬದುಕನ್ನು ಮಣ್ಣುಗೂಡಿಸುವುದು ದುಸ್ಸಾಧ್ಯ ಎಂಬುದು ಆತನಿಗೆ ಗೊತ್ತಾಗಲಿ!

ತಂದೆ ಒಪ್ಪಿಗೆಯ ಉತ್ತರ ಕೊಡದಿದ್ದರೂ ಸುನಂದಾ ಮುಂದುವರಿದಳು:

"ಸ್ವಲ್ಪ ದಿವಸ ನಿನಗೆ ತೊಂದರೆ. ಸರಸ್ವತೀನ ನೀನೇ ನೋಡ್ಕೋಬೇಕಾಗುತ್ತೆ. ಆಮೇಲೆ ನನ್ಜತೇಲೆ ಕರಕೊಂಡು ಹೋಗ್ಬಹುದು. ಅಲ್ಲಿ ಮಕ್ಕಳೊಟ್ಟಿಗೆ ಆಟ ವಾಡ್ತಿರ್ಲಿ......ಅಲ್ಲದೆ, ಇದೇ ಮನೇಲಿ ಇರಬೇಕು ಅನ್ನೋದೇನು? ಅನುಕೂಲ ವಾಗಿರೋ ಸಣ್ಣದೊಂದು ಮನೆ ಹುಡುಕಿ ಮಲ್ಲೇಶ್ವರಕ್ಕೇ ನಾವು ಹೋಗ್ಬಹುದು, ಅಲ್ವಾ?"

ಆ ತರ್ಕಸರಣಿ ಕೃಷ್ಣಪ್ಪನವರನ್ನು ಅಪ್ರತಿಭರಾಗಿ ಮಾಡಿತು. ಅವರೆಂದರು:

"ನಿನ್ನಿಷ್ಟ ಸುಂದಾ. ಭಗವಂತನ ಇಚ್ಛೆ ಅದೇನು ಇದೆಯೋ ಯಾರಿಗೆ ಗೊತ್ತು? ನೀನು ಕೆಲಸಕ್ಕೆ ಹೋಗೋದು ನನಗೆ ಒಪ್ಪಿಗೆ. ಸರಸ್ವತೀದೇನು ಮಹಾ? ನೋಡ್ಕೋ ತೀನಿ. ನನಗೂ ಹೊತ್ತು ಹೋಗ್ಬೇಕೋ ಬೇಡವೋ? ತಾತ ಸಾಕಿದ ಮಗಳು ಅಂತ ನಾಳೆ ಆಕೇನ ಗೇಲಿ ಮಾಡ್ತಾರೆ!"

ತಂದೆಯ ಮನಸ್ಸು ಪ್ರಸನ್ನವಾಗಿದೆ ಎಂದು ಆ ನಗೆಮಾತು ಸಾಕ್ಷ್ಯ ಹೇಳಿತು.

...ಶನಿವಾರದ ಸಂದರ್ಶನ ಸುಲಭವಾಗಿತ್ತು. ವಯಸ್ಸಾಗಿದ್ದವರೊಬ್ಬರು ತಮ್ಮ ಹೆಂಡತಿಯ ಜತೆಯಲ್ಲಿ ಸುನಂದೆಯನ್ನು ಬರಮಾಡಿಕೊಂಡರು.

"ಅರ್ಜಿ ತಂದಿದೀರಾ?" ಎಂದವರು ಕೇಳಿದರು.

"ಇಲ್ಲ."

"ಹಾಗಾದರೆ ಒಂದನ್ನು ಬರೆದು ಬಿಡಿ," ಎಂದು ಹೇಳಿ ಅವರು ಕಾಗದ ಲೇಖನಿ ತರಿಸಿಕೊಟ್ಟರು.

ಅವರ ಹೆಂಡತಿಯೆಂದರು:

"ನಿಮ್ಮ ವಿದ್ಯಾಭ್ಯಾಸದ ವಿಷಯವೆಲ್ಲಾ ನಮಗೆ ಗೊತ್ತಿದೆ. ಕುಸುಮಾ ಹೇಳಿದ್ದಾಳೆ."

"ಕುಸುಮಾ ಇಲ್ಲಿಗೆ ಬಂದಿದ್ರೆ?" ಎಂದು ಆಶ್ಚರ್ಯದಿಂದ ಸುನಂದಾ ಕೇಳಿದಳು.

"ಹೌದು, ಮತ್ತೆ. ಅವಳು ನಮಗೆ ಬೇಕಾದೋಳು. ನಮ್ಮ ಸ್ನೇಹಿತರ ಹುಡುಗಿ."

ತನಗೆ ಕೆಲಸ ದೊರೆಯಲು ಗೆಳತಿಯೇ ಕಾರಣಳು. ಇವರು ತನ್ನ ಗಂಡನ ಪರಿಚಿತರು ಎಂದು ಸುಳ್ಳು ಹೇಳಿದ್ದಳು ಆಕೆ.

ಅಲ್ಲಿ ಕುಳಿತಿದ್ದ ಗಂಡಸು ಸೂಚಿಸಿದಂತೆ ಸುನಂದಾ ತಾನೇ ಒಂದು ಅರ್ಜಿಯನ್ನು ಬರೆದಳು. ಬರೆದು ರೂಢಿ ಇರಲಿಲ್ಲ. ಇಂಗ್ಲಿಷು ಎಲ್ಲಿ ಕೈ ಕೊಡುವುದೋ ಎಂದು ಅವಳಿಗೆ ಭಯವಾಗಿತ್ತು. ಆದರೂ ಅರ್ಜಿ ತಕ್ಕ ಮಟ್ಟಿಗೆ ಸಮರ್ಪಕವಾಗಿಯೇ ಇತ್ತು.

ಅರ್ಜಿದಾರಳು ಶ್ರೀಮತಿ ಸುನಂದಾ. ಮಿಸ್ಸೂ ಅಲ್ಲ, ಮಿಸೆಸೂ ಅಲ್ಲ, ಸುನಂದಾ ಪುಟ್ಟಣ್ಣ ಎಂದು ಉದ್ದಕ್ಕೆ ಬೆಳೆದಿರಲಿಲ್ಲ ಆ ಹೆಸರು.

"ಹಿಂದೆ ನೀವೆಲ್ಲೂ ಕೆಲಸ ಮಾಡಿದವರಲ್ಲ. ಆದ್ದರಿಂದ ಪ್ರಮಾಣ ಪತ್ರ ಗಳೊಂದೂ ಇಲ್ಲ," ಎಂದರು ಅಧ್ಯಕ್ಷರು.

"ಇಲ್ಲ," ಎಂದಳು ಸುನಂದಾ ವಿಷಾದದಿಂದ.

ಅಧ್ಯಕ್ಷರ ಹೆಂಡತಿಯೆಂದರು:

"ಏನೂ ಪರವಾಗಿಲ್ಲ. ಕುಸುಮಾ ಹೇಳಿದ ಮಾತೇ ನಮಗೆ ಪ್ರಮಾಣ ಪತ್ರ. ಇದೇನು ಕಾರ್ಖಾನೆಯೆ? ಬ್ಯಾಂಕೆ? ನಮ್ಮ ಮಗೂ ಹೆಸರಲ್ಲಿ ಕಟ್ಟಿಸಿದ ಶಿಶು ವಿಹಾರ. ಚೆನ್ನಾಗಿ ನಡಕೊಂಡು ಹೋಗ್ಬೇಕು ಅನ್ನೋದೇ ನಮ್ಮ ಉದ್ದೇಶ."

ಹೆಂಡತಿಯ ಭಾಷಣದ ಬಳಿಕ ಗಂಡ ಕೆಲಸದ ಪರಿಚಯ ಮಾಡಿ ಕೊಟ್ಟರು. ಹುಡುಗರ ದಾಖಲೆ, ಲೆಕ್ಕಾಚಾರ, ಪತ್ರವ್ಯವಹಾರ ಇತ್ಯಾದಿ.

"ನಾವು ವೇತನದ ಕಾರ್ಯದರ್ಶಿ ನೇಮಿಸ್ತಿರೋದು ಇದೇ ಮೊದಲು...ಕೆಲಸ ದಲ್ಲಿ ನಿಮಗೇನು ಕಷ್ಟ ತೋರಿದರೂ ತಿಳಿಸಿ, ನಾನಿದೇನೆ. ಗೌರವ ಕಾರ್ಯದರ್ಶಿನಿ ನಮ್ಮ ಸೊಸೆಯೇ. ಆಕೆ ಸಹಾಯ ಮಾಡ್ತಾಳೆ. ನಾಳೆ ಸಂಸ್ಥೆ ದೊಡ್ಡದಾದಾಗ ವೇತನ ಜಾಸ್ತಿ ಮಾಡ್ತೀವಿ."

"ಆಗಲಿ, ಆಗಲಿ," ಎಂದಳು ಸುನಂದಾ.

"ನೇಮಕದ ಪತ್ರ ಸೋಮವಾರ ಕಳಿಸ್ಕೊಡ್ತೀನಿ. ಇದು ತಿಂಗಳ ಕೊನೇ ಶನಿ ವಾರ. ಮುಂದಿನ ತಿಂಗಳು ಮೊದಲ್ನೇ ತಾರೀಕಿನಿಂದಲೇ ಬಂದ್ಬಿಡಿ, ಆಗ್ದೆ?"

"ಹಾಗೇ ಆಗಲಿ."

ಅಡುಗೆಯವಳಿಗೆ ಕಾಫಿ ತರಹೇಳಿ ಅಧ್ಯಕ್ಷರ ಹೆಂಡತಿಯೆಂದರು:

"ಹನ್ನೊಂದು ಗಂಟೆ ಅಂತ ಬರೆದಿದೆಯಾದರೂ ಹನ್ನೆರಡರ ಹೊತ್ತಿಗೆ ನೀವು ಬಂದರೆ ಸಾಕು. ಮನೆಯವರಿಗೆಲ್ಲಾ ಅಡುಗೆ ಮಾಡಿಟ್ಟು ಊಟ ಮುಗಿಸಿ ಬರಬೇಕಾ ಗುತ್ತೆ, ಅಲ್ವೆ?"

"ಆಗಲಮ್ಮ. ಹನ್ನೊಂದು ಘಂಟೆ ಹೊತ್ತಿಗೆಲ್ಲ ಮನೆಯಿಂದ ಹೊರಡ್ತೀನಿ."

ಮನೆಯವರಿಗೆಲ್ಲ ಅಡುಗೆ...ಗಂಡ ಯಾರು? ಏನು ಕೆಲಸ? ಎಂದೆಲ್ಲ ಅವರು ಯಾಕೆ ಕೇಳಲಿಲ್ಲ? ಯಾಕೆ? ಈ ಕುಸುಮಾ ಅವರಿಗೆ ತನ್ನ ವಿಷಯವನ್ನೆಲ್ಲ ತಿಳಿಸಿರು ವಳೋ ಏನೋ....ಇದೊಳ್ಳೆಯ ಸಂಕಟ...ಆಕೆಯನ್ನ ಕೇಳಬೇಕು...

...ಸುನಂದಾ ಉತ್ಸಾಹದಿಂದಲೆ ಮನೆಗೆ ಬಂದಳು. ಹಿಂದೆ ಕಾಲೇಜಿಗೆ ಹೋಗಿ ಹೆಸರು ನೋಂದಾಯಿಸಿ ಮೊದಲ ದಿನ ತರಗತಿಯಲ್ಲಿ ಕುಳಿತು ಬಂದಿದ್ದಾಗ ಆದ ಅನುಭವವೇ.

ಹಸನ್ಮುಖಿಯಾಗಿ ಬಂದ ಮಗಳನ್ನು ಕಂಡು ಕೃಷ್ಣಪ್ಪನವರಿಗೂ ಸಂತೋಷ ವಾಯಿತು.

ಆಕೆಯೆಂದಳು:

"ನನ್ನ ಹೆಸರು ಬರೇ ಸುನಂದಾ ಅಂತ ಕೊಟ್ಟೆ ಅಪ್ಪ. ಆತನದನ್ನ ಸೇರಿಸ್ಲಿಲ್ಲ..." ಏನೋ ಹುಡುಕುತ್ತಿದ್ದಂತೆ ಬೀರುವಿನತ್ತ ಮುಖ ತಿರುಗಿಸಿ ಹೇಳಿದ ಮಾತು.

"ಒಳ್ಳೇದಾಯ್ತು, ಬಿಡು," ಎಂದರು ತಂದೆ.

ಸ್ವಲ್ಪ ಹೊತ್ತು ಸುಮ್ಮನಿದ್ದು ಅವರೆಂದರು:

"ವಿಜಯಾಗೆ ಕಾಗದ ಬರೆದು ಈ ವಿಷಯ ತಿಳಿಸೋಲ್ವ?"

"ತಿಳಿಸ್ತೀನಿ."

....ತಂದೆ ಹೊರಹೋದ ಮೇಲೆ ಸುನಂದಾ ಬರೆದು ಹಾಕಿದುದು ಚುಟುಕಾದ ಕಾಗದ. ಅದು ತಂಗಿಗಲ್ಲ; ಭಾವನಿಗೆ. ಅದರಲ್ಲಿದ್ದುದಿಷ್ಟೆ:

"ಈ ಕಾಗದ ಕೈ ಸೇರಿದ ಒಂದು ವಾರದೊಳಗೆ ವಿಜಯಳನ್ನು ಕರೆದುಕೊಂಡು ಬನ್ನಿ. ಎರಡು ದಿನಗಳ ಮಟ್ಟಿಗೆ ಬಂದರೆ ಸಾಕು. ನಿಮ್ಮ ಹತ್ತಿರ ಅಗತ್ಯ ಮಾತ ನಾಡಬೇಕಾಗಿದೆ. ಉಳಿದುದೆಲ್ಲ ಭೇಟಿಯಾದಾಗ."

ಕಾಗದ ಓದಿ ತಂಗಿಯೂ ಭಾವನೂ ಗಾಬರಿಯಾಗಬಹುದೆಂದು ಸುನಂದಾ ಪರಾ ಬರೆದಳು:

"ತಂದೆ ಆರೋಗ್ಯವಾಗಿದಾರೆ."

## ೨೫

ಮೊದಲಾಗಿ ತಿಳಿಸದೆ ಅಳಿಯನೂ ಮಗಳೂ ಬಂದಿಳಿದುದನ್ನು ಕಂಡು ಕೃಷ್ಣಪ್ಪ ನವರಿಗೆ ಸೋಜಿಗವೂ ಆಯಿತು, ಸಂತೋಷವೂ ಆಯಿತು.

"ರಜಾ ಇತ್ತೆ?" ಎಂದು ಅವರು ಕೇಳಿದರು.

ಸುನಂದಾ ಬರಹೇಳಿದ್ದ ವಿಷಯ ಮಾವನಿಗೆ ತಿಳಿಯದೆಂದು ವೆಂಕಟರಾಮಯ್ಯ ಮಾಡಿದ್ದ ಊಹೆ ತಪ್ಪಾಗಿರಲಿಲ್ಲ. ಹೌದು–ಎನ್ನೋಣ ಎಂದು ಯೋಚಿಸು ತ್ತಿದ್ದಂತೆಯೇ ಸುನಂದಾ ಹೇಳಿದಳು:

"ಬನ್ನೀಂತ ನಾನೇ ಬರೆದಿದ್ದೆ ಅಪ್ಪಾ. ವಿಜಯಾ ನಮ್ಮ ಬೆಂಗಳೂರು ಮನೆ ನೋಡೇ ಇಲ್ಲವಲ್ಲ. ಅದಕ್ಕೆ."

ತಮ್ಮ ಪ್ರಶ್ನೆಯಿಂದ ಅಳಿಯನ ಆಗಮನ ತಮಗೆ ಇಷ್ಟವಾಗಲಿಲ್ಲ ಎಂಬ ಭಾವ ನೆಯೇನಾದರೂ ಉಂಟಾಗಬಹುದೆಂದು ಹೆದರಿ, ಕೃಷ್ಣಪ್ಪನವರು ಅವಸರವಾಗಿ ಮಾತು ಸೇರಿಸಿದರು:

"ಅದು ನಿಜ. ಬಂದದ್ದು ಒಳ್ಳೇದೇ ಆಯ್ತು. ಗೌರಿ ಹಬ್ಬಕ್ಕೆ ಬರೋಕಾ ಗುತ್ತೇನೋಂತ ಲೆಕ್ಕಹಾಕಿದ್ದೆ. ಮೊದಲೇ ಬಂದಿರಿ, ಅಷ್ಟೆ."

"ಅದಕ್ಕೇನು? ಗೌರಿ ಹಬ್ಬಕ್ಕೇಂತಲೇ ಇನ್ನೊಮ್ಮೆ ಬಂದರಾಯ್ತು," ಎಂದಳು ಸುನಂದಾ.

"ಇಲ್ಲವಪ್ಪ. ರಜಾ ಇಲ್ಲ, ಇನ್ನು ಬರೋದು ಯಾವತ್ತು ಸಾಧ್ಯವಾಗುತ್ತೋ?"

"ದೀಪಾವಳಿಗೆ ಬರಬಹುದಲ್ಲಾ," ಎಂದರು ಕೃಷ್ಣಪ್ಪನವರು.

"ನೋಡೋಣ."

"ಅಂದಹಾಗೆ, ಕೆಲಸ ಸಿಕ್ಕಿದ ವಿಷಯ ಸುನಂದಾ ಕಾಗದ ಬರೆದಿದ್ಲು, ಅಲ್ವೆ?"

"ಯಾರಿಗೆ? ಎಲ್ಲಿ?" ಎಂದು ಉತ್ಸುಕತೆಯಿಂದ ವಿಜಯಾ ಕೇಳಿದಳು.

ಕೃಷ್ಣಪ್ಪನವರಿಗೆ ಆಶ್ಚರ್ಯವಾಯಿತು.

"ಬರೀಲೇ ಇಲ್ವೇನೇ ಸುಂದಾ? [ವಿಜಯಳ ಕಡೆ ತಿರುಗಿ] ನಿಮ್ಮಕ್ಕನಿಗೆ ಕಣೇ."

ಅಭಿಮಾನದಿಂದ ವಿಜಯ ಅಕ್ಕನನ್ನು ನೋಡಿದಳು:

"ಹೌದಾ ಅಕ್ಕಾ? ಎಷ್ಟೊಳ್ಳೇದಾಯ್ತು! ಎಲ್ಲಕ್ಕ ಕೆಲಸ?"

ವೆಂಕಟರಾಮಯ್ಯ ಮುಗುಳುನಗುತ್ತ ನಿಂತ. ಇದನ್ನು ತಿಳಿಸುವುದಕ್ಕೋಸ್ಕರವೆ ಅತ್ತಿಗೆ ಕರೆಸಿರಬಹುದೆ? ಎಂಬ ಪ್ರಶ್ನೆ ಮನಸ್ಸಿನಲ್ಲಿ ಮೂಡಿತು. ಇರಲಾರದು—ಎಂಬ ಉತ್ತರವೂ ದೊರೆಯಿತು.

ಸುನಂದಾ ವಿವರ ಹೇಳಿದಳು.

"ಅಕ್ಕಾ ಸಿಹಿ ಕೊಡಿಸು!"

ತಂಗಿಯನ್ನು ಸೂಕ್ಷ್ಮವಾಗಿ ನೋಡುತ್ತ ಸುನಂದಾ ಕೇಳಿದಳು:

"ಬಯಕೆನೇನೆ?"

"ಇಲ್ಲಮ್ಮ, ಥೂ! ಸಿಹಿ, ನಿನಗೆ ಕೆಲಸ ಸಿಕ್ಕಿದ್ದಕ್ಕೆ."

ಲಜ್ಜೆಗೊಂಡ ವಿಜಯಳ ಮುಖ ಸೊಗಸಾಗಿ ವೆಂಕಟರಾಮಯ್ಯನಿಗೆ ತೋರಿತು.

ತರಬೇಕಾದ ಸಾಮಾನುಗಳ ಪಟ್ಟಿಯನ್ನೂ ದುಡ್ಡನ್ನೂ ಕೊಟ್ಟು ತಂದೆಯನ್ನು ಸುನಂದಾ ಅಂಗಡಿಗೆ ಕಳುಹಿದಳು.

"ಅಂತೂ ಶನಿವಾರ ನೋಡಿಕೊಂಡೇ ಬಂದಿರಿ. ಒಳ್ಳೇದಾಯ್ತು. ನನಗೂ ರಜಾ," ಎಂದಳು ಸುನಂದಾ.

"ಏನು ಸಮಾಚಾರ?" ಎಂದು ವೆಂಕಟರಾಮಯ್ಯ ಕೇಳಿದ, ತಮ್ಮನ್ನು ಬರ ಮಾಡಿದುದರ ಉದ್ದೇಶವನ್ನು ತಿಳಿಯ ಬಯಸುತ್ತ.

ಈಗಲೆ ಹೇಳಬೇಕೆ? ನಿಧಾನವಾಗಿ ಹೇಳಿದರಾಗದೆ? ಎಂದು ಒಂದು ಕ್ಷಣ ಅನಿಶ್ಚಯದಿಂದ ಸುನಂದಾ ಹಾಗೆಯೇ ನಿಂತಳು. ಮತ್ತೆ ಒಮ್ಮೆಲೇ ಅಂದಳು:

"ನಿಮಗೆಲ್ಲ, ಎಷ್ಟು ಸಾಧ್ಯವೋ ಅಷ್ಟು ಬೇಸರ ಉಂಟುಮಾಡಿದೀನಿ. ಈ ಸಲ ಬೇಸರದ ಕೊಡಾನ ಪೂರ್ತಿಯಾಗಿ ತುಂಬಿಸ್ಬೇಕೂಂತ ಕರೆದೆ."

ಸರಸ್ವತಿಯನ್ನು ಮಾತನಾಡಿಸುತ್ತಿದ್ದ ವಿಜಯಾ ಕಿವಿ ನಿಗುರಿಸಿದಳು. ಅಕ್ಕನ ಮಾತು ಕೇಳಿ ಆಕೆಯ ಮುಖ ಕಪ್ಪಿಟ್ಟಿತು.

"ಏನಾದರೂ ಆಯ್ತೆ?" ಎಂದು ವೆಂಕಟರಾಮಯ್ಯ ಕೇಳಿದ.

"ಇನ್ನೂ ಇಲ್ಲ."

"ಸ್ಪಷ್ಟವಾಗಿ ಹೇಳಕ್ಕ!" ಎಂದಳು ವಿಜಯಾ ಆಗ್ರಹದ ಧ್ವನಿಯಿಂದ.

"ಹೇಳ್ತೀನಿ. ಇನ್ನು ಹೇಳದೆ ಇರೋಕಾಗುತ್ತಾ? ಇಬ್ಬರೂ ಕೇಳಿ. ನನಗಾಗಿರೋ ಮದುವೆಯಿಂದ ನಾನು ಬಿಡುಗಡೆ ಹೊಂದ್ಬೇಕೂಂತ ಮಾಡಿದೀನಿ."

ವೆಂಕಟರಾಮಯ್ಯ ಮತ್ತು ವಿಜಯಾ ತುಟಿ ಪಿಟಕ್ಕೆನ್ನದೆ ಕಲ್ಲಿನ ಬೊಂಬೆಗಳ ಹಾಗೆ ನಿಂತರು. ಅವರು ಚೇತರಿಸಿಕೊಳ್ಳಲು ಆಸ್ಪದ ಕೊಡದೆಯೇ ಸುನಂದಾ ಮುಂದುವರಿಸಿದಳು:

"ಆತ ಹೀನಾಯವಾಗಿ ನನ್ನ ತಂದೇನ ಬಯ್ದ. ನಡು ಬೀದೀಲಿ ಅಪಮಾನ ಮಾಡ್ದ. ತಲೆಹಿಡುಕ-ಕಳ್ಳ-ಹುಚ್ಚ ಅಂದ. ಇದನ್ನು ಸಹಿಸಿಯೂ ಸುಮ್ಮನಿದ್ದರೆ ನಾನೆಂಥ ಮಗಳಾಗ್ತೀನಿ? ಮಾಡಬೇಕಾದ ಪ್ರಯತ್ನಾನೆಲ್ಲ ಯಾವತ್ತೋ ಮಾಡಿದ್ದಾಯ್ತು. ಇನ್ನೇನೂ ಇಲ್ಲ. ನನ್ನ ಮಗಳನ್ನ ನಾನು ಉಳಿಸ್ಕೋಬೇಕು. ನ್ಯಾಯ ನನ್ನ ಕಡೆಗಿದೆ. ಸುಮ್ಮನೆ ಇದ್ದು ಸಮಾಜದ ದೃಷ್ಟೀಲಿ ನೀತಿಗೆಟ್ಟೋಳು ಅನಿಸೋದಕ್ಕಿಂತ, ನೀಚನಾದ ಗಂಡನನ್ನು ದೂರವಿಟ್ಟೋಳು ಅನ್ನಿಸ್ಕೊಳ್ತೀನಿ!"

ವಿಜಯಾ ಅಲ್ಲೇ ಕುಳಿತು ಬಿಕ್ಕಿ ಬಿಕ್ಕಿ ಅಳತೊಡಗಿದಳು.

ಸುನಂದೆಗೆ ರೇಗಿತು.

"ಯಾಕಳ್ತೀಯ? ಇದೇನು ನನ್ನ ಶ್ರಾದ್ಧವಾ? ಅಂತೂ ನಿನಗೆ ಕೆಟ್ಟ ಹೆಸರು ಬರುತ್ತೆ, ಅಲ್ಲ?"

ಈ ವಿಷಯದಲ್ಲಿ ವಿಜಯಳ ಅಭಿಪ್ರಾಯವೇನೆಂಬುದನ್ನು ಆಕೆಯ ಅಕ್ಕನಿಗಿಂತಲೂ ಚೆನ್ನಾಗಿ ತಿಳಿದಿದ್ದ, ವೆಂಕಟರಾಮಯ್ಯ. ಅತ್ತಿಗೆ ತಪ್ಪು ತಿಳಿವಳಿಕೆಯಿಂದ ಆ ಮಾತನ್ನಾಡುತ್ತಿದ್ದಾಳೆಂದು ಆತನಿಗೆ ಕೆಡುಕೆನಿಸಿತು. ತಾನು ತಿಳಿಯ ಹೇಳಬೇಕು ಎಂದು ಆತ ಬಾಯಿ ತೆರೆಯುವಷ್ಟರಲ್ಲೇ ವಿಜಯಳ ಸ್ವರ ಕೇಳಿಸಿತು.

"ಇಲ್ಲ ಅಕ್ಕಾ. ಹಾಗೆ ಹೇಳ್ಬೇಡ ಅಕ್ಕಾ. ನಿನ್ನ ಅಭಿಪ್ರಾಯ ತಪ್ಪು ಅಂತ ನಾನು ಯಾವತ್ತಾದರೂ ಅಂದಿದೀನಾ! ನೀನು ಪಡುತ್ತಿರೋ ಹಿಂಸೆ ನೆನೆಸ್ಕೊಂಡು ಅಳು ಬಂತು."

ವೆಂಕಟರಾಮಯ್ಯನೂ ಸ್ವರ ಕೂಡಿಸಿದ.

"ಹೌದು ಕಣ್ರೀ. ವಿಜಯಾ ನಿಜವನ್ನೆ ಹೇಳ್ತಿದಾಳೆ."

ಸುನಂದಾ ಸುಮ್ಮನಾದಳು. ತಂಗಿಯ ಬಳಿಯಲ್ಲಿ ತಾನು ಕುಳಿತಳು. ಕಣ್ಣುಗಳು ಹನಿಗೂಡಿದುವು. ಕ್ಷೀಣವಾದ ಸ್ವರದಲ್ಲಿ ಆಕೆಯೆಂದಳು:

"ನನ್ನನ್ನು ಕ್ಷಮಿಸಿ. ನೀವು ನನ್ನನ್ನು ತಿರಸ್ಕಾರದಿಂದ ನೋಡಬಹುದು ಅನ್ನೊ ಭಯ ಇತ್ತು. ಅದಕ್ಕೋಸ್ಕರ ಆ ರೀತಿ ಮಾತನಾಡ್ದೆ. ಭಯದ ಜತೇಲೆ ನೀವು ನನ್ನನ್ನು ಬಿಟ್ಟುಹಾಕಲಾರಿರಿ ಅನ್ನೋ ಒಂದು ಆಶೆಯೂ ಇತ್ತು. ಆಶೆ ಸುಳ್ಳಾಗಲಿಲ್ಲ."

ವೆಂಕಟರಾಮಯ್ಯ ಕೇಳಿದ

"ಮಾವನವರಿಗೆ ಹೇಳಿದೀರಾ?"

"ಇಲ್ಲ. ನಿಮಗೆ ಮೊದಲು ತಿಳಿಸ್ಬೇಕೂಂತ ನಿಮ್ಮನ್ನ ಕರೆಸ್ಕೊಂಡೆ. ಅವರಿಗೆ

ತಿಳಿಸಿ ಹೇಳಿ ಒಪ್ಪಿಸೋ ಜವಾಬ್ದಾರಿ ನಿಮ್ಮದು."

ಎಂಥ ಕಠಿನ ಕೆಲಸ?–ಎಂದು ಆತನ ಮನಸ್ಸು ಅಳುಕಿತು.

"ಅಪ್ಪ ಒಪ್ಪೋದಿಲ್ಲ, ನನಗೆ ಗೊತ್ತು," ಎಂದಳು ವಿಜಯಾ ನಿರಾಶೆಯಿಂದ.

ಆದಕ್ಕೆ ಸುನಂದಾ ಅಂದಳು:

"ಈ ಕೆಲವು ತಿಂಗಳಲ್ಲಿ ಅಪ್ಪ ಎಷ್ಟು ಬದಲಾಗಿದಾನೆ ವಿಜೀ. ಆ ಸೈತಾನನೆ ಅವರ ಭ್ರಮೆ ನಿರಸನ ಮಾಡಿದಾನೆ."

ವೆಂಕಟರಾಮಯ್ಯ ಹೇಳಿದ:

"ಆಗಲಿ. ನಾನು ಮಾತಾಡ್ತೀನಿ. ದಯವಿಟ್ಟು ನೀವಿಬ್ಬರೂ ಸ್ವಲ್ಪ ನಗು ನಗ್ತಾ ಇರಿ."

... ಸಂಜೆ ಕೃಷ್ಣಪ್ಪನವರು ಅಳಿಯನಿಗೆ ಹೇಳಿದರು:

"ಬನ್ನಿ, ಹಾಗೇ ತಿರುಗಾಡ್ಕೊಂಡು ಬರೋಣ."

ಹಿಂದೆಯೊಮ್ಮೆ ತಿರುಗಾಡಲು ಹೋಗಿದ್ದಾಗ ಕೆರೆಯ ಏರಿಯ ಮೇಲೆ ಕುಳಿತು ದನ್ನು ಸ್ಮರಿಸಿಕೊಳ್ಳುತ್ತ, ಕುಮಾರ ಪಾರ್ಕಿನಲ್ಲಿ ಹಸುರು ಹುಲ್ಲಿನ ಜಾಗ ಹುಡುಕಿ ಅವರು ಕುಳಿತರು.

ಆ ಸಂಜೆಯ ನೆನಪು ಆತ್ಮೀಯತೆಯ ಅಲೆಗಳನ್ನೆಬ್ಬಿಸಿತು.

"ಊರಲ್ಲೆಲ್ಲರೂ ಆರೋಗ್ಯವಾಗಿದಾರಾ?"

"ಹೂಂ. ಆರೋಗ್ಯವಾಗಿದಾರೆ."

"ನಿಮ್ಮ ತಮ್ಮನಿಗೆ ಹೆಣ್ಣು ನೋಡ್ತಿದೀರಾ?"

"ಅವನೇ! ಇನ್ನೊಂದು ವರ್ಷ ಸುದ್ದಿ ಎತ್ಕೊಡದೂಂತ ನಿರ್ಬಂಧ ಹೊರಿಸಿ ದಾನೆ."

"ಸರಿ! ಸರಿ! ಈಗಿನ ಕಾಲದ ಹುಡುಗರೇ ಹೀಗೆ."

ವೆಂಕಟರಾಮಯ್ಯ ಕೇಳಿದ:

"ಬೆಂಗಳೂರು ಒಗ್ಗಿತೇ?"

"ಓಹೋ! ಒಗ್ಗದೇನು ಮಾಡುತ್ತೆ?....ಅಂದ ಹಾಗೆ, ನಿನ್ನ ಸ್ನೇಹಿತ ಸೋಮ ಶೇಖರರಲ್ಲಿಗೆ ಸುನಂದಾನ ಒಂದಿನ ಕರಕೊಂಡು ಹೋಗಿದ್ದೆ. ಅವರ ಮನೆಯಾಕೆ ಒತ್ತಾಯ ಮಾಡಿ ಕರೆಸಿದ್ಲು."

"ಹೌದೆ? ಅತ್ತಿಗೆ ಹೇಳ್ಲೇ ಇಲ್ಲ. ಮರೆತರೂಂತ ಕಾಣುತ್ತೆ."

"ಆತ ಬಹಳ ವಿನಯಶಾಲಿ. ಒಳ್ಳೆಯೋರು."

ಮಾವ ಇಷ್ಟೊಂದು ಉಲ್ಲಾಸದಿಂದಿರುವಾಗ ಅತ್ತಿಗೆ ಹೇಳಿದ್ದ ವಿಷಯ ಪ್ರಸ್ತಾ ಪಿಸುವುದಾದರೂ ಹೇಗೆ–ಎಂದು ವೆಂಕಟರಾಮಯ್ಯ ವಿವಂಚನೆಗೆ ಒಳಗಾದ. ಆದರೆ ಮೌನವನ್ನು ಮುರಿದು, ಅನುಕೂಲ ಪವನ ಇದ್ದಕ್ಕಿದ್ದಂತೆ ಬೀಸಿತು.

"ಆತನಂಥ ನಾಲ್ಕು ಜನ ಇದಾರೇಂತ ಲೋಕ ಇನ್ನೂ ಉಳಿದಿದೆ. ಒಮ್ಮೊಮ್ಮೆ

ಈ ಗೋಳು ಸಹಿಸೋಕಾಗ್ದೆ ಒದ್ದಾಡ್ತೀನಿ. ಆಗ ಭಗವಂತ ಯಾಕಾದರೂ ಇನ್ನೂ ಈ ಭೂಮಿಮೇಲೆ ಇಟ್ಟಿದಾನೋ ಅಂತ ಗೋಳಾಡ್ತೀನಿ,"

ವೆಂಕಟರಾಮಯ್ಯ ಎಚ್ಚರಿಕೆಯಿಂದ ಬಾಣವನ್ನು ಕೈಗೆತ್ತಿಕೊಂಡ.

"ಆತ—ಪುಟ್ಟಣ್ಣ—ಹ್ಯಾಗಿದಾರೆ?"

"ಅಯ್ಯೋ, ಅದನ್ನೇನು ಕೇಳ್ತೀರಾ? ಸುನಂದೆ ತಾಯಿ ಹಾಗೆ ಸಾಯೋದಕ್ಕೂ ಆತನೇ ಕಾರಣ. ನಾನೂ ಹೀಗೆ ಸಣ್ಣಗಾಗಿ ಕೊರಗ್ತಾ ಇದೀನಲ್ಲ—ನಾಳೆ ನಾನು ಹೃದಯಕ್ರಿಯೆ ನಿಂತು ಸತ್ತರೆ ಆ ಪುಣ್ಯವೂ ಆತನ ತಲೆ ಮೇಲೆಯೇ."

ಮನಸ್ಸಿನೊಳಗೇ ಸಮಾಧಾನಪಟ್ಟುಕೊಳ್ಳುತ್ತ ಅಳಿಯ ಕೇಳಿದ:

"ಇತ್ತೀಚೆಗೆ ಆತನ ಭೇಟಿಯಾಗಿತ್ತೇನು?"

ಕೃಷ್ಣಪ್ಪನವರು ನಿಟ್ಟುಸಿರು ಬಿಟ್ಟರು.

"ಯಾಕೆ ಕೇಳ್ತೀರಾ ಅದನ್ನ? ಅಯ್ಯೋ!"

ಅನಂತರ, ಅವರ ಪಾಲಿನ ಅತ್ಯಂತ ಕ್ರೂರವಾದ ಅನುಭವದ ಕಥೆ. ಸುನಂದಾ ನಾಲ್ಕೇ ಪದಗಳಲ್ಲಿ ಬೆಳಗ್ಗೆ ಅದನ್ನು ಹೇಳಿದ್ದಳು. ಕೃಷ್ಣಪ್ಪನವರು ಈಗ ಪೂರ್ಣ ಚಿತ್ರವನ್ನು ಕೊಟ್ಟರು.

ಇದನ್ನೆಲ್ಲ ಕೇಳಿದಾಗ, ತಾನು ಮಾಡುತ್ತಿರುವುದು ದಾಕ್ಷಿಣ್ಯಕ್ಕೆ ಕಟ್ಟು ಬಿದ್ದ ಕೆಲಸವಲ್ಲ; ಇದು ತನ್ನ ಪಾಲಿನ ಕರ್ತವ್ಯ—ಎಂಬುದು ವೆಂಕಟರಾಮಯ್ಯನಿಗೆ ಸ್ಪಷ್ಟ ವಾಯಿತು.

"ಸಾಕು ಮಾವಯ್ಯ. ಮೊದಮೊದಲು, ಆ ವಿಚಿತ್ರ ಮನುಷ್ಯನನ್ನ ನೋಡ ಬೇಕು ಅನ್ನೋ ಕುತೂಹಲ ನನಗಿತ್ತು, ನಿಮ್ಮ ಜತೆಯಲ್ಲೇ ಯಾವತ್ತಾದರೂ ಹೋಗಿ ಆತನನ್ನ ನೋಡೋಣಾಂತಲೂ ಇದ್ದೆ. ಆದರೆ, ನಾವು ಹೋಗಿ ನೋಡೋದಕ್ಕೂ ಒಬ್ಬ ಮನುಷ್ಯನಿಗೆ ಯೋಗ್ಯತೆ ಇರಬೇಕು."

ಆ ಮಾತು ಸರಿ ಎಂಬಂತೆ ಕೃಷ್ಣಪ್ಪನವರು ತಲೆಯಾಡಿಸಿದರು.

ವೆಂಕಟರಾಮಯ್ಯ ಹೇಳಿದ:

"ಇದನ್ನು ಹೀಗೇ ಬಿಡೋದು ಸರಿಯಲ್ಲ ಮಾವ. ನಾಳೆ ಆತ ಅತ್ತಿಗೆಗೆ ತೊಂದರೆ ಕೊಡಬಹುದು. ಮಗೂಗೆ ಅಪಾಯ ಉಂಟಾಗ್ಬಹುದು. ಮತಿಕೆಟ್ಟ ಮನುಷ್ಯ ಏನು ತಾನೇ ಮಾಡಲಾರ?"

ಕೃಷ್ಣಪ್ಪನವರಿಗೆ ದಿಗಿಲಾಯಿತು.

"ಹಾಗಂತೀರಾ?"

"ಹೌದು. ಆತ ಸುಮ್ನಿರ್ತಾನೆ ಅನ್ನೋದು ಯಾವ ನಂಬಿಕೆ? ನಿಮ್ಮ ತಂಟೆಗೆ ಒಂದು ಸಮಯ ಬರಲಿಲ್ಲಾಂತ ಇಟ್ಕೊಳ್ಳೋಣ. ಆದರೆ ತಾನೇ ಏನಾದರೂ ಮಾಡಿದ್ರೂ ಅದರ ಪರಿಣಾಮ ನೀವೆಲ್ಲ ಅನುಭವಿಸದೆ ಇರೋಕಾಗುತ್ಯೆ?"

ರಾಮಕೃಷ್ಣಯ್ಯ ಅಸ್ಪಷ್ಟವಾಗಿ ಈ ವಿಷಯವೆತ್ತಿದ್ದರಾದರೂ ಈಗಿನಷ್ಟು

ಕಾತರ ಹಿಂದೆ ಕೃಷ್ಣಪ್ಪನವರಿಗೆ ಆಗಿರಲಿಲ್ಲ.

"ಇದಕ್ಕೇನು ಪರಿಹಾರ?"

"ಆತನಿಗೂ ನಿಮಗೂ ಸಂಬಂಧವಿಲ್ಲಾಂತ ನೋಟೀಸು ಕೊಟ್ಬಿಡ್ಬೇಕು."

"ಅಂದರೆ? ಏನು ನೀನು ಹೇಳೋದು? ಕೋರ್ಟಿನಲ್ಲಿ?"

"ಹೌದು."

"ಛೆ! ಛೆ! ಉಂಟೆ ಎಲ್ಲಾದರೂ?"

"ಯಾಕೆ ಮಾವ?"

ಕೃಷ್ಣಪ್ಪನವರು ಅಪನಂಬಿಕೆಯ ದೃಷ್ಟಿಯಿಂದ ವೆಂಕಟರಾಮಯ್ಯನನ್ನ ನೋಡಿದರು. ಈತ ಲೋಕಾನುಭವವಿಲ್ಲದ ಹಸುಳೆ–ಎನಿಸಿತು ಅವರಿಗೆ.

"ಲೋಕ ಏನು ಹೇಳುತ್ತೆ ಗೊತ್ತೆ?"

"ಸಾವಿರ ಹೇಳೀತು ಮಾವ. ಈಗ ಅದು ಹೇಳ್ತಿರೋದು ಏನು ಕಡಮೆಯೆ? ಅತ್ತಿಗೆ ವಿಷಯದಲ್ಲಿ ಕೆಟ್ಟ ನಾಲಗೆಗಳು ಏನಂತಿವೆ ಅನ್ನೋದು ಗೊತ್ತಿಲ್ವಾ ನಿಮಗೆ?"

ಕೃಷ್ಣಪ್ಪನವರು ಮಾತನಾಡಲಿಲ್ಲ. ವೆಂಕಟರಾಮಯ್ಯನೂ ಸುಮ್ಮನೆ ಕುಳಿತ.

ಸ್ವಲ್ಪ ಹೊತ್ತಾದ ಮೇಲೆ ಮಾವ ಗಡುಸಾದ ಸ್ವರದಲ್ಲಿ "ಇನ್ನು ಏಳೋಣ," ಎಂದರು. ಅಳಿಯ ವಿಧೇಯನಾಗಿ ಎದ್ದ.

ಮನೆ ಕಡೆಗೆ ಹಿಂತಿರುಗುತ್ತ ಕೃಷ್ಣಪ್ಪ ಕೇಳಿದರು:

"ಸುನಂದಾ ಈ ವಿಷಯ ಮಾತಾಡಿದ್ಲಾ?"

ವೆಂಕಟರಾಮಯ್ಯ ತಡವರಿಸಿದ. ಇಲ್ಲ–ಎನ್ನಬೇಕೆನಿಸಿತು. ಆದರೂ ಆದುದಾಗಲೆಂದು ಧೈರ್ಯದಿಂದ ಹೇಳಿದ:

"ಹೌದು."

ನಾಲ್ಕು ಹೆಜ್ಜೆ ಮಾತಿಲ್ಲದೆ ನಡೆದು ಮಾವ ಅಂದರು:

"ಅದಕ್ಕೇ ನಿಮ್ಮಿಬ್ಬರನ್ನೂ ಅವಸರವಾಗಿ ಕರೆಸಿದ್ದು–ಅಲ್ವೆ?"

ಧ್ವನಿ ಗೊಗ್ಗರವಾಗಿತ್ತು. ಅಳಿಯ ಸುಮ್ಮನಿದ್ದ.

...ಮನೆಯಲ್ಲಿ ಕೃಷ್ಣಪ್ಪನವರು ಮಕ್ಕಳೊಡನೆ ಮಾತನಾಡಲಿಲ್ಲ. ಸರಸ್ವತಿಯೊಬ್ಬಳನ್ನೇ ತೊಡೆಯ ಮೇಲೆ ಕೂರಿಸಿಕೊಂಡು ಹೊತ್ತು ಕಳೆದರು.

ಒಳಗೆ ವಿಜಯಾ ಕೇಳಿದಳು:

"ಏನಂದರು?"

"ಏನೂ ಹೇಳ್ಲಿಲ್ಲ," ಎಂದ ವೆಂಕಟರಾಮಯ್ಯ.

ಕೃಷ್ಣಪ್ಪನವರಿಗೆ ರಾತ್ರೆ ನಿದ್ದೆ ಬರಲಿಲ್ಲ. ಭಾವಕ್ಕೂ ವಿಚಾರಕ್ಕೂ ಒಂದೇ ಸಮನೆ ತಿಕ್ಕಾಟ ನಡೆಯಿತು. ಆಚಾರ, ಪರಂಪರೆ, ಲೋಕಾಪವಾದದ ಭಯ ಎಲ್ಲವೂ ಒಂದಾಗಿ ಒಂದೆಡೆ ಜಗ್ಗಿದುವು. ಮಗಳು ಮೊಮ್ಮಗಳು ಸುಖಿಯಾಗಿರಬೇಕೆಂಬ ಆಸೆ,

ಪುಟ್ಟಣ್ಣನಂತಹ ಪಿಶಾಚಿಯ ಹಿಡಿತದಿಂದ ಅವರು ವಿಮುಕ್ತರಾಗಬೇಕೆನ್ನುವ ಹಂಬಲ, ನ್ಯಾಯಸ್ಥಾನದ ಮೊರೆಹೊಗುವುದರಲ್ಲಿ ತಪ್ಪಿಲ್ಲ ಎನ್ನುವ ಸಮಾಧಾನ–ಇವೆಲ್ಲ ಒಂದಾಗಿ ಇನ್ನೊಂದೆಡೆ ಜಗ್ಗಿದುವು. 'ನಾವೇನು ಫರಂಗಿಯವರು ಕೆಟ್ಟು ಹೋದೆವೆ?' ಎಂದು ಮನಸ್ಸಿನಲ್ಲೆ ಒಮ್ಮೆ ಗೊಣಗಿದರು. ಮರು ಕ್ಷಣದಲ್ಲೆ ಒಳಗಿನ ಧ್ವನಿ ಕೇಳಿಸಿತು–'ನಾನು ಹೇಗಿದ್ದರೂ ಬೇಗನೆ ಸಾಯುವವನು. ಮುಂದೆ ಬದುಕಬೇಕಾದವಳು ಸುನಂದಾ. ಆ ಎಳೆ ಕೂಸನ್ನು ಕಾಪಾಡಬೇಕಾದ್ದು ಅವಳು, ಆಕೆಯ ಸುಖ ಮುಖ್ಯ–ಹಿತ ಮುಖ್ಯ...' ಮತ್ತೆ ಘೋರ ರೂಪ ತಳೆಯತೊಡಗಿದ ಶಂಕೆ ಸಂದೇಹಗಳು. ಪುನಃ ಸಮಾಧಾನ ಹೇಳುವ ಯತ್ನ.

ಬೆಳಗಿನ ಜಾವ ಸ್ವಲ್ಪ ಹೊತ್ತು ಅವರಿಗೆ ಜೊಂಪು ಹತ್ತಿತು. ಎದ್ದವರೇ ಮನೆ ಬಿಟ್ಟು ಹೊರಟರು. ಯಾರಿಗೂ ಏನನ್ನೂ ಹೇಳಲಿಲ್ಲ.

"ರಾಮಕೃಷ್ಣಯ್ಯನವರ ಮನೆಗೆ ಹೋಗಿರ್ತಾನೆ" ಎಂದಳು ಸುನಂದಾ.

ಆ ಊಹೆ ನಿಜವಾಗಿತ್ತು.

ಆದರೆ ಬೆಳಗಾಗಿ ಬಿಸಿಲೇರಿ ಬಹಳ ಹೊತ್ತಾದರೂ ಅವರು ಬರದೇ ಇದ್ದುದನ್ನು ಕಂಡು ಎಲ್ಲರೂ ವಿಮಂಚನೆಗೊಳಗಾದರು.

"ಎಲ್ಲಿದೆಯಕ್ಕ ಅವರ ಮನೆ? ವಿಳಾಸ ಹೇಳು. ಇವರು ಹೋಗಿ ನೋಡ್ಕೊಂಡು ಬರ್ಲಿ," ಎಂದಳು ವಿಜಯಾ.

"ಮನೆ ಸಮೀಪದಲ್ಲೇ ಇದೆ. ಮಧ್ಯಾಹ್ನದವರೆಗೂ ನೋಡೋಣ. ಊಟದ ಹೊತ್ತಿಗೆ ಬರಬಹುದು," ಎಂದು ಸುನಂದಾ ಉತ್ತರವಿತ್ತಳು.

ಊಟದ ಹೊತ್ತಿಗೆ ಅವರು ಬಂದರು. ಕಣ್ಣುಗಳು ಆಳಕ್ಕಿಳಿದು, ಕೆನ್ನೆಗಳು ಗುಳಿಬಿದ್ದು, ಮುಖ ವಿಕಾರವಾಗಿತ್ತು. ಆ ಹುಬ್ಬುಗಳ ಮೇಲೆ ಹೆಪ್ಪುಗಟ್ಟಿ ನಿಂತಿತ್ತು ಯಾತನೆ.

ಬಂದವರು ಹೊದ್ದುಕೊಂಡಿದ್ದ ಶಾಲನ್ನು ಚಾಪೆಯ ಮೇಲಕ್ಕೆ ಎಸೆದರು.

"ಸುನಂದಾ!" ಎಂದು ಕರೆದರು.

ಎಂದಿನ 'ಸುಂದಾ' ಆಗಿರಲಿಲ್ಲ ಮಗಳು.

ಆಕೆ ಎದುರು ನಿಂತೊಡನೆಯೇ ಅವರೆಂದರು:

"ನನ್ನ ಆಕ್ಷೇಪವಿಲ್ಲವಮ್ಮ. ದೇವರು ಹ್ಯಾಗೆ ಬುದ್ಧಿ ಕೊಡ್ತಾನೋ ಹಾಗೆ ಮಾಡು. ನಾನು ತೀರ್ಥಯಾತ್ರೆ ಹೊರಡ್ಬೇಕೂಂತಿದೀನಿ. ನನಗೆ ಅಡ್ಡಿಯಾಗ್ಬೇಡ."

"ಅಪ್ಪಾ!" ಎಂದು ಕೂಗಿದಳು ಸುನಂದಾ. ಕರ್ಕಶವಾಗಿತ್ತು ಸ್ವರ. ತಂದೆಯೆಡೆಗೆ ಮಗಳು ಧಾವಿಸಿ ಆ ಕಾಲುಗಳೆರಡನ್ನೂ ಹಿಡಿದುಕೊಂಡಳು. ದೇಹ ಸರಿದು, ತಲೆ ಪಾದಗಳ ಮೇಲೆ ನಿಂತಿತು.

"ಅಪ್ಪಾ! ಅಪ್ಪಾ!"

ಮಗಳ ಕಂಬನಿಯಿಂದ ತಂದೆಯ ಪಾದಗಳು ತೋಯ್ದುವು.

"ಅಪ್ಪಾ! ಯಾಕಪ್ಪ ಹಾಗಾಡ್ತೀಯಾ? ನನ್ನ ಸಂಕಟ ನಿಂಗೆ ಅರ್ಥವಾಗಲ್ವ ಅಪ್ಪಾ?"

ಕೃಷ್ಣಪ್ಪನವರು ಕದಲದೆ ಕುಳಿತರು. ಎರಡು ನಿಮಿಷ. ಬಳಿಕ ಒಮ್ಮೆಲೆ ಅಣೆಕಟ್ಟು ಕಡಿಯಿತು.

"ಸುಂದಾ! ಅಳಬೇಡವಮ್ಮ! ಸುಂದಾ—ಅಳಬೇಡ!" ಎನ್ನುತ್ತ, ಮಗಳನ್ನೆತ್ತಲು ಯತ್ನಿಸುತ್ತ, ಅವರು ಗಟ್ಟಿಯಾಗಿ ಅತ್ತರು.

## ೨೬

ಮಧ್ಯಾಹ್ನವಾದೊಡನೆಯೆ ಆಕಾಶವನ್ನು ಮೋಡ ಕವಿಯಿತು. ಆದರೆ, ಬರಬಹುದಾದ ಮಳೆಗೆ ಹೆದರಿ ಸುಮ್ಮನಿರುವುದು ಸಾಧ್ಯವಿರಲಿಲ್ಲ.

ವೆಂಕಟರಾಮಯ್ಯ ಸ್ನೇಹಿತನ ಮನೆ ತಲಪಿದಾಗ, ಸೋಮಶೇಖರ ಭಾನುವಾರದ ಹಗಲುನಿದ್ದೆಯ ಸುಖ ಅನುಭವಿಸುತ್ತಿದ್ದ. ಗಿರೀಶ ತನ್ನ ತಂದೆಯನ್ನೆಬ್ಬಿಸಿ ಮಾವ ಬಂದ ಸುದ್ದಿ ತಿಳಿಸಿದ.

"ಯಾವ ಮಾವನೊ?" ಎಂದ ಸೋಮಶೇಖರ ಅರೆನಿದ್ದೆಯಲ್ಲೆ.

"ಏಳಿ. ಮಲೆನಾಡಿನೋರು ಬಂದಿದಾರೆ" ಎಂದಳು ಸೀತಮ್ಮ.

ಸೋಮಶೇಖರ ಥಟ್ಟನೆದ್ದ. ನೇರವಾಗಿ ಒಳಗೆ ಬಂದ ಮಿತ್ರನ ಆಗಮನ ಹಿತಕರವಾಗಿತ್ತು.

"ಯಾವಾಗ್ಲೋ ಬಂದೆ?"

"ನಿನ್ನೆ ಕಣೋ."

"ಒಬ್ನೇನಾ?"

ಬಾಗಿಲಲ್ಲೆ ನಿಂತಿದ್ದ ಸೀತಮ್ಮನನ್ನು ಕುರಿತು ವೆಂಕಟರಾಮಯ್ಯ ಹೇಳಿದ:

"ವಿಜಯಾನೂ ನಾನೂ ನಾಳೆ ಊಟಕ್ಕೆ ಬರ್ತೀವಿ ಕಣ್ರೀ."

"ಥ್ಯಾಂಕ್ಸ್! ಬಾಯಿಯಿಂದ ಅಷ್ಟಾದರೂ ಬಂತಲ್ಲ!" ಎಂದು ಸೀತಮ್ಮ ಒಳಹೋದಳು.

ಸೋಮಶೇಖರ ಆಕಳಿಸುತ್ತ ನುಡಿದ:

"ನಿನಗೆ ಬರೀಬೇಕೂಂತ ಯೋಚಿಸುತ್ಲೇ ಇದ್ದೆ."

"ಒಳ್ಳೇ ಕೆಲಸ ಮಾಡ್ದೆ. ಯೋಚಿಸೋದು ಯಾವಾಗ್ಲೂ ಆರೋಗ್ಯಕ್ಕೆ ಒಳ್ಳೇದು."

"ನಿನ್ನ ಅತ್ತಿಗೆ ಬಂದಿದ್ರಪ್ಪ."

"ಊಟಕ್ಕೆ ಬಂದಿದ್ರಂತೆ."

"ಅಲ್ಲ, ಆಮೇಲೆ. ನನ್ನಿಂದ ಹಿಂದೂ ವಿವಾಹ ಶಾಸನ ಪಾಠ ಒಪ್ಪಿಸ್ಕೊಂಡು ಹೊರಟ್ಹೋದ್ರು."

"ಹೌದೆ? ಏನಾದರೂ ಹೇಳಿದ್ಲೇನು?"

ಸುನಂದಾ ಆ ವಿಷಯ ತಿಳಿಸಿರಲಿಲ್ಲ. ಅತ್ತಿಗೆಯ ಧೈರ್ಯ ಸ್ಥೈರ್ಯ ಕಂಡು ಮೂಗಿನ ಮೇಲೆ ಬೆರಳಿಡುವ ಹಾಗಾಯಿತು ವೆಂಕಟರಾಮಯ್ಯನಿಗೆ.

"ಏನೂ ಇಲ್ಲ. ಪಾಪ! ನನ್ನ ವಿವರಣೆ ಮುಗಿಯೋ ಹೊತ್ತಿಗೆ ಅವರು ಪ್ರಜ್ಞೆ ತಪ್ಪೋ ಸ್ಥಿತಿಗೆ ಬಂದಿದ್ರು."

ವೆಂಕಟರಾಮಯ್ಯ ನಿಟ್ಟುಸಿರು ಬಿಟ್ಟು ಹೇಳಿದ:

"ಈಗ ಅದೇ ಸಂಬಂಧವಲ್ಲಿ ಶಿವಮೊಗ್ಗಾದಿಂದ ಬಂದಿದೀನಪ್ಪಾ ನಾನು."

"ನಿಜವಾಗ್ಲೂ?"

"ವಿಚ್ಛೇದನವೇ ಸರಿ ಅಂತ ಅತ್ತಿಗೆ ತೀರ್ಮಾನ ಮಾಡಿದಾಳೆ. ನನಗೂ ಅದು ಸರಿ ಅನ್ನಿಸುತ್ತೆ. ಮೊದಲು ಒಂದು ನೋಟೀಸು ಕಳಿಸ್ಬೇಕು, ಅಲ್ವೆ?"

"ಹೂಂ."

"ಅದನ್ನಿಷ್ಟು ಬರಕೊಡು. ನೀನೇ ನಮ್ಮ ಕಡೆ ವಕೀಲ."

"ನಿನ್ನ ಮಾವನಿಗಂತೂ ಆಗಲೇ ವಕೀಲನಾಗಿದೀನಿ!"

"ಏನಾಗಿತ್ತು ಅವರಿಗೆ?"

"ಅಹ್ಹಾ! ಅವರು ಉಯಿಲು ಬರೆಸಿದಾರೆ ಕಣೋ. ನಿನ್ನ ಧರ್ಮಪತ್ನಿಗೂ ಒಂದು ಸಮನಾದ ಪಾಲು. ಸಾವಿರ ರೂಪಾಯಿ ಮತ್ತು ಅದರ ಬಡ್ಡಿ!"

"ಅಯ್ಯೋ. ಅವರೊಬ್ಬರು–ನಾನು ಬೇಡ ಅಂದಿದ್ದೆ."

"ತಿಳೀತು. ಅವರೇ ಹೇಳಿದ್ರು ಅದನ್ನ..."

"ಹೋಗಲಿ ಬಿಡು. ಇದನ್ನೊಮ್ಮೆ ಹ್ಯಾಗಾದರೂ ಬಗೆಹರಿಸಪ್ಪ."

"ನಿಮ್ಮ ಮಾವ ಒಪ್ಪಿದಾರೆಯೇ?"

"ಹೂನಪ್ಪಾ. ಎಷ್ಟೊಂದು ಸಂಕಟ ಪಟ್ಕೊಂಡ್ರೂಂತ. ಆತ ದೇವರಂಥ ಮನುಷ್ಯ. ಆ ಪುಟ್ಟಣ್ಣನ ವಿಷಯ ಪೂರ್ತಿ ಗೊತ್ತಿಲ್ಲ ನಿಂಗೆ. ಆತ ಮಹಾ ನೀಚ"

"ಹಾಗಂತ್ಲೇ ನಾನು ಊಹಿಸ್ದೆ. ಇಲ್ದಿದ್ರೆ, ನಿನ್ನ ಅತ್ತಿಗೆಯಂಥ–ಸಾಧು ಪ್ರಾಣಿ ಕೆರಳೋದು ಸಾಧ್ಯವೇ ಇಲ್ಲ."

ಹೊರಗೆ ಮಳೆಸುರಿಯತೊಡಗಿತು. ಬಿಸಿ ಕಾಫಿಯಿಂದ ಆದ ಉಪಯೋಗ ಸ್ವಲ್ಪವಾದರೂ ಅದು ಸ್ವಾಗತಾರ್ಹವೇ.

ಸ್ನೇಹಿತನಿಂದ ವಿವರ ಕೇಳಿ ತಿಳಿಯುತ್ತ ಸೋಮಶೇಖರ ನೋಟೀಸೊಂದನ್ನು ಬರೆದ. ಅದು ಸಿದ್ಧವಾದ ಬಳಿಕ ಅಲ್ಲಲ್ಲಿ ತಿಳಿಯಹೇಳುತ್ತ ಓದಿದ:

ನೋಟೀಸು

ನಂಬರು—                                    ತಾರೀಕು—ನಾಳೀದು ತಾನೆ?

ಇದರ ಕೆಳಗೆ ನನ್ನ ಹೆಸರು ಮತ್ತು ವಿಳಾಸ

ಆತನ ವಿಳಾಸ ಹಾಕ್ಬಿಟ್ಟು......ದಲ್ಲಿ ವಾಸವಾಗಿರುವ ಶ್ರೀಮಾನ್ ಪುಟ್ಟಣ್ಣ ನವರಿಗೆ—

ನಮ್ಮ ಕಕ್ಷಿಗಾರಳಾದ... ವಿಳಾಸ ಬರೆದು....ವಾಸವಾಗಿರುವ ಶ್ರೀಮಾನ್ ಕೃಷ್ಣಪ್ಪನವರ ಮಗಳು ಶ್ರೀಮತಿ ಸುನಂದಮ್ಮ ಹೇಳಿಕೆ ಮೇರೆಗೆ ತಿಳಿಯ ಪಡಿಸುವುದೇನೆಂದರೆ:—

ನಮ್ಮ ಕಕ್ಷಿಗಾರಳು ನಿಮಗೆ ಶಾಸ್ತ್ರೋಕ್ತವಾಗಿ ವಿವಾಹವಾದ ಹೆಂಡತಿ ಆಗಿರುವುದೂ ಈ ಸಂಬಂಧದಿಂದ ಸರಸ್ವತಿ ಎಂಬ ಎರಡೂವರೆ ವರ್ಷದ ಮಗು ವಿರುವುದೂ ಸರಿಯಷ್ಟೆ? ಸದರಿ ಸರಸ್ವತಿ ಹುಟ್ಟಿದ ಮೇಲೆ ಬಾಣಂತನ ಮುಗಿಸಿಕೊಂಡು ನಿಮ್ಮ ಮನೆಗೆ ನಮ್ಮ ಕಕ್ಷಿಗಾರಳು ಬಂದಾಗಿನಿಂದಲೂ ಹೀನಾಮಾನವಾಗಿ ಬಯ್ಯುವುದು, ಹೊಡೆಯುವುದು, ಅನ್ನ ಬಟ್ಟೆ ಕೊಡದೆ ಚೆಂಡಿಸುವುದು,-ಈ ರೀತಿ ನಿಷ್ಕಾರಣವಾಗಿ ಕ್ರೂರ ಹಿಂಸೆ ಮಾಡಿದ್ದರಿಂದ ನಮ್ಮ ಕಕ್ಷಿಗಾರಳು ಮತ್ತು ಮಗು ಸಹಿತ ಕಾಹಿಲೆ ಬಿದ್ದು ಬಹಳ ಕಷ್ಟ ಪಡ ಬೇಕಾಗಿ ಬಂದುದು ಸರಿಯಷ್ಟೆ? ನಂತರ ನೀವು ಕೆಟ್ಟ ಹೆಂಗಸರ ಜತೆ ಅನೈತಿಕ ಸಂಬಂಧ ಬೆಳೆಸುವ ವಾಡಿಕೆಯನ್ನು ಇಟ್ಟುಕೊಂಡಿದ್ದು ನಮ್ಮ ಕಕ್ಷಿಗಾರಳ ಮನ ಸ್ಸಿಗೆ ಬಹಳ ವ್ಯಥೆಯುಂಟಾದದ್ದೂ ಈ ರೀತಿ ಎಂಟು ತಿಂಗಳ ಕಾಲ ಇವಳನ್ನು ಕ್ರೂರ ಹಿಂಸೆಗೆ ಗುರಿ ಮಾಡಿದ್ದೂ ಸರಿಯಷ್ಟೆ? ಆ ಬಳಿಕ ಕಕ್ಷಿಗಾರಳು ಅವಳ ತಂಗಿ ಮದುವೆಗೋಸ್ಕರ ತವರು ಮನೆಗೆ ಹೋಗಬೇಕಾಗಿ ಬಂತು. ಅಲ್ಲಿಂದ ಕಕ್ಷಿಗಾರಳು ನಿಮ್ಮಲ್ಲಿಗೆ ವಾಪಸು ಬರುವ ವಿಷಯದಲ್ಲಿ ನೀವು ಉದಾಸೀನ ದಿಂದ ಇದ್ದುದು ಸರಿಯಷ್ಟೆ? ಹೀಗಿದ್ದಾಗ್ಯೂ ನಮ್ಮ ಕಕ್ಷಿಗಾರಳು ಮತ್ತು ಅವರ ತಂದೆ ಎಷ್ಟೋ ಸಲ ಲಿಖಿತ ಮೂಲಕವಾಗಿಯೂ ಮತ್ತು ಮೊಕ್ತಾ ಮನೆಗೆ ವಾಪಸು ಕರಕೊಂಡು ಹೋಗಬೇಕೆಂದು ಪ್ರಾರ್ಥನೆ ಮಾಡಿದ್ದಾಗ್ಯೂ ನೀವು ಎಲ್ಲವನ್ನೂ ನಿರಾಕರಿಸಿದ್ದು ಸರಿಯಷ್ಟೆ? ತದನಂತರ ನೀವು ವಾಸ ವಾಗಿದ್ದ ಹೋಟೆಲಿಗೆ ಮಗುವಿನೊಡನೆ ನಮ್ಮ ಕಕ್ಷಿಗಾರಳು ಬಂದಾಗ ಅವಳನ್ನು ತುಚ್ಛವಾಗಿ ಬೈದು ಧಿಕ್ಕರಿಸಿ ಹೊರಗೆ ಕಳಿಸಿದ್ದು ಸರಿಯಷ್ಟೆ? ಈಗಲೂ ನೀವು ಈ ನೋಟೀಸು ತಲ್ಪಿದ ಹದಿನೈದು ದಿನಗಳಲ್ಲಿ ನಮ್ಮ ಕಕ್ಷಿಗಾರಳನ್ನು ನಿಮ್ಮ ಮಗುವನ್ನು ಕಕ್ಷಿಗಾರಳ ತಂದೆ ಕೃಷ್ಣಪ್ಪನವರ ಮನೆಯಿಂದ ಕರೆದುಕೊಂಡು ಹೋಗಿ ಮೊದಲಿನಂತೆ ಸೌಹಾರ್ದ ರೀತಿಯಲ್ಲಿ ಸಂಸಾರ ಮಾಡಿಕೊಂಡಿರ ಬೇಕೆಂದು ನಮ್ಮ ಕಕ್ಷಿಗಾರಳು ಕೋರಿಕೊಂಡಿರುತ್ತಾಳೆ. ನೀವು ಹೀಗೆ ಮಾಡ ದಿದ್ದಲ್ಲಿ ನಮ್ಮ ಕಕ್ಷಿಗಾರಳು ನಿರ್ವಾಹವಿಲ್ಲದೆ ನಿಮ್ಮ ಮೇಲೆ ವಿವಾಹವಿಚ್ಛೇದನ

ಕ್ಕಾಗಿ ತಕ್ಕ ಕೋರ್ಟಿನಲ್ಲಿ ಕ್ರಮ ಜರಗಿಸುವವಳಾಗಿರುತ್ತಾಳೆಂದು ಈ ಮೂಲಕ ನಿಮಗೆ ತಿಳಿಯಪಡಿಸಲಾಗಿದೆ. ಇದರಿಂದ ನಮ್ಮ ಕಕ್ಷಿಗಾರಳಿಗುಂಟಾಗುವ ಖರ್ಚುವೆಚ್ಚಗಳಿಗೂ ಮತ್ತು ಈ ನೋಟೀಸು ಫೀಸು ೧೦ ರೂಪಾಯಿಗಳಿಗೂ ನೀವೇ ಬದ್ಧರಾಗಿರುತ್ತೀರಿ, ತಿಳಿಯಿರಿ..."

ಓದಿ ಮುಗಿಸಿ ಸೋಮಶೇಖರ ಕರಡು ಪ್ರತಿಯನ್ನು ವೆಂಕಟರಾಮಯ್ಯನಿಗೆ ಕೊಟ್ಟ.

"ತಗೊಂಡು ಹೋಗಿ ಕೊಡು. ಓದಿ ನೋಡ್ಲಿ. ವಿಳಾಸಗಳನ್ನ ಕೇಳಿ ಭರ್ತಿ ಮಾಡು."

ಸೋಮಶೇಖರ ಸ್ವಲ್ಪವಾದರೂ ನಿರ್ಲಿಪ್ತತೆಯಿಂದ ಈ ವ್ಯವಹರಣೆಯನ್ನು ಪರಿಗಣಿಸಲು ಸಮರ್ಥನಾಗಿದ್ದ. ವೆಂಕಟರಾಮಯ್ಯನಿಂದ ಅದು ಸಾಧ್ಯವಿರಲಿಲ್ಲ.

ಕೈಯಲ್ಲಿದ್ದ ಕರಡು ಪ್ರತಿಯನ್ನೇ ನೋಡುತ್ತ ಆತನೆಂದ:

"ವಿವಾಹ ವಿಚ್ಛೇದನದ ಕಲ್ಪನೆಗಿಂತಲೂ ಅದನ್ನು ಪಡೆಯೋ ವಿಧಾನವೇ ಭಯಂಕರ."

"ಇಷ್ಟಕ್ಕೇ ಮುಗಿಯಿತೂಂತ ತಿಳಕೋಬೇಡ. ಈ ನೋಟೀಸಿನಲ್ಲಿರೋ ಆಪಾದನೆ ಗಳನ್ನೆಲ್ಲ ರುಜುಪಡಿಸೋಕೆ ನಾವು ಸಿದ್ಧವಾಗಿರ್ಬೇಕು. ಹಿಂಸೆ ಕೊಟ್ಟದ್ದು, ಕೆಟ್ಟ ನಡತೆ–ಇವಕ್ಕೆಲ್ಲ ಸಾಕ್ಷಿಗಳು ಸಿಗಬಹುದೇನು?"

"ಖಾಸಗಿ ವಿಚಾರಣೆ ತಾನೆ?"

"ಹೂಂ."

"ಆಕೇನ ಒಡಹುಟ್ಟಿದವಳ ಹಾಗೆ ಪ್ರೀತಿಸೋ ಸ್ನೇಹಿತೆಯರಿದಾರೆ. ಎಷ್ಟೋ ವಿಷಯ ಕಣ್ಣಾರೆ ನೋಡಿರೋರು. ಅವರ ಸಾಕ್ಷ್ಯ ಸಾಕಾದೀತೆ?"

"ಧಾರಾಳವಾಯ್ತು."

"ಇದರ ಕ್ರಮ ಹ್ಯಾಗಪ್ಪಾ? ಏನಾಗುತ್ತೆ ಮುಂದೆ?"

"ವಕಾಲತ್‌ನಾಮ ಫಾರ್ಮ್ ಕೊಡ್ತೀನಿ. ಅತ್ತಿಗೆ ಕೈಲಿ ಸಹಿ ಹಾಕಿಸ್ಕೊಂಡು ಬಾ. ನೋಟೀಸ್ ಕಳಿಸಿ ಹದಿನೈದು ದಿವಸ ಕಾಯ್ಬೇಕು. ಇದನ್ನ ತಗೊಳ್ಳದೇ ಆತ ತಪ್ಪಿಸ್ಕೋಬಹುದು. ಅಥವಾ ತಗೊಂಡು ಸುಮ್ಮನಿರಬಹುದು. ತನ್ನ ವಕೀಲನ ಮೂಲಕ ಮುಖ್ಯ ವಿಷಯಗಳನ್ನ ನಿರಾಕರಿಸಿ ಉತ್ತರ ಕೊಡಲೂ ಬಹುದು. ಆಮೇಲೆ ಡಿಸ್ಟ್ರಿಕ್ ಕೋರ್ಟಿಗೆ ನಮ್ಮ ಅರ್ಜಿ. ಅಪರೇನೂ ಬರಬೇಕಾದ್ದಿಲ್ಲ. ನಾನೇ ಕೊಡ್ತೀನಿ. ಶಿರಸ್ತೇದಾರ ಅದನ್ನ ತಗೊಂಡು ಫೈಲ್ ಮಾಡ್ತಾನೆ. ಒಂದು ತಿಂಗಳ ವ್ಯಾದೆ ಕೊಟ್ಟು ಆ ಮಹಾನುಭಾವನಿಗೆ ಕೋರ್ಟು ನೋಟೀಸು ಕೊಡುತ್ತೆ. ಆತ ಬಂದರೆ ಸಾಕ್ಷಿಗಳ ವಿಚಾರಣೆಗೇಂತ ಮತ್ತೊಂದು ತಿಂಗಳು ಮುಂದೆ ಹೋಗುತ್ತೆ. ಅದಾದ್ಮೇಲೆ ತೀರ್ಪು... ಆತ ಅರ್ಜೀನ ಎದುರಿಸ್ಬಹುದು ಅಂತೀಯಾ?"

ಯೋಚಿಸಿ ವೆಂಕಟರಾಮಯ್ಯ ಹೇಳಿದ:

"ಇಲ್ಲ ಅನಿಸುತ್ತೆ. ಮಗು ವಿಷಯದಲ್ಲಂತೂ ಆತನಿಗೆ ಆಸಕ್ತಿ ಇಲ್ಲ."

"ಆತ ಸುಮ್ಮನಿದ್ದರೆ ಎಕ್ಸ್‌ಪಾರ್ಟೆ ಡಿಕ್ರೀ. ಹಿಯರಿಂಗಿನ ದಿವಸವೇ ಎಲ್ಲಾ ಮುಗಿದ್ಹೋಗುತ್ತೆ."

"ನೋಟೀಸಿನಲ್ಲಿ ಖರ್ಚು ವೆಚ್ಚದ ವಿಷಯ ಇದೆಯಲ್ಲ. ಅದು ಹಾಗಿರಲೇ ಬೇಕೆ?"

ಸೋಮಶೇಖರ ಸಣ್ಣನೆ ನಕ್ಕ.

"ಪದ್ಧತಿ ಪ್ರಕಾರ ಬರೆದೆ ಅಷ್ಟೆ. ನಿನ್ನ ಅತ್ತಿಗೆ ಬೇಡ ಎಂದರೆ ತೆಗೆದು ಹಾಕೋಣ."

"ಇದೆಲ್ಲಾ ನಿಮಗೆ ತಮಾಷೆಯಾಗಿ ತೋರುತ್ತೆ ಅಲ್ವಾ?"

ಸೋಮಶೇಖರನ ಮುಖಭಾವ ಬದಲಾಯಿತು.

"ಯಾಕೆ ವೆಂಕ್ಟು? ಸೀತಾನ ಕೇಳು—ಆಕೆ ವಿಷಯ ನಾವು ಏನೇನು ಮಾತಾಡ್ಕೊಂಡಿದೀವೀಂತ."

"ಅತ್ತಿಗೆ ಈಗ ಮಲ್ಲೇಶ್ವರದಲ್ಲಿ ಯಾವುದೋ ಶಿಶುವಿಹಾರದಲ್ಲಿ ಕಾರ್ಯದರ್ಶಿನಿಯಾಗಿದಾಳೆ."

"ಹಾಗೇನು? ಒಳ್ಳೇದಾಯ್ತು."

....ಮಳೆ ನಿಲ್ಲುವ ಲಕ್ಷಣ ತೋರಲಿಲ್ಲ.

ಸೀತಮ್ಮ ಬಾಗಿಲಿನತ್ತ ಸುಳಿದು ಹೇಳಿದಳು:

"ಊಟ—"

"ನಾಳೆ ಮಧ್ಯಾಹ್ನ ಬರ್ತೀವಿ!" ಎಂದ ವೆಂಕಟರಾಮಯ್ಯ.

"ನಿಮ್ಮ ಅತ್ತಿಗೆಯನ್ನೂ ಕರಕೊಂಡ್ಬನ್ನಿ. ಗಿರೀಶ ಆಗ್ಲೇ ಅವರ ಸರಸ್ವತೀನ ಮೆಚ್ಕೊಂಡಿದಾನೆ."

"ನಾಳೆ ಬೇಡಿ," ಎಂದ ವೆಂಕಟರಾಮಯ್ಯ, ಅತ್ತಿಗೆ ಒಪ್ಪಲಾರಳೆಂದು ಎಣಿಕೆ ಹಾಕುತ್ತ.

...ಸೋಮಶೇಖರನ ರೇಯಿನ್ ಕೋಟು ಮತ್ತು ಕೊಡೆ ವೆಂಕಟರಾಮಯ್ಯನ ನೆರವಿಗೆ ಬಂದುವು.

ಮನೆ ಸೇರಿದ ಆತನ ಕೈಯಿಂದ ನೋಟೀಸಿನ ಕರಡು ಪತ್ರವನ್ನು ತೆಗೆದುಕೊಂಡು ಕೃಷ್ಣಪ್ಪನವರು ದೀಪದ ಬಳಿಗೊಯ್ದು ಹಿಡಿದು ಓದಿದರು...ಓದಿ ಮುಗಿದು ಅವರು ಕನ್ನಡಕವನ್ನು ಮಡಚಿದಾಗ ಅಳಿಯ ಕೇಳಿದ.

"ಸರಿಯಾಗಿದೆಯಾ ಮಾವ?"

"ಹೂಂ," ಎಂದಷ್ಟೆ ಕ್ಷೀಣವಾಗಿ ಹೇಳಿ ಅವರು ಸುಮ್ಮನಾದರು.

ಸುನಂದಾ ಅದನ್ನೋದಿ ಅಂದಳು:

"ಇದನ್ನೆಲ್ಲ ಬರೀಲೇಬೇಕೇನು?"

ಆಕೆಯ ಭಾವನೆಂದ:

"ಹೌದು. ಕ್ರಮ ಪ್ರಕಾರ ಆಗೋದು ಬೇಡ್ವೆ?"

"ಆ ಖರ್ಚು ವೆಚ್ಚದ ವಿಷಯ ಬಿಟ್ಟುಬಿಡೋದಕ್ಕೆ ಹೇಳಿ. ಆತನ ಪಾಪದ ಹಣ ಯಾರಿಗ್ಬೇಕು?"

## ೨೭

ವಿಜಯಾ ಮತ್ತು ವೆಂಕಟರಾಮಯ್ಯ, ದೀಪಾವಳಿಗೆ ಮತ್ತೆ ಬರುವೆವೆಂದು ಹೇಳಿ, ಶಿವಮೊಗ್ಗೆಗೆ ಹೊರಟುಹೋದರು.

ವಕೀಲರ ನೋಟೀಸು ಪುಟ್ಟಣ್ಣನನ್ನು ಹುಡುಕಿಕೊಂಡು ಹೋಯಿತು.

ಕುಸುಮೆಯ ಬಳಿಗೆ ಬಂದು ಸುನಂದಾ ಅಂದಳು:

"ಹಿಂದೆ ನೀವೊಂದು ಮಾತು ಹೇಳಿದ್ದಿರಿ. 'ವಿವಾಹ ವಿಚ್ಛೇದನ ತತ್ವ ನನಗೆ ಒಪ್ಪಿಗೆ; ಆದರೆ ಅದನ್ನು ಆದ ನ್ಯಾಯ ಸರಿಪಡಿಸೋಕೆ ಉಪಯೋಗಿಸ್ಬೇಕು; ಹೊಸ ಅನ್ಯಾಯ ಮಾಡೋದಕ್ಕಲ್ಲ'–ಅಂತ. ನೆನಪಿದೆಯಾ ಕುಸುಮಾ?"

"ಇದೆ."

"ಆ ತತ್ತ್ವವನ ಆದ ಅನ್ಯಾಯ ಸರಿಪಡಿಸೋಕೆ ಈಗ ಉಪಯೋಗಿಸ್ತೀನಿ. ಯಶಸ್ವಿಯಾಗು ಅಂತ ಹಾರೈಸಿ."

"ಯಶಸ್ವಿಯಾಗಿ ಸುನಂದಕ್ಕ."

ಸುನಂದಾ ಅಲ್ಲಿಂದ ರಾಧಮ್ಮನ ಬಳಿಗೆ ನಡೆದಳು.

"ಒಮ್ಮೆ ಮುರಿದ್ಮೇಲೆ ಕೂಡ್ಸೋಕಾಗಲ್ಲ–ಅಂದಿದ್ರಿ. ಪುನಃ ಕೂಡ್ಸೋದು ಸರ್ವಥಾ ಅಗತ್ಯವಿಲ್ಲ ಅನ್ನೋದು ಖಚಿತವಾಗಿದೆ. ದುಡುಕ್ಬೇಡ–ಅಂದಿದ್ರಿ. ದುಡುಕದೆ ಸಾವಧಾನವಾಗಿ ಯೋಚಿಸಿ ಮಾಡ್ತಿದೀನಿ. ಇದು ತಪ್ಪೂಂತ ಅನಿಸಿದರೆ, ಹೊಟ್ಟೇಲಿ ಹಾಕ್ಕೊಂಡು ಕ್ಷಮಿಸಿ," ಎಂದು ನುಡಿದು ರಾಧಮ್ಮನ ಪಾದಗಳನ್ನು ಮುಟ್ಟಿದಳು.

ರಾಧಮ್ಮನೆಂದರು:

"ಅಯ್ಯೋ! ಇದೇನು ಮಾಡ್ತಿದೀರಾ? ಛೆ, ಬಿಡಿ! ತಪ್ಪೂಂತ ಹೇಳೋಕೆ ನಾನು ಯಾರು?"

"ಆಶೀರ್ವಾದ ಮಾಡಿ."

ಗದ್ಗದಿತ ಕಂಠದಿಂದ ರಾಧಮ್ಮನೆಂದರು:

"ದೇವರು ನಿಮಗೆ ಒಳ್ಳೇದು ಮಾಡ್ಲಿ ಸುನಂದಾ."

* * * *

ಪುಟ್ಟಣ್ಣ, ರೆಜಿಸ್ಟರ್ ಆಗಿ ಬಂದಿದ್ದ ಕಾಗದವನ್ನು ಎರಡು ಸಹಿ ಹಾಕಿ ಪಡೆದುಕೊಂಡ. ಇಂಥದೇ ಇರಬಹುದೆಂದು, 'ಇಂದಾ' ವಿಳಾಸ ನೋಡಿದೊಡನೆಯೆ ಆತ ಊಹಿಸಿದ್ದ. ವಕೀಲರ ನೋಟೀಸು. ಹುಂ! ಪುಟ್ಟಣ್ಣ ಮುಗುಳುನಗುತ್ತ ಅದನ್ನೋದಿದ. ಎರಡನೆಯ ಸಾರೆಯೊಮ್ಮೆ ಓದಿದ.

ತನಗೆ ಬೇಡವಾಗಿದ್ದ ಸಂಬಂಧದಿಂದ ಮುಕ್ತನಾಗುವ ದಿನ ಸಮೀಪಿಸಿತೆಂದು ಆತನಿಗೆ ಸಂತೋಷವಾಯಿತು.

ಜಾಣಾಕ್ಷರಾದ ವಕೀಲರನ್ನು ನೇಮಿಸಿ ಅವರನ್ನೆಲ್ಲ ಕುಣಿಸಿದರೆ ಹೇಗೆ?–ಎಂಬೊಂದು ಯೋಚನೆಯೂ ಹೊಳೆಯಿತು. ಆಕೆಯ ಮೇಲೆ ದುರ್ನಡತೆಯ ಪ್ರತ್ಯಾರೋಪ ಹೊರಿಸಬಹುದು. ಮಗುವನ್ನು ತನ್ನ ವಶಕ್ಕೆ ಕೊಡಬೇಕೆಂದು ಕೇಳಬಹುದು. ಬೇಕುಬೇಕೆಂದೇ ಅವರನ್ನು ಗೋಳಾಡಿಸಬಹುದು.

ಆ ಯೋಚನೆ ಸೊಗಸಾಗಿತ್ತು. ಎಲ್ಲಾದರೂ ಆಕೆಗೆ ಸೋಲಾಗಿ ಮಗುವನ್ನು ತನ್ನ ವಶಕ್ಕೆ ಕೊಟ್ಟರೆ? ಅದೀಗ ಫಜೀತಿ! ಆ ಮಗುವನ್ನು ಯಾವುದಾದರೂ ಅನಾಥಾಶ್ರಮಕ್ಕೆ ದಾಟಿಸಬೇಕು.

ಆದರೆ ವಾಸ್ತವವಾಗಿ ಆತನಿಗೆ ಅಂತಹ ಯಾವ ತೊಂದರೆಯೂ ಇಷ್ಟವಿರಲಿಲ್ಲ. ಹೀಗಾಗಿ, ಏನು ಬೇಕಾದರೂ ಮಾಡಿಕೊಳ್ಳಲಿ–ಎಂದು ಸುಮ್ಮನಾದ. ನೋಟೀಸನ್ನು ಚೂರುಚೂರುಮಾಡಿ ಹರಿದು ಹಾಕಿದ.

ಆಕೆ ಜೀವನಾಂಶ ಕೇಳುವಳೇನೊ. ವಕೀಲರ ನೋಟೀಸಿನಲ್ಲಿ ಆ ಮಾತೇ ಇರಲಿಲ್ಲ. ಮಹಾ ಸ್ವಾಭಿಮಾನಿ ಆ ಹೆಣ್ಣು. ತನಗೆ ತಿಳಿಯದೆ? ನ್ಯಾಯಸ್ಥಾನದಲ್ಲೂ ಆಕೆ ಆ ಪ್ರಶ್ನೆ ಎತ್ತಲಾರಳು. ಕೇಶಿಡಾ ತೊಂಭತ್ತರಷ್ಟು ಪಾಲು ಎತ್ತಲಾರಳು. ಹಾಗೇನಾದರೂ ಕೇಳಿ, ನ್ಯಾಯ ಸ್ಥಾನ ಆಜ್ಞೆ ಕೊಟ್ಟರೆ ತಕರಾರು ಮಾಡುವುದು. ಅದಕ್ಕೇನು ವಕೀಲರಿಲ್ಲವೆ? ಸುಲಭ ಸಂಭವವಲ್ಲದ ಪ್ರಶ್ನೆಯನ್ನೆತ್ತಿಕೊಂಡು ಚಿಂತಿಸುವುದರಲ್ಲಿ ಅರ್ಥವಿಲ್ಲ...ಬಂದಾಗ ನೋಡಿಕೊಂಡರಾಯ್ತು.

....ನ್ಯಾಯಸ್ಥಾನದ ನೋಟೀಸು ಬಂತು. ವಿಳಾಸದಾರ ಸಿಗಲಿಲ್ಲ. ಎನಿಸುವುದು ಅಷ್ಟೇನೂ ಖರ್ಚಿನ ಬಾಬಲ್ಲ. ಆದರೆ ಅದು ಅಗತ್ಯವೆನಿಸದೆ, ಪುಟ್ಟಣ್ಣ ನೋಟೀಸನ್ನು ಸ್ವೀಕರಿಸಿದ. ಸುನಂದಮ್ಮನ ಪರವಾಗಿ ಸಲ್ಲಿಸಲಾಗಿದ್ದ ಅರ್ಜಿಯ ನಕಲು! ವಕೀಲರ ನೋಟೀಸಿನಲ್ಲಿದ್ದ ಅಂಶಗಳೇ...

...ವಿಚಾರಣೆಯ ದಿನ ಹತ್ತಿರ ಬಂದಂತೆ, 'ನಾನೂ ಕೋರ್ಟಿಗೆ ಹೋದರೆ ಚೆನ್ನಾಗಿರುತ್ತೆ. ತಮಾಷೆ ನೋಡಬಹುದಿತ್ತು. ಆಕೆಯ ಪರವಾಗಿ ಸಾಕ್ಷ್ಯ ಹೇಳೋಕೆ ಬರುವ ಆಸಾಮಿಗಳೊ! ಅವರನ್ನೆಲ್ಲ ಮಾತಿನಲ್ಲಿ ಸಿಲುಕಿಸಿ ಅಪ್ಪಚ್ಚಿ ಮಾಡಬಹುದಿತ್ತು' ಎನಿಸಿತು. ಆದರೆ ಅಲ್ಲಿಯೂ ಆ ಆಸೆಯನ್ನು ಮೊಟಕು ಮಾಡಿತು ವಿವೇಕ. ಮಾರಿ ತಾನಾಗಿ ಊರು ಬಿಟ್ಟು ಹೋಗುವೆನೆಂದು ಹೇಳುತ್ತಿರುವಾಗ,

ಅದನ್ನು ತಡೆದು ನಿಲ್ಲಿಸಿ ಮಾತನಾಡುವುದು ಯಾವ ಬುದ್ಧಿವಂತಿಕೆ?

ಆದರೂ ಒಂದು ವಿಷಯ ಪುಟ್ಟಣ್ಣನಿಗೆ ಅರ್ಥವಾಗಿರಲಿಲ್ಲ. ವಿವಾಹ ವಿಚ್ಛೇದನಕ್ಕೆ ಆಕೆಯ ತಂದೆ ಹೇಗೆ ಒಪ್ಪಿದ? ಆತನ ಪರಮ ಸ್ನೇಹಿತ ಜಾಂಬವಂತ ರಾಮಕೃಷ್ಣಯ್ಯ ಹೇಗೆ ಒಪ್ಪಿದ?....ವಿವರಣೆ ಹುಡುಕಿದಾಗಲೆಲ್ಲ ತನ್ನ [ಹಿಂದಿನ] ಮಾವನಿಗೆ ತಾನು ಬೀದಿಯ ಬದಿಯಲ್ಲಿ ಮಾಡಿದ ಮಂಗಳಾರತಿಯ ನೆನಪಿಗೆ ಬರುತ್ತಿತ್ತು. ಆ! ಹೇಗಿತ್ತು ಆ ದಿನ! ಅದನ್ನು ಕುರಿತು ಯೋಚಿಸಿದಾಗಲೆಲ್ಲ ಆತನಿಂದ ಹೊರಸೂಸುತ್ತಿತ್ತು ವಿಜಯೋತ್ಸಾಹದ ನಗು...

* * * *

ವಿಚಾರಣೆಯ ದಿನ ಬಂತು.

ಮಂಗಳೂರು ಹೆಂಚು ಹೊದಿಸಿದ್ದ ಸಣ್ಣ ಕಟ್ಟಡ. ತಗ್ಗಾದ ಗೋಡೆಗಳು. ಯಾವುದೋ ಮೊಕದ್ದಮೆಯಲ್ಲಿ ಸಾಕ್ಷ್ಯಗಳಾಗಿದ್ದ ಸೌದೆ ತುಂಬಿದ ಲಾರಿಗಳೆರಡು. ಕೈ ಬೇಡಿ ಹಾಕಿಸಿಕೊಂಡಿದ್ದ ಆರೋಪಿಗಳು–ಪೋಲೀಸರು. ಬೇರೆ ಬೇರೆ ವ್ಯವಹರಣೆಗಳಿಗಾಗಿ ಬಂದಿದ್ದ ನೂರಾರು ಜನ.

ಸೋಮಶೇಖರನೂ ಸುನಂದಾ–ಸರಸ್ವತಿಯರೂ ಕೃಷ್ಣಪ್ಪನವರೂ ಜಟಕಾ ಗಾಡಿಯಲ್ಲಿ ಬಂದಿಳಿದರು. ಸೋಮಶೇಖರನದು ಎಲ್ಲಾ ವಕೀಲರ ಕಕ್ಷಿಗಾರರ ಗಮನವನ್ನೂ ತನ್ನೆಡೆಗೆ ಸೆಳೆಯುವ ಠೀವಿ. ಚಲಚ್ಚಿತ್ರದಲ್ಲಿನ ಪಾತ್ರದ ಹಾಗೆ...ಸುನಂದಾ ಬಿಳಿಯ ಹತ್ತಿ ಸೀರೆಯುಟ್ಟಿದ್ದಳು. ಬಿಳಿಯದೇ ರವಕೆ. ಹಿಂದಕ್ಕೆ ಎರಿಸಿ ಹೆರಳು ಬಿಗಿದಿದ್ದಳು. ಪೌಡರಿನ ಅಗತ್ಯವೇ ಇರದಿದ್ದ ಗೌರಾಂಗ ರೂಪಸಿಯಲ್ಲದಿದ್ದರೂ ಆಕರ್ಷಕ ಮುಖಮುದ್ರೆ. ಕಾಲಲ್ಲಿ ಚಪ್ಪಲಿ ಇತ್ತು....ಗುಲಾಬಿ ಬಣ್ಣದ ಅಂಗಿ ತೊಟ್ಟಿದ್ದ ಗುಂಗುರು ಕೂದಲಿನ ಪುಟ್ಟ ಸರಸ್ವತಿ ತಾಯಿಯ ಪಡಿಯಚ್ಚಿನಂತಿದ್ದಳು. ಅದೇ ರೀತಿಯ ಮುಖಮುದ್ರೆ, ತುಟಿಗಳು, ಮೂಗು–ಎಲ್ಲವೂ...ಕೃಷ್ಣಪ್ಪನವರದು, ಜೀರ್ಣವಾಗಿದ್ದ ಉಡುಪು ತೊಟ್ಟಿದ್ದ ಜೀರ್ಣವಾಗಿದ್ದ ಶರೀರ ಯುವಕ ವಕೀಲರ ಗುಮಾಸ್ತರೇನೋ ಎಂದು ಯಾರಾದರೂ ಭಾವಿಸುವಂತಿತ್ತು. ಸುನಂದೆಗೂ ಅವರಿಗೂ ಕೆಲ ವಿಷಯಗಳಲ್ಲಿ ಸಾಮ್ಯವಿರಲಿಲ್ಲವೆಂದಲ್ಲ. ಆದರೆ ಅವರೊಳಗಿನ ಸಂಬಂಧ ತಿಳಿಯದವರ ಕಣ್ಣಿಗೆ ಅದು ಕಾಣುತ್ತಿರಲಿಲ್ಲ.

ಮಧ್ಯವಯಸ್ಸಿನ ನ್ಯಾಯಾಧೀಶರು ಒಳಗೆ ಬಂದೊಡನೆ, ಅಲ್ಲಿದ್ದ ವಕೀಲರೆಲ್ಲ ಎದ್ದು ನಿಂತರು.

ವಿವಾಹ ವಿಚ್ಛೇದನದ ಅರ್ಜಿಯೊಂದನ್ನು ಮೊದಲು ತೆಗೆದುಕೊಳ್ಳುವುದಾಗಿ ನ್ಯಾಯಾಧೀಶರೆಂದರು. ಸೋಮಶೇಖರನ ಸೂಚನೆಯಂತೆ, "ಖಾಸಗಿಯಾಗಿ ವಿಚಾರಣೆಯಾಗುತ್ತೆ" ಎಂದು ತಿಳಿಸಲಾಯಿತು. ನ್ಯಾಯಸ್ಥಾನದ ಒಳಗಿದ್ದವರೆಲ್ಲ ಹೊರಡುತ್ತಿದ್ದಂತೆ ದಫೇದಾರ ಮೂರು ಸಾರೆ ಕೂಗಿದ. "ಅರ್ಜಿದಾರಳು ಸುನಂದಮ್ಮ, ಅರ್ಜಿದಾರಳು ಸುನಂದಮ್ಮ, ಅರ್ಜಿದಾರಳು," ಹಾಗೆಯೇ "ಎದುರು ಅರ್ಜಿದಾರ

ಪುಟ್ಟಣ್ಣ..."

ಸರಸ್ವತಿಯನ್ನು ಜಗಲಿಯಲ್ಲಿ ನಿಂತಿದ್ದ ತಂದೆಯ ಕೈಗೆ ಕೊಟ್ಟು ಸುನಂದಾ ಒಳಬಂದು ನ್ಯಾಯಾಧೀಶರಿಗೆ ಕೈಮುಗಿದಳು. ಸಾಮಾನ್ಯವಾಗಿ ಅಂತಹ ವಂದನೆಗಳಿಗೆ ವಿಶೇಷ ಗಮನವೀಯಲು ಬಿಡುವಿರದ ನ್ಯಾಯಾಧೀಶರು ಅರ್ಜಿದಾರಳು ಹೆಣ್ಣೆಂದು ಆಕೆಯತ್ತ ನೋಡುತ್ತ ತಲೆ ಸ್ವಲ್ಪಬಾಗಿಸಿ ವಂದನೆ, ಸ್ವೀಕರಿಸಿದರು.

ಪುಟ್ಟಣ್ಣ ಅಲ್ಲಿರಲಿಲ್ಲ. ಸೋಮಶೇಖರ ಅತ್ತಿತ್ತ ದೃಷ್ಟಿ ಹೊರಳಿಸಿದ. ಆತನ ಪರವಾಗಿ ಯಾವ ವಕೀಲರೂ ಒಳಬರಲಿಲ್ಲ. ಆತನ ದೃಷ್ಟಿ ನ್ಯಾಯಾಧೀಶರ ಮೇಲೆ ನೆಟ್ಟಿತು. ಅವರು ಮುಗುಳುನಕ್ಕು ಅಂದರು:

"ರೆಸ್ಪಾಂಡೆಂಟಿಲ್ಲ. ನಿಮ್ಮ ಕೇಸು ಇವತ್ತೇ ಮುಗಿಯೋ ಹಾಗೆ ಕಾಣುತ್ತಲ್ಲ!"

ನ್ಯಾಯಾಧೀಶರಾದವರು ಮಾತನ್ನೇ ಆಡಲಾರರು ಎಂದುಕೊಂಡಿದ್ದಳು ಸುನಂದಾ. ಆದರೆ ನ್ಯಾಯಾಧೀಶರೂ ಮನುಷ್ಯರೇ ಎಂಬುದು ಈಗ ಆಕೆಗೆ ಅರಿವಾಯಿತು.

ನ್ಯಾಯಾಸ್ಥಾನದೊಳಗಿದ್ದ ಒಬ್ಬನೇ ಗುಮಾಸ್ತೆ ಬರೆದುಕೊಳ್ಳಲು ಸಿದ್ಧನಾದ.

"ಶುರು ಮಾಡೋಣವೆ?" ಎಂದು ನ್ಯಾಯಾಧೀಶರು ಕೇಳಿದರು.

"ಆಗಬಹುದು ಖಾವಂದರೇ," ಎಂದ ಸೋಮಶೇಖರ.

ಗುಮಾಸ್ತೆಯ ಸೂಚನೆಯಂತೆ, ಸೋಮಶೇಖರನ ನಿರ್ದೇಶದಂತೆ, ಸುನಂದಾ ಕಟಾಂಜನದೊಳಗೆ ನಿಂತಳು.

"ಎಲ್ಲಾ ಸತ್ಯವಾಗಿ ಹೇಳ್ತೀನಿ," ಎಂದು ಆಕೆಯಿಂದ ಆಣೆ ಮಾಡಿಸಿದುದಾಯಿತು.

ಸೋಮಶೇಖರ ಅರ್ಜಿಯನ್ನು ಕೈಗೆತ್ತಿಕೊಂಡ. ಅರ್ಜಿದಾರಳಿಗೂ ಪುಟ್ಟಣ್ಣ ಎಂಬ ರೆಸ್ಪಾಂಡೆಂಟನಿಗೂ ಇರುವ ಸಂಬಂಧವನ್ನು ಕೇಳಿ ಸ್ಥಿರಪಡಿಸಿದ. ಅರ್ಜಿಯಲ್ಲಿದ್ದ ಅಂಶಗಳನ್ನೆಲ್ಲ ಸುನಂದಮ್ಮನೇ ಹೇಳುವ ಹಾಗೆ ಸೋಮಶೇಖರ ಪ್ರಶ್ನೆಗಳನ್ನು ಕೇಳಿದ.

ಕಂಠ ಪಾಠ ಮಾಡಿ ಉತ್ತರ ಕೊಡುವ ಹೆಂಗಸಾಗಿ ಆಕೆ ತೋರಲಿಲ್ಲ. ಬುದ್ಧಿವಂತೆ—ಎಂದುಕೊಂಡರು ನ್ಯಾಯಾಧೀಶರು.

ಸೋಮಶೇಖರನ ಪ್ರಶ್ನೆಗಳು ಕೇಳಿಸುತಿದ್ದುವು.

"ಕೋರ್ಟಿಗೆ ಅರ್ಜಿ ಹಾಕೋದಕ್ಮುಂಚೆ ನಿಮ್ಮ ಗಂಡನಿಗೆ ನೋಟೀಸು ಕೊಟ್ಟಿದ್ರಿ ಅಲ್ವೆ?"

"ಹೌದು."

"ಈ ನೋಟೀಸು ದಾಖಲ್ಮಾಡಿದೆ ಖಾವಂದರೆ."

ಖಾವಂದವರು ತಲೆಯಾಡಿಸಿದರು...

....ಹೆಂಡತಿಯೊಡನೆ ರಾತ್ರೆ ಮಾತನಾಡಲು ಒಳ್ಳೆಯ ವಿಷಯ ಎಂದುಕೊಂಡರು ನ್ಯಾಯಾಧೀಶರು. ಅವರ ದೃಷ್ಟಿ ಅರ್ಜಿದಾರಳನ್ನು ಪರೀಕ್ಷಿಸಿತು. ಕತ್ತಿನಲ್ಲಿನ್ನೂ

ಇತ್ತು ಮಾಂಗಲ್ಯ ಸೂತ್ರ. ಹೇಗೆ ದಿಟ್ಟತನದಿಂದ ನಿಂತಿದಾಳೆ! ಪೋಷಾಕಿನಲ್ಲಿ ಆಡಂಬರ ವಿಲ್ಲ. ಬಣ್ಣದ ಚಿಟ್ಟೆಯಲ್ಲ ಅನ್ನೋದು ಸ್ಪಷ್ಟ. ಏನು ಕಡಮೆ ಇವಳಿಗೆ? ಅತ ಯಾಕೆ ಮೆಚ್ಚಲಿಲ್ಲ? ಎಂಥವನೋ ಆ ಪ್ರಾಣಿ?

ಸೋಮಶೇಖರನ ಏರಿದ ಸ್ವರ ಕೇಳಿಸಿತು:

"ಘನ ಕೋರ್ಟಿನಲ್ಲಿ ವಿವಾಹ ವಿಚ್ಛೇದನವಾಗುವಂತೆ ಅರ್ಜಿದಾರಳ ಪರ ಡಿಕ್ರಿ ಬಗ್ಗೆ ಪ್ರಾರ್ಥನೆ—ಅಂತ ಅರ್ಜಿಯಲ್ಲಿದೆ. ನೀವು ಪ್ರಾರ್ಥಿಸುತ್ತೀರಾ?"

"ಹೌದು."

"ಮುಗಿಯಿತು ಖಾವಂದರೆ."

ಖಾವಂದರು ಸ್ವತಃ ತಾವಾಗಿಯೂ ಕೆಲ ಪ್ರಶ್ನೆ ಕೇಳಿದರು. ಸುನಂದಾ ಉತ್ತರ ಕೊಟ್ಟಳು. ಇನ್ನು ಮನಸ್ಸು ಬದಲಾಯಿಸುವ ಪ್ರಮೇಯವಿಲ್ಲವೆಂದಳು.

"ಜೀವನಾಂಶ?"

"ನನಗೆ ಬೇಕಾಗಿಲ್ಲ."

ಅರ್ಜಿಯಲ್ಲಿ ಮಗುವಿನ ಮಾತು ಬಂದಿತ್ತು.

"ಮಗು ಇಲ್ಲಿದೆಯೇನು?" ಎಂದು ನ್ಯಾಯಾಧೀಶರು ಕೇಳಿದರು.

"ಹೌದು ಖಾವಂದರೆ," ಎಂದ ಸೋಮಶೇಖರ.

"ಎಲ್ಲಿ ನೋಡೋಣ."

ದಫೇದಾರ ಮಗುವನ್ನೆತ್ತಿಕೊಂಡಿದ್ದ ಮುದುಕನನ್ನು ಕರೆದ.

"ಬಾ ಇಲ್ಲಿ."

ಕೃಷ್ಣಪ್ಪನವರು ಮಗುವಿನೊಡನೆ ಒಳಬಂದರು. ಎತ್ತರದಲ್ಲಿ ಕುಳಿತಿದ್ದ ನ್ಯಾಯಾಧೀಶರನ್ನು ಸರಸ್ವತಿ ನೋಡಿದಳು. ಒಂದು ಬದಿಯಲ್ಲಿ ನಿಂತಿದ್ದ ತಾಯಿ ಯನ್ನು ಕಂಡಳು. ಆಕೆಗೆ ಭಯವಾಯಿತು. "ಅಮ್ಮಾ!" ಎಂದು ಸುನಂದೆಯತ್ತ ಆಕೆ ಕೈ ಚಾಚಿದಳು.

ಮಗು ಬಲು ಮುದ್ದಾಗಿ ತೋರಿತು ನ್ಯಾಯಾಧೀಶರಿಗೆ. [ಸೊಸೆಯ ಮಗು ರಾಜಿಯ ಹಾಗೆಯೇ.]

ಮಗು ಕೈ ಚಾಚಿದ್ದರೂ ಸುನಂದಾ ಎತ್ತಿಕೊಳ್ಳುವುದು ಹೇಗೆ?

"ಹೋಗಮ್ಮ. ಮಗೂನ ಎತ್ಕೋ" ಎಂದರು ನ್ಯಾಯಾಧೀಶರು.

ಆ ಆಜ್ಞೆಯನ್ನು ಪಾಲಿಸಲು ತಾಯಿ ನಿಮಿಷವೂ ತಡಮಾಡಲಿಲ್ಲ.

ಅಲ್ಲಿ ನಿಂತಿದ್ದ ಕೃಷ್ಣಪ್ಪನವರನ್ನು ನ್ಯಾಯಾಧೀಶರಿಗೆ ತೋರಿಸುತ್ತ ಸೋಮ ಶೇಖರ ಹೇಳಿದ:

"ಇವರು ಅರ್ಜಿದಾರಳ ತಂದೆ."

ಕೃಷ್ಣಪ್ಪನವರು ಕೈ ಮುಗಿದರು. ಆದರೆ ನ್ಯಾಯಾಧೀಶರಿಗೆ ಆ ವಂದನೆಯ ಅಗತ್ಯವಿರಲಿಲ್ಲ. ಅವರೆಂದರು:

"ಮುಗಿದೇ ಹೋಯ್ತೇನು? ಸರಿ. ಸಾಕ್ಷ್ಯಗಳ ವಿಚಾರವೇನು?"

ಸಾಕ್ಷಿದಾರರ ವಿಷಯವಾಗಿ ಯಾವ ಸಿದ್ಧತೆಯನ್ನೂ ಮಾಡದೆ ಇದ್ದ ಸೋಮಶೇಖರ ಎದೆ ಮುಂದು ಮಾಡಿ ಹೇಳಿದ:

"ನಮ್ಮ ಸಾಕ್ಷಿದಾರರ ಪಟ್ಟಿ ಕೊಡ್ತೀನಿ. ಆದರೆ ಸಾಕ್ಷಿಗಳ ವಿಚಾರಣೆ ಅಗತ್ಯವೆ ಏನೂಂತ ಖಾವಂದರು ಪರಾಂಬರಿಸಬೇಕು. ರೆಸ್ಪಾಂಡೆಂಟು ನನ್ನ ನೋಟೀಸಿಗೆ ಉತ್ತರ ಕೊಡಲಿಲ್ಲ. ಕೋರ್ಟಿನ ನೋಟೀಸನ್ನೂ ಮಾನ್ಯ ಮಾಡಲಿಲ್ಲ. ವಕೀಲರನ್ನೂ ನೇಮಿಸಲಿಲ್ಲ. ಆಪಾದನೆಗಳನ್ನ ಇದಿರಿಸೋ ಸಾಮರ್ಥ್ಯ ಇಲ್ಲವಾದ್ದರಿಂದಲೆ ಆತ ಸುಮ್ನಿದ್ದಾನೆ ಅನ್ನೋದು ಸ್ಪಷ್ಟವಾಗಿದೆ ಅಂತ ನನ್ನ ಅಭಿಪ್ರಾಯ."

"ಹೌದು. ಅದು ಸ್ಪಷ್ಟವಾಗಿದೆ," ಎಂದರು ನ್ಯಾಯಾಧೀಶರು.

ಸೋಮಶೇಖರ ಮುಗುಳು ನಕ್ಕು ನ್ಯಾಯಾಧೀಶರಿಗೆ ವಂದಿಸಿದ.

"ಆರ್ಡರ್ಸ್‌ಗೆ ಯಾವ ದಿನ ಗೊತ್ಮಾಡೋಣ?" ಎಂದು ನ್ಯಾಯಾಧೀಶರು ಗುಮಾಸ್ತೆಯನ್ನು ಕೇಳಿದರು. ಸೋಮಶೇಖರನ ಕಡೆ ತಿರುಗಿ ಅಂದರು:

"ಇವತ್ತು ಹತ್ತಾರು ವ್ಯವಹರಣೆಗಳಿವೆ. ಬರೆಯೋದಕ್ಕೆ ಪುರಸೊತ್ತಿಲ್ಲ. ತಿಂಗಳ ಕೊನೇ ವಿಸರ್ಜನೆಗೆ ಇಟ್ಕೋತೀನಿ, ಆಗದೆ?"

"ಖಾವಂದರ ಚಿತ್ತ."

ಅವರು ಮೂವತ್ತನೆಯ ತಾರೀಕನ್ನು ಗೊತ್ತು ಮಾಡಿದರು.

ಹೊರಡುತ್ತ ಸುನಂದಾ ನ್ಯಾಯಾಧೀಶರಿಗೆ ನಮಸ್ಕರಿಸಿದಳು. ['ಮಗೂ, ನಮಸ್ಕಾರ ಮಾಡು' ಎನ್ನಲಿಲ್ಲ.] ಅವರು ಮುಗುಳುನಗುತ್ತ ಆ ವಂದನೆಯನ್ನು ಸ್ವೀಕರಿಸಿದರು.

ವಕೀಲರ ಮತ್ತಿತರರ ತಂಡವೇ ಒಳಕ್ಕೆ ಬರತೊಡಗಿತು. ಎಲ್ಲರೂ ಹೊರ ಹೋಗುತ್ತಿದ್ದ ಸುನಂದೆಯತ್ತ ದೃಷ್ಟಿ ಹಾಯಿಸುವವರೇ.

ಸೋಮಶೇಖರನೆಂದ:

"ಡಿಕ್ರಿ ಆದ ಹಾಗೆಯೇ. ಬರೀಬೇಕು ನೋಡಿ. ಅದಕ್ಕೆ ತಡ. ಮೂವತ್ತನೆ ತಾರೀಕು ಸಹಿ ಹಾಕ್ತಾರೆ."

ಕೃಷ್ಣಪ್ಪನವರಿಗೆ ಅದೊಂದೂ ತಿಳಿಯದ ವಿಷಯವಾಗಿರಲಿಲ್ಲ. ಹೀಗೂ ಆಗ ಬೇಕಾಯಿತೆಂಬ ಯಾತನೆ ಅವರನ್ನು ದಹಿಸುತಿತ್ತು. ಆ ವಾತಾವರಣದಿಂದೊಮ್ಮೆ ಹೊರಟು ಹೋಗಬೇಕೆಂಬುದೊಂದೇ ಅವರಿಗಿದ್ದ ಯೋಚನೆ.

"ಮನೆಗೆ ಹೋಗೋಣ್ವೆ ಸುಂದಾ?"

"ಹೂಂ."

"ಹ್ಯಾಗೆ ಹೋಗ್ತೀರಾ? ತಾಳಿ," ಎನ್ನುತ್ತ ಸೋಮಶೇಖರ ಕುದುರೆ ಗಾಡಿ ತರಿಸಿದ. ಕೃಷ್ಣಪ್ಪನವರು ಬೇಡವೆಂದರೂ ಮುಂದಾಗಿ ತಾನೆ ಗಾಡಿಯವನಿಗೆ ಹಣ ಕೊಟ್ಟ.

ಒಂಟಿ ಎತ್ತಿನ ಕುದುರೆ ಗಾಡಿ ಶೇಷಾದ್ರಿಪುರಕ್ಕೆ ಹೊರಟಿತು.

*　　*　　*　　*

ಮೂವತ್ತನೆಯ ತಾರೀಕು ನ್ಯಾಯಾಧೀಶರು, ಸುನಂದಾ–ಪುಟ್ಟಣ್ಣರ ವಿವಾಹ ವಿಚ್ಛೇದನಕ್ಕೆ ಸಮ್ಮತಿ ಇತ್ತು ಆಜ್ಞೆಯನ್ನಿತ್ತರು.

ಅದು ತಿಳಿದಾಗ ಸುನಂದಾ, ಕತ್ತಿನಲ್ಲಿದ್ದ ಮಾಂಗಲ್ಯ ಸೂತ್ರಕ್ಕೆ ಕೈ ಹಾಕಿದಳು. ಕರಿಮಣಿ ಕಡಿದು ಬಂತು.

## ೨೮

ಕುಸುಮಾ ಸುನಂದೆಯನ್ನು ಹುಡುಕಿಕೊಂಡು ಶಿಶುವಿಹಾರಕ್ಕೆ ಬಂದಳು.

"ಮನೆಕಡೆ ಬರಲೇ ಇಲ್ಲ ನೀವು," ಎಂದು ಆಕೆ ಆಕ್ಷೇಪಿಸಿದಳು. "ಏನಾಯ್ತು?" ಎಂದೂ ಕೇಳಿದಳು.

"ನೀವೆಲ್ಲ ಜಯಶೀಲಳಾಗು ಎಂದಿದ್ದಿರಿ. ಜಯಶೀಲಳಾಗಿಯೇ ಬಂದೆ."

ಸಂತೃಪ್ತಿಯ ನಿಟ್ಟುಸಿರು ಬಿಡುತ್ತ ಕುಸುಮಾ ಅಂದಳು:

"ವ್ಯವಹರಣೆ ಮುಗಿಯಿತು ಹಾಗಾದರೆ. ಇಷ್ಟು ಬೇಗ್ನೆ ಆಗುತ್ತೇಂತ ಗೊತ್ತಿರ್ಲಿಲ್ಲ."

"ಆತ ಬರಲಿಲ್ಲ. ಎಕ್ಸ್‌ಪಾರ್ಟಿ ತೀರ್ಮಾನ ಕೊಟ್ರು."

"ಮತ್ತೆ ಇಷ್ಟು ದಿವಸದಿಂದ ನೀವು ತಿಳಿಸ್ಲೇ ಇಲ್ಲ?"

ವಿಚಾರಣೆ ಮುಗಿದು ತೀರ್ಪು ಬರಲು ಸ್ವಲ್ಪ ದಿನ ಕಾಯಬೇಕಾಯಿತೆಂದು–ಎರಡು ದಿನಗಳ ಹಿಂದೆಯಷ್ಟೆ ತೀರ್ಪು ತಿಳಿಯಿತೆಂದು–ಸುನಂದಾ ಹೇಳಿದಳು.

ಗೆಳತಿಯ ಮುಖ ನೋಡುತ್ತ ಕುಸುಮಾ ಅಂದಳು;

"ಅಂತೂ ಮುಕ್ತಾಯವಾಯಿತಲ್ಲ. ಅಬ್ಬ! ನೀವಾದ್ದರಿಂದ ಇವನ್ನೆಲ್ಲ ಸಹಿಸ್ಕೊಂಡಿರಿ."

"ಹೊಗಳಿಕೆ ಬೇರೆ ಬೇಕೇನೋ ಇನ್ನು? ನೀವು–ರಾಧಮ್ಮ ಇರದೇ ಇದ್ದಿದ್ದರೆ ಇಷ್ಟು ಹೊತ್ತಿಗೆ ಸುನಂದಾ ಬದುಕಿ ಇರ್ತಿದ್ದಳೊ ಇಲ್ಲವೊ..."

"ನ್ಯಾಯಾಸ್ಥಾನದಲ್ಲಿ ನಿಮಗೆ ದಿಗಿಲಾಯ್ತೆ?"

"ಇಲ್ಲವಮ್ಮ, ಹ್ಯಾಗಿರುತ್ತೋ ಅಂತಿದ್ದೆ. ಅಲ್ಲಿಗೆ ಹೋದ್ಮೇಲೆ ಧೈರ್ಯ ಬಂತು. ಒಂದು ಘಂಟೆ ಹೊತ್ತಿನೊಳಗೆ ಎಲ್ಲಾ ಆಗ್ಹೋಯ್ತು...."

ವಿಚಾರಣೆಯ ವಿವರವನ್ನು ಕುಸುಮಾ ಕುತೂಹಲದಿಂದ ಕೇಳಿದಳು. ಅದಾದ ಬಳಿಕ, ಬೇರೆ ವಿಷಯವಿರಲೆಂದು ಆಕೆಯೆಂದಳು:

"ನಿಮ್ಮ ಕೆಲಸ ಏನಂತಿದೆ?"

"ಸ್ವಾರಸ್ಯವಾಗಿದೆ. ಒಳ್ಳೆಯವರು. ಅಕ್ಕನಿಗೋಸ್ಕರ ನೀವು ಆರಿಸಿದ ಕೆಲಸ. ಕೇಳಬೇಕೆ? ಆದರೆ ಇನ್ನು ನನ್ನ ವಿಷಯದಲ್ಲಿ ಅವರೇನು ತಿಳ್ಕೋತಾರೋ?"

ಬೇರೆ ವಿಷಯವೆಂದು ಮಾತನಾಡಿದುದು ಸುಳ್ಳೇ. ಎಲ್ಲವನ್ನೂ ಆವರಿಸಿತ್ತು ಬದುಕಿನಲ್ಲಾದ ಮಾರ್ಪಾಟು.

ಕುಸುಮಾ ಆಶ್ವಾಸನೆ ಇತ್ತಳು.

"ಅದರ ಯೋಚನೆ ಮಾಡ್ಬೇಡಿ. ಆವತ್ತು ಎಷ್ಟು ಬೇಕೋ ಅಷ್ಟು ಅವರಿಗೆ ಹೇಳಿದ್ದೆ. ಇವತ್ತೂ ಹಾಗೇ ಮಾಡ್ತೀನಿ. ಹೆದರ್ಕೋ ಬೇಡಿ. ಅವರೇನೂ ಗೊಡ್ಡು ವೈದಿಕರಲ್ಲ."

ಕುಸುಮೆಗೆ ಸಮಿತಿಯ ಅಧ್ಯಕ್ಷರ ಮನೆಯಿಂದ ಕರೆ ಬಂತು.

"ಹೋಗ್ಬೇಡಿ, ಬಂದೆ," ಎಂದು ಸುನಂದೆಯನ್ನು ಇರಹೇಳಿ ಕುಸುಮಾ, ಆ ಮನೆಗೆ ಹೋಗಿ ಸ್ವಲ್ಪ ಹೊತ್ತಿದ್ದು ಬಂದಳು.

"ನಮ್ಮವರು ಇನ್ನೇನು ಬಂದ್ಬಿಡ್ತಾರೆ. ನಿಮ್ಮನ್ನ ಶೇಷಾದ್ರಿಪುರದಲ್ಲಿ ಬಿಟ್ಟು ಮನೆಗೆ ಹೋಗ್ತೀನಿ. ಸರೀನಾ?"

"ಹಾಗೇ ಆಗಲಮ್ಮ."

ಗೆಳತಿಯನ್ನೇ ನೋಡುತ್ತಾ ಕುಸುಮಾ ಕೇಳಿದಳು:

"ಮನಸ್ಸು ಹೇಗಿದೆ ಸುನಂದಕ್ಕ?"

"ಕಾಹಿಲೆಯಿಂದ ಎದ್ದಾಗ ಹ್ಯಾಗಿರುತ್ತೋ ಹಾಗೆ. ಬದುಕಿ ಉಳಿದೆನಲ್ಲಾ ಅಂತ ಸಂತೋಷ. ಆದರೂ ನಿತ್ರಾಣ. ಇದೆಲ್ಲಾ ಶುರುವಾದಾಗ ಒಂದು ಬಿಳಿ ಕೂದಲು ತಲೇಲಿ ಕಾಣಿಸ್ಕೊಂಡ್ತು. ಆಮೇಲೆ ಎರಡಾಯ್ತು. ಈಗ ಹತ್ತಿಪ್ಪತ್ತು ಸಿಗಬಹುದು!"

ಸುನಂದೆಯ ಜತೆ ಕುಸುಮೆಯೂ ನಕ್ಕಳು.

"ನಿಮಗೆ ಗೊತ್ತಿಲ್ಲ ಸುನಂದಕ್ಕ. ಬಿಳೀ ಕೂದಲು ನೋಡೋಕೆ ಸೊಗಸಾಗಿರುತ್ತೆ!"

"ಇನ್ನೊಬ್ಬರ ತಲೇಲಿದ್ದರೆ ನನಗೂ ಹಾಗೇ ತೋರುತ್ತಮ್ಮ!"

ಅನಂತರ ರಾಧಮ್ಮನ ಪ್ರಸ್ತಾಪ ಬಂತು.

"ಹೋಗಿ ಹೇಳ್ತೀನಿ. ಅವರಿಗೆ ತುಂಬಾ ಸಮಾಧಾನವಾಗುತ್ತೆ."

"ಆದರೂ ಅವರನ್ನ ನೋಡೋಕೆ ಒಂದು ಥರಾ ಅಳುಕು."

"ಏನಿಲ್ಲ ಸುನಂದಕ್ಕ. ನೀವು ಅವರನ್ನ ಸರಿಯಾಗಿ ತಿಳಕೊಂಡೇ ಇಲ್ಲ. ಮೊನ್ನೆ ಅವರೇನೆಂದರು ಗೊತ್ತೆ? 'ವಿಚ್ಛೇದನ ಅನ್ನೋ ಮಾತು ವಿಶೇಷವಾಗಿದೆಯೇ ಹೊರತು, ಆತನ ಜತೆ ಇನ್ನು ಆಕೆ ಸಂಸಾರ ಮಾಡೋದಿಲ್ಲ ಅನ್ನೋದರಲ್ಲಿ ವಿಶೇಷ ತೋರೋದಿಲ್ಲ'—ಅಂತ."

"ನೀವು ಬರೋಕೆ ಮುಂಚೆಯುಂತೂ ನನಗಿದ್ದೋರು ಸ್ನೇಹಿತೆ ಅವರೊಬ್ಬರೇ. ಮೈಮೇಲೆಲ್ಲ ಮೂಡಿದ ಏಟಿನ ಗಾಯುಕ್ಕೆ ಎಣ್ಣೆ ಸುರಿದೋರು ಆಕೆ. ಈಗಲೂ ಮೈಯಲ್ಲಿ ಆ ಗಾಯುಗಳಿವೆಯೋನೋ ಅನ್ನೋ ಹಾಗೆ ಒಂದೊಂದು ಸಲ ನನ್ನನ್ನು ನೋಡ್ತಾರೆ."

"ಆ ವಿಷಯ ಹೇಳಿದ್ರು. ಅಬ್ಬ!"

"ಅವರು ನನಗೆ ಅಕ್ಕನಾಗಿಯೇ ಹುಟ್ಬೇಕಾಗಿತ್ತು. ಎಲ್ಲೊ ಅಪ್ಪಿತಪ್ಪಿ ನೆರೆ ಹೊರೆಯವರಾದ್ವಿ."

ಕುಸುಮಾ ಕೇಳಿದಳು:

"ನಾನು?"

ಸುನಂದಾ ನಕ್ಕಳು.

* * * *

ಮಗುವನ್ನೆತ್ತಿಕೊಂಡು ಮನೆಗೆ ಬಂದು ತಮ್ಮ ಪಾದಗಳಿಗೆ ನಮಿಸಿದ ಸುನಂದೆ ಯುನ್ನು ಕುರಿತು ರಾಮಕೃಷ್ಣಯ್ಯ ಹೇಳಿದರು:

"ದೇವರು ನಿನಗೆ ಒಳ್ಳೇದು ಮಾಡ್ಲಿ, ಮಗೂ. ಬೇರೇನು ಹೇಳಬೇಕೋ ನನಗೆ ತೋಚೋದಿಲ್ಲ."

ಅವರಾಕೆಯೆಂದರು:

"ಆಗಬಾರದಿತ್ತು. ಆಗಿಹೋಯ್ತು. ಇದೆಲ್ಲ ಮನುಷ್ಯರ ಕೈಲಿದೆಯೆ? ನೀನು ಮೊದಲು ಯಾವ ರೀತಿ ನಮಗೆ ಮಗಳಾಗಿದ್ದೆಯೋ ಈಗಲೂ ಹಾಗೆಯೇ."

* * * *

ವಿಜಯಾ ಕಾಗದ ಬರೆದಳು:

"ಸದ್ಯಃ ಮುಗಿಯಿತಲ್ಲ! ನಿನ್ನ ಕಾಗದ ಬಂದ ಮಾರನೆಯ ದಿನ ಸೋಮಶೇಖ ರರದೂ ಬಂತು. ಓದಿ ನಮಗಿಬ್ಬರಿಗೂ ಸಮಾಧಾನವಾಯ್ತು. ನಮ್ಮ ಅತ್ತೆಗೆ ಹೇಗೆ ಹೇಳೋಣಾಂತ ತೋಚಲಿಲ್ಲ. ಹೇಗೂ ಅವರಿಗೆ ಸ್ವಲ್ಪ ಸ್ವಲ್ಪ ಗೊತ್ತಿತ್ತು. ಕೊನೆಗೆ ಅವರೂ ನಾನೂ ಸೇರಿಕೊಂಡೇ ಸಮಾಚಾರ ತಿಳಿಸಿದೆವು. 'ಅಯ್ಯೋ! ಹೀಗೂ ಆಯ್ತೆ?' ಅಂದರು. ಸ್ವಲ್ಪ ಹೊತ್ತು ಸುಮ್ಮನಿದ್ದು 'ಅಂಥಾ ಮಹಾ ನೀಚನೆ ಅತ?' ಅಂತ ಕೇಳಿದರು. ಸ್ವಲ್ಪ ಹೊತ್ತು ಆ ನೀಚನ ಗುಣಗಾನ ಮಾಡಿದೆವು. ಅಂತೂ ಮುಗಿಯಿತಮ್ಮ! ನಮ್ಮ ಊರಿನವರಿಗೆ ಈ ವಿಷಯ ತಿಳಿದಾಗ ಏನು ಹೇಳ್ತಾರೊ? ಆ ಮೂಳೆಯಿಲ್ಲದ ನಾಲಗೆಗಳು ತೆವಳೋದನ್ನು ಊಹಿಸಿಕೊಳ್ಳಬಲ್ಲೆ. ಹಿಂದೆ ನಿನ್ನ ವಿಷಯ ಏನೇನು ಆಡಿಕೊಳ್ಳುತ್ತಿದ್ದರು! ಆದರೆ ಮನುಷ್ಯತ್ವ ಒಂದಿಷ್ಟಾದರೂ ಇರುವ ಯಾರೂ ನಮ್ಮನ್ನು ಟೀಕಿಸಲಾರರು. ಚಂಪಾಗೆ ಕಾಗದ ಬರೆದಿಯಾ? ನನ್ನ ಹತ್ತಿರ ವಿಳಾಸವಿಲ್ಲ. ನಿನ್ನ ಹತ್ತಿರವೂ ಇಲ್ಲಾಂತ ತೋರುತ್ತೆ. ಹಾಗೆ? ಅಪ್ಪ ಏನು ಹೇಳು ತ್ತಾರೆ? ಇಲ್ಲಿ ಮಳೆಯ ಆರ್ಭಟ ಮುಗಿಯುತ್ತ ಬಂದಿದೆ. ಅಪ್ಪನನ್ನು ಒಮ್ಮೆ

ಕಳಿಸಿಕೊಡ್ತೀಯಾ? ಆದರೆ ಸರಸ್ವತಿಯನ್ನು ನೋಡಿಕೊಳ್ಳುವವರು ಯಾರು? ನಿನಗೆ ಕಷ್ಟವಾದರೆ ಬೇಡ. ಆಗಾಗ್ಗೆ ಕಾಗದ ಬರಿ. ಸೀತಮ್ಮನವರನ್ನು ಇತ್ತೀಚೆಗೆ ಕಂಡಿದ್ದಿಯಾ? ತಿಳಿಸಬೇಕಾಗಿರುವ ವಿಶೇಷ ಇನ್ನೂ ಏನೂ ಇಲ್ಲ! ನೀನು ಸಂತೋಷವಾಗಿದ್ದಿ ಅಲ್ಲವಾ? ಸರಸ್ವತಿ ಚಿಕ್ಕಮ್ಮನನ್ನ ಮರೆತಿಲ್ಲ ತಾನೆ? ಶಿಶು ವಿಹಾರ ಏನನ್ನುತ್ತೆ? ರಾಧಮ್ಮ—ಕುಸುಮಾ ಏನು ಹೇಳ್ತಾರೆ? ರಾಮಕೃಷ್ಣಯ್ಯನವರ ಮನೆಗೆ ಹೋಗಿದ್ದೆಯಾ? ಚುಟುಕಾಗಿ ಉತ್ತರ ಬರೀಬೇಡ—ಹಾಂ!"

ಅದನ್ನು ಮತ್ತೆ ಮತ್ತೆ ಓದುತ್ತ ಸುನಂದಾ 'ಈ ಒಲವಿಗಿಂತ ಹಿರಿದಾದ ಸಿರಿಸಂಪದ ಬೇರೆ ಇಲ್ಲ' ಎಂದು ಮನಸಿನಲ್ಲೆ ಅಂದುಕೊಂಡಳು.

* * * *

ರಾಧಮ್ಮನ ದೊಡ್ಡ ಮಗನಿಗೆ ಬ್ರಹ್ಮೋಪದೇಶವೆಂದು, ಕೃಷ್ಣಪ್ಪನವರನ್ನೂ ಸುನಂದೆಯನ್ನೂ ಕರೆಯಲು ರಾಧಮ್ಮ ಬಂದರು.

"ಆಫೀಸಿನ ಕೆಲಸವಲ್ಲಿ ಅವರಿಗೆ ಪುರಸೊತ್ತೇ ಇಲ್ಲ. ಅದಕ್ಕೋಸ್ಕರ ನಾನೇ ಕರೆದ್ಬಿಟ್ಟು ಹೋಗೋಣ—ಅಂತ ಬಂದೆ, ಏನೂ ತಿಳ್ಕೋಬೇಡಿ," ಎಂದು ಕೃಷ್ಣಪ್ಪನವರೊಡನೆ ರಾಧಮ್ಮ ಹೇಳಿದರು.

"ಮಗಳನ್ನೂ ತಂದೆಯನ್ನೂ ಕರಕೊಂಡು ತಪ್ಪದೆ ಬನ್ನಿ," ಎಂದು ಸುನಂದೆಗೆ ಅಂದರು.

* * * *

ಬೀದಿಗಿಳಿದಾಗ ನೆರೆಹೊರೆಯುವರು ಸುನಂದೆಯನ್ನೇ ನೋಡುತ್ತಿದ್ದರು. ಇತ್ತೀಚಿನ ಘಟನೆಗಳು ಅವರಿಗೆ ಗೊತ್ತಿರಲಿಲ್ಲವಾದರೂ ಸುನಂದೆಯನ್ನು ಗಂಡ ಬಿಟ್ಟಿರುವನೆಂಬುದು ತಿಳಿದಿತ್ತು. ನಾಲಿಗೆಗೆ ನವೆ. ಮೂದಲಿಸಿ ಲೇವಡಿ ಮಾಡುವ ತವಕ. [ಯಾರಪ್ಪನ ಗಂಟು?] ಆದರೆ ಸುನಂದೆಯ ನಯವಿನಯ ಸ್ನೇಹಪರತೆ, ಜತೆಯಲ್ಲಿ ಗಾಂಭೀರ್ಯ—ಅವರ ಬಾಯಿ ಮುಚ್ಚಿಸಿದುವು.

* * * *

ಸೋಮಶೇಖರ, ಹೆಂಡತಿ ಮತ್ತು ಮಗುವಿನೊಡನೆ ಒಮ್ಮೆ ಸುನಂದೆಯ ಮನೆಗೆ ಬಂದ.

ಸೀತಮ್ಮ ಹೇಳಿದಳು:

"ನಿಮ್ಮ ಶಿಶು ವಿಹಾರ ಸಮೀಪದಲ್ಲೇ ಇದ್ದಿದ್ರೆ ಗಿರೀಶನನ್ನ ಅಲ್ಲಿಗೇ ಕಳಿಸ್ಬಹುದಾಗಿತ್ತು ಕಣ್ರೀ. ಎಷ್ಟು ದೂರ! ಬಸವನ ಗುಡಿ ಒಂದು ಧ್ರುವವಾದರೆ ಮಲ್ಲೇಶ್ವರ ಇನ್ನೊಂದು ಧ್ರುವ."

ಆ ದಂಪತಿಯೂ ಆಗಾಗ್ಗೆ ಬಂದು ಹೋಗುವ ಗೆಳೆಯರಾದರು.

* * * *

ನವರಾತ್ರಿಗೆ ಒಂದು ವಾರವಿದ್ದಾಗ ಸುನಂದಾ ತಂದೆಗೆ ಹೇಳಿದಳು:

"ಶಿಶು ವಿಹಾರದ ಸಮೀಪವೇ ಒಂದು ಮನೆ ಖಾಲಿಯಾಗುತ್ತೆ. ಅಚ್ಚುಕಟ್ಟಾಗಿದೆ...."

"ಎಷ್ಟು ಬಾಡಿಗೆ?"

"ಇಪ್ಪತ್ತೈದು."

"ಜಾಸ್ತಿ ಅಲ್ವೆ?"

ಆ ಮನೆಗೆ ಜಾಸ್ತಿ ಎಂದಲ್ಲ, ತಮ್ಮ ಅಂತಸ್ತಿಗೆ ಜಾಸ್ತಿ ಎಂದು.

"ಬಸ್ಸಿಗೆ ದಿನಾ ದುಡ್ಡು ಕೊಡೋದು ತಪ್ಪುತ್ತೆ. ಅಲ್ಲದೆ ತುಂಬಾ ಅನುಕೂಲವಾಗಿದೆ, ಅಪ್ಪ."

ಮನೆ ಬದಲಾಯಿಸುವುದು ಮಗಳಿಗೆ ಇಷ್ಟವೆಂಬುದು ಸ್ಪಷ್ಟವಾಗಿತ್ತು.

ಆದರೆ ಶೇಷಾದ್ರಿಪುರವನ್ನು ಬಿಟ್ಟು ದೂರ ಹೋಗಬೇಕಲ್ಲ ಎಂದು ಕೃಷ್ಣಪ್ಪನವರಿಗೆ ತಳಮಳವೆನಿಸಿತು.

ಅವರ ಮನಸ್ಸಿನಲ್ಲಿದ್ದುದನ್ನು ಊಹಿಸುವುದು ಸುನಂದೆಗೆ ಕಷ್ಟವಾಗಿರಲಿಲ್ಲ.

"ಇಲ್ಲಾದರೆ ರಾಮಕೃಷ್ಣಯ್ಯನವರ ಮನೆಗೆ ಸಮೀಪ. ಮಲ್ಲೇಶ್ವರಕ್ಕೆ ಹೋದ ಮೇಲೆ ಸ್ವಲ್ಪ ದೂರವಾಗುತ್ತೆ...."

ಸ್ವಾರ್ಥ ಎನ್ನಿಸಿಕೊಳ್ಳುವುದುಂಟೆ? ಆ ಯೋಚನೆಯಾದರೂ ಸರಿಯೆ? ಮಗಳ ಅನುಕೂಲ ಮುಖ್ಯ....

ಅವಸರವಾಗಿ ಅವರೆಂದರು:

"ನನಗೇನೂ ಕಷ್ಟವಾಗೋಲ್ಲ. ಒಂದಿಷ್ಟು ದಿನಾ ನಡೆದರೆ ಆರೋಗ್ಯಕ್ಕೆ ಒಳ್ಳೇದು. ಖಂಡಿತ, ನನಗೆ ತೊಂದರೆಯಾಗೋದಿಲ್ಲ ಸುಂದಾ."

* * * *

ಸರಸ್ವತಿಯನ್ನು ಮಲಗಿಸಿದ ಬಳಿಕ ಸುನಂದಾ, 'ಸಾಕ್ರಟೀಸನ ಮರಣ' ಪುಸ್ತಕವನ್ನೆತ್ತಿಕೊಂಡಳು. ಹಿಂದಿನ ರಾತ್ರೆ ಓದಿ ಬಿಟ್ಟಿದ್ದಲ್ಲಿಂದ ಮುಂದಕ್ಕೆ ಒಂದು ಅಧ್ಯಾಯವನ್ನೋದಿದಳು. ಅನಂತರ ಪುಟ ಸಂಖ್ಯೆಯನ್ನು ನೆನಪಿಟ್ಟು ಪುಸ್ತಕವನ್ನು ಮುಚ್ಚಿದಳು.

ತಂದೆಗಾಗಲೆ ನಿದ್ದೆ ಬಂದಿತ್ತು.

ರಾತ್ರೆ ಓದಲು ದೀಪ ಅನುಕೂಲವಾಗಿರಲಿಲ್ಲ. ಬೇರೆ ಮನೆಗೆ ಹೋದ ಮೇಲೆ ಮೇಜು, ಕುರ್ಚಿ, ಮೇಜುದೀಪ ಕೊಳ್ಳಬೇಕೆಂದು ಸುನಂದಾ ಯೋಚಿಸಿದಳು. ಹಾಗೆಯೇ, ತಂದೆಗೆ ಓದಲು ಒಂದು ದಿನಪತ್ರಿಕೆ–ಕನ್ನಡದ್ದು....ಖಾಲಿಯಾಗಿದ್ದ ಮನೆಯನ್ನು ಆಕೆ ನೋಡಿ ಬಂದಿದ್ದಳು. ಸಾಕಷ್ಟು ವಿಶಾಲವಾಗಿಯೆ ಇದ್ದ ಆ ಮನೆಯೊಳಗೆ ಮಾಡಬೇಕಾದ ಏರ್ಪಾಟನ್ನೆಲ್ಲ ಮನಸ್ಸಿನಲ್ಲೆ ಈಗ ಎಣಿಕೆ ಹಾಕಿದಳು.

ತಂಗಿಯ ಕಾಗದಕ್ಕೆ ಸುನಂದಾ ಉತ್ತರ ಕೊಟ್ಟೇ ಇರಲಿಲ್ಲ. ದಿನವೂ 'ನಾಳೆ— ನಾಳೆ' ಎಂದು ಮುಂದೆ ತಳ್ಳಿದ್ದಳು. ಯಾವುದನ್ನೂ 'ನಾಳೆ'ಗೆ ನೂಕುವುದರಲ್ಲಿ ಅರ್ಥ

ವಿಲ್ಲವೆನಿಸಿತು. ಈಗಲೇ ಬರೆಯುವುದು ಮೇಲೆಂದು ಆಕೆ ಎದ್ದಳು.

ಬರೆಯಲು ಮೊದಲು ಮಾಡಿದಳು.

....'ಈ ಮನೆಯಿಂದ ಬರೆಯುತ್ತಿರುವ ಕೊನೆಯ ಕಾಗದ ಇದು. ಮುಂದಿನದು ಮಲ್ಲೇಶ್ವರದಿಂದ. ದೀಪಾವಳಿಗೆ ನಿಮ್ಮಿಬ್ಬರನ್ನು ಕರೆಸಿಕೊಳ್ಳುವುದು ಆ ಮನೆಗೇ'...

ಎಲ್ಲ ವಿಷಯಗಳನ್ನೂ ಪ್ರಸ್ತಾಪಿಸಿದುದಾಯಿತೆಂದು ತೋರಿದಾಗ ಆಕೆ ಬರೆದಳು:

"ನನ್ನ ಮನಸ್ಸು ನಿರ್ಮಲವಾಗಿದೆ ವಿಜಯಾ. ಹೃದಯದ ಮೇಲಿದ್ದ ಗಾಯಗಳು ಮಾಯುತ್ತಾ ಬಂದಿವೆ. ಘೋರ ರಾತ್ರಿ ಕಳೆದು ಬೆಳಕು ಹರಿದ ಹಾಗೆ. ನನಗಿದು ಪುನರ್ಜನ್ಮ ವಿಜಯಾ. ನಾನು ಯಾರಿಗೂ ಈವರೆಗೂ ಕೆಟ್ಟದು ಮಾಡಿಲ್ಲ. ಮುಂದೆಯೂ ಅಷ್ಟೆ ನನ್ನಿಂದ ಯಾರಿಗೂ ಕೆಡುಕಾಗದು. ಅಷ್ಟೇ ಅಲ್ಲ. ಒಳ್ಳೇದು ಮಾಡುವುದು ಸಾಧ್ಯವೇನೋ ಅಂತ ಯತ್ನಿಸ್ತೇನೆ. ಒಳ್ಳೆಯವಳಾಗಿಯೇ ಸಾಯುತ್ತೇನೆ...."

ಕೊನೆಯ ಸಾಲು, ಸುನಂದೆಯ ಕಣ್ಣೀರಿನಿಂದ ಪಾವನವಾಯಿತು.

## ಈ ಕಾದಂಬರಿಯನ್ನು ಕುರಿತು ಸಾಧನಾಗೆ ಒಂದು ಕಾಗದ

ಸಹಧರ್ಮಿಣಿ ಸಾಧನಾ,

ನವರಾತ್ರಿಕಾಣಿಕೆಯಾಗಿ ನಿನಗೆ ಒಪ್ಪಿಸಿರುವ 'ಏಕಾಂಗಿನಿ'ಯನ್ನು ಓದಿಯಾಯ್ತು?

ನಿನ್ನ ಪ್ರತಿಕ್ರಿಯೆಯನ್ನು ಊಹಿಸಿಕೊಳ್ಳಬಲ್ಲೆ, ನಿಜ. ಆದರೂ ನಿನ್ನ ಮಾತುಗಳಲ್ಲೇ ಅದೇನೆಂದು ತಿಳಿಯುವ ತವಕ.

ನೀನದನ್ನು ಬರೆಯುವುದಕ್ಕೆ ಮುಂಚೆ, ಇಗೋ ಒಂದು ಚುಟುಕು ಕಾಗದ.

'ಏಕಾಂಗಿನಿ'ಯ ಆರಂಭದ ನಾಲ್ಕು ಸಾಲುಗಳನ್ನೋದಿಯೆ ನೀನು ಕಂಡು ಹಿಡಿದಿರಬೇಕು—ಇದು 'ಪಾಲಿಗೆ ಬಂದ ಪಂಚಾಮೃತ'ದ ಮುಂದಿನ ಭಾಗವೆಂಬುದನ್ನು.

'ಪಾ. ಪಂಚಾಮೃತ'ವನ್ನು ಎಷ್ಟೋಜನ ಹೊಗಳಿದ್ದರು; ಅಷ್ಟೇ ಜನತೆಗಳಿದ್ದರು.

ಮಧುವಿನಂತಹ ಮೆಚ್ಚುಗೆಗಿಂತ ಖಾರವಾದ ಟೀಕೆಯ ಕಡೆಗೆ ಹೆಚ್ಚು ಗಮನ ಕೊಡುವುದಗತ್ಯ. 'ಪುಟ್ಟಣ್ಣ ಪುರುಷ ಸಮಾಜದ ಪ್ರತಿನಿಧಿಯಲ್ಲ' ಎಂಬುದು ಒಂದು ಟೀಕೆ. ಒಪ್ಪಿದೆ, ಆತನ ಪಾತ್ರವನ್ನು ಪುರುಷ ಸಮಾಜದ ಪ್ರತೀಕವೆಂದು ನಾನು ಸೃಷ್ಟಿಸಿಯೇ ಇಲ್ಲ! ನಾನು ಅಪೇಕ್ಷೆ ಪಟ್ಟುದು ವಿಕೃತ ವ್ಯಕ್ತಿತ್ವದ ವಿಶಿಷ್ಟ ಪಾತ್ರವೊಂದನ್ನು. ಅಂತಹ ವ್ಯಕ್ತಿಯ ಜತೆಯಲ್ಲಿ ಮಧ್ಯಮ ವರ್ಗದಲ್ಲಿ ಸಾಮಾನ್ಯವಾಗಿ ಕಾಣಸಿಗುವ ವಿದ್ಯಾವಂತೆಯಾದ ಸದ್ಗೃಹಿಣಿ ಬದುಕುವುದು ಸಾಧ್ಯವೆ?—ಎಂಬುದಷ್ಟೆ ಅಲ್ಲಿ ನಾನು ಮುಂದಿರಿಸಿದ ಪ್ರಶ್ನೆ. ಪುಟ್ಟಣ್ಣನ ಪಾತ್ರ ಮತ್ತಷ್ಟು ತರ್ಕಬದ್ಧವಾಗಿರಬೇಕಿತ್ತು—ಎನ್ನುವುದನ್ನು ಖಂಡಿತ ಒಪ್ಪಿಕೊಳ್ಳುತ್ತೇನೆ. ಆದರೆ ಆ ಪಾತ್ರ ಸೃಷ್ಟಿಯ ಅಲ್ಪ ನ್ಯೂನತೆಯಿಂದಾಗಿ, ಕತೆಯ ಮೂಲ ಅಂಶಕ್ಕೇನೂ ಕುಂದು ಉಂಟಾಗಿಲ್ಲವೆಂಬುದೆ ನನ್ನ ಅಭಿಪ್ರಾಯ.

ಸುನಂದೆಯ ಮನಸಿನ ಹೊಯ್ದಾಟವನ್ನು ಮೆಚ್ಚದೆ, ಆಕೆ ಸೀತೆ ಸಾವಿತ್ರಿಯರಂತೆ ಪತಿಭಕ್ತಿ ಪರಾಯಣೆಯಾಗಿ ದಿನಕಳೆಯಲಿ—ಎಂದು ಹಾರೈಸಿದವರುಂಟು. ಆ ಯತ್ನವನ್ನು ಆಕೆ ಮಾಡಿದಳೆಂಬುದಕ್ಕೆ ಹೇರಳ ಸಾಕ್ಷ್ಯ 'ಏಕಾಂಗಿನಿ'ಯಲ್ಲಿದೆ.

ಸುನಂದಾ ಎಂಥವಳು? ಆಕೆ ಸಮಾಜದ 'ಪ್ರತಿಷ್ಠಿತ' ಮಹಿಳೆಯಲ್ಲ; 'ಸ್ತ್ರೀ ಸ್ವಾತಂತ್ರ್ಯ' ಚಳವಳಿಯ ಯೋಧೆಯಲ್ಲ; ಸ್ವಚ್ಛಂದ ಪ್ರವೃತ್ತಿಯ ಪ್ರತಿಪಾದಿಕೆಯಲ್ಲ; 'ಹೊಸಲು ದಾಟಿದ' ಕೆಟ್ಟ ಹೆಣ್ಣಲ್ಲ. ಮಧ್ಯಮ ವರ್ಗದ ಒಳ್ಳೆಯವಳಾದ ಸಾಮಾನ್ಯ ಗೃಹಿಣಿ ಸುನಂದಾ. ಗಂಡನೊಡನೆ ಬದುಕು ಸವಿಜೇನಾಗಬೇಕೆಂಬುದೇ ಆಕೆಗಿದ್ದ ಹಂಬಲ. ಅದು ದುಸ್ಸಾಧ್ಯವಾದಾಗ? ಕ್ರೂರಿಯಾದ ಪಶುವಾದ ಪತಿಯೊಡನೆ ದಿನಕಳೆಯುವುದು ಅಸಹನೀಯವಾದಾಗ? ಆತನನ್ನು ಸುಧಾರಿಸಲು ಮಾಡಿವ ಪ್ರಯತ್ನ

ಗಳೆಲ್ಲ ನೀರಿನ ಮೇಲಿನ ಹೋಮವಾದಾಗ?—ಆಗ ಆಕೆಗುಳಿದ ಏಕ ಮಾತ್ರ ಹಾದಿ ಯಾವುದು?

ಆ ಹಾದಿಯನ್ನು ಆಕೆ ಕೈಗೊಂಡ ಕತೆಯೇ 'ಏಕಾಂಗಿನಿ.'

ಸುನಂದೆಯ ಈಗಿನ ಮನೋಸ್ಥಿತಿಗೆ, ಕಾದಂಬರಿಯ ಕೊನೆಯಲ್ಲಿ ಬರುವ ಈ ಕೆಲ ಸಾಲುಗಳು ಕನ್ನಡಿಯಾಗಿವೆ, ಆಕೆಯೇ ಹೇಳುವಂತೆ:

"ನನ್ನ ಮನಸ್ಸು ನಿರ್ಮಲವಾಗಿದೆ, ವಿಜಯಾ. ಹೃದಯದ ಮೇಲೆ ಆಗಿದ್ದ ಗಾಯಗಳು ಮಾಯುತ್ತಾ ಬಂದಿವೆ. ಘೋರ ರಾತ್ರಿ ಕಳೆದು ಬೆಳಕು ಹರಿದ ಹಾಗೆ. ನನಗಿದು ಪುನರ್ಜನ್ಮ ವಿಜಯಾ. ನಾನು ಯಾರಿಗೂ ಈವರೆಗೂ ಕೆಟ್ಟದು ಮಾಡಿಲ್ಲ. ಮುಂದೆಯೂ ಅಷ್ಟೆ. ನನ್ನಿಂದ ಯಾರಿಗೂ ಕೆಡುಕಾಗದು ಅಷ್ಟೇ ಅಲ್ಲ. ಒಳ್ಳೇದು ಮಾಡುವುದು ಸಾಧ್ಯವೇನೋ ಅಂತ ಯತ್ನಿಸ್ತೇನೆ. ಒಳ್ಳೆಯವಳಾಗಿಯೇ ಸಾಯುತ್ತೇನೆ..."

ಹೀಗೆ ಆಡುವ ಹೆಣ್ಣನ್ನು 'ಕಳಂಕಿನಿ' ಎಂದು ನಿಂದಿಸುವುದು ಸಾಧ್ಯವೆ? ಆಕೆಯನ್ನು ಕುರಿತು ಸಹಾನುಭೂತಿ ಸೂಚಿಸದೆ ಇರುವುದು ಸಾಧ್ಯವೆ?

ಸುನಂದೆಯ ತಂಗಿ ವಿಜಯಳ ಪಾತ್ರ ನಿರೂಪಣೆಯ ಮಹತ್ವವನ್ನೂ ನೀನು ಗಮನಿಸಿರಬೇಕು. ಆಕೆಗೂ ದೊರೆತ ಪತಿ 'ಪಾಲಿಗೆ ಬಂದ ಪಂಚಾಮೃತ'ವಾಗಿದ್ದ. ಆದರೆ ಅವರ ಬದುಕು ಬಂಗಾರವಾಯಿತು. ಹಾಗೆಯೇ ಕುಸುಮಾ, ರಾಧಮ್ಮ, ಸೀತಮ್ಮ ಮತ್ತಿತರ ಸಂಸಾರಗಳು. ಇದು ಸೂಚಿಸುವುದೇನನ್ನು? ವಿವಾಹ ವಿಚ್ಛೇದನದ ಹಕ್ಕು ಬಂದಿದೆ ಎಂದ ಮಾತ್ರಕ್ಕೆ ದಾಂಪತ್ಯ ಜೀವನದಲ್ಲೆಲ್ಲ ವಿರಸವನ್ನೇ ಹುಡುಕುತ್ತ ಹೋಗಬೇಕೆಂದು ಅರ್ಥವಲ್ಲ, ಅಲ್ಲವೆ? ವಿಚ್ಛೇದನದ ತತ್ವವನ್ನು ಒಪ್ಪಿದೊಡನೆಯೇ ಕಾಲಕಾಲಕ್ಕೂ ಬೇರೆ ಬಟ್ಟೆಕೊಳ್ಳುವಂತೆ ಬದುಕಿನ ಒಡನಾಡಿಯನ್ನು ಬದಲಾಯಿಸಬೇಕೆಂದಿಲ್ಲ, ಅಲ್ಲವೆ?

'ಏಕಾಂಗಿನಿ'ಯ ಬರವಣಿಗೆಯಲ್ಲಿ ಕಲೆಯ ಅಂಶ ವಿಚಾರದ ಅಂಶಕ್ಕಿಂತ ಏನೇನೂ ಕಡಮೆಯಾಗದಂತೆ ಎಚ್ಚರ ವಹಿಸಿದ್ದೇನೆ. ಆದರೂ ಹಿಂದೂ ವಿವಾಹ ಶಾಸನದ ವಿಷಯದಲ್ಲಿ ಓದುಗರಿಗಿರುವ ಅಭಿಪ್ರಾಯವೇ ಈ ಕಾದಂಬರಿಯನ್ನು ಕುರಿತ ಹೊಗಳಿಕೆಯಾಗಿಯೋ ತೆಗಳಿಕೆಯಾಗಿಯೋ ಬಹುಮಟ್ಟಿಗೆ ವ್ಯಕ್ತವಾದರೆ ಆಶ್ಚರ್ಯವೇನಿಲ್ಲ. ಹೀಗಿದ್ದರೂ ಕಲೆಯ ಅಂಶ ನನ್ನ ನೆರವಿಗೆ ಬರುವುದೆಂಬ ಭರವಸೆ ನನಗಿದೆ.

ಸುನಂದೆಯ ಕಥೆ ಇಲ್ಲಿಗೆ ಮುಗಿಯಿತೆ?—ಎಂದು ನೀನು ಕೇಳಬಹುದು; ಯಾರಾದರೂ ಕೇಳಬಹುದು. ಏಕಾಂಗಿಯಾಗಿ ಇರಬಯಸಿದ ಹೆಣ್ಣು ಪಡಬೇಕಾದ ಭವಣೆಗಳು ನಮಗೆ ತಿಳಿಯವೆ? ಘೋರವಾದೊಂದು ಸಮಸ್ಯೆಯನ್ನು ಸುನಂದಾ ಬಗೆಹರಿಸಿದರೂ ಬೇರೆ ನೂರು ಸಮಸ್ಯೆಗಳಿಂದ ಆಕೆ ತಪ್ಪಿಸಿಕೊಳ್ಳುವುದಕ್ಕುಂಟೆ? ಈ ವಿಚಾರಗಳು ಕಣ್ಣೆದುರು ನಿಂತಾಗ 'ಏಕಾಂಗಿನಿ'ಯ ಮುಂದಿನ ಭಾಗದ ರೂಪುರೇಖೆಗಳು ಗೋಚರವಾಗುತ್ತಿವೆ. ಮುಂದೆ ನೋಡೋಣ.

ಇಷ್ಟೆ ಸಾಕು. ನಿನ್ನ ಮೇಲೆ ಪ್ರಭಾವ ಬೀರಿ ಒಲಿಸಿಕೊಳ್ಳುವುದಕ್ಕೋಸ್ಕರ ಈ ಕಾಗದ ಬರೆದಿಲ್ಲ. ನಮ್ಮಿಬ್ಬರ ಜೀವನದಲ್ಲಿ ಅಂತಹ ಅಗತ್ಯವಿಲ್ಲ ಎನ್ನುವುದನ್ನು ನಾವು ಬಲ್ಲೆವು—ಓದುಗರೂ ಬಲ್ಲರು. ಆದರೂ ಸ್ಪಷ್ಟೀಕರಣ ಯಾವಾಗಲೂ ನನಗಿಷ್ಟವಾದ ವಿಷಯ!

ಹಿಂದೂ ವಿವಾಹಶಾಸನದ ವಿವರಗಳನ್ನೋದಿ, ಅದರಲ್ಲೂ ವಕೀಲರ ನೋಟೀಸನ್ನು ಕಂಡ, ನಿನಗೆ ಆಶ್ಚರ್ಯವಾಯಿತೋ ಏನೋ. ಆ ಭಾಗದಲ್ಲಿ ನೆರವು ನೀಡಿದವರು ಇಲ್ಲಿನ ನನ್ನ ವಕೀಲ ಸ್ನೇಹಿತರಾದ ಶ್ರೀಮಾನ್ ಎಂ.ಎಸ್. ವೆಂಕಟನಾರಣಪ್ಪನವರು. ಅವರಿಗೆ ನಾನು ಉಪಕೃತ.

ಹಾಗೆಯೇ ಲೇಖಕ–ಪ್ರಕಾಶಕ ಕೊ. ಸು. ಸೀತಾರಾಮ್ ಅವರಿಗೂ. ಅವರ ನಿರಂತರ ಯತ್ನವಲ್ಲದೇ ಹೋಗಿದ್ದರೆ ರಸಿಕ ರಂಜಿನಿ ಪ್ರಕಾಶನದ ಮೂಲಕ 'ಏಕಾಂಗಿನಿ' ಇಷ್ಟು ಬೇಗನೆ ಪ್ರಕಟವಾಗುತ್ತಿರಲಿಲ್ಲ.

ಇದಿಷ್ಟು ಈ ಕಾದಂಬರಿಯನ್ನು ಕುರಿತು.

ಮರೆಯದೆ ಬರೆ.

ಅಕ್ಟೋಬರ್, ೧೯೫೫
ವಾಣಿವಿಲಾಸ ಮೊಹಲ್ಲಾ
ಮೈಸೂರು

ಎಂದು ವಿಧೇಯ
**ನಿರಂಜನ**

ಮಗುವಿನೊಡನೆ ಸುನಂದಾ ಗಂಡನ ಮನೆ ಬಿಟ್ಟು ಬಂದಳು.

ಬೀದಿಯ ಕಡೆಗೆ ಹರಿಯಿತು ಮಗುವಿನ ಮನಸ್ಸು. ಯಾವುದೋ ಹೈ ಹೈ ಗಾಡಿ. 'ದಂಟಿನ ಸೊಪ್ಪು, ಅರಿವೇ ಸೊಪ್ಪು, ಕೊತಮಿರಿ ಸೊಪ್ಪು.' 'ಊವಾ ಬೇಕೇನ್ರವ್ವಾ, ಊವಾ ?'

ದೇವದೇವತೆಯರ ರಾಮಸೀತೆಯರ ಋಷಿ ಮಹರ್ಷಿಗಳ ವರ್ಣಚಿತ್ರಗಳನ್ನು ಸುನಂದಾ ನೋಡಿದಳು.

ಕಲಾವಿದನ ಕಲ್ಪನಾಶಕ್ತಿಗುಂಟೆ ಕಡಿವಾಣ ?

...ಒಂಟಿಯಾದರೇನು ? ಅವಳಿನ್ನು ದುಡಿಯುವ ಹೆಣ್ಣು. ಆಕೆಗೆ ಬೇಕು ವಿವಾಹ ವಿಚ್ಛೇದನ.

IBH

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009